


ಗೀತಾಮಾತೆ

– ಮಹಾತ್ಮಾ ಗಾಂಧಿ

ಗೀತಾಮಾತೆ

ಮೋ.ಕ. ಗಾಂಧೀ

ಅನುವಾದಕರು :

ಸಿದ್ಧವನಹಳ್ಳಿ ಕೃಷ್ಣಶರ್ಮ

1997

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಬೆಂಗಳೂರು

GEETAMAATE - Gandhij's writing about Bhagvadgita, Translated into Kannada by Shree Siddavanahalli Krishna Sharma

First Edition : 1958

Second Edition : 1964

Third Edition : 1997

Fourth Edition : 2010

Price : Rs.60/-

Publisher : Karnataka Gandhi Smaraka Nidhi, Kumara Park East, Bangalore-560 001

Printers : Brindavan Printers and Publishers Pvt. Ltd., Bangalore-560 004

ಗೀತಾಮಾತೆ : (ಭಗವದ್ಗೀತೆಯ ಬಗ್ಗೆ ಗಾಂಧೀಜಿಯ ಬರಹ)

ಪ್ರಥಮ ಮುದ್ರಣ : ೧೯೫೮

ದ್ವಿತೀಯ ಮುದ್ರಣ : ೧೯೬೪

ಮೂರನೆಯ ಮುದ್ರಣ : ೧೯

ನಾಲ್ಕನೆಯ ಮುದ್ರಣ : ೨೦೧೦

ಬೆಲೆ :

ಪ್ರಕಾಶಕರು : ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು-೫೬೦ ೦೦೧

ಮುದ್ರಕರು : ಲಾವಣ್ಯ ಮುದ್ರಣ, ನಂ.೧೯, ೧೫ನೇ ಕ್ರಾಸ್, ಬಿ.ಎಸ್.ಕೆ. ೧ನೇ ಹಂತ,
ಬೆಂಗಳೂರು-೫೬೦ ೦೫೦. ದೂರವಾಣಿ : ೨೬೬೧೦೫೬೩

(ನವಜೀವನ ಟ್ರಸ್ಟ್, ನವಜೀವನ, ಅಹಮದಾಬಾದ್-೧೪. ಇವರ ಅನುಮತಿಯಿಂದ
ಮತ್ತು ಸಸ್ತಾ ಸಾಹಿತ್ಯ ಮಂಡಲ, ಗೀತಾಮಾತಾ ಗ್ರಂಥದ ಆಧಾರದ ಮೇಲೆ ಪ್ರಕಟಿಸಿದೆ)

ನಿವೇದನ

(ಗಾಂಧೀಜಿಯ ಮಾತುಗಳಲ್ಲಿ)

ಅನುವಾದಕರು : 'ಕುವೆಂಪು'

ನಾನೊಬ್ಬ ಸತ್ಯಶೋಧಕ. ಅದಕ್ಕೊಂದು ಮಾರ್ಗವನ್ನು ಕಂಡುಕೊಂಡಿದ್ದೇನೆಂದು ನನ್ನ ವಿಶ್ವಾಸ. ಅದರ ಸಿದ್ಧಿಗಾಗಿ ನಾನು ನಿರಂತರ ಪ್ರಯತ್ನಶೀಲನಾಗಿದ್ದೇನೆಂದೂ ನನ್ನ ನಂಬಿಕೆ. ಅದು ಇನ್ನೂ ನನಗೆ ಸಿದ್ಧಿಸಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಸತ್ಯದ ಸಮ್ಯಕ್ ದರ್ಶನವೇ ಆತ್ಮ ಸಾಕ್ಷಾತ್ಕಾರ: ಅದೇ ಜೀವನದ ಅಂತಿಮ ಗುರಿ. ಅಂದರೆ ಪರಿಪೂರ್ಣತೆಯ ಸಿದ್ಧಿ. ನನ್ನ ನ್ಯೂನತೆಗಳು ಎಷ್ಟೆಂಬುದನ್ನು ನಾನು ವ್ಯಸನದಿಂದ ಅರಿತಿದ್ದೇನೆ. ಆ ಅರಿವು ನನಗೆ ದುಃಖ ತರುವಷ್ಟೂ ಇದೆ. ಆ ಅರಿವೇ ನನ್ನ ಶಕ್ತಿಯ ಸರ್ವಮೂಲ: ಏಕೆಂದರೆ ತನ್ನ ದೌರ್ಬಲ್ಯಗಳ ಅರಿವಾಗುವುದೇ ಮಾನವನಿಗೆ ಒಂದು ಅಪೂರ್ವ ಬಲ.[೧]

ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಅತ್ಯಂತ ಋಜುವಾಗಿ, ಅತ್ಯಂತ ಸತ್ಯವಾಗಿ, ಅತ್ಯಂತ ಅಹಿಂಸಕವಾಗಿ ನಡೆಯಬೇಕೆಂದು ಹೋರಾಡುತ್ತಿದ್ದರೂ, ನನಗೆ ಸರಿಯೆಂದು ತಿಳಿದ ಗುರಿಯನ್ನು ಮುಟ್ಟಲು ಹಂಬಲಿಸಿ ಹೆಣಗುತ್ತ ಸತತವೂ ಸೋಲುತ್ತಿರುವ ನಾನು ಒಂದು ಸಾಮಾನ್ಯ ಚೇತನ. ಆ ಯಾತ್ರೆಯೇನೋ ಕ್ಲೇಶಕರವೇ: ಆದರೆ ಆ ಯಾತನೆಯಲ್ಲಿಯೂ ನನಗೆ ಒಂದು ಆನಂದವಿದೆ. ಏರುವ ಒಂದೊಂದು ಹೆಜ್ಜೆಯೂ ನನ್ನನ್ನು ಬಲಿಷ್ಠನನ್ನಾಗಿ ಮಾಡಿ ಮುಂದಣ ಹೆಜ್ಜೆಗೆ ಸಾಮರ್ಥ್ಯವೀಯುತ್ತದೆ.[೨]

ದಾರಿ ನನಗೆ ಗೊತ್ತು. ಅದು ನೇರ ಮತ್ತು ಇಕ್ಕಟ್ಟು-ಕತ್ತಿಯ ಅಲಗಿನಂತೆ. ಅದರ ಮೇಲೆ ನಡೆಯುವುದೆಂದರೆ ನನಗೆ ಉಲ್ಲಾಸ. ಜಾರಿದಾಗಲೆಲ್ಲ ಕಣ್ಣೀರಿಡುತ್ತೇನೆ. 'ನ ಮೇ ಭಕ್ತಃ ಪ್ರಣಶ್ಯತಿ' ಎಂದು ದೇವರ ವಚನವಿದೆ. ಆ ವಚನದಲ್ಲಿ ನನಗೆ ದೃಢವಾದ ನಂಬಿಕೆಯಿದೆ. ಆದ್ದರಿಂದ ನನ್ನ ದೌರ್ಬಲ್ಯ ಪರಿಣಾಮವಾಗಿ ಸಾವಿರ ಬಾರಿ ಸೋತರೂ ನಾನೆಂದಿಗೂ ಶ್ರದ್ಧೆಗೆಡುವುದಿಲ್ಲ. ಪ್ರತಿಯಾಗಿ, ಇಂದಲ್ಲ ನಾಳೆ, ಸ್ವತಃ ಸಿದ್ಧವಾಗಿ ಕೈಗೂಡಲೇಬೇಕಾಗಿರುವ ಇಂದ್ರಿಯಜಯ ಲಭಿಸಿದಂದು, ಬೆಳಕನ್ನು ಕಂಡೇ ಕಾಣುತ್ತೇನೆಂಬುದು ನನ್ನ ವಿಶ್ವಾಸ.[೩]

ಏಕೆಂದರೆ ಸಾವಿನ ನಡುವೆ ಬಾಳು, ಸುಳ್ಳಿನ ನಡುವೆ ಸತ್ಯ, ತಮಸ್ಸಿನ ನಡುವೆ ಜ್ಯೋತಿ ಚಿರಸ್ಥಾಯಿಯಾಗಿರುವುದನ್ನು ನಾನು ಕಾಣುತ್ತಿದ್ದೇನೆ. ಭಗವಂತನೇ ಪ್ರಾಣಶಕ್ತಿ, ಅವನೇ ಸತ್ಯ ಮತ್ತು ಜ್ಯೋತಿ ಎಂಬುದು ನನ್ನ ವಿಶ್ವಾಸ. ಆತ ಪ್ರೇಮಸ್ವರೂಪಿ; ಆತನೆ ಪರಮಶ್ರೇಯಸ್ಸು.[೪]

ಬಾಲ್ಯದಿಂದಲೂ ನಾನೊಬ್ಬ ಸತ್ಯಾರಾಧಕ ಎಂಬುದು ನನ್ನ ವಿಶ್ವಾಸ. ಅದು ನನ್ನ ಅತ್ಯಂತ ಸಹಜಪ್ರವೃತ್ತಿ. ಉಪಾಸನಾಪೂರ್ವಕವಾದ ಶೋಧನೆಯಿಂದ ಭಗವಂತನೇ ಸತ್ಯ ಎಂಬ ರೂಢಿಯ ನಂಬಿಕೆಯ ಬದಲು ಸತ್ಯವೇ ಭಗವಂತ ಎಂಬ ಸೂತ್ರ ನನಗೆ ಸ್ಫುರಣವಾಯಿತು. ಭಗವಂತನನ್ನು ಪ್ರತ್ಯಕ್ಷವೋ ಎಂಬಂತೆ ಕಾಣಲು ಈ ಸೂತ್ರದಿಂದ ನನಗೆ

---

೧. ಯಂಗ್‌ಇಂಡಿಯಾ, ೧೭-೧೧-೧೯೨೧

೨. ಅದೇ, ೯-೪-೧೯೨೬

೩. ಯಂಗ್‌ಇಂಡಿಯಾ, ೧೬-೬-೧೯೨೬

೪. ಅದೇ, ೧೧-೧೧-೧೯೨೮

ಸಾಧ್ಯವಾಗಿದೆ. ನನ್ನ ಚೇತನಸಮಸ್ತವನ್ನೂ ಆತ ವ್ಯಾಪಿಸಿದ್ದಾನೆ, ಎಂಬುದು ನನ್ನ ಅನುಭವ.[೧]

ಭಗವಂತನ ಪ್ರತ್ಯಕ್ಷ ದರ್ಶನದ ಹಂಬಲ ನನ್ನದು. ಭಗವಂತನೇ ಸತ್ಯ ಎಂಬುದನ್ನು ನಾನು ಬಲ್ಲೆ. ನನ್ನ ಪಾಲಿಗೆ ಭಗವಂತನನ್ನು ಕಾಣಲು ಇರುವ ಒಂದೇ ಒಂದು ನಿಶ್ಚಿತ ಮಾರ್ಗವೆಂದರೆ ಅಹಿಂಸೆ, ಪ್ರೇಮ.[೨]

ಅಹಿಂಸೆ ನನ್ನ ದೇವರು. ಸತ್ಯ ನನ್ನ ದೇವರು. ಅಹಿಂಸೆಯ ಸಾಧನೆಗಾಗಿ ನಾನು ಶ್ರಮಿಸುವಾಗ ಸತ್ಯ ಹೇಳುತ್ತದೆ; 'ನನ್ನ ಮೂಲಕವೇ ಅದರ ಸಿದ್ಧಿ ಎಂದು. ಸತ್ಯದ ಸಾಧನೆಗಾಗಿ ನಾನು ಶ್ರಮಿಸುವಾಗ ಅಹಿಂಸೆ ಹೇಳುತ್ತದೆ' 'ನನ್ನ ಮೂಲಕವೇ ಅದರ ಸಿದ್ಧಿ.[೩]

ಭಾರತದ ಸ್ವಾತಂತ್ರ್ಯ ಸಾಧನೆಯೇ ನನ್ನ ಜೀವಿತೋದ್ದೇಶ. ಅದಕ್ಕಾಗಿ ನಾನು ಸಾಯಲು ಕೂಡ ಸಿದ್ಧ. ಏಕೆಂದರೆ ಭಾರತದ ಸ್ವಾತಂತ್ರ್ಯ ಸತ್ಯದ ಒಂದು ಅಂಶ. ಬಂಧಮುಕ್ತವಾದಾಗಲೇ ಭರತಖಂಡ ಸತ್ಯಸ್ವರೂಪನಾದ ಭಗವಂತನನ್ನು ಪೂಜಿಸಬಲ್ಲದು. ಭಾರತದ ಬಿಡುಗಡೆಗಾಗಿ ನಾನು ದುಡಿಯುತ್ತಿದ್ದೇನೆ; ಏಕೆಂದರೆ ಭಾರತದಲ್ಲಿ ಬದುಕಿ ಅದರ ಸಂಸ್ಕೃತಿಯನ್ನು ಪಡೆದಿರುವುದರಿಂದ ಅದರ ಸೇವೆಗೆ ನಾನು ಅತ್ಯಂತ ಅರ್ಹ ಎಂಬುದನ್ನು, ನನ್ನ ಸೇವೆಯ ಮೊದಲ ಹಕ್ಕು ಭಾರತದ್ದು ಎಂಬುದನ್ನು ನನ್ನ ಸ್ವದೇಶಿ ನನಗೆ ಕಲಿಸಿದೆ. ನನ್ನ ದೇಶಭಕ್ತಿ ಭಾರತಕ್ಕೆ ಮಾತ್ರ ಮೀಸಲಾದುದಲ್ಲ. ಬೇರೆ ಯಾವ ರಾಷ್ಟ್ರದ ಹಿತಕ್ಕೂ ಧಕ್ಕೆಯೊದಗಬಾರದು ಎಂಬುದಷ್ಟೇ ಅಲ್ಲ; ಸಕಲ ರಾಷ್ಟ್ರಗಳಿಗೂ ಆ ಪದದ ಸಂಪೂರ್ಣಾರ್ಥದಲ್ಲಿ, ಸರ್ವಲಾಭ ಒದಗಬೇಕು ಎಂಬುದೇ ನನ್ನ ಮಾತಿನ ಆಶಯ. ನಾನು ಸಂಕಲ್ಪಿಸಿರುವ ಭಾರತದ ಸ್ವಾತಂತ್ರ್ಯ ಎಂದೆಂದೂ ಲೋಕಹಿತ ಕಂಟಕವಾಗಲಾರದು.[೪]

ವಿಶ್ವಾತ್ಮಕವೂ ವಿಶ್ವವ್ಯಾಪಿಯೂ ಆದ ಸತ್ಯವನ್ನು ಸಾಕ್ಷಾತ್ತಾಗಿ ಸಂದರ್ಶಿಸಬೇಕಾದರೆ ದೃಷ್ಟಿಯಲ್ಲಿ ಕ್ಷುದ್ರತಮವಾದುದನ್ನೂ ತನ್ನಂತೆ ಪ್ರೀತಿಸುವುದು ಸಾಧ್ಯವಾಗಲೇಬೇಕು. ಆ ಹಂಬಲವನ್ನು ತುಂಬಿಕೊಂಡವನು ಜೀವನದ ಯಾವ ಕ್ಷೇತ್ರದಿಂದಲೂ ವಿಮುಖನಾಗಲು ಸಾಧ್ಯವಿಲ್ಲ. ನನ್ನ ಸತ್ಯಶ್ರದ್ಧೆ ನನ್ನನ್ನು ರಾಜಕೀಯ ಕ್ಷೇತ್ರಕ್ಕೆ ಎಳೆದು ತಂದಿರುವುದು ಈ ಕಾರಣದಿಂದಲೇ ಅಧ್ಯಾತ್ಮಕ್ಕೂ ರಾಜಕೀಯಕ್ಕೂ ಏನೂ ಸಂಬಂಧವಿಲ್ಲ ಎನ್ನುವವರಿಗೆ ಅಧ್ಯಾತ್ಮ ಎಂದರೇನು ಎಂಬುದೇ ತಿಳಿಯದೆಂದು ಸ್ವಲ್ಪವೂ ಅಳುಕದೆ, ಆದರೆ ವಿನೀತನಾಗಿ ನಾನು ಹೇಳಬಲ್ಲೆ.[೫]

ಆತ್ಮಶ್ರೀವಿದೂರವಾದ ರಾಜನೀತಿ ನನ್ನ ಪಾಲಿಗೆ ಸರ್ವಥಾ ತ್ಯಾಜ್ಯವಾದ ಕಲಂಕ. ರಾಜನೀತಿ ರಾಷ್ಟ್ರಗಳನ್ನು ಕುರಿತದ್ದು. ಯಾವುದು ರಾಷ್ಟ್ರಗಳ ಹಿತವನ್ನು ಕುರಿತದ್ದೊ ಅದು ಅಧ್ಯಾತ್ಮಪ್ರವೃತ್ತಿಯುಳ್ಳ ವ್ಯಕ್ತಿಯ, ಎಂದರೆ ಸತ್ಯದ ಮತ್ತು ಭಗವಂತನ ಅನ್ವೇಷಕನ ಸಾಧನೆಯ ಅಂಗಗಳಲ್ಲಿ ಒಂದಾಗಿರುವುದು ಅನಿವಾರ್ಯ. ನನಗಾದರೊ ಭಗವಂತ ನೆಂದರೂ ಒಂದೇ. ಭಗವಂತ ಅಸತ್ಯದ ಮೂರ್ತಿ ಎಂದೂ ಹಿಂಸೆಯ ಮೂರ್ತಿ ಎಂದೂ ಯಾರಾದರೂ ಸ್ಥಿರಪಡಿಸಿದರೆ ಅಂತಹ ಭಗವಂತನನ್ನು ಪೂಜಿಸಲು ನಾನು ನಿರಾಕರಿಸುತ್ತೇನೆ. ರಾಜಕೀಯದಲ್ಲಿಯೂ ಭಗವಂತನ ರಾಜ್ಯ ಸ್ಥಾಪಿತವಾಗಬೇಕಾಗಿದೆ. ನನ್ನ ಬದುಕಿನ ಅತ್ಯಂತ

೧. ಹರಿಜನ ೯-೮-೧೯೪೨
೨. ಆತ್ಮಕಥೆ
೩. ಯಂಗ್ ಇಂಡಿಯಾ, ೪-೬-೧೯೨೫
೪. ಆತ್ಮಕಥೆ ೫. ಅದೇ

ಆತ್ಮೀಯ ವಸ್ತುಗಳಿಂದ ರಾಜಕೀಯವನ್ನು ಬೇರ್ಪಡಿಸಲಾರೆ. ಕಾರಣ ಇಷ್ಟೆ: ನನ್ನ ರಾಜಕೀಯ ಕಲುಷಿತವಲ್ಲ. ಈ ಎಲ್ಲವೂ ಸತ್ಯ-ಅಹಿಂಸೆಗಳೊಂದಿಗೆ ಜಟಿಲವಾಗಿ ಹೆಣೆದುಕೊಂಡಿವೆ. ಸತ್ಯವನ್ನು ಬಲಿಗೊಟ್ಟು ಸ್ವಾತಂತ್ರ್ಯವನ್ನು ಪಡೆಯುವುದಕ್ಕಿಂತ ಭಾರತ ವಿನಾಶಹೊಂದುವುದೇ ಹೆಚ್ಚು ಲೇಸೆಂಬುದು ನನ್ನ ಮತ. ರಾಜಕೀಯ ಸಂಪರ್ಕವಿಲ್ಲದೆ ಸಮಾಜ ಸೇವೆಯಂಥ ಕೆಲಸವನ್ನು ಕೂಡ ನಡೆಸುವುದು ಅಸಾಧ್ಯವೆಂಬುದು ನನ್ನ ಅನುಭವಕ್ಕೆ ಬಂದುದರಿಂದ ರಾಜಕೀಯ ಕ್ಷೇತ್ರವನ್ನು ನಾನು ಪ್ರವೇಶಿಸುವುದು ಅನಿವಾರ್ಯವಾಯಿತು. ಸಾಮಾಜಿಕ ಮತ್ತು ನೈತಿಕ ದೃಷ್ಟಿಯಿಂದ ರಾಜಕೀಯ ಕಾರ್ಯವು ಪರಿಗಣಿತವಾಗಲೇಬೇಕು.

ಮಾನವನ ಮನಸ್ಸಾಗಲಿ ಸಮಾಜವಾಗಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ ಎಂಬ ಪ್ರತ್ಯೇಕ ವಿಭಾಗಗಳಾಗಿ ವಿಂಗಡಣೆಯಾಗಿಲ್ಲ ಎಂಬುದು ನನ್ನ ವಿಶ್ವಾಸ. ಅವುಗಳ ನಡುವೆ ಪ್ರತಿಕ್ರಿಯೆಗಳು ಇದ್ದೇ ತೀರುತ್ತವೆ.[೧]

ಆತ್ಮಶ್ರೀನಿಯಮಕ್ಕೆ ತನ್ನದೇ ಆದ ಒಂದು ಕ್ಷೇತ್ರವಿದೆ ಎಂಬುದನ್ನು ನಾನು ನಂಬುವುದಿಲ್ಲ. ಬದಲು, ಅದು ಜೀವನದ ಸಾಮಾನ್ಯ ವ್ಯಾಪಾರಗಳ ಮೂಲಕವಾಗಿ ಮಾತ್ರವೇ ವ್ಯಕ್ತಗೊಳ್ಳುತ್ತದೆ. ಹೀಗೆ ಅದು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಲಯಗಳ ಮೇಲೂ ಪರಿಣಾಮವನ್ನು ಉಂಟುಮಾಡುತ್ತದೆ.[೨]

ಮಾನವಜೀವಿತದ ಪರಮೋದ್ದೇಶ ಭಗವತ್ ಸಾಕ್ಷಾತ್ಕಾರ. ಅವನ ಕರ್ಮಕ್ರಿಯೆಗಳೇನೆ ಇರಲಿ, ಸಾಮಾಜಿಕ, ರಾಜಕೀಯ, ಧಾರ್ಮಿಕ ಎಲ್ಲವೂ ಈ ಈಶ್ವರಸಾಕ್ಷಾತ್ಕಾರದ ಪರಮೋದ್ದೇಶದಿಂದಲೇ ನಿಯಂತ್ರಿತವಾಗಿಬೇಕು. ಮಾನವನ ಸೇವೆಯೇ ಈ ಸಾಧನೆಯ ಪ್ರಪ್ರಥಮ ಅನಿವಾರ್ಯಾಂಗವಾಗುತ್ತದೆ. ಏಕೆಂದರೆ ಇಷ್ಟೆ: ಈಶ್ವರದರ್ಶನಕ್ಕಿರುವ ಏಕೈಕ ಮಾರ್ಗವೆಂದರೆ ಆತನ ಸೃಷ್ಟಿಯಲ್ಲಿಯೆ ಆತನನ್ನು ಕಂಡು ಅದರಲ್ಲಿಯೇ ಒಂದಾಗಿರುವುದು. ಸರ್ವರ ಸೇವೆಯೊಂದೇ ಇದಕ್ಕೆ ಸಾಧನ. ನಾನು ಈ ಸರ್ವದ ಒಂದು ಅಂಶ. ಇತರರನ್ನು ಉಳಿದು ನಾನೊಬ್ಬನೇ ಆತನನ್ನು ಪಡೆಯಲಾರೆ.[೩]

ಈಶಸೇವೆ ಅರ್ಥಾತ್ ಮಾನವ ಸೇವೆಯೇ ನನ್ನ ಧರ್ಮ. ನಿಷ್ಕಾಮ ಸೇವೆಯಿಂದ ಸೇವೆ ಸಲ್ಲಿಸುವುದೆಂದರೆ ಇತರರಿಗೆ ನಾವು ಉಪಕಾರಮಾಡಿದ್ದಕ್ಕಿಂತ ನಮ್ಮ ಸಾಲವನ್ನು ನಾವು ತೀರಿಸಿಕೊಂಡು ಕೃತಕೃತ್ಯರಾದಂತೆ. ನಮ್ಮ ಹೊಣೆಯನ್ನು ನಾವೇ ಇಳಿಸಿಕೊಂಡು ನಮ್ಮ ಕರ್ತವ್ಯವನ್ನು ಪರಿಪಾಲಿಸುವುದರ ಮೂಲಕ ನಮಗೇ ನಾವು ಉಪಕಾರ ಮಾಡಿ ಕೊಳ್ಳುತ್ತೇವೆ. ನಮ್ಮಲ್ಲಿ ಒಳ್ಳೆಯವರೆನಿಸಿಕೊಂಡವರು ಮಾತ್ರವಲ್ಲ, ನಾವೆಲ್ಲರೂ ನಮ್ಮ ಸರ್ವಸಂಪತ್ತನ್ನೂ ಸರ್ವರಿಗಾಗಿ ವಿನಿಯೋಗಿಸಲು ಬದ್ಧರು. ಮೃಗಗಳಿಗಿಂತ ಮಾನವ ಭಿನ್ನ ಎಂದು ತೋರುವುದು ತ್ಯಾಗಧರ್ಮ ಒಂದರಿಂದಲೇ.[೪]

ಮನುಷ್ಯ ಎಷ್ಟರಮಟ್ಟಿಗೆ ಪರಾರ್ಥಕ್ಕಾಗಿ ಶ್ರಮಿಸುತ್ತಾನೆಯೊ ಅಷ್ಟರಮಟ್ಟಿಗೆ ಅವನು ದೊಡ್ಡವನಾಗುತ್ತಾನೆ.[೫]

---

೧. ಯಂಗ್ ಇಂಡಿಯಾ, ೨-೩-೧೯೨೨
೨. ಅದೇ, ೩-೯-೧೯೨೪
೩. ಹರಿಜನ, ೨೯-೮-೧೯೩೬
೪. ಮಂಗಳ ಪ್ರಭಾತ
೫. ಯಂಗ್ ಇಂಡಿಯಾ, ೪-೧೨-೧೯೨೪

ನಾನು ಸೋದರಭಾವ ಅಥವಾ ತಾದಾತ್ಮ್ಯವನ್ನು ಸಾಧಿಸಲೆಳಸುವುದು ಕೇವಲ ಮಾನವಜೀವಿಗಳೊಂದಿಗೆ ಮಾತ್ರವಲ್ಲ, ಸಮಸ್ತ ಜೀವರಾಶಿಯೊಂದಿಗೆ, ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳೊಂದಿಗೆ ಕೂಡ. ನಿಮ್ಮನ್ನು ಚಕಿತಗೊಳಿಸಬಹುದಾದ ಈ ಬಯಕೆಗೆ ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳೊಂದಿಗೂ ತಾದಾತ್ಮ್ಯ ಸಾಧಿಸ ಬೇಕೆನ್ನುವ ಬಯಕೆಗೆ-ಕಾರಣವಿಷ್ಟೆ; ನಾವೆಲ್ಲರೂ ಒಬ್ಬನೇ ಭಗವಂತನಿಂದ ಬಂದವರು ಎಂದು ಹೇಳುತ್ತೇವಲ್ಲ; ಹಾಗಿರುವುದರಿಂದ ಯಾವುದೇ ರೂಪದಲ್ಲಿ ಗೋಚರಿಸಿದರೂ ಮೂಲತಃ ಎಲ್ಲ ಜೀವವೂ ಒಂದೇ.[೧]

ಭಗವಂತನ ಕೇವಲ ಅಖಂಡತೆಯನ್ನು ನಾನು ನಂಬುತ್ತೇನೆ; ಆದುದರಿಂದಲೇ ಜನತೆಯ ಅಖಂಡತೆಯಲ್ಲೂ ನನಗೆ ಶ್ರದ್ಧೆಯಿರುವುದು. ಒಬ್ಬನು ಮಾತ್ರ ಅಧ್ಯಾತ್ಮಲಾಭ ಪಡೆದು ಅವನ ಸುತ್ತಣ ಜನರು ತೊಳಲುತ್ತಾರೆ ಎಂಬುದನ್ನು ನಾನು ನಂಬುವುದಿಲ್ಲ. ಅದ್ವೈತದಲ್ಲಿ ನನಗೆ ಶ್ರದ್ಧೆಯಿದೆ. ತತ್ತ್ವಶಃ ಮಾನವನ ಅಖಂಡತೆಯಲ್ಲಿ, ಹಾಗೆ ನೋಡಿದರೆ ಜೀವಸಮಸ್ತದ ಅಖಂಡತೆಯಲ್ಲಿ ನನಗೆ ವಿಶ್ವಾಸವುಂಟು. ಆದುದರಿಂದಲೇ ಒಂದು ವ್ಯಕ್ತಿಗೆ ಆಧ್ಯಾತ್ಮ ಲಾಭವಾದರೆ ಇಡಿಯ ವಿಶ್ವಕ್ಕೆ ಆ ಲಾಭ ಒದಗುತ್ತದೆ. ಒಂದು ವ್ಯಕ್ತಿ ಪತನ ಹೊಂದಿದರೆ ಅಷ್ಟರಮಟ್ಟಿಗೆ ಇಡಿಯ ವಿಶ್ವದ ಪತನವೇ ಆಗುತ್ತದೆ ಎಂದು ನಾನು ಭಾವಿಸಿರುವುದು.[೨]

ಈ ಪೃಥ್ವಿಯ ನಶ್ವರ ಸಾಮ್ರಾಜ್ಯದ ಬಯಕೆ ನನಗಿಲ್ಲ. ಮೋಕ್ಷರೂಪವಾದ ಅಮರ ಸಾಮ್ರಾಜ್ಯಕ್ಕಾಗಿ ನಾನು ಶ್ರಮಿಸುತ್ತಿದ್ದೇನೆ. ನನ್ನ ಧ್ಯೇಯ ಸಾಧನೆಗಾಗಿ ನಾನು ಗುಹೆಯ ನಿವಾಸಿಯಾಗಬೇಕಾಗಿಲ್ಲ.[೩]

ದೇಶದ, ತನ್ಮೂಲಕ ಮಾನವತೆಯ ಸೇವೆಗಾಗಿ ಎಡೆಬಿಡದೆ ದುಡಿಯುವುದೇ ನನ್ನ ಮೋಕ್ಷಪಥ. ಜೀವ ಸಮಸ್ತದೊಂದಿಗೆ ಅನನ್ಯತೆಯನ್ನು ಸಾಧಿಸುವುದೇ ನನ್ನ ಬಯಕೆ.[೪]

ಯಾವ ನೂತನ ಸಿದ್ಧಾಂತಗಳನ್ನೂ ನಾನು ಮಂಡಿಸಿಲ್ಲ. ಅದರ ಬದಲು ಪುರಾತನ ಸಿದ್ಧಾಂತಗಳ ಪುನರ್ನಿರೂಪಣೆಯ ಪ್ರಯತ್ನವೇ ನನ್ನದು. ಅದು ಎಷ್ಟರಮಟ್ಟಿಗೆ ಸರಿಯಾಗಿ ಸಾಗಿದೆಯೋ ಹೇಳಲಾರೆ. ಆದರೆ ಅದು ನನ್ನ ಪ್ರಾಮಾಣಿಕವಾದ ನಂಬಿಕೆಯನ್ನು ಪ್ರತಿನಿಧಿಸುತ್ತಿದೆ.[೫]

ಗಾಂಧೀಪಂಥ ಎಂಬುದೊಂದಿಲ್ಲ. ನನ್ನ ತರುವಾಯ ಯಾವ ಪಂಥವನ್ನೂ ಕಟ್ಟಿಹೋಗುವ ಇಚ್ಛೆ ನನಗಿಲ್ಲ. ನಾನು ಯಾವುದಾದರೂ ನೂತನ ತತ್ತ್ವದ ಅಥವಾ ಸಿದ್ಧಾಂತದ ಮೂಲಪುರುಷ ಎಂಬ ಭಾವನೆ ನನಗಿಲ್ಲ. ನಿತ್ಯಸತ್ಯಗಳನ್ನು ನಮ್ಮ ದೈನಂದಿನ ಜೀವನ ಹಾಗೂ ಸಮಸ್ಯೆಗಳಿಗೆ ಅಳವಡಿಸಲು ನನ್ನ ರೀತಿಯಲ್ಲಿ ನಾನು ಸಾಧಾರಣನಂತೆ ಪ್ರಯತ್ನಿಸಿದ್ದೇನೆ ಅಷ್ಟೆ. ಸತ್ಯ-ಅಹಿಂಸೆ, ಈ ಭಾವಗಳು ಪರ್ವತಗಳಷ್ಟೇ ಪುರಾತನವಾದವು. ನನ್ನ ಶಕ್ತಿಗೆ ಸಾಧ್ಯವಾದಷ್ಟು ವಿಪುಲ ಪ್ರಮಾಣದಲ್ಲಿ ಅವೆರಡರಲ್ಲೂ ಪ್ರಯೋಗಗಳನ್ನು ನಡೆಸಿರುವುದಷ್ಟೇ ನನ್ನ ಕೆಲಸ. ಹಾಗೆ ಮಾಡುವಾಗ ಕೆಲವು ಸಲ ತಪ್ಪು ಮಾಡಿದ್ದೇನೆ; ಆ ತಪ್ಪುಗಳಿಂದ ಪಾಠ

---

೧. ಹರಿಜನ, ೪-೪-೧೯೨೯
೨. ಯಂಗ್ ಇಂಡಿಯಾ, ೪-೧೨-೧೯೨೬
೩. ಯಂಗ್ ಇಂಡಿಯಾ, ೩-೪-೧೯೩೪
೪. ಅದೇ, ೩-೪-೧೯೩೪
೫. ಅದೇ, ೩-೪-೧೯೩೪
೬. ಹರಿಜನ, ೨೮-೩-೧೯೩೬

ಕಲಿತಿದ್ದೇನೆ. ಹೀಗೆ ಜೀವನ ಮತ್ತು ಅದರ ಸಮಸ್ಯೆಗಳು ಸತ್ಯ–ಅಹಿಂಸೆಗಳ ಅನುಷ್ಠಾನಗಳಲ್ಲಿ ನಡೆಸಿರುವ ಅನೇಕ ಪ್ರಯೋಗಗಳಾಗಿವೆ.[೪]

ನಿಮ್ಮ ಮುಂದೆ ಉದ್ಭವಿಸಿರುವ ಸಮಸ್ಯೆಗಳನ್ನು ನನ್ನ ಹೇಳಿಕೆಗೆ ಅನುಸಾರವಾಗಿ ಎದುರಿಸಬೇಕೆಂಬುದೇ ನನ್ನ ಇಚ್ಛೆ. ಹೀಗೆ ಸತ್ಯ–ಅಹಿಂಸೆಗಳಲ್ಲಿ ನನ್ನ ಶ್ರದ್ಧೆ ವರ್ಧಿಸುತ್ತಲೇ ಇದೆ. ನನ್ನ ಜೀವನದಲ್ಲಿ ಅವುಗಳನ್ನು ಅನುಸರಿಸುತ್ತ ಹೋದಂತೆ ನಾನು ಕೂಡ ಪ್ರತಿಕ್ಷಣವೂ ಬೆಳೆಯುತ್ತಲೇ ಇದ್ದೇನೆ. ಅವುಗಳಲ್ಲಿ ನನಗೆ ಹೊಸ ಅರ್ಥ ಸ್ಫುರಿಸುತ್ತಿದೆ. ದಿನದಿನವೂ ಅವುಗಳನ್ನು ಹೊಸ ಹೊಸ ಬೆಳಕಿನಲ್ಲಿ ಕಂಡು ಹೊಸ ಹೊಸ ಅರ್ಥಗಳನ್ನೂ ಅರಿಯುತ್ತಿದ್ದೇನೆ. ನನ್ನ ಜತೆಜತೆಗೆ ನೀವೂ ಕೂಡ ಬೆಳೆಯಬೇಕು. ನನ್ನ ಅನಂತರ ಏನಾಗುತ್ತದೆ ಎಂಬುದನ್ನು ತಿಳಿಯುವ ಚಿಂತೆ ನನಗಿರಕೂಡದು. ಆದುದರಿಂದ ನನ್ನನ್ನು ಮರೆತುಬಿಡಿ. ನೀವು ಭದ್ರವಾಗಿ ಅಳತೆಗೋಲಿನಿಂದ ನಿಮ್ಮ ಒಂದೊಂದು ಚಟುವಟಿಕೆಯನ್ನೂ ಅಳೆದು ಉದ್ಭವಿಸಬಹುದಾದ ಎಲ್ಲ ಸಮಸ್ಯೆಗಳನ್ನೂ ನಿರ್ಭೀತರಾಗಿ ಎದುರಿಸಿ.[೧]

ನಿಲ್ಲುವುದು ನನ್ನ ಕೃತಿಯೇ ಹೊರತು, ನನ್ನ ಮಾತೂ ಅಲ್ಲ, ಬರಹವೂ ಅಲ್ಲ. ಇತ್ತೀಚೆಗೆ ನಾನು ಈ ಮಾತನ್ನು ಅನೇಕ ಸಲ ಹೇಳಿದ್ದೇನೆ. ಸಕಲ ಶಾಸ್ತ್ರಗಳೂ ಒಂದುವೇಳೆ ವಿನಾಶ ಹೊಂದುವುದಾದರೂ ಹಿಂದೂ ಧರ್ಮದ ಸಾರವನ್ನು ಸಾರಲು ಈಶೋಪನಿಷತ್ತಿನ ಒಂದು ಮಂತ್ರ ಸಾಕು: ಆದರೆ ಅದನ್ನು ಅನುಷ್ಠಾನಕ್ಕೆ ತರಲು ಯಾರೊಬ್ಬರೂ ಇರದಿದ್ದರೆ ಆ ಒಂದು ಮಂತ್ರವೂ ನಿರರ್ಥಕ. ಅದರಂತೆಯೇ ನನ್ನ ಮಾತು, ಬರಹಗಳು ಸತ್ಯ ಅಹಿಂಸೆಯ ಮಹಾತತ್ತ್ವಗಳನ್ನು ರಕ್ತಗತಮಾಡಿಕೊಳ್ಳಲು ನಿಮಗೆ ನೆರವು ನೀಡಿರುವಷ್ಟರ ಮಟ್ಟಿಗೆ ಮಾತ್ರ ಉಪಯುಕ್ತ. ಅವುಗಳನ್ನು ನೀವು ಹಾಗೆ ರಕ್ತಗತ ಮಾಡಿಕೊಳ್ಳದಿದ್ದರೆ ನನ್ನ ಬರಹಗಳಿಂದ ನಿಮಗೆ ಯಾವ ಪ್ರಯೋಜನವೂ ಇಲ್ಲ. ಒಬ್ಬ ಸತ್ಯಾಗ್ರಹಿಯಾಗಿ ನಾನು ಒಂದೊಂದು ಮಾತನ್ನೂ ಉದ್ದೇಶ್ಯಪೂರ್ವಕವಾಗಿ ಹೇಳುತ್ತಿದ್ದೇನೆ.[೨]

ಗಾಂಧೀಪಂಥ ಎಂಬುದು ದೋಷದ ಪ್ರತೀಕವಾಗಿರುವುದಾದರೆ ಅದು ನಾಶ ಹೊಂದಲಿ. ಸತ್ಯ–ಅಹಿಂಸೆಗಳು ಅಜರಾಮರ. ಆದರೆ ಗಾಂಧೀಪಂಥ ಎಂಬುದು ಪಂಥಾಭಿಮಾನಕ್ಕೆ ಮತ್ತೊಂದು ಹೆಸರಾದರೆ ಅದು ವಿನಾಶ ಯೋಗ್ಯವೇ ನಿಜ. ತಾನು ಗಾಂಧಿಯ ಅನುಯಾಯಿ ಎಂದು ಯಾರೊಬ್ಬನೂ ಹೇಳದಿರಲಿ. ನಾನು ನನ್ನನ್ನು ಅನುಸರಿಸಿದರೆ ಸಾಕು. ಅದರಲ್ಲೂ ನಾನು ಎಂತಹ ಅಸಮರ್ಪಕ ಅನುಯಾಯಿ ಎಂಬುದನ್ನು ನಾನು ಬಲ್ಲೆ: ಯಾವ ತತ್ತ್ವಗಳಿಗಾಗಿ ನಾನು ನಿಂತಿದ್ದೇನೆಯೊ ಅವುಗಳಿಗೆ ತಕ್ಕಂತೆ ನಾನು ಬಾಳುತ್ತಿಲ್ಲ. ನೀವು ಅನುಯಾಯಿಗಳಲ್ಲ: ಸಹವಿದ್ಯಾರ್ಥಿಗಳು, ಸಹಯಾತ್ರಿಕರು, ಸಹ–ಅನ್ವೇಷಕರು, ಸಹಉದ್ಯೋಗಿಗಳು.[೩]

ಸತ್ಯ–ಅಹಿಂಸೆಗಳನ್ನು ಕೇವಲ ವೈಯುಕ್ತಿಕ ಅನುಷ್ಠಾನದ ತತ್ತ್ವಗಳನ್ನಾಗಿ ಮಾಡಿಕೊಂಡರೆ ಸಾಲದು: ಸಮಾಜ ಸಮುದಾಯಗಳು, ರಾಷ್ಟ್ರಗಳೂ ಕೂಡ ಅವುಗಳನ್ನು ಅನುಷ್ಠಾನಕ್ಕೆ ತರುವಂತಾಗಬೇಕು. ಹೇಗೇ ಆಗಲಿ, ಅಂತೂ ನನ್ನ ಕನಸು. ನನ್ನ ಬದುಕೆಲ್ಲ ಅದರ ಸಾಕ್ಷಾತ್ಕಾರದ ಪ್ರಯತ್ನಕ್ಕಾಗಿಯೇ, ನನ್ನ ಸಾವೂ ಅದರಲ್ಲಿಯೆ. ನನ್ನ ಶ್ರದ್ಧೆ ನನಗೆ ಅನುದಿನವೂ ನೂತನ ಸತ್ಯಗಳನ್ನು ಕಾಣಿಸುತ್ತಿದೆ. ಆತ್ಮದ ಸ್ವರೂಪವೇ ಅಹಿಂಸೆ: ಆದುದರಿಂದಲೇ

---

೧. ಹರಿಜನ ೧–೫–೧೯೩೭

೨. ಹರಿಜನ ೧–೫–೧೯೩೭

೩. ಹರಿಜನ ೨–೩–೧೯೪೦

ಸಕಲರೂ ಬದುಕಿನ ಸಕಲ ವ್ಯವಹಾರಗಳಲ್ಲೂ ಅದನ್ನು ಅನುಷ್ಠಾನಕ್ಕೆ ತರಬೇಕು. ಎಲ್ಲ ಕ್ಷೇತ್ರಗಳಲ್ಲೂ ಅದನ್ನು ಅನುಷ್ಠಾನ ಮಾಡಲಾಗದಿದ್ದರೆ ಅದಕ್ಕೆ ಉಪಯೋಗಿಕ ಮೌಲ್ಯವೇ ಇಲ್ಲ.[1]

ನಮ್ಮ ದೇಶಕ್ಕಾಗಿ ನಾನು ತ್ಯಾಗ ಮಾಡಲಾರದುದು ಈ ಜಗತ್ತಿನಲ್ಲಿ ಏನೂ ಇಲ್ಲ-ಎರಡರ ಹೊರತು. ಅವು ಸತ್ಯ ಮತ್ತು ಅಹಿಂಸೆ. ಇಡೀ ಜಗತ್ತನ್ನೇ ನನ್ನ ಮುಂದಿಟ್ಟರೂ ಈ ಎರಡನ್ನು ನಾನು ಬಿಡಲಾರೆ. ಏಕೆಂದರೆ ನನ್ನ ಪಾಲಿಗೆ ಸತ್ಯವೇ ದೇವರು. ಸತ್ಯಸಾಧನೆಗೆ ಅಹಿಂಸೆಯಲ್ಲದೆ ಅನ್ಯಪಥ ಇಲ್ಲ. ಸತ್ಯ ಅಥವಾ ಭಗವಂತನನ್ನು ಬಲಿಗೊಟ್ಟು ಭಾರತಕ್ಕೆ ಸೇವೆ ಸಲ್ಲಿಸುವ ಆಲೋಚನೆಯನ್ನು ನಾನು ಮಾಡಲಾರೆ. ನಾನು ಬಲ್ಲೆ. ಸತ್ಯವನ್ನು ಕೈಬಿಡಬಲ್ಲವನು ತನ್ನ ದೇಶವನ್ನೂ ಕೈಬಿಡಲಿಲ್ಲ. ಆಪ್ತೇಷ್ಟರನ್ನೂ ಕೈಬಿಡಬಲ್ಲ. ನನ್ನಾತ್ಮ ಮತ್ತು ನನ್ನ ಕರ್ತ ಇಬ್ಬರೂ ಮೆಚ್ಚುವಂತೆ ನಾನು ಹೋದೆಡೆಯಲ್ಲಿ ನನ್ನ ಕರ್ಮಕ್ಷೇತ್ರದ ಗಾಯತ್ರಿಗಳಾದ ಈ ನನ್ನ ಧರ್ಮಸೂತ್ರಗಳನ್ನು ಸಾರುತ್ತ ಹೋಗುತ್ತೇನೆ.

ನನ್ನದು ಧರ್ಮಮಾರ್ಗ. ನಾವು ಧರ್ಮಿಗಳು. ಆದುದರಿಂದ ಉಳಿದವರಿಗೆ ನಾವು ಶ್ರೇಷ್ಠರು ಎಂಬ ಅಹಂಭಾವ ನಮ್ಮನ್ನು ಆಕ್ರಮಿಸುವ ಭಯ ಯಾವಾಗಲೂ ಇದ್ದೇ ಇದೆ. ಇತರರಿಂದ ನಾನು ನಿರೀಕ್ಷಿಸುವಂತೆ ಸ್ವವಿಮರ್ಶೆಯಲ್ಲಿ ಸತ್ಯವಂತೆಯು ನಿಷ್ಠುರವಾಗಿರಲು ನಾನು ಪ್ರಯತ್ನಿಸುತ್ತೇನೆ.[2]

'ಗಾಂಧೀತತ್ತ್ವ' ಎಂದು ಯಾವುದನ್ನು ಕರೆಯುತ್ತಾರೋ ಅದನ್ನು, ಅದರ ಪ್ರಸಾರ ವಿಧಾನಗಳನ್ನು ವಿಚಾರಿಸೋಣ. ಸತ್ಯ-ಅಹಿಂಸೆಗಳನ್ನು ಕುರಿತು ಪುಸ್ತಕಗಳನ್ನು ಬರೆಯುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸತ್ಯ ಅಹಿಂಸೆಗಳ ಪ್ರಸಾರ ಸಾಧ್ಯ. ಅವುಗಳನ್ನು ಅನುಷ್ಠಾನಕ್ಕೆ ತಂದರೆ ಅನುಷ್ಠಾನದ ಜೀವನ ಪುಸ್ತಕಕ್ಕಿಂತ ಶ್ರೇಷ್ಠ. ಪುಸ್ತಕ ಮತ್ತು ಪತ್ರಿಕೆಗಳ ಪ್ರಕಟನೆ ಅನಗತ್ಯ ಎಂದು ನಾನು ಹೇಳುತ್ತಿಲ್ಲ. ಅವು ಅನಿವಾರ್ಯವೇನಲ್ಲ ಎಂದಷ್ಟೇ ನನ್ನ ಅಭಿಪ್ರಾಯ. ನಾವು ಸತ್ಯ-ಅಹಿಂಸೆಗಳ ನಿಜವಾದ ಆರಾಧಕರಾಗುವ ಪಕ್ಷದಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯವಾಗಿ ಬೇಕಾದ ಬುದ್ಧಿಶಕ್ತಿಯನ್ನು ಭಗವಂತನೆ ನಮಗೆ ದಯಪಾಲಿಸುತ್ತಾನೆ. ಪ್ರತಿಪಕ್ಷದ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವ ಇಚ್ಛೆ ಅಂತಹ ಶ್ರದ್ಧೆಯ ಪೂರ್ವಾಂಗವಾಗಿಯೇ ಉಳಿದಿದೆ. ಪ್ರತಿಪಕ್ಷಿಯ ಮನಸ್ಸನ್ನು ಹೊಕ್ಕು ಆತನ ದೃಷ್ಟಿ ಏನೆಂದು ಅರಿಯಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಹಿಂಸೆಯ ಬಾಯೊಳಗೆ ಅಹಿಂಸೆ ನೇರವಾಗಿ ಹೋಗುತ್ತದೆ ಎಂಬುದರ ಅರ್ಥ ಇದೇ. ಅಂತಹ ಮನೋಧರ್ಮದ ಕವಚ ನಮಗಿದ್ದರೆ ಅಹಿಂಸೆಯ ತತ್ತ್ವಗಳನ್ನು ಪ್ರಸಾರ ಮಾಡುವ ವಿಶ್ವಾಸ ನಮಗೆ ಬರುತ್ತದೆ. ಅದಿಲ್ಲದೆ ಪುಸ್ತಕದ ಪತ್ರಿಕೆಗಳ ಪ್ರಚಾರ ವ್ಯರ್ಥ.[3]

ನನ್ನ ಸಲಹೆಗಳಲ್ಲೆಲ್ಲ ಒಂದು ರಕ್ಷಾಸೂತ್ರ ಇದ್ದೇ ಇರುತ್ತದೆ. ತಮ್ಮ ಬುದ್ಧಿಗೂ ಹೃದಯಕ್ಕೂ ಒಪ್ಪಿಗೆಯಾಗದಿದ್ದರೆ ಯಾರೂ ಅವುಗಳನ್ನು ಅನುಸರಿಸಬೇಕಾಗಿಲ್ಲ.[4]

ನನ್ನನ್ನು ಮೆಚ್ಚುವವರಿಗೂ ನನ್ನ ಮಿತ್ರರಿಗೂ ಒಂದು ಧೈರ್ಯ ಹೇಳಬಲ್ಲೆ. ಮಹಾತ್ಮಾ ಎಂಬುದನ್ನು ಮರೆತು ನನ್ನನ್ನು ಬರಿಯ 'ಗಾಂಧೀ' ಎಂದು ಭಾವಿಸುವುದಾದರೆ ಅವರು ನನ್ನ ಮೆಚ್ಚುಗೆಗೆ ಹೆಚ್ಚಾಗಿ ಪಾತ್ರರಾಗುತ್ತಾರೆ. ನಾನು ಯಾವ ತತ್ತ್ವಗಳನ್ನು ಜೀವನದಲ್ಲಿ ಅನುಷ್ಠಾನ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೇನೆಯೋ ಅದನ್ನು ತಾವು ತಮ್ಮ

---

೧. ಹರಿಜನ ೧-೫-೧೯೩೭
೨. ಹರಿಜನ ೧-೫-೧೯೩೭
೩. ಹರಿಜನ ೧೩-೫-೧೯೩೯
೪. ಹರಿಜನ. ೧೫-೭-೧೯೩೫

ಜೀವನವಲ್ಲಿ ಅನುಷ್ಠಾನಕ್ಕೆ ತರಬೇಕು: ಇಲ್ಲವೆ ಅದರಲ್ಲಿ ಅವರಿಗೆ ನಂಬುಗೆ ಇರದಿದ್ದ ಪಕ್ಷವಲ್ಲಿ ಅದನ್ನು ಸರ್ವರೀತಿಯಿಂದಲೂ ವಿರೋಧಿಸಬೇಕು–ಇದೇ ನನ್ನ ಮಿತ್ರರು ನನಗೆ ತೋರಿಸ ಬಹುದಾದ ಪರಮ ಗೌರವ.[1]

ಯಾವ ಮಹಾ ಉದ್ಯಮದಲ್ಲಿಯೆ ಆಗಲಿ ನಿರ್ಣಯಕಾರಿಯಾಗುವುದು ಹೋರಾಡು ವವರ ಸಂಖ್ಯೆಯಲ್ಲ, ಅವರ ಸತ್ತ್ವ. ಜಗತ್ತಿನ ಮಹಾವ್ಯಕ್ತಿಗಳೆಲ್ಲ ಏಕಾಂಗಿಯಾಗಿ ನಿಂತರು. ಝರತ್ರುಷ್ಟ, ಬುದ್ಧ, ಯೇಸು, ಮಹಮ್ಮದ್ ಈ ಎಲ್ಲ ಮಹಾಪ್ರವಾದಿಗಳನ್ನೂ ಗಮನಿಸಿ. ನಾನಿನ್ನೂ ಹೆಸರಿಸಬಹುದಾದ ಇತರ ಹಲವರಂತೆಯೆ ಅವರೆಲ್ಲರೂ ಏಕಾಂಗಿಯಾಗಿಯೇ ಕೆಲಸ ಮಾಡಿದರು. ಆದರೆ ಅವರಿಗೆ ತಮ್ಮಲ್ಲಿಯೂ ಭಗವಂತನಲ್ಲಿಯೂ ಜೀವಂತಶ್ರದ್ಧೆಯಿತ್ತು; ಭಗವಂತ ತಮ್ಮ ಪಕ್ಕದಲ್ಲಿದ್ದಾನೆಂಬ ವಿಶ್ವಾಸ ಇದ್ದುದರಿಂದ ತಾವು ಏಕಾಕಿಗಳು ಎಂಬ ಭಾವನೆಯೆ ಅವರಿಗೆ ಬರಲಿಲ್ಲ.[2]

ನನ್ನಲ್ಲಿರುವ ಏನೋ ಒಂದು ವಾಣಿ ನನ್ನ ಸಂಕಟವನ್ನು ಕೂಗಿ ಸಾರುವಂತೆ ನನ್ನನ್ನು ಪ್ರಚೋದಿಸುತ್ತಿದೆ. ಅದು ಯಾವುದೆಂಬುದನ್ನು ನಾನು ಖಚಿತವಾಗಿ ಬಲ್ಲೆ. ನನ್ನನ್ನೆಂದೂ ವಂಚಿಸದ ನನ್ನೊಳಗಿನ ಆ ವಾಣಿ ಹೇಳುತ್ತದೆ. 'ನೀನು ಒಬ್ಬೊಂಟಿಗನೆ ಆಗಿ ನಿಲ್ಲಬೇಕಾಗಿ ಬಂದರೂ ಸರಿ, ಇಡಿಯ ಜಗತ್ತನ್ನೇ ಎದುರಿಸಿ ನಿಲ್ಲಬೇಕಾಗುತ್ತದೆ.'

'ಜಗತ್ತು ನಿನ್ನನ್ನು ತನ್ನ ಕೆಂಗಣ್ಣಿನಿಂದ ದುರದುರನೆ ನೋಡಿದರೂ ಸರಿ, ನೀನು ಅದರ ದೃಷ್ಟಿಗೆ ದೃಷ್ಟಿ ಕೊಟ್ಟು ನಿಲ್ಲಬೇಕಾಗುತ್ತದೆ. ಭೀತಿ ಬೇಡ. ನಿನ್ನ ಹೃದಯಲ್ಲಿ ನೆಲಸಿ ಹೀಗೆಂದು ಹೇಳುತ್ತಿರುವ ಆ ಅಣುರೂಪಿಯಲ್ಲಿ ನಿನಗೆ ಶ್ರದ್ಧೆಯಿರಲಿ. ಯಾವುದಕ್ಕಾಗಿ ನೀನು ಬದುಕಿದೀಯೋ ಯಾವುದಕ್ಕಾಗಿ ನೀನು ಮಡಿಯಬೇಕೋ ಅದಕ್ಕಾಗಿ ಮನೆ ಮಠ ಮಡದಿ ಮಕ್ಕಳು ಸರ್ವಸ್ವವನ್ನೂ ಪರಿತ್ಯಜಿಸು; ಆದರೆ ಅದರ ಸತ್ಯಕ್ಕೆ ಸಾಕ್ಷಿಯಾಗಿ ಬಾಳು.[3]

---

೧. ಯಂಗ್ ಇಂಡಿಯಾ, ೧೨-೬-೧೯೨೪
೨. ಅದೇ, ೧೦-೧೦-೧೯೩೯
೩. ಬಾಂಬೆ ಕ್ರಾನಿಕಲ್, ೯-೮-೧೯೪೨

ವಿಶೇಷ ದೃಷ್ಟಿ

[ಶ್ರೀ ರಂ. ರಾ. ದಿವಾಕರರಿಂದ]

*

ಗೀತಾಮಾತೆ

ಗಾಂಧೀಜಿಯವರು ಗೀತೆಯ ಮಹತ್ವವನ್ನು ಅರಿತುಕೊಂಡು, ತಮ್ಮ ಜೀವನದ ಮೇಲೆ ಆದ ಗೀತಾಭ್ಯಾಸದ ಆಳವಾದ ಪರಿಣಾಮವನ್ನು ನೆನಸಿ ಗೀತೆಗೆ 'ಗೀತಾಮಾತೆ' ಎಂಬ ಬಿರುದನ್ನು ಕೊಟ್ಟರು: ಅವರ ಪರಮ ಶಿಷ್ಯರಾದ ವಿನೋಬಾಜೀ ಅವರು ಅದಕ್ಕೆಯೆ 'ಗೀತಾಯಿ' ಎಂದರು. ಅವರವರ ಪಾರ್ಥಿವ ಜಡದೇಹಕ್ಕೆ ಅವರ ತಾಯಂದಿರು ಜನ್ಮಕೊಟ್ಟರು: ಆದರೆ ಅವರಿಗೆ ಆತ್ಮನ ಗುರುತು ಮಾಡಿಕೊಟ್ಟು 'ದ್ವಿಜ'ರನ್ನಾಗಿ ಮಾಡಿದವಳು 'ಗೀತಾ-ತಾಯಿ.' ಆದುದರಿಂದಲೆ ಅವರಿಬ್ಬರೂ ಗೀತೆಯನ್ನು ತಮ್ಮ ಮಾತೃಸ್ಥಾನದಲ್ಲಿ ಸ್ಥಾಪಿಸಿ, ಆತ್ಮಾನುಭೂತಿಯ ಭಂಡಾರವಾದ ಆ ಮಹಾಗ್ರಂಥದಿಂದ ಆಧ್ಯಾತ್ಮಿಕ ಜೀವನದ ರಹಸ್ಯವನ್ನು ಪಡೆದುಕೊಂಡರು.

ಹೋದ ಶತಮಾನದಲ್ಲಿ ಭಾರತದಲ್ಲಿ ಆಗಿಹೋದ ರಾಷ್ಟ್ರೀಯ ಮುಖಂಡರಲ್ಲಿ ಗೀತೋಪದೇಶದಿಂದ ಪ್ರಭಾವಿತರಾಗದೆ ಇದ್ದವರು ವಿರಳ. ಲೋಕಮಾನ್ಯ ಟಿಳಕರಂತೂ ಗೀತೆಯನ್ನು ಕುರಿತು ಒಂದು ಮಹಾನ್ ಗದ್ಯಭಾಷ್ಯವನ್ನೇ ಬರೆದುಬಿಟ್ಟರು. ಆ ಭಾಷ್ಯವು ಅವರನ್ನು ಅಜರಾಮರರನ್ನಾಗಿ ಮಾಡಿಬಿಟ್ಟದೆ, ಎಂದು ಆ ಬಗ್ಗೆ ಗಾಂಧೀಜಿಯವರು ಉದ್ಗರಿಸಿದ್ದಾರೆ. ಶ್ರೀ ಅರವಿಂದರ ಗೀತಾಭಾಷ್ಯವೂ ಕೂಡ ಪ್ರಸಿದ್ಧವಿರುವುದು : ಇಷ್ಟೇ ಅಲ್ಲ, ತಮ್ಮ ಅಧ್ಯಾತ್ಮಿಕ ಜೀವನದ ಮುಖ್ಯ ಮಾರ್ಗದರ್ಶನವು ತಮಗೆ ಗೀತೆ ಹಾಗೂ ಉಪನಿಷತ್ತು ಇವುಗಳಿಂದಲೇ ಆಯಿತು ಎಂದು ಅವರು ಹೇಳಿದ್ದಾರೆ. ಸ್ವಾಮಿ ವಿವೇಕಾನಂದ, ಮಾಲವೀಯ, ಲಾಲಾ ಲಜಪತರಾಯ ಮುಂತಾದವರು ಅನೇಕರು ಇದೇ ಬಗೆಯಾಗಿ ಗೀತೆಯ ಮಾಹಾತ್ಮ್ಯವನ್ನು ಕೊಂಡಾಡಿದ್ದಾರೆ.

ಗೀತೆ, ವೇದೋಪನಿಷತ್ತುಗಳ ಸಾರಸರ್ವಸ್ವವಿರುವುದಲ್ಲದೆ ಭಾರತೀಯ ತತ್ತ್ವಜ್ಞಾನಗಳ ಹಾಗೂ ಸಾಧನಮಾರ್ಗಗಳ ಸಮನ್ವಯವೂ ಇರುವುದು. ಆದುದರಿಂದ ಅದು ಸರ್ವಮತೀಯರಿಗೂ ಸರ್ವಸಾಮಾನ್ಯವಾಗಿ 'ಪ್ರಸ್ಥಾನತ್ರಯಿ'ಯಲ್ಲಿ (ಉಪನಿಷತ್ತುಗಳು, ಬ್ರಹ್ಮಸೂತ್ರಗಳು ಮತ್ತು ಗೀತೆ ಇವುಗಳಿಗೆ ಪ್ರಸ್ಥಾನತ್ರಯಿ' ಎನ್ನುವರು.) ಆ ಗ್ರಂಥಕ್ಕೆ ಮಹತ್ವದ ಸ್ಥಾನ ದೊರಕಿದೆ. ಮೇಲಾಗಿ ಏಳುನೂರೇ ಶ್ಲೋಕಗಳುಳ್ಳದ್ದಾಗಿ, ಸುಲಭಶೈಲಿಯಲ್ಲಿ ಬರೆದದ್ದಾಗಿ, ಸಂವಾದರೂಪವಾಗಿ ಇರುವುದರಿಂದ ಅದು ಅತ್ಯಂತ ಲೋಕಪ್ರಿಯವಾಗಿದೆ. ಸಂಸ್ಕೃತದಲ್ಲಿ ಹಾಗೂ ಇತರ ಭಾರತೀಯ ಭಾಷೆಗಳಲ್ಲಿ ಗೀತೆಯನ್ನು ಕುರಿತು ಬರೆಯಲಾದಷ್ಟು ಭಾಷ್ಯಗಳು, ಗ್ರಂಥಗಳು, ಇನ್ನಾವ ಪುಸ್ತಕದ ಬಗ್ಗೆಯೂ ಬರೆಯಲಾಗಿಲ್ಲ ಎಂದು ಹೇಳುವುದು ಅತಿಶಯೋಕ್ತಿಯಲ್ಲ.

ಗೀತಾಗ್ರಂಥದ ಮಹಾತ್ಮ್ಯವು ಇಷ್ಟೇ ಎಂದು ಹೇಳಲಾಗುವುದಿಲ್ಲ. ಪ್ರತ್ಯಕ್ಷ ಪರಮಾತ್ಮನ ಪೂರ್ಣಾವತಾರವೆಂದು ಕೋಟ್ಯಂತರ ಜನರಿಂದ ಮನ್ನಿಸಲ್ಪಟ್ಟ ಶ್ರೀಕೃಷ್ಣನು ಗೀತೆಯ

ಉಪದೇಶಕ ನಿರುಪನು. ಆದುದರಿಂದಲೇ ಅದಕ್ಕೆ 'ಭಗವದ್ಗೀತೆ' (ಭಗವಂತನು ಹಾಡಿದುದು) ಎಂಬ ಹೆಸರು. ಶ್ರೀಕೃಷ್ಣನ ವ್ಯಕ್ತಿತ್ವ ಹಾಗೂ ವ್ಯಕ್ತಿಮತ್ವ ಇವು ಪ್ರತ್ಯೇಕ ಅಭ್ಯಾಸದ ವಿಷಯಗಳಾಗಿವೆ. ಇದಲ್ಲದೆ ಉಪದೇಶ ಕೇಳುವವನೂ ಸಾಮಾನ್ಯ ವ್ಯಕ್ತಿಯಲ್ಲ. ಅವನು, ಅಂದರೆ ಅರ್ಜುನನು ಮಹಾರಥಿಯು, ಪರಮಯೋಧನು, ಪ್ರಸಿದ್ಧ ಕ್ಷತ್ರಿಯನು. ಅವನ ಗಾಂಡೀವ ಧನುಷ್ಯದ ಟಣತ್ಕಾರವನ್ನು ಕೇಳಿಯೇ ಶತ್ರುಗಳು ಗರ್ಭಗಳಿತರಾಗುತ್ತಿದ್ದರಂತೆ. ಮೇಲಾಗಿ ಉಪದೇಶದ ಸಂದರ್ಭವು ಅತಿ ರೋಮಾಂಚಕಾರಿ ಯಾದುದು. ಕುರುಪಾಂಡವರ ಹದಿನೆಂಟು ಅಕ್ಷೋಹಿಣಿ ಸೈನ್ಯವು ಎದುರುಬದುರು ಮೋಹರಿಸಿ, ಯುದ್ಧಕ್ಕೆ ಅಣಿಯಾಗಿ ನಿಂತಾಗ ಅಕಸ್ಮಾತ್ತಾಗಿ ನರಸತ್ತವರಂತೆ ಹತವೀರ್ಯನಾದ ಧನಂಜಯನಿಗೆ ಗೀತೆಯ ಉಪದೇಶ ಮಾಡಲಾಯಿತು. ಆ ಉಪದೇಶದಿಂದಾಗಿ 'ನಷ್ಟಮೋಹನಾಗಿ' ಅವನು ಪುನಃ ಚೇತರಿಸಿಕೊಂಡದ್ದು ಧರ್ಮ ಯುದ್ಧವನ್ನು ಮಾಡಲು ಸಿದ್ಧನಾದನು. ಅದರಲ್ಲಿ ಜಯಶೀಲನಾದನು.

ಆದುದರಿಂದಲೇ ಕುರುಕ್ಷೇತ್ರವು ಧರ್ಮಕ್ಷೇತ್ರವಾಯಿತು.

ಗಾಂಧೀಜಿಯವರು ಗೀತೆಯ ಅಭ್ಯಾಸವನ್ನು ಒಂದು ವಿಶೇಷ ದೃಷ್ಟಿಯಿಂದ ಮಾಡಿದ ರಲ್ಲದೆ, ಕುರುಕ್ಷೇತ್ರವೆಂಬುದು ಪ್ರತಿಯೊಬ್ಬನ ಅಂತಃಕರಣದಲ್ಲಿಯೆ ಇದೆ. ಅದನ್ನು ಧರ್ಮಕ್ಷೇತ್ರವನ್ನಾಗಿ ಮಾಡುವುದೇ ಪುರುಷಾರ್ಥ, ಮಾನವ ಜನ್ಮದ ಸಾರ್ಥಕ್ಯ ಎಂದು ಪ್ರತಿಪಾದಿಸಿದ್ದಾರೆ. ಮನುಷ್ಯನ ಚಿದಾಂಗಣದಲ್ಲಿ ಪ್ರತಿಕ್ಷಣವೂ ಧರ್ಮಕ್ಕೂ ಅಧರ್ಮಕ್ಕೂ, ಸತ್ಪ್ರವೃತ್ತಿಗೂ ದುಷ್ಪ್ರವೃತ್ತಿಗೂ, ಒಳಿತು–ಕೆಡುಕುಗಳಿಗೂ ತುಮುಲಯುದ್ಧ ನಡೆದಿರುತ್ತದೆ. ಆ ಯುದ್ಧದಲ್ಲಿ ಧರ್ಮಕ್ಕೆ ಗೆಲವು ಆಗಬೇಕಾದರೆ ಗೀತೆಯ ಉಪದೇಶದಂತೆ ನಡೆಯಬೇಕು ಎಂದು ಅವರು ಸಾರಿದ್ದಾರೆ.

ಗಾಂಧೀಜಿಯವರ ದೃಷ್ಟಿಯಲ್ಲಿ, ಮಹಾಭಾರತದ ಯುದ್ಧವೆಂದರೊಂದು ರೂಪಕ. ಕೌರವ–ಪಾಂಡವರು ಅಧರ್ಮ–ಧರ್ಮ ಇವುಗಳ ಪ್ರತೀಕಗಳು. ಈ ಯುದ್ಧದಲ್ಲಿ ಕೊನೆಗೆ ಅಧರ್ಮಕ್ಕೆ ಅಪಜಯ. ಧರ್ಮಕ್ಕೆ ಜಯ ಆಗಿದೆ. ಈ ಹೋರಾಟ ಒಂದೊಪ್ಪತ್ತು ಐತಿಹಾಸಿಕವೂ ಆಗಿದ್ದ ಪಕ್ಷದಲ್ಲಿ, ವೇದವ್ಯಾಸರು ಆ ಕತೆಯನ್ನು 'ನಮ್ಮ ಅಂತರಾಳದಲ್ಲಿ ನಿತ್ಯವೂ ನಡೆದಿರುವ ಒಳಿತು–ಕೆಡುಕುಗಳ ಹೋರಾಟ, ಅದರ ನೀತಿ–ಅನೀತಿ, ಇವುಗಳಿಗೆ ಅನ್ವಯಿಸಿ, ಧರ್ಮಮಾರ್ಗದಿಂದ ಹೋಗುವುದ ರಿಂದಲೇ ಜಯ' ಎಂಬುದನ್ನು ಪ್ರದರ್ಶಿಸಿದ್ದಾರೆ ಎಂದು ಗಾಂಧೀಜಿಯವರು ಹೇಳಿರುವರು.

ಮೇಲಾಗಿ ಗಾಂಧೀಜಿಯವರು ಹೇಳಿದ್ದೇನೆಂದರೆ, ಮಹಾಭಾರತದ ಯುದ್ಧವು ಪ್ರತ್ಯಕ್ಷ ಆಗಿದ್ದೂ ಅದರ ವರ್ಣನೆಯ ಮೂಲಕ ವೇದವ್ಯಾಸರು ಉಪದೇಶಿಸಿದ್ದೇನು? ಆ ಘನಘೋರ ಹಿಂಸಾಮಯ ಯುದ್ಧದ ವಿಫಲತೆಯನ್ನಲ್ಲವೇ? ಹಿಂಸೆಯು ಎಂದೂ ಯಾವ ಸಂದರ್ಭ ದಲ್ಲಿಯೂ ಉಪಕಾರಕವಾಗಲಾರದು, ಅಹಿಂಸಾಮಾರ್ಗವೇ ಎಲ್ಲಕ್ಕೂ ಶ್ರೇಷ್ಠ ಎಂಬುದೇ ಗಾಂಧೀಜಿ ಯವರ ಪ್ರಮೇಯ. ಈ ಮಹಾಮಾರ್ಗದಿಂದ ಹೋಗಲು ಸಾಮರ್ಥ್ಯವಿಲ್ಲದವರಷ್ಟೆ ವಿಕಲ್ಪವಾಗಿ ಸ್ವಸಂರಕ್ಷಣಕೋಸ್ಕರ, ಅನ್ಯಾಯವನ್ನು ತೊಡೆದುಹಾಕಲು ಹಿಂಸೆಯನ್ನಾಚರಿಸ ಬಹುದು, ಎಂದು ಅವರು ಹೇಳಿರುವರು. ಆದರೆ ಹಿಂಸೆ ಎಂಬುದು ಯಾವ ಸಂದರ್ಭ ದಲ್ಲಿಯೂ ಸನಾತನಧರ್ಮ ಅಥವಾ ಅತ್ಯಂತ ಶ್ರೇಷ್ಠ ಧರ್ಮ ಎಂದೆನಿಸಲಾರದು. ಯಾಕೆಂದರೆ ಅದು ಮೂಲದಲ್ಲಿಯೆ ದೋಷಯುಕ್ತವು ಹಾಗೂ ದ್ವೇಷಾದಿಗಳಿಗೆ ಜನ್ಮಕೊಟ್ಟು, ಹೊಸ ಸಮಸ್ಯೆಗಳನ್ನು ಹುಟ್ಟಿಸುವಂತಹುದು.

ಲೋಕಮಾನ್ಯರು, ಗೀತೆಯಲ್ಲಿ ಕರ್ಮಯೋಗವೇ ಮುಖ್ಯ ಪ್ರತಿಪಾದ್ಯ ವಿಷಯ ಎಂದು ಹೇಳಿದರು. ಶ್ರೀ ಅರವಿಂದರು, ಸರ್ವಸಮರ್ಪಣಯೋಗವೇ ಮುಖ್ಯ ಎಂದು ಪ್ರತಿಪಾದಿಸಿದರು. ಗಾಂಧೀಜಿಯವರು ಅನಾಸಕ್ತಿಯೇ ಪ್ರಧಾನ ಎಂದು ಸಾರಿದರು. ಆದುದರಿಂದ ಅವರು ಬರೆದ ಗೀತಾರ್ಥಕ್ಕೆ 'ಅನಾಸಕ್ತಿಯೋಗ' ಎಂಬ ಹೆಸರಾಗಿದೆ. ಏನೇ ಇರಲಿ. ಗಾಂಧೀಜಿಯವರು ಯಾವ ಮಹಾಗ್ರಂಥವನ್ನು ತಮ್ಮ ಸ್ಫೂರ್ತಿಯ ಹಾಗೂ ಅಧ್ಯಾತ್ಮಿಕ ಜೀವನದ ಮೂಲವೆಂದು ಬಗೆದು ನಿತ್ಯವೂ ಅದರಿಂದ ಚೈತನ್ಯವನ್ನು ಪಡೆಯುತ್ತಿದ್ದರೊ ಆ ಗ್ರಂಥವನ್ನು ಕುರಿತು ಅವರು ಬರೆದುದು ನಮ್ಮೆಲ್ಲರಿಗೂ ಅತೀವ ಮಹತ್ವದ್ದು ಹಾಗೂ ಅಭ್ಯಾಸಯೋಗ್ಯವು ಎಂಬಲ್ಲಿ ತಿಲಮಾತ್ರ ಸಂಶಯವಿಲ್ಲ.

ಬಿನ್ನಹ

ಗಾಂಧೀಜಿಯವರು ಗೀತೆಯನ್ನು ಗೀತಾಮಾತೆ ಎಂದು ಕರೆದಿದ್ದಾರೆ. ಗೀತಾಭ್ಯಾಸದಿಂದ ಅವರೇ ತಿಳಿಸಿರುವಂತೆ, ಅವರ ಜೀವನದಲ್ಲಿ ಆಳವಾದ ಪರಿಣಾಮ ಉಂಟಾಗಿದೆ ಎಂದಿದ್ದಾರೆ. ಗಾಂಧೀಜಿಯವರು ಗೀತೆಯ ಬಗ್ಗೆ ಬರೆದ ಎಲ್ಲ ಬರಹಗಳನ್ನು ಸೇರಿಸಿ ಗೀತಾಮಾತೆ ಪುಸ್ತಕ ಕನ್ನಡದಲ್ಲಿ ೧೯೫೯ರಲ್ಲಿ ಪ್ರಕಟವಾಯಿತು. ೧೯೬೯ರಲ್ಲಿ ಪುನರ್‌ಮುದ್ರಿತವಾಯಿತು. ಈಗ ಆ ಪುಸ್ತಕದ ಪ್ರತಿಗಳು ಮುಗಿದಿವೆ. ಆದ್ದರಿಂದ ಅವನ್ನು ಪುನರ್‌ಮುದ್ರಿಸಿ ತಮಗೆ ಅರ್ಪಿಸಲಾಗುತ್ತಿದೆ. ಇದನ್ನು ಅಂದವಾಗಿ ಮುದ್ರಿಸಿ ಕೊಟ್ಟಿದ್ದಾರೆ ಬೃಂದಾವನ್ ಪ್ರಿಂಟರ್ಸ್‌ನ ಶ್ರೀ ಕೌಜಲಗಿಯವರು. ಈ ಆವೃತ್ತಿಯನ್ನು ತರಲು ಪ್ರೇರೇಪಿಸಿದವರು ಅವರೇ.

ಗಾಂಧೀಜಿಯವರ ಬರಹಗಳನ್ನು ಕನ್ನಡದಲ್ಲಿ ಪ್ರಥಮವಾಗಿ ೧೯೬೮ರಲ್ಲಿ ಪ್ರಕಟಿಸಲಾಯಿತು. ಒಟ್ಟು ಇಪ್ಪತ್ತು ಸಂಪುಟಗಳಾಗಿ ಪ್ರಕಟಿಸಿತು. ಈಗ ಅವು ಮುಗಿದುಹೋಗಿವೆ. ಆ ಸಂಪುಟಗಳನ್ನು ಪರಿಷ್ಕರಿಸಿ, ಎಂಟು ಸಂಪುಟಗಳಲ್ಲಿ ಅಳವಡಿಸಿ ಮುದ್ರಿಸಿ ಕನ್ನಡ ಜನತೆಗೆ ಮುಟ್ಟಿಸಬೇಕೆನ್ನುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ನಮ್ಮ ಯೋಜನೆ ಯಶಸ್ವಿಯಾಗುವುದೆಂದು ನಂಬಿರುತ್ತೇನೆ.

ಎಸ್.ಕೆ. ಮೋಹನ್
ಕಾರ್ಯದರ್ಶಿ
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಅನಾಸಕ್ತಿಯೋಗ

ಅನಾಸಕ್ತಿಯೋಗ

ಪ್ರಸ್ತಾವನೆ

೧

ಸ್ವಾಮಿ ಆನಂದ ಮೊದಲಾದ ಗೆಳೆಯರ ಪ್ರೇಮಕ್ಕೆ ಕಟ್ಟುಬಿದ್ದ ನಾನು ಸತ್ಯದ ಪ್ರಯೋಗಕ್ಕಾಗಿ ಆತ್ಮಕಥೆಯನ್ನು ಏಕೆ ಬರೆಯಲಾರಂಭಿಸಿದೆನೋ ಅದೇ ಶ್ರೀಮದ್ಭಗವದ್ಗೀತೆಯ ಅನುವಾದಕ್ಕೂ ಕಾರಣ. 'ನೀವು ಒಂದು ಬಾರಿ ಗೀತೆಯ ಅನುವಾದಮಾಡಿ ಅದರ ಬಗ್ಗೆ ನಿಮ್ಮ ಟೀಕೆ–ಟಿಪ್ಪಣಿ ಬರೆದು ಇಟ್ಟರೆ, ನಾವು ಒಂದು ಸಲ ಅದನ್ನು ಓದಿದರೆ ಗೀತೆಗೆ ನೀವು ಹೇಳುವ ಅರ್ಥ ನಮಗೆ ತಿಳಿಯಬಹುದು. ಇಲ್ಲಿಂದ–ಅಲ್ಲಿಂದ ಕೆಲವು ಶ್ಲೋಕ ಆರಿಸಿ, ಅವುಗಳಲ್ಲಿ ಅಹಿಂಸಾದಿಗಳನ್ನು ಪ್ರತಿಪಾದಿಸುವುದು ನನಗೆ ಸರಿತೋರದು' ಎಂದು ಅಸಹಕಾರದ ಸಮಯದಲ್ಲಿ ಸ್ವಾಮಿ ಆನಂದರು ನನಗೆ ಹೇಳಿದರು. ಅವರ ಆ ವಾದ ನನಗೆ ಸತ್ಯವೆನಿಸಿತು. ಅವಕಾಶ ದೊರೆತರೆ ಈ ಕೆಲಸವನ್ನು ಮಾಡುತ್ತೇನೆ ಎಂದೆ ನಾನು. ಅನಂತರ ಸೆರೆಮನೆಗೆ ಹೋದೆ. ಅಲ್ಲಿ ಆಳವಾಗಿ ಗೀತೆಯ ಅಧ್ಯಯನ ಮಾಡಲು ಅವಕಾಶವಾಯಿತು. ಲೋಕಮಾನ್ಯ ತಿಲಕರ ಜ್ಞಾನಭಂಡಾರವನ್ನು ಓದಿದೆ. ಮೊದಲೇ ಅವರು ನನಗೆ ಮರಾಠಿ, ಹಿಂದಿ ಮತ್ತು ಗುಜರಾತಿ ಅನುವಾದಗಳನ್ನು ಪ್ರೇಮಪೂರ್ವಕವಾಗಿ ಕಳಿಸಿ ಮರಾಠಿ ಓದಲಾಗದಿದ್ದರೆ ಗ್ರಂಥವನ್ನಾದರೂ ನಾನು ಓದಬಹುದೆಂದು ಸೂಚಿಸಿದ್ದರು. ಸೆರೆಮನೆಯ ಹೊರಗಡೆ ಅದನ್ನು ಓದಲಾಗಲಿಲ್ಲ. ಸೆರೆಮನೆಯಲ್ಲಿ ಗುಜರಾತಿ ಅನುವಾದವನ್ನು ಓದಿದೆ. ಅದನ್ನು ಓದಿದನಂತರ ಗೀತೆಯ ಸಂಬಂಧವಾಗಿ ಹೆಚ್ಚು ಓದಬೇಕೆನಿಸಿತು. ಅದರಂತೆ ಗೀತೆಯ ಬಗ್ಗೆ ಅನೇಕ ಗ್ರಂಥಗಳನ್ನು ತಿರುವಿಹಾಕಿದೆ.

ಸನ್ ೧೮೮೮–೮೯ರಲ್ಲಿ ಎಡ್‌ವಿನ್ ಅರ್ನಾಲ್ಡರ ಇಂಗ್ಲೀಷ್ ಪದ್ಯಾನುವಾದದ ಮೂಲಕ ನನಗೆ ಮೊಟ್ಟಮೊದಲು ಗೀತೆಯ ಪರಿಚಯವಾಯಿತು. ಅದನ್ನು ಓದಿದಮೇಲೆ ಗೀತೆಯ ಗುಜರಾತಿ ಭಾಷಾಂತರವನ್ನು ಓದುವ ಇಚ್ಛೆ ಬಲವಾಯಿತು. ಕೈಗೆ ಸಿಕ್ಕ ಅನುವಾದಗಳನ್ನೆಲ್ಲ ಓದಿದೆ. ಆದರೆ ಇಷ್ಟು ಮಾತ್ರಕ್ಕೆ ಜನತೆಯ ಎದುರಿಗೆ ನನ್ನ ಅನುವಾದ ಹಿಡಿದು ನಿಲ್ಲಲು ನನಗೆ ಸ್ವಲ್ಪವೂ ಅಧಿಕಾರವಿಲ್ಲ–ಅಷ್ಟೇ ಅಲ್ಲ, ನನ್ನ ಸಂಸ್ಕೃತ ಜ್ಞಾನವೂ ಅಲ್ಪ. ಗುಜರಾತಿ ಸಾಹಿತ್ಯದ ಜ್ಞಾನವೂ ಇಲ್ಲ. ಹಾಗಾದರೆ ಗೀತೆಯನ್ನು ಅನುವಾದಿಸುವ ಧಾರ್ಷ್ಟ್ಯವನ್ನು ನಾನೇಕೆ ಮಾಡಿದೆ?

ಗೀತೆಯನ್ನು ನಾನು ಯಾವ ರೀತಿ ತಿಳಿದಿದೇನೋ, ಅದೇ ರೀತಿ ಅದನ್ನು ಆಚರಿಸಲು ನಾನೂ ನನ್ನ ಸಂಗಾತಿಗಳು ಕೆಲವರೂ ಪ್ರಯತ್ನಿಸುತ್ತಿದ್ದೇವೆ. ನಮಗೆ ಗೀತೆ ಒಂದು ಆಧ್ಯಾತ್ಮಿಕ ನಿಧಾನಗ್ರಂಥ. ಗೀತೆಗನುಸಾರವಾಗಿ ನಡೆಯುವುದರಲ್ಲಿ ಪ್ರತಿದಿನವೂ ನಮಗೆ ನಿಷ್ಫಲತೆಯೇ, ಆದರೆ ಪ್ರಯತ್ನ ಶೀಲರಾಗಿದ್ದಾಗಲೇ ಈ ನಿಷ್ಫಲತೆ. ಈ ನಿಷ್ಫಲತೆಯಲ್ಲಿ ಸಫಲತೆಯ ಅರುಣೋದಯದ ಕಿರಣ ನಮಗೆ ಕಾಣಬರುತ್ತದೆ. ಈ ಚಿಕ್ಕ ಗುಂಪು ಯಾವ ಅರ್ಥವನ್ನು ಆಚರಣೆಗೆ ತರಲು ಯತ್ನಿಸುತ್ತಿದೆಯೋ ಆ ಅರ್ಥ ಈ ಅನುವಾದದಲ್ಲಿದೆ.

ಅದಲ್ಲದೆ ಹೆಚ್ಚು ಓದುಬರಹವನ್ನರಿಯದ, ಮೂಲ ಸಂಸ್ಕೃತದ ಗೀತೆಯನ್ನರಿಯಲು ಸಮಯವೋ ಇಚ್ಛೆಯೋ ಇಲ್ಲದವರಾಗಿದ್ದರೂ, ಯಾರಿಗೆ ಗೀತಾರೂಪದ ಆಧಾರ ಅವಶ್ಯಕವೋ ಅಂತಹ ಸ್ತ್ರೀ, ವೈಶ್ಯ, ಶೂದ್ರಾದಿಗಳಿಗಾಗಿ ಈ ಅನುವಾದ ಮಾಡಲಾಗಿದೆ. ನನಗೆ ಗುಜರಾತಿ ಭಾಷೆಯ ಜ್ಞಾನವೂ ಅಲ್ಪವೇ. ಆದರೂ ನನ್ನ ಬಳಿ ಇರುವ ಮೂಲಧನವನ್ನು ಗುಜರಾತಿಗಳಿಗೆ ಅರ್ಪಿಸಬೇಕೆಂದು ಯಾವಾಗಲೂ ನನ್ನ ಆಸೆ. ಅವಾಚ್ಯ-ಅಶ್ಲೀಲ ಸಾಹಿತ್ಯ ಪ್ರವಾಹ ವೇಗವಾಗಿ ಹರಿಯುತ್ತಿರುವ ಈ ಕಾಲದಲ್ಲಿ, ಹಿಂದೂ ಧರ್ಮದಲ್ಲಿ ಅದ್ವಿತೀಯವೆಂದೆನಿಸಿದ ಈ ಗ್ರಂಥದ ಸರಳ ಅನುವಾದ ಗುಜರಾತಿ ಜನತೆಗೆ ದೊರೆಯಬೇಕು. ಅದರ ಮೂಲಕ ಅವರು ಆ ಸಾಹಿತ್ಯಪ್ರವಾಹವನ್ನು ಎದುರಿಸುವ ಶಕ್ತಿ ಹೊಂದಬೇಕೆಂದು ನನಗೆ ಆಸೆ.

ಗುಜರಾತಿಯ ಇತರ ಅನುವಾದಗಳ ಅವಹೇಳನೆ ಈ ಅಭಿಲಾಷೆಯ ಉದ್ದೇಶವಲ್ಲ. ಆ ಅನುವಾದಗಳಿಗೂ ತಕ್ಕ ಸ್ಥಾನವಿದೆ. ಆ ಅನುವಾದಕರಿಗೆ ಆಚಾರದ, ಅನುಭವದ ಅಧಿಕಾರ ನಾನು ತಿಳಿದಂತೆ ಇಲ್ಲ. ಈ ಅನುವಾದಕ್ಕೆ ೩೮ ವರುಷದ ಆಚರಣೆಯ, ಪ್ರಯತ್ನದ ಆಧಾರವಿದೆ. ಆದುದರಿಂದ ಧರ್ಮವನ್ನು ಆಚರಿಸಲು ಇಚ್ಛಿಸುವ ಪ್ರತಿಯೊಬ್ಬ ಗುಜರಾತಿ ಬಂಧುಭಗಿನಿಯೂ ಇದನ್ನು ಓದಿ, ಮನನಮಾಡಿ, ಇದರಿಂದ ಶಕ್ತಿ ಪಡೆಯುವಂತಾಗಲೆಂದು ನಾನು ಆಶಿಸುತ್ತೇನೆ.

ಈ ಅನುವಾದದಲ್ಲಿ ನನ್ನ ಸಂಗಾತಿಗಳು ಸಹಾಯಮಾಡಿದ್ದಾರೆ. ಏಕೆಂದರೆ ನನ್ನ ಸಂಸ್ಕೃತಜ್ಞಾನ ಅಲ್ಪ, ಶಬ್ದಾರ್ಥಗಳ ವಿಚಾರದಲ್ಲಿ ನನಗೆ ಸಂಪೂರ್ಣ ವಿಶ್ವಾಸವಿರಲಿಲ್ಲ: ಈ ದೃಷ್ಟಿಯಿಂದ ಈ ಅನುವಾದವನ್ನು ವಿನೋಬಾ, ಕಾಕಾ ಕಾಲೇಕರ, ಮಹಾದೇವ ಸಾಯಿ, ಕಿಶೋರಲಾಲ ಮಶರೂವಾಲ ಇವರು ನೋಡಿದ್ದಾರೆ.

೨

ಇನ್ನು ಗೀತೆಯ ಅರ್ಥ.

೧೮೮೮-೮೯ರಲ್ಲಿ ನನಗೆ ಮೊಟ್ಟಮೊದಲು ಗೀತೆಯ ದರ್ಶನವಾದಾಗಲೇ ಗೀತೆ ಐತಿಹಾಸಿಕ ಗ್ರಂಥವಲ್ಲ: ಇದರಲ್ಲಿನ ಭೌತಿಕಯುದ್ಧ ಒಂದು ನಿಮಿತ್ತ, ಪ್ರತಿಯೊಬ್ಬ ಮನುಷ್ಯನ ಹೃದಯದಲ್ಲಿ ನಿರಂತರವೂ ನಡೆಯುತ್ತಿರುವ ದ್ವಂದ್ವ ಯುದ್ಧದ ವರ್ಣನೆ ಇದು: ಹೃದಯಗತ ಯುದ್ಧವನ್ನು ಮನೋರಂಜಕವಾಗಿ ಮಾಡಲು ಬಂದಿದೆ ಮಾನವಯೋಧರ ಕಲ್ಪನೆ ಎನಿಸಿತು. ಧರ್ಮದ ಬಗ್ಗೆ, ಗೀತೆಯ ಬಗ್ಗೆ ಹೆಚ್ಚು ಹೆಚ್ಚು ವಿಚಾರಮಾಡಿದಂತೆಲ್ಲ ಈ ಪ್ರಥಮ ಸ್ಫೂರ್ತಿ ಮತ್ತಷ್ಟು ದೃಢವಾಯಿತು. ಮಹಾಭಾರತವನ್ನು ಓದಿದ ಮೇಲಂತೂ ಈ ವಿಚಾರ ಮತ್ತಷ್ಟು ಪುಷ್ಟಿಗೊಂಡಿತು. ಈಗಿನ ಅರ್ಥದಂತೆ ಮಹಾಭಾರತ ಒಂದು ಇತಿಹಾಸವೆಂದು ನಾನು ಭಾವಿಸಲಾರೆ. ಇದಕ್ಕೆ ಪ್ರಬಲ ಪ್ರಮಾಣಗಳು ಆದಿಪರ್ವದಲ್ಲಿಯೇ ಇವೆ. ಪಾತ್ರಗಳ ಮಾನುಷ-ಅಮಾನುಷ ಉತ್ಪತ್ತಿಯ ವರ್ಣನೆ ಮಾಡಿ, ವ್ಯಾಸಭಗವಾನರು ರಾಜ-ಪ್ರಜೆಗಳ ಇತಿಹಾಸವನ್ನು ನಿರ್ಮೂಲಗೊಳಿಸಿದ್ದಾರೆ. ಮಹಾಭಾರತದಲ್ಲಿ ವರ್ಣಿಸಿದ ಪಾತ್ರಗಳು ಮೂಲತಃ ಐತಿಹಾಸಿಕವಾಗಿರಬಹುದು. ಆದರೆ ವ್ಯಾಸಭಗವಾನರು ಧರ್ಮದ ದರ್ಶನ ಮಾಡಿಸಲೆಂದು ಮಹಾಭಾರತದಲ್ಲಿ ಆ ಪಾತ್ರಗಳನ್ನು ಉಪಯೋಗಿಸಿದ್ದಾರೆ.

ಮಹಾಭಾರತ ಕರ್ತೃ ಭೌತಿಕಯುದ್ಧ ಆವಶ್ಯಕವೆಂದಲ್ಲ. ಅದು ನಿರರ್ಥಕವೆಂದೇ

ಸಿದ್ಧಪಡಿಸಿದ್ದಾನೆ. ಗದ್ದವನನ್ನು ಅಳಿಸಿದ್ದಾನೆ, ಪಶ್ಚಾತ್ತಾಪಪಡಿಸಿದ್ದಾನೆ: ಅವನಿಗೆ ದುಃಖವಲ್ಲದೆ ಮತ್ತೇನೂ ದೊರೆಯದಂತೆ ಮಾಡಿದಾನೆ.

ಈ ಮಹಾಗ್ರಂಥದಲ್ಲಿ ಗೀತೆಯ ಸ್ಥಾನ ಮಕುಟಮಣಿಯಂತೆ ಸರ್ವೋಚ್ಚ. ಗೀತೆಯ ಎರಡನೆಯ ಅಧ್ಯಾಯ ಭೌತಿಕ ಯುದ್ಧದ ವ್ಯವಹಾರವನ್ನು ತಿಳಿಸುವುದಕ್ಕೆ ಬದಲು ಸ್ಥಿತಪ್ರಜ್ಞನ ಲಕ್ಷಣಗಳನ್ನು ಬೋಧಿಸುತ್ತದೆ. ಸ್ಥಿತಪ್ರಜ್ಞನ ಲಕ್ಷಣಗಳಿಂದಲೇ ಅವನಿಗೂ ಐಹಿಕಯುದ್ಧಕ್ಕೂ ಯಾವ ಸಂಬಂಧವೂ ಇರಲಾರದೆಂಬುದು ಕಂಡುಬರುತ್ತದೆ. ಇನ್ನು ಸಾಮಾನ್ಯ ಕೌಟುಂಬಿಕ ಕಲಹಗಳ ಔಚಿತ್ಯ–ಅನೌಚಿತ್ಯಗಳ ನಿರ್ಣಯಮಾಡಲು ಗೀತೆಯಂಥ ಗ್ರಂಥನಿರ್ಮಾಣ ಅಸಂಭವ.

ಗೀತೆಯ ಕೃಷ್ಣ ಮೂರ್ತಿಮಂತ ಶುದ್ಧ ಸಂಪೂರ್ಣ ಜ್ಞಾನ. ಆದರೆ ಕಾಲ್ಪನಿಕ. ಎಂದರೆ ಕೃಷ್ಣ ಎಂಬ ಅವತಾರಪುರುಷ ಇರಲಿಲ್ಲ ಎಂದಲ್ಲ. ಸಂಪೂರ್ಣ ಕೃಷ್ಣ ಮಾತ್ರ ಕಾಲ್ಪನಿಕ. ಸಂಪೂರ್ಣಾವತಾರದ ಆರೋಪಣೆ ಆಮೇಲಿನದು.

ಅವತಾರ ಎಂದರೆ ಶರೀರಧಾರಿಯಾದ ಪುರುಷವಿಶೇಷ ಎಂದು ಅರ್ಥ. ಜೀವ ಜೀವಿಯೂ ಪರಮಾತ್ಮನ ಅವತಾರವೇ. ಆದರೂ ಲೌಕಿಕ ಭಾಷೆಯಲ್ಲಿ ಎಲ್ಲರನ್ನೂ ನಾವು ಅವತಾರಿಗಳೆನ್ನುವುದಿಲ್ಲ. ಯಾರು ತನ್ನ ಕಾಲದಲ್ಲಿ ಇತರರಿಗಿಂತ ಶ್ರೇಷ್ಠ ಧಾರ್ಮಿಕನೋ ಅವನನ್ನು ಮುಂದಿನ ಪೀಳಿಗೆ ಅವತಾರಪುರುಷನೆಂದು ಪೂಜಿಸುತ್ತದೆ. ಇದರಲ್ಲಿ ನನಗೆ ಯಾವ ದೋಷವೂ ಕಾಣಿಸದು. ಇದರಿಂದ ಈಶ್ವರನ ಮಹತ್ವಕ್ಕೂ ಹಾನಿ ತಟ್ಟದು, ಸತ್ಯಕ್ಕೂ ಆಘಾತವಾಗದು. 'ಆದಮ್ (ಪ್ರಥಮ ಮನುಷ್ಯ) ದೇವರಲ್ಲ, ಆದರೆ ದೇವರ ಮಹಿಮೆಯಿಂದ ಅವನು ಬೇರೆಯಲ್ಲ.' ತನ್ನ ಯುಗಕ್ಕಿಂತಲೂ ಸರ್ವಾಧಿಕ ಧರ್ಮಜಾಗೃತಿ ಯಾರಲ್ಲಿ ಇದೆಯೋ ಅವನೇ ವಿಶೇಷಾವತಾರ. ಈ ವಿಚಾರಸರಣಿಯಿಂದ ಕೃಷ್ಣರೂಪದ ಸಂಪೂರ್ಣಾವತಾರ ಇಂದು ಹಿಂದೂ ಧರ್ಮದ ಅವತಾರ ಸಾಮ್ರಾಟ್ !

ಈ ದೃಶ್ಯ ಮನುಷ್ಯನ ಅಂತಿಮ ನವಭಿಲಾಷೆಯನ್ನು ಸೂಚಿಸುತ್ತದೆ. ಈಶ್ವರರೂಪ ಹೊಂದದೆ ಮನುಷ್ಯನ ಮನಸ್ಸಿಗೆ ಹಿತವಿಲ್ಲ. ಶಾಂತಿಯೂ ಇಲ್ಲ. ಈಶ್ವರರೂಪ ಹೊಂದುವ ಪ್ರಯತ್ನವೇ ನಿಜವಾದ ಏಕಮಾತ್ರ ಪುರುಷಾರ್ಥ. ಇದೇ ಆತ್ಮದರ್ಶನ. ಈ ಆತ್ಮದರ್ಶನವೇ ಎಲ್ಲ ಧರ್ಮಗ್ರಂಥಗಳ ವಸ್ತು. ಗೀತೆಯಲ್ಲಿಯೂ ಅಷ್ಟೇ. ಆದರೆ ಗೀತೆಯ ಕರ್ತ ಈ ವಿಷಯದ ಪ್ರತಿಪಾದನೆಗಾಗಿ ಗೀತೆಯನ್ನು ರಚಿಸಲಿಲ್ಲ. ಆತ್ಮಾರ್ಥಿಗೆ ಆತ್ಮದರ್ಶನಕ್ಕೆ ಒಂದು ಅದ್ವಿತೀಯ ಉಪಾಯವನ್ನು ತೋರುವುದೇ ಗೀತೆಯ ಆಶಯ. ಹಿಂದೂ ಧರ್ಮ ಗ್ರಂಥಗಳಲ್ಲಿ ಅಲ್ಲಿ–ಇಲ್ಲಿ ಚೆಲ್ಲಿರುವ ವಸ್ತುವನ್ನು ಗೀತೆ ಅನೇಕ ರೂಪದಲ್ಲಿ, ಅನೇಕ ಶಬ್ದಗಳಲ್ಲಿ, ಪುನರುಕ್ತಿ ದೋಷವನ್ನು ಸ್ವೀಕರಿಸಿಯೂ ಕೂಡ, ವಿವರವಾಗಿ ಸ್ಥಾಪಿಸಿದೆ.

ಆ ಅದ್ವಿತೀಯ ಉಪಾಯ 'ಕರ್ಮಫಲತ್ಯಾಗ.'

ಈ ಮಧ್ಯಬಿಂದುವಿನ ನಾಲ್ಕು ಕಡೆಗಳಲ್ಲಿಯೂ ಗೀತೆಯ ಪುಷ್ಪಹಾರ ಪೋಣಿಸಲ್ಪಟ್ಟಿದೆ. ಭಕ್ತಿ, ಜ್ಞಾನ ಮೊದಲಾದುವು ಅದರ ಅಕ್ಕಪಕ್ಕದ ತಾರಾಮಂಡಲ. ದೇಹವಿದ್ದಲ್ಲಿ ಕರ್ಮವಿದ್ದೇ ಇದೆ. ಆದರಿಂದ ಯಾರೂ ಮುಕ್ತರಾಗಲಾರರು. ಹೀಗಿದ್ದೂ ದೇಹವನ್ನು ಪ್ರಭುವಿನ ಮಂದಿರ–ನಿವಾಸ ಸ್ಥಾನವೆಂದು ತಿಳಿದು ನಡೆದರೆ ಮೋಕ್ಷ ದೊರೆಯುತ್ತದೆಂದು ಎಲ್ಲ ಧರ್ಮಗಳೂ ಪ್ರತಿಪಾದಿಸುತ್ತವೆ. ಆದರೆ ಕರ್ಮಮಾತ್ರದಲ್ಲಿ ಏನಾದರೂ ದೋಷವಿದ್ದೇ ಇರುತ್ತದೆ. ಮುಕ್ತಿ

ಯಾವುದೋ ನಿರ್ದೋಷವಾದುದು. ಹಾಗಾದರೆ ಕರ್ಮ ಸಂಬಂಧದಿಂದ ಎಂದರೆ ದೋಷ ಸ್ಪರ್ಶದಿಂದ ಬಿಡಿಸಿಕೊಳ್ಳುವುದು ಹೇಗೆ? ಗೀತೆ ನಿಶ್ಚಯಾತ್ಮಕ ಶಬ್ದಗಳಿಂದ ಇದಕ್ಕೆ ಹೀಗೆ ಉತ್ತರ ಕೊಟ್ಟಿದೆ.

'ನಿಷ್ಕಾಮ ಕರ್ಮದಿಂದ, ಯಜ್ಞಾರ್ಥವಾಗಿ ಕರ್ಮಮಾಡಿ, ಕರ್ಮಫಲವನ್ನು ತ್ಯಜಿಸಿ. ಸರ್ವ ಕರ್ಮಗಳನ್ನೂ ಕೃಷ್ಣಾರ್ಪಣ ಮಾಡಿ, ಮನ, ವಚನ, ಕಾಯಗಳನ್ನು ಈಶ್ವರಾರ್ಪಣೆ ಮಾಡಿ.'

ಕರ್ಮಫಲತ್ಯಾಗ ಎಂದು ಬಾಯಿಂದ ಹೇಳಿದ ಮಾತ್ರಕ್ಕೆ ನಿಷ್ಕಾಮತೆ ಆಗಲಿಲ್ಲ. ಅದು ಕೇವಲ ಬುದ್ಧಿಯ ಕೆಲಸವಲ್ಲ. ಹೃದಯಮಥನದಿಂದಲೇ ಇದು ಉತ್ಪತ್ತಿಯಾಗುತ್ತದೆ. ಈ ತ್ಯಾಗಶಕ್ತಿಯನ್ನು ಹುಟ್ಟಿಸಲು ಜ್ಞಾನ ಬೇಕು. ಒಂದು ಬಗೆಯ ಜ್ಞಾನ ಪಂಡಿತರಲ್ಲಿ ಇದ್ದೇ ಇರುತ್ತದೆ. ವೇದಾದಿ ಗ್ರಂಥಗಳನ್ನು ಅವರು ಕಂಠಪಾಠ ಮಾಡಿರುತ್ತಾರೆ. ಆದರೆ ಅವರಲ್ಲಿ ಹೆಚ್ಚು ಜನ ಭೋಗಾದಿಗಳಲ್ಲಿ ಮುಳುಗಿರುತ್ತಾರೆ. ಈ ಭಯದಿಂದಲೇ ಜ್ಞಾನಾತಿರೇಕ ಶುಷ್ಕ ಪಾಂಡಿತ್ಯವಾಗಿ ಪರಿಣಮಿಸದಂತೆ ಗೀತಾಕಾರ ಜ್ಞಾನಕ್ಕೆ ಭಕ್ತಿಯನ್ನು ಜೋಡಿಸಿ ಅದಕ್ಕೆ ಪ್ರಥಮ ಸ್ಥಾನವನ್ನು ಕೊಟ್ಟಿದ್ದಾನೆ. ಭಕ್ತಿವಿಹೀನ ಜ್ಞಾನ ಹಾನಿಕರ. ಆದುದರಿಂದಲೇ 'ಭಕ್ತಿ ಮಾಡು: ಜ್ಞಾನ ಲಭಿಸಿಯೇ ಲಭಿಸುತ್ತದೆ' ಎಂದು ಹೇಳಲಾಗಿದೆ. ಆದರೆ ಭಕ್ತಿ ಬುದ್ಧಿಯ ಸಾಮಗ್ರಿ. ಆ ಕಾರಣದಿಂದಲೇ ಗೀತಾಕಾರ ಸ್ಥಿತಪ್ರಜ್ಞನ ಲಕ್ಷಣಗಳನ್ನೇ ಭಕ್ತನಿಗೂ ಅನ್ವಯಿಸಿದ್ದಾನೆ.

ಒಟ್ಟಿನಲ್ಲಿ ಗೀತೆಯ ಭಕ್ತಿ ಯಾವ ಮಿಥ್ಯಾವಸ್ತುವೂ ಅಲ್ಲ. ಅಂಧ ಶ್ರದ್ಧೆಯೂ ಅಲ್ಲ. ಗೀತೆಯಲ್ಲಿ ವಿವರಿಸಿರುವ ಉಪಚಾರಗಳಿಗೆ ಬಾಹ್ಯಕ್ರಿಯೆಯ ಸಂಬಂಧ ಹೆಚ್ಚಾಗಿಲ್ಲ. ಜಪಮಾಲೆ, ನಾಮ, ಅರ್ಘ್ಯಾದಿ ಸಾಧನಗಳನ್ನು ಭಕ್ತ ಉಪಯೋಗಿಸಬಹುದು. ಅವು ಭಕ್ತಿಯ ಲಕ್ಷಣವಲ್ಲ. ಯಾರು ಯಾರನ್ನೂ ದ್ವೇಷಿಸದೆ ಕರುಣೆಯ ಭಂಡಾರವೇ ಆಗಿದ್ದಾನೋ, ಮಮತಾರಹಿತನೋ, ನಿರಹಂಕಾರಿಯೋ, ಯಾರಿಗೆ ಸುಖದುಃಖಗಳೂ ಶೀತೋಷ್ಣಗಳೂ ಸಮಾನವೋ, ಯಾರು ಕ್ಷಮಾಶೀಲ, ಸದಾಸಂತುಷ್ಟ, ದೃಢಸಂಕಲ್ಪ ಆಗಿ, ತನ್ನ ಮನಸ್ಸು ಬುದ್ಧಿಗಳನ್ನು ಈಶ್ವರಾರ್ಪಣ ಮಾಡಿದ್ದಾನೆಯೋ, ಯಾರಿಂದ ಜನರಿಗೆ ಕಷ್ಟವಾಗದೋ, ಯಾರು ಇತರರಿಗೆ ಭಯಪಡನೋ, ಯಾರು ಹರ್ಷ, ಶೋಕ, ಭಯ ಇತ್ಯಾದಿಗಳಿಂದ ಮುಕ್ತನಾಗಿ, ಪವಿತ್ರನಾಗಿ ಇರುತ್ತಾನೆಯೋ, ಕಾರ್ಯದಕ್ಷನಾಗಿದ್ದರೂ ಯಾರು ತಟಸ್ಥನೋ, ಯಾರು ಶುಭಾಶುಭಗಳನ್ನು ತ್ಯಜಿಸಿ ಶತ್ರು ಮಿತ್ರರಲ್ಲಿ ಸಮಭಾವವನ್ನಿಡುತ್ತಾನೆಯೋ, ಯಾರಿಗೆ ಮಾನಾಪಮಾನಗಳು ಸಮಾನವೋ ಯಾರ ಸ್ತುತಿಯಿಂದ ಉಬ್ಬದೆ, ನಿಂದೆಯಿಂದ ಕುಗ್ಗದೆ ಇರುತ್ತಾನೋ, ಯಾರು ಮೌನಧಾರಿಯೊ, ಏಕಾಂತ ಯಾರಿಗೆ ಪ್ರಿಯವೋ, ಯಾರು ಸ್ಥಿರಬುದ್ಧಿಯುಳ್ಳವನೋ–ಅವನೇ ಭಕ್ತ. ಈ ಬಗೆಯ ಭಕ್ತಿ ವಿಷಯಾಸಕ್ತ ಸ್ತ್ರೀ ಪುರುಷರಲ್ಲಿ ಕಂಡುಬರುವುದಿಲ್ಲ.

ಜ್ಞಾನಾರ್ಜನೆ ಮಾಡುವುದೇ ಅಥವಾ ಭಕ್ತನಾಗುವುದೇ ಆತ್ಮದರ್ಶನ ಎಂದು ಮೇಲಿನ ವಾಕ್ಯಗಳಿಂದ ಕಂಡುಬರುತ್ತದೆ. ಆತ್ಮದರ್ಶನ ಬೇರೆಯಲ್ಲ. ಒಂದು ರೂಪಾಯಿ ಕೊಟ್ಟು ವಿಷವನ್ನಾದರೂ ಕೊಳ್ಳಬಹುದು, ಅಮೃತವನ್ನಾದರೂ ಕೊಳ್ಳಬಹುದು. ಹಾಗೆಯೇ ಜ್ಞಾನ ಅಥವಾ ಭಕ್ತಿಯಿಂದ ಬಂಧನ–ಮೋಕ್ಷ ಎರಡನ್ನೂ ಪಡೆಯಲಾಗುವುದಿಲ್ಲ. ಇಲ್ಲಿ ಸಾಧನ–ಸಾಧ್ಯಗಳು ಬೇರೆಬೇರೆಯಾಗಿದ್ದರೂ ಹೆಚ್ಚು ಕಡಿಮೆ ಅವೆರಡೂ ಪಡೆಯಲಾಗುವುದಿಲ್ಲ. ಇಲ್ಲಿ ಸಾಧನ–ಸಾಧ್ಯಗಳು ಬೇರೆ ಬೇರೆಯಾಗಿದ್ದರೂ ಹೆಚ್ಚುಕಡಿಮೆ ಅವೆರಡೂ ಒಂದೇ ವಸ್ತುವೇ.

ಸಾಧನೆಯ ಪರಾಕಾಷ್ಠೆಯೇ ಮೋಕ್ಷ. ಗೀತೆಯಲ್ಲಿ ಹೇಳಿರುವ ಮೋಕ್ಷದ ಅರ್ಥ ಪರಮ ಶಾಂತಿ.

ಆದರೆ ಇಂಥ ಜ್ಞಾನ, ಭಕ್ತಿಗಳನ್ನು ಕರ್ಮಫಲತ್ಯಾಗವೆಂಬ ಒರೆಗಲ್ಲಿಗೆ ಹಚ್ಚಿ ನೋಡಬೇಕು. ಲೌಕಿಕ ದೃಷ್ಟಿಯಿಂದ ಶುಷ್ಕಪಂಡಿತನೂ ಜ್ಞಾನಿ ಎನಿಸಿಕೊಳ್ಳುತ್ತಾನೆ. ಅವನು ಯಾವ ಕೆಲಸವನ್ನೂ ಮಾಡನು. ನೀರಿನ ಪಾತ್ರೆಯನ್ನೆತ್ತುವುದೂ ಅವನಿಗೆ ಕರ್ಮಬಂಧನವೆನ್ನಿಸ ಬಹುದು. ಎಲ್ಲಿ ಇಂಥ ಯಜ್ಞಶೂನ್ಯ ಮನುಷ್ಯ ಜ್ಞಾನಿಯೆನಿಸಿಕೊಳ್ಳುತ್ತಾನೋ, ಅಲ್ಲಿ ಪಾತ್ರೆಯನ್ನು ಎತ್ತುವ ಅಲ್ಪವಾದ ಲೌಕಿಕ ಕ್ರಿಯೆಗಾದರೂ ಸ್ಥಾನ ದೊರೆತೀತು ಹೇಗೆ?

ಯಾರು ಜಪಮಾಲೆ ಹಿಡಿದು ಜಪಮಾಡುತ್ತಾನೋ, ಸೇವಾಕರ್ಮಗಳಿಂದ ಯಾರ ಜಪಕ್ಕೆ ಬಾಧೆಯುಂಟಾಗುತ್ತದೋ, ಅಂಥ ಬಾಹ್ಯಾಚಾರಿ ಲೌಕಿಕ ಕಲ್ಪನೆಯಲ್ಲಿ ಭಕ್ತ. ಇಂಥ ಭಕ್ತ ಅನ್ನಪಾನಾದಿ ಭೋಗಗಳನ್ನು ಉಪಭೋಗಿಸುವಾಗ ಮಾತ್ರ ತನ್ನ ಜಪಮಾಲೆಯನ್ನು ಕೆಳಗಿಡುತ್ತಾನೆ. ಆದರೆ ಹಿಟ್ಟು ಬೀಸಲಿಕ್ಕೆ ಅಥವಾ ರೋಗಿಯ ಶುಶ್ರೂಷೆ ಮಾಡಲಿಕ್ಕೆ ಎಂದಿಗೂ ಜಪಮಾಲೆಯನ್ನು ಕೆಳಗಿಡ.

ಈ ಎರಡು ಬಗೆಯ (ಯಜ್ಞಶೂನ್ಯ ಜ್ಞಾನಿ–ಲೌಕಿಕ ಭಕ್ತ) ಮನುಷ್ಯರಿಗೆ ಗೀತೆ ಸ್ಪಷ್ಟವಾಗಿ ಹೇಳುತ್ತದೆ. 'ಕರ್ಮದ ಮೂಲಕವೇ ಜ್ಞಾನಿಗಳಾದರು. ನಾನು ಕೂಡ ಸೋಮಾರಿಯಾಗಿ ಕೆಲಸ ಮಾಡದಿದ್ದರೆ ಈ ಲೋಕಗಳೇ ನಾಶವಾಗುತ್ತವೆ.' ಹೀಗಿರುವಾಗ ಸಾಮಾನ್ಯ ಜನರ ವಿಚಾರದಲ್ಲಿ ಪ್ರತ್ಯೇಕವಾಗಿ ಹೇಳುವುದೇನಿದೆ?

ಕರ್ಮ ಒಂದು ಕಡೆ ಬಂಧನ, ಇದು ನಿರ್ವಿವಾದ, ಮತ್ತೊಂದು ಕಡೆ ಇಚ್ಛೆ ಯಿಂದಲೋ ಅನಿಚ್ಛೆಯಿಂದಲೋ ದೇಹಿ ಕರ್ಮಮಾಡುತ್ತಲೇ ಇರುತ್ತಾನೆ. ಶಾರೀರಕ, ಮಾನಸಿಕ ಎಲ್ಲಾ ಕ್ರಿಯೆಯೂ ಕರ್ಮವೇ. ಹಾಗಾದರೆ, ಕರ್ಮ ಮಾಡುತ್ತಿದ್ದರೂ ಮನುಷ್ಯ ಬಂಧನಮುಕ್ತನಾಗುವುದು ಹೇಗೆ? ಈ ಸಮಸ್ಯೆಯ ಉತ್ತರವನ್ನು ಗೀತೆಯಲ್ಲಿ ಸ್ಪಷ್ಟವಾಗಿ ತಿಳಿಸಿದಂತೆ ಮತ್ತಾವ ಧರ್ಮಗ್ರಂಥದಲ್ಲಿಯೂ ಅಷ್ಟು ಸ್ಪಷ್ಟವಾಗಿ ವರ್ಣಿಸಿಲ್ಲ. 'ಫಲಾಸಕ್ತಿ ಬಿಟ್ಟು ಕರ್ಮಮಾಡು', 'ನಿರಾಶನಾಗಿ ಕರ್ಮಮಾಡು', 'ನಿಷ್ಕಾಮನಾಗಿ ಕರ್ಮಮಾಡು' ಎಂದು ಗೀತೆ ಹೇಳುತ್ತದೆ. ಎಂದೆಂದಿಗೂ ಮರೆಯಬಾರದಂಥ ಗೀತೆಯ ಧ್ವನಿ ಇದು. ಕರ್ಮವನ್ನು ಬಿಟ್ಟವನು ಪತಿತನಾಗುತ್ತಾನೆ. ಕರ್ಮನಿರತನಾಗಿ ಅದರ ಫಲದಾಸೆ ಬಿಟ್ಟವನು ಉನ್ನತಿ ಹೊಂದುತ್ತಾನೆ.

ಇಲ್ಲಿ, ಫಲತ್ಯಾಗ ಮಾಡುವವನಿಗೆ ತ್ಯಾಗದ ಫಲ ಲಭಿಸದೆಂದು ಅರ್ಥ ಮಾಡ ಬಾರದು. ಗೀತೆಯಲ್ಲಿ ಇಂಥ ಅರ್ಥಕ್ಕೆ ಅವಕಾಶವೇ ಇಲ್ಲ. ಫಲತ್ಯಾಗ ಎಂಬಲ್ಲಿ ಫಲ ಎಂದರೆ ಆಸಕ್ತಿಯ ಅಭಾವವೆಂದು ಅರ್ಥ. ಫಲತ್ಯಾಗಿಗೆ ಸಾವಿರಪಟ್ಟು ಹೆಚ್ಚು ಫಲವೇ ಲಭಿಸುತ್ತದೆ. ಗೀತೆಯ ಫಲತ್ಯಾಗವಾದರೋ ಅಖಂಡಶ್ರದ್ಧೆಯ ಒರೆಗಲ್ಲು. ಯಾವ ಮನುಷ್ಯ ಪರಿಣಾಮ ವನ್ನು ಕುರಿತು ಚಿಂತಿಸುತ್ತಾನೋ ಅವನು ಅಧಿಕವಾಗಿ ಕರ್ಮ–ಕರ್ತವ್ಯಭ್ರಷ್ಟನಾಗುತ್ತಾನೆ. ಅಧೀರನಾಗುತ್ತಾನೆ. ಕೊನೆಗೆ ಕ್ರೋಧವಶನಾಗುತ್ತಾನೆ. ಅಕಾರ್ಯ ಮಾಡಲಾರಂಭಿಸುತ್ತಾನೆ. ಒಂದು ಕರ್ಮದಿಂದ ಇನ್ನೊಂದು, ಇನ್ನೊಂದರಿಂದ ಮತ್ತೊಂದು–ಹೀಗೆ ಮಾಡ ಮಾಡುತ್ತ ದಾರಿ ತಪ್ಪಿ ಮೋಸ ಹೋಗುತ್ತಾನೆ. ಪರಿಣಾಮವನ್ನು ಕುರಿತು ಚಿಂತಿಸುವವನ

ಅವಸ್ಥೆ ವಿಷಯಾಂಧನ ಸ್ಥಿತಿಯಂತೆ. ಕೊನೆಗೆ ಅವನು ವಿಷಯಾಸಕ್ತನಂತೆ ಸಾರಾಸಾರ, ನೀತಿ–ಅನೀತಿಗಳ ವಿವೇಕವನ್ನು ತೊರೆದು ಫಲಪ್ರಾಪ್ತಿಗಾಗಿ ತಾನು ಉಪಯೋಗಿಸುವ ಸಾಧನವೇ ಧರ್ಮ ಎಂದು ಭಾವಿಸುತ್ತಾನೆ.

ಫಲಾಸಕ್ತಿಯ ಈ ಕಹಿಯಾದ ಪರಿಣಾಮಗಳಿಂದ ಗೀತಾಕಾರ ಅನಾಸಕ್ತಿಯ, ಕರ್ಮಫಲತ್ಯಾಗದ ಸಿದ್ಧಾಂತವನ್ನು ರೂಪುಗೊಳಿಸಿ ಅದನ್ನು ಅತ್ಯಾಕರ್ಷಕ ಭಾಷೆಯಲ್ಲಿ ಜಗತ್ತಿನೆದುರಿಗೆ ಇಟ್ಟಿದ್ದಾನೆ. ಸಾಮಾನ್ಯವಾಗಿ ಜನರಿಗೆ ಧರ್ಮ–ಅರ್ಥಗಳು ಪರಸ್ಪರ ವಿರುದ್ಧ ವಸ್ತುಗಳು. 'ವ್ಯಾಪಾರಾದಿ ಲೌಕಿಕ ವ್ಯವಹಾರದಲ್ಲಿ ಧರ್ಮವನ್ನು ಕಾಪಾಡಿಕೊಳ್ಳಲಾಗುವುದಿಲ್ಲ. ಅಲ್ಲಿ ಧರ್ಮಕ್ಕೆ ಸ್ಥಾನವೇ ಇಲ್ಲ; ಧರ್ಮ ಕೇವಲ ಮೋಕ್ಷಕ್ಕಾಗಿ; ಧರ್ಮದ ಸ್ಥಾನದಲ್ಲಿ ಧರ್ಮ, ಅರ್ಥದ ಸ್ಥಾನದಲ್ಲಿ ಅರ್ಥ ಶೋಭಿಸುತ್ತವೆ' ಎಂಬ ಭಾವನೆ. ಗೀತಾಕಾರ ಈ ಭ್ರಮೆಯನ್ನು ನಿವಾರಿಸಿದ್ದಾನೆಂದು ನನ್ನ ಅಭಿಪ್ರಾಯ. ಮೋಕ್ಷಕ್ಕೂ ವ್ಯವಹಾರಕ್ಕೂ ಯಾವ ಭೇದವನ್ನೂ ಆತ ತೋರಿಸಿಲ್ಲ. ಅದಕ್ಕೆ ಬದಲು ಧರ್ಮವನ್ನೇ ವ್ಯವಹಾರದಲ್ಲಿ ಸೇರಿಸಿದ್ದಾನೆ. ವ್ಯವಹಾರದಲ್ಲಿ ಉಪಯೋಗಕ್ಕೆ ಬಾರದ ಧರ್ಮ ಧರ್ಮವೇ ಅಲ್ಲ ಎಂದು ಗೀತೆಯ ಅಭಿಪ್ರಾಯ; ಹೀಗೆ ನಾನು ತಿಳಿದಿದ್ದೇನೆ. ಆದುದರಿಂದ ಗೀತೆಯ ಅಭಿಪ್ರಾಯನುಸಾರ, ಆಸಕ್ತಿಯಿಲ್ಲದೆ ಯಾವ ಕರ್ಮಗಳನ್ನು ಮಾಡಲು ಶಕ್ಯವಿಲ್ಲವೊ ಅವೆಲ್ಲವೂ ತ್ಯಾಜ್ಯ ಕರ್ಮ. ಈ ಬಗೆಯ ಸುವರ್ಣ ನಿಯಮ ಮನುಷ್ಯನನ್ನು ಅನೇಕ ಧರ್ಮಸಂಕಟಗಳಿಂದ ಪಾರುಮಾಡುತ್ತದೆ.ಈ ಅಭಿಪ್ರಾಯದಂತ ಕೊಲೆ, ಅಸತ್ಯ, ವ್ಯಭಿಚಾರ ಮುಂತಾದ ಕರ್ಮ ಸಹಜವಾಗಿಯೇ ತ್ಯಾಜ್ಯವಾಗುತ್ತದೆ. ಫಲತ್ಯಾಗದಿಂದ ಮನುಷ್ಯನ ಜೀವನ ಕ್ರಮ ಸರಳವಾಗುತ್ತದೆ. ಸರಳತೆಯಿಂದ ಶಾಂತಿ ಹುಟ್ಟುತ್ತದೆ. ಫಲತ್ಯಾಗವೆಂದರೆ ಪರಿಣಾಮದ ಉಪೇಕ್ಷೆಯೆಂದಲ್ಲ ಅರ್ಥ. ಪರಿಣಾಮ, ಸಾಧನವಿಚಾರ, ಅದರ ಜ್ಞಾನ–ಅತ್ಯಂತ ಆವಶ್ಯಕ. ಇಷ್ಟನ್ನು ಮಾಡಿದನಂತರ ಯಾವ ಮನುಷ್ಯ ಪರಿಣಾಮವನ್ನು ಇಚ್ಛಿಸದೆ, ಚಿಂತಿಸದೆ, ಸಾಧನೆಯಲ್ಲಿ ಮಗ್ನನೋ ಅವನೇ ಫಲತ್ಯಾಗಿ.

ಈ ವಿಚಾರಶ್ರೇಣಿಯನ್ನು ಅನುಸರಿಸುತ್ತಿರುವ ನನಗೆ, ಗೀತೆಯ ಬೋಧನೆಯನ್ನು ಆಚರಣೆಯಲ್ಲಿ ತರಲಿಚ್ಛಿಸುವವರು ಸತ್ಯ ಅಹಿಂಸೆಗಳನ್ನು ಸಹಜವಾಗಿ ಪಾಲಿಸಬೇಕಾಗುತ್ತದೆಂದು ಕಂಡುಬಂದಿದೆ. ಫಲಾಸಕ್ತಿಯಿಲ್ಲದಾಗ ಮನುಷ್ಯನ ಮನಸ್ಸು ಸುಳ್ಳು ಹೇಳಲು ಒಪ್ಪದು, ಹಿಂಸೆಮಾಡಲೂ ಒಪ್ಪದು. ಯಾವ ಹಿಂಸಾಪೂರ್ಣ ಅಥವಾ ಅಸತ್ಯದ ಕೆಲಸವನ್ನಾದರೂ ನೋಡಿ, ಅದರ ಮೂಲದಲ್ಲಿ ಪರಿಣಾಮದ ಇಚ್ಛೆಯಿರುತ್ತದೆ. ಗೀತೆಯ ಕಾಲಕ್ಕೆ ಮುಂಚಿನಿಂದಲೂ ಅಹಿಂಸೆ ಪರಮಧರ್ಮವೆಂದು ಪರಿಗಣಿತವಾಗಿತ್ತು. ಆದರೆ ಅನಾಸಕ್ತಿಯನ್ನು ಪ್ರತಿಪಾದಿಸಬೇಕಾಗಿತ್ತು. ಎರಡನೆಯ ಅಧ್ಯಾಯದಲ್ಲಿಯೇ ಈ ವಿಷಯ ಸ್ಪಷ್ಟವಾಗುತ್ತದೆ.

ಗೀತೆಗೆ ಅಹಿಂಸೆ ಮಾನ್ಯವಾಗಿದ್ದರೆ, ಅಥವಾ ಅನಾಸಕ್ತಿಯಲ್ಲಿ ಅಹಿಂಸೆ ಸಹಜವಾಗಿಯೇ ಸಮಾವೇಶವಾಗಿದ್ದರೆ, ಗೀತಾಕಾರ ಉದಾಹರಣೆಗಾದರೂ ಭೌತಿಕ ಯುದ್ಧವನ್ನೇಕೆ ಉಪಯೋಗಿಸಿದ? ಗೀತಾಯುಗದಲ್ಲಿ ಅಹಿಂಸಾಧರ್ಮ ಮಾನ್ಯವಾಗಿದ್ದರೂ, ಭೌತಿಕ ಯುದ್ಧ ಸರ್ವಸಾಮಾನ್ಯವಾಗಿತ್ತು. ಗೀತಾಕಾರ ಇಂತಹ ಯುದ್ಧದ ಉದಾಹರಣೆಯನ್ನು ಕೊಡಲು ಸಂಕೋಚಪಡಲಿಲ್ಲ, ಪಡುವ ಸಂಭವವೂ ಇರಲಿಲ್ಲ.

ಫಲತ್ಯಾಗದ ಮಹತ್ವದ ತೂಕವನ್ನು ನಿರ್ಣಯಿಸುವಾಗ ಗೀತಾಕಾರನ ಮನಸ್ಸಿನಲ್ಲಿ ಯಾವ ವಿಚಾರವಿತ್ತು? ಅವನ ಅಹಿಂಸೆಯ ಮೇರೆ ಎಲ್ಲಿಯವರೆಗೆ ಇತ್ತು ಎಂಬ ಈ ವಿಚಾರಗಳನ್ನು ಚರ್ಚಿಸುವ ಅವಶ್ಯಕತೆ ನಮಗಿಲ್ಲ. ಕವಿ ಜಗತ್ತಿನೆದುರಿಗೆ ಮಹತ್ವಪೂರ್ಣವಾದ ಸಿದ್ಧಾಂತವನ್ನಿಡುತ್ತಾನೆ. ಹಾಗಿಟ್ಟ ಮಾತ್ರಕ್ಕೇ ಅವನು ತನ್ನ ಸಿದ್ಧಾಂತದ ಮಹತ್ವವನ್ನು ಚೆನ್ನಾಗಿ ಅರಿತಿದ್ದಾನೆ ಎಂದಾಗಲಿ. ಹಾಗೆ ತಿಳಿದುಕೊಂಡಮೇಲೆಯೇ ಅದೆಲ್ಲವನ್ನೂ ಭಾಷಾಬದ್ಧವಾಗಿ ಮಾಡುತ್ತಾನೆಂದಾಗಲಿ ತಿಳಿಯಕೂಡದು. ಅದರಲ್ಲಿ ಕಾವ್ಯ, ಕವಿಯ ಮಹಿಮೆ ಇದೆ. ಕವಿಯ ಅರ್ಥಕ್ಕೆ ಕೊನೆಯೇ ಇಲ್ಲ. ಮನುಷ್ಯನಂತೆ ಮಹಾವಾಕ್ಯಗಳ ಅರ್ಥವೂ ವಿಕಾಸ ಹೊಂದುತ್ತಿರುತ್ತದೆ. ಭಾಷೆಗಳ ಇತಿಹಾಸವನ್ನು ಪರಿಶೋಧಿಸಿದರೆ ಅನೇಕ ಮಹಚ್ಛಬ್ದಗಳ ಅರ್ಥ ನಿತ್ಯವೂ ನವೀನವಾಗುತ್ತಿರುವುದು ಕಂಡುಬರುತ್ತದೆ. ಗೀತೆಯ ಅರ್ಥವೂ ಹಾಗೆಯೆ. ಸ್ವಯಂ ಗೀತಾಕಾರನೇ ಮಹಾಗೂಢ ಶಬ್ದಗಳ ಅರ್ಥವನ್ನು ವಿಸ್ತರಿಸಿದ್ದಾನೆ. ಗೀತೆಯನ್ನು ಮೇಲೆ ಮೇಲೆ ಅವಲೋಕಿಸಿ ನೋಡಿದರೂ ಇದು ತಿಳಿಯುತ್ತದೆ. ಗೀತಾಯುಗಕ್ಕೆ ಮುಂಚೆ ಪ್ರಾಯಶಃ ಯಜ್ಞದಲ್ಲಿ ಪಶುಹಿಂಸೆ ಮಾನ್ಯವೆನಿಸಿರಬಹುದು. ಆದರೆ ಗೀತೆಯ ಯಜ್ಞದಲ್ಲಿ ಅದರ ಗಂಧವೇ ಇಲ್ಲ. ಅದರಲ್ಲಿ ಜಪಯಜ್ಞವೇ ಯಜ್ಞರಾಜ. ಯಜ್ಞವೆಂದರೆ ಪರೋಪಕಾರಕ್ಕಾಗಿ ತನ್ನ ಸ್ವಂತ ಶರೀರವನ್ನು ಸವೆಯಿಸುವುದು ಎಂಬ ಅರ್ಥ ಮೂರನೆಯ ಅಧ್ಯಾಯದಿಂದ ತಿಳಿದುಬರುತ್ತದೆ. ಮೂರನೆಯ ನಾಲ್ಕನೆಯ ಅಧ್ಯಾಯಗಳೆರಡನ್ನೂ ಜೋಡಿಸಿ ಬೇರೆ ವ್ಯಾಖ್ಯೆ ಮಾಡಬಹುದು. ಆದರೆ ಪಶುಹಿಂಸೆಯ ಮಾತು ಹೊರಡದು. ಗೀತೆಯ ಸಂನ್ಯಾಸದ ಅರ್ಥವೂ ಹೀಗೇ. ಗೀತೆಯ ಸಂನ್ಯಾಸಕ್ಕೆ ಕರ್ಮಮಾತ್ರದ ತ್ಯಾಗ ಒಪ್ಪಿಗೆಯಿಲ್ಲ. ಗೀತೆಯ ಸಂನ್ಯಾಸಿ ಅತಿಕರ್ಮಿಯಾಗಿದ್ದರೂ ಕೂಡ ಅತಿ–ಅಕರ್ಮಿ. ಈ ವಿಧವಾಗಿ ಗೀತಾಕಾರ ಮಹಾಶಬ್ದಗಳ ವ್ಯಾಪಕ ಅರ್ಥವನ್ನು ಸೂಚಿಸಿ, ನಮ್ಮ ಭಾಷೆಗೂ ವ್ಯಾಪಕಾರ್ಥ ಮಾಡಲು ನಮಗೆ ಕಲಿಸಿದ್ದಾನೆ. ಗೀತಾಕಾರನ ಭಾಷೆಯಿಂದ ಸಂಪೂರ್ಣ ಕರ್ಮಫಲತ್ಯಾಗಿ ಭೌತಿಕಯುದ್ಧದಲ್ಲಿ ಭಾಗಿಯಾಗಬಹುದೆಂದು ಗೊತ್ತಿದ್ದರೂ, ಗೀತೋಪದೇಶಗಳನ್ನು ಚೆನ್ನಾಗಿ ಆಚರಣೆಯಲ್ಲಿ ತರಬೇಕೆಂದು ಗೊತ್ತಿದ್ದರೂ, ಗೀತೋಪದೇಶಗಳನ್ನು ಚೆನ್ನಾಗಿ ಆಚರಣೆಯಲ್ಲಿ ತರಬೇಕೆಂದು ೪೦ ವರುಷಗಳಿಂದ ಸತತವಾಗಿ ಪ್ರಯತ್ನಿಸುತ್ತಿರುವ ನನಗೆ ಸತ್ಯ, ಅಹಿಂಸೆಗಳನ್ನು ಸಂಪೂರ್ಣವಾಗಿ ಪಾಲಿಸಿದ ಹೊರತು ಸಂಪೂರ್ಣ ಕರ್ಮಫಲತ್ಯಾಗ ಅಸಂಭವವೆಂದು ನಮ್ರಪೂರ್ವಕ ಕಂಡುಬಂದಿದೆ.

ಗೀತೆ ಸೂತ್ರ ಗ್ರಂಥವಲ್ಲ. ಗೀತೆ ಒಂದು ಮಹಾ ಧರ್ಮಕಾವ್ಯ. ಅದರ ಒಳಗೆ ನೀವು ಎಷ್ಟು ಆಳವಾಗಿ ಪ್ರವೇಶಿಸುತ್ತೀರೋ ಅಷ್ಟೇ ನವೀನ, ಸುಂದರ ಅರ್ಥ ನಿಮಗೆ ದೊರೆಯುತ್ತದೆ. ಗೀತೆ ಜನಸಮಾಜಕ್ಕಾಗಿ ಇದೆ. ಅದರಲ್ಲಿ ಒಂದೇ ಮಾತನ್ನು ಹಲವು ರೂಪದಲ್ಲಿ ವರ್ಣಿಸಲಾಗಿದೆ. ಆ ಕಾರಣದಿಂದ ಗೀತೆಯಲ್ಲಿ ಬಳಸಿದ ಮಹಾಶಬ್ದಗಳ ಅರ್ಥ ಪ್ರತಿಯೊಂದು ಯುಗದಲ್ಲಿಯೂ ವ್ಯತ್ಯಾಸಹೊಂದುತ್ತ ವಿಸ್ತೃತವಾಗುತ್ತ ಹೋದೀತು. ಗೀತೆಯ ಮೂಲಮಂತ್ರ ಎಂದಿಗೂ ಮಾರ್ಪಾಟಾಗಲಾರದು. ಯಾವ ರೀತಿಯಲ್ಲಿ ಈ ಮಂತ್ರ ಸಿದ್ಧಿಸುತ್ತದೋ ಆ ರೀತಿಯಲ್ಲಿ ಜಿಜ್ಞಾಸು ಅದಕ್ಕೆ ಬೇಕಾದ ಅರ್ಥವನ್ನು ಮಾಡಬಹುದು.

ಗೀತೆ ವಿಧಿನಿಷೇಧಗಳನ್ನು ಸೂಚಿಸದು. ಒಬ್ಬನಿಗೆ ವಿಹಿತವಾದುದು ಮತ್ತೊಬ್ಬನಿಗೆ ಅಹಿತವಾಗಬಹುದು. ಒಂದು ಕಾಲದಲ್ಲಿ ಒಂದು ದೇಶದಲ್ಲಿ ಮಾಡಲು ಯೋಗ್ಯವಾದ–

ವಿಹಿತವಾದ-ಕಾರ್ಯ ಮತ್ತೊಂದು ಕಾಲದಲ್ಲಿ ಮತ್ತೊಂದು ದೇಶದಲ್ಲಿ ನಿಷಿದ್ಧವೆಂದು ತೋರಬಹುದು. ನಿಷಿದ್ಧವಾದುದು ಕೇವಲ ಫಲಾಸಕ್ತಿ. ವಿಹಿತವಾದುದು ಅನಾಸಕ್ತಿ.

ಗೀತೆಯಲ್ಲಿ ಜ್ಞಾನಮಹಿಮೆ ಸುರಕ್ಷಿತವಾಗಿದೆ. ಆದರೂ ಗೀತೆ ಬುದ್ಧಿ ಗಮ್ಯವಲ್ಲ, ಹೃದಯಗಮ್ಯ. ಆದುದರಿಂದಲೇ ಅದು ಅಶ್ರದ್ಧಾಳುಗಳಿಗಲ್ಲ. ಗೀತಾಕಾರನೇ ಈ ರೀತಿಯಾಗಿ ಹೇಳಿದ್ದಾನೆ :

'ಯಾರು ತಪಸ್ವಿಯಲ್ಲವೋ, ಭಕ್ತನಲ್ಲವೋ, ಯಾರಿಗೆ ಇದನ್ನು ಕೇಳುವ ಇಚ್ಛೆಯಿಲ್ಲವೋ, ಯಾರು ನನ್ನನ್ನು ದ್ವೇಷಿಸುತ್ತಾನೋ ಅಂಥವನಿಗೆ ನೀನು ಇದನ್ನು (ಜ್ಞಾನವನ್ನು) ಎಂದಿಗೂ ಹೇಳಬೇಡ.' (೧೮-೬೭)

'ಆದರೆ ಯಾರು ಈ ಪರಮ ಗುಪ್ತ ಜ್ಞಾನವನ್ನು ನನ್ನ ಭಕ್ತರಿಗೆ ಉಪದೇಶಿಸುವನೋ ಅವನು ನನ್ನಲ್ಲಿ ಉತ್ತಮ ಭಕ್ತಿಗೈದು ನಿಸ್ಸಂದೇಹವಾಗಿ ನನ್ನನ್ನು ಹೊಂದುತ್ತಾನೆ.' (೧೮-೬೮)

'ಹಾಗೆಯೇ ದ್ವೇಷರಹಿತನಾಗಿ ಶ್ರದ್ಧಾಪೂರ್ವಕವಾಗಿ ಇದನ್ನು ಕೇವಲ ಶ್ರವಣ ಮಾಡುವವನೂ ಕೂಡ ಮುಕ್ತನಾಗಿ, ಪುಣ್ಯವಂತರ ನಿವಾಸ ಸ್ಥಾನವಾದ ಶುಭ (ಉತ್ತಮ) ಲೋಕವನ್ನು ಪಡೆಯುತ್ತಾನೆ.'(೧೮-೭೧)

ಕೌಸಾನೀ (ಹಿಮಾಲಯ)

೨೪-೬-೧೯೨೯

ಮೋಹನದಾಸ ಕರಮಚಂದ ಗಾಂಧೀ

ಅನುಕ್ರಮಣಿಕೆ

ಅಧ್ಯಾಯ ೧

ಅರ್ಜುನ ವಿಷಾದ ಯೋಗ

[ಜಿಜ್ಞಾಸೆಯಿಲ್ಲದೆ ಜ್ಞಾನವಾಗದು. ದುಃಖವಿಲ್ಲದೆ ಸುಖವಾಗದು.
ಧರ್ಮಸಂಕಟ–ಹೃದಯಮಂಥನ ಜಿಜ್ಞಾಸುಗಳಿಗೆ
ಒಂದು ಸಲ ಆಗಿಯೇ ಆಗುತ್ತದೆ.]

ಅಥ ಪ್ರಥಮೋಽಧ್ಯಾಯ

ಧೃತರಾಷ್ಟ್ರ ಉವಾಚ

ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ ।
ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ ॥ ೧ ॥

ಧೃತರಾಷ್ಟ್ರ :

ಸಂಜಯ, ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಯುದ್ಧ ಮಾಡಲೆಂದು ಪಾಂಡುಪುತ್ರರೂ ನನ್ನ ಮಕ್ಕಳೂ ಒಂದೆಡೆ ಸೇರಿ ಏನು ಮಾಡಿದರು? ಹೇಳು ॥ ೧ ॥

ಟಿಪ್ಪಣಿ–ಶರೀರವೇ ಧರ್ಮಕ್ಷೇತ್ರ : ಏಕೆಂದರೆ ಇದು ಮೋಕ್ಷಕ್ಕೆ ದ್ವಾರವಾಗಬಲ್ಲದು. ಪಾಪದಿಂದ ಇದರ ಉತ್ಪತ್ತಿ, ಇದು ಪಾಪಭಾಜನ. ಆದುದರಿಂದ ಇದು ಕುರುಕ್ಷೇತ್ರ.

ಕೌರವರು ಎಂದರೆ ಆಸುರೀವೃತ್ತಿಗಳು. ಪಾಂಡುಪುತ್ರರು ದೈವೀವೃತ್ತಿಗಳು. ಪ್ರತಿಯೊಂದು ಶರೀರದಲ್ಲಿಯೂ ಒಳ್ಳೆಯ ವೃತ್ತಿ, ಕೆಟ್ಟ ವೃತ್ತಿಗಳಿಗೆ ಕಲಹ ನಡೆಯುತ್ತಿರುವುದನ್ನು ಅನುಭವಿಸದವರು ಯಾರು ?

ಸಂಜಯ ಉವಾಚ

ದೃಷ್ಟ್ವಾ ತು ಪಾಂಡವಾನೀಕಂ ವ್ಯೂಢಂ ದುರ್ಯೋಧನಸ್ತದಾ ।
ಆಚಾರ್ಯಮುಪಸಂಗಮ್ಯ ರಾಜಾ ವಚನಮಬ್ರವೀತ್ ॥೨॥

ಪಶ್ಯೈತಾಂ ಪಾಂಡುಪುತ್ರಾಣಾಮಾಚಾರ್ಯ ಮಹತೀಂ ಚಮೂಮ್ ।
ವ್ಯೂಢಾಂ ದ್ರುಪದಪುತ್ರೇಣ ತವ ಶಿಷ್ಯೇಣ ಧೀಮತಾ ॥೩॥

ಅತ್ರ ಶೂರಾ ಮಹೇಷ್ವಾಸಾ ಭೀಮಾರ್ಜುನಸಮಾ ಯುಧಿ ।
ಯುಯುಧಾನೋ ವಿರಾಟಶ್ಚ ದ್ರುಪದಶ್ಚ ಮಹಾರಥಃ ॥೪॥

ಧೃಷ್ಟಕೇತುಶ್ಚೇಕಿತಾನಃ ಕಾಶೀರಾಜಶ್ಚ ವೀರ್ಯವಾನ್ ।
ಪುರುಜಿತ್ಕುಂತಿಭೋಜಶ್ಚ ಶೈಬ್ಯಶ್ಚ ನರಪುಂಗವಃ ॥೫॥

ಯುಧಾಮನ್ಯುಶ್ಚ ವಿಕ್ರಾಂತ ಉತ್ತಮೌಜಾಶ್ಚ ವೀರ್ಯವಾನ್ ।
ಸೌಭದ್ರೋ ದ್ರೌಪದೇಯಾಶ್ಚ ಸರ್ವ ಏವ ಮಹಾರಥಾಃ ॥೬॥

ಅಸ್ಮಾಕಂ ತು ವಿಶಿಷ್ಟಾ ಯೇ ತಾನ್ನಿಬೋಧ ದ್ವಿಜೋತ್ತಮ ।
ನಾಯಕಾ ಮಮ ಸೈನ್ಯಸ್ಯ ಸಂಜ್ಞಾರ್ಥಂ ತಾನ್ ಬ್ರವೀಮಿ ತೇ ॥೭॥

ಸಂಜಯ :

ಆ ಸಮಯದಲ್ಲಿ ಅಣಿಯಾಗಿ ನಿಂತಿದ್ದ ಪಾಂಡವರ ಸೇನೆಯನ್ನು ನೋಡಿ ದುರ್ಯೋಧನ ದ್ರೋಣಾಚಾರ್ಯರ ಸಮೀಪಕ್ಕೆ ಹೋಗಿ ಹೇಳಿದ. ॥೨॥

ಆಚಾರ್ಯ ! ನಿಮ್ಮ ಬುದ್ಧಿವಂತ ಶಿಷ್ಯ, ದ್ರುಪದಪುತ್ರ ಧೃಷ್ಟದ್ಯುಮ್ನ ಸಜ್ಜುಗೊಳಿಸಿದ ಪಾಂಡವರ ಈ ದೊಡ್ಡ ಸೈನ್ಯವನ್ನು ನೋಡಿ. ॥೩॥

ಇವರಲ್ಲಿ ಭೀಮಾರ್ಜುನರಂತೆಯೆ ಯುದ್ಧರಂಗದಲ್ಲಿ ಶೂರ ವೀರರೂ ಧನುರ್ಧಾರಿಗಳೂ ಆದ ಯುಯುಧಾನ (ಸಾತ್ಯಕಿ), ವಿರಾಟರಾಜ, ಮಹಾರಥಿಯಾದ ದ್ರುಪದರಾಜ; ॥೪॥

ಧೃಷ್ಟಕೇತು, ಚೇಕಿತಾನ, ಶೂರ ವೀರ ಕಾಶೀರಾಜ, ಪುರುಜಿತ್, ಕುಂತೀಭೋಜ, ಮನುಷ್ಯರಲ್ಲಿ ಶ್ರೇಷ್ಠನೆನಿಸಿದ ಶೈಬ್ಯ; ॥೫॥

ಪರಾಕ್ರಮಿಯೆನಿಸಿದ ಯುಧಾಮನ್ಯು, ಬಲಿಷ್ಠನಾದ ಉತ್ತಮೌಜ, ಸುಭದ್ರಾಪುತ್ರ (ಅಭಿಮನ್ಯು), ದ್ರೌಪದಿಯ ಪುತ್ರರು, ಮಹಾರಥಿಗಳು ॥೬॥

ಬ್ರಾಹ್ಮಣ ಶ್ರೇಷ್ಠ, ಈಗ ನಮ್ಮ ಸೈನ್ಯದ ಮುಖ್ಯ ಯೋಧರನ್ನೂ ನೀವು ಅರಿಯಬೇಕು. ನಿಮ್ಮ ನೆನಪಿಗಾಗಿ ನಾನು ನಮ್ಮ ಸೇನಾನಾಯಕರ ಹೆಸರನ್ನು ಹೇಳುತ್ತೇನೆ. ॥೭॥

ಭವಾನ್ ಭೀಷ್ಮಶ್ಚ ಕರ್ಣಶ್ಚ ಕೃಪಶ್ಚ ಸಮಿತಿಂಜಯಃ ।
ಅಶ್ವತ್ಥಾಮಾ ವಿಕರ್ಣಶ್ಚ ಸೌಮದತ್ತಿಸ್ತಥೈವಚ ॥

ಅನ್ಯೇ ಚ ಬಹವಶ್ಶೂರಾ ಮದರ್ಥೇ ತ್ಯಕ್ತಜೀವಿತಾಃ ।
ನಾನಾಶಸ್ತ್ರಪ್ರಹರಣಾಸ್ಸರ್ವೇ ಯುದ್ಧವಿಶಾರದಾಃ ॥೯॥

ಅಪರ್ಯಾಪ್ತಂ ತದಸ್ಮಾಕಂ ಬಲಂ ಭೀಮಾಭೀರಕ್ಷಿತಂ
ಪರ್ಯಾಪ್ತಂ ತ್ವಿದಮೇತೇಷಾಂ ಬಲಂ ಭೀಮಾಭಿರಕ್ಷಿತಂ ॥೧೦॥

ಅಯನೇಷು ಚ ಸರ್ವೇಷು ಯಥಾಭಾಗಮವಸ್ಥಿತಾಃ ।
ಭೀಷ್ಮಮೇವಾಭಿರಕ್ಷಂತು ಭವಂತಸ್ಸರ್ವ ಏವ ಹಿ ॥೧೧॥

ತಸ್ಯ ಸಂಜನಯನ್ ಹರ್ಷಂ ಕುರುವೃದ್ಧಃ ಪಿತಾಮಹಃ ।
ಸಿಂಹನಾದಂ ವಿನದ್ಯೋಚ್ಚೈಃ ಶಂಖಂ ದಧ್ಮೌ ಪ್ರತಾಪವಾನ್ ॥೧೨॥

ತತಶ್ಶಂಖಾಶ್ಚ ಭೇರ್ಯಶ್ಚ ಪಣವಾನಕಗೋಮುಖಾಃ ।
ಸಹಸೈವಾಭ್ಯಹನ್ಯಂತ ಸ ಶಬ್ದಸ್ತುಮುಲೋಽಭವತ್ ॥೧೩॥

ತಾವು, ಭೀಷ್ಮರು, ಕರ್ಣ, ಯುದ್ಧದಲ್ಲಿ ಜಯಶಾಲಿ ಕೃಪಾಚಾರ್ಯರು, ಅಶ್ವತ್ಥಾಮ, ವಿಕರ್ಣ, ಸೋಮದತ್ತನ ಮಗ ಭೂರಿಶ್ರವ ರಾಜ: ॥೮॥

ನನಗೋಸ್ಕರ ಪ್ರಾಣದಾಸೆ ಬಿಟ್ಟವರು, ನಾನಾ ವಿಧ ಶಸ್ತ್ರಾಸ್ತ್ರಗಳಿಂದ ಯುದ್ಧ ಮಾಡುವವರು, ಇನ್ನೂ ಬೇರೆ ವೀರರಿದ್ದಾರೆ. ಅವರೆಲ್ಲರೂ ಯುದ್ಧ ಕುಶಲರು. ॥೯॥

ಭೀಷ್ಮರಿಂದ ರಕ್ಷಿತವಾದ ನಮ್ಮ ಸೇನೆಯ ಬಲ ಅಪೂರ್ಣ : ಭೀಮನಿಂದ ರಕ್ಷಿತವಾದ ಪಾಂಡವಸೇನಾಬಲ ಪೂರ್ಣ : ॥೧೦॥

ಆದುದರಿಂದ ನೀವೆಲ್ಲರೂ ನಿಮ್ಮ ನಿಮ್ಮ ಸ್ಥಳಗಳಿಂದ ಭೀಷ್ಮಪಿತಾಮಹರನ್ನು ಎಲ್ಲ ವಿಧದಿಂದಲೂ ಕಾಪಾಡಬೇಕು. ॥೧೧॥

ಹೀಗೆ ದುರ್ಯೋಧನನೆಂದ. ಆಗ ಅವನನ್ನು ಸಂತೋಷಗೊಳಿಸುತ್ತ ಕುರುವೃದ್ಧ, ಪ್ರತಾಪಿ ಆದ ಪಿತಾಮಹ ಭೀಷ್ಮ ಗಟ್ಟಿಯಾಗಿ ಸಿಂಹನಾದ ಮಾಡಿ ಶಂಖವನ್ನೂದಿದ. ॥೧೨॥

ಅದರೊಂದಿಗೆ ಶಂಖ, ನಗಾರಿ, ಢೋಲು, ಮೃದಂಗ, ರಣಭೇರಿ ಮೊದಲಾದ ವಾದ್ಯಗಳು ಒಂದೇ ಸಲ ಮೊಳಗಿದವು. ಆ ನಾದ ಭಯಂಕರವಾಗಿತ್ತು. ॥೧೩॥

ತತಶ್ಶ್ವೇತೈರ್ಹಯೈರ್ಯುಕ್ತೇ ಮಹತಿ ಸ್ಯಂದನೇ ಸ್ಥಿತೌ ।
ಮಾಧವಃ ಪಾಂಡವಶ್ಚೈವ ದಿವ್ಯೌ ಶಂಖೌ ಪ್ರದಧ್ಮತುಃ ॥೧೪॥

ಪಾಂಚಜನ್ಯಂ ಹೃಷೀಕೇಶೋ ದೇವದತ್ತಂ ಧನಂಜಯಃ ।
ಪೌಂಡ್ರಂ ದಧ್ಮೌ ಮಹಾಶಂಖಂ ಭೀಮಕರ್ಮಾ ವೃಕೋದರಃ ॥೧೫॥

ಅನಂತವಿಜಯಂ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ।
ನಕುಲಸ್ಸಹದೇವಶ್ಚ ಸುಘೋಷಮಣಿಪುಷ್ಪಕೌ ॥೧೬॥

ಕಾಶ್ಯಶ್ಚ ಪರಮೇಷ್ವಾಸಶ್ಶಿಖಂಡೀ ಚ ಮಹಾರಥಃ ॥
ಧೃಷ್ಟದ್ಯುಮ್ನೋ ವಿರಾಟಶ್ಚ ಸಾತ್ಯಕಿಶ್ಚಾಪರಾಜಿತಃ ॥೧೭॥

ದ್ರುಪದೋ ದ್ರೌಪದೇಯಾಶ್ಚ ಸರ್ವಶಃ ಪೃಥಿವೀಪತೇ ।
ಸೌಭದ್ರಶ್ಚ ಮಹಾಬಾಹುಶ್ಶಂಖಾನ್ ದಧ್ಮುಃ ಪೃಥಕ್‌ಪೃಥಕ್ ॥೧೮॥

ಸಘೋಷೋ ಧಾರ್ತರಾಷ್ಟ್ರಾಣಾಂ ಹೃದಯಾನಿ ವ್ಯದಾರಯತ್ ।
ನಭಶ್ಚ ಪೃಥಿವೀಂ ಚೈವ ತುಮುಲೋ ವ್ಯನುನಾದಯನ್ ॥೧೯॥

ಇಷ್ಟರಲ್ಲಿ ಬಿಳಿಯ ಕುದುರೆ ಕಟ್ಟಿದ ದೊಡ್ಡ ರಥದಲ್ಲಿ ಕುಳಿತ ಶ್ರೀಕೃಷ್ಣ–ಅರ್ಜುನರು ದಿವ್ಯಶಂಖಗಳನ್ನೂದಿದರು. ॥೧೪॥

ಶ್ರೀಕೃಷ್ಣ ಪಾಂಚಜನ್ಯವನ್ನೂದಿದ. ಧನಂಜಯ (ಅರ್ಜುನ) ದೇವದತ್ತವನ್ನೂ, ಭಯಾನಕ ಕರ್ಮಶಾಲಿಭೀಮ ಪೌಂಡ್ರವೆಂಬ ಮಹಾಶಂಖವನ್ನೂ ಊದಿದರು. ॥೧೫॥

ಕುಂತೀಪುತ್ರ ಯುಧಿಷ್ಠಿರರಾಜ ಅನಂತವಿಜಯ ಶಂಖವನ್ನೂದಿದ. ನಕುಲ ಸುಘೋಷವನ್ನೂ, ಸಹದೇವ ಮಣಿಪುಷ್ಪಕವನ್ನೂ ಊದಿದರು. ॥೧೬॥

ಮಹಾಧನುರ್ಧರ ಕಾಶೀರಾಜ, ಮಹಾರಥಿ ಶಿಖಂಡಿ, ಧೃಷ್ಟದ್ಯುಮ್ನ, ವಿರಾಟರಾಜ, ಅಜೇಯನಾದ ಸಾತ್ಯಕಿ. ॥೧೭॥

ದ್ರುಪದರಾಜ, ದ್ರೌಪದಿಯ ಪುತ್ರರು, ಸುಭದ್ರಾಪುತ್ರ ಮಹಾಬಾಹು ಆದ ಅಭಿಮನ್ಯು, ಎಲ್ಲರೂ–ತಮ್ಮ ತಮ್ಮ ಶಂಖಗಳನ್ನೂದಿದರು. ॥೧೮॥

ಭೂಮಿ–ಆಕಾಶಗಳನ್ನು ನಡುಗಿಸಿದ ಆ ಭಯಂಕರ ನಾದ ಕೌರವರ ಹೃದಯವನ್ನು ಭೇದಿಸಿತು. ॥೧೯॥

ಅಥ ವ್ಯವಸ್ಥಿತಾನ್ ದೃಷ್ಟ್ವಾ ಧಾರ್ತರಾಷ್ಟ್ರಾನ್ ಕಪಿಧ್ವಜಃ ।
ಪ್ರವೃತ್ತೇ ಶಸ್ತ್ರಸಂಪಾತೇ ಧನುರುದ್ಯಮ್ಯ ಪಾಂಡವಃ ॥೨೦॥

ಹೃಷಿಕೇಶಂ ತದಾ ವಾಕ್ಯಮಿದಮಾಹ ಮಹೀಪತೇ ।

ಅರ್ಜುನ ಉವಾಚ

ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ ॥೨೧॥

ಯಾವದೇತಾನ್ನಿರೀಕ್ಷೇಽಹಂ ಯೋದ್ಧುಕಾಮಾನವಸ್ಥಿತಾನ್ ।
ಕೈರ್ಮಯಾ ಸಹಯೋದ್ಧವ್ಯಮಸ್ಮಿನ್ ರಣಸಮುದ್ಯಮೇ ॥೨೨॥

ಯೋತ್ಸ್ಯಮಾನಾನವೇಕ್ಷೇಽಹಂ ಯ ಏತೇಽತ್ರ ಸಮಾಗತಃ ।
ಧಾರ್ತರಾಷ್ಟ್ರಸ್ಯ ದುರ್ಬುದ್ಧೇಯುದ್ಧೇ ಪ್ರಿಯಚಿಕೀರ್ಷವಃ

ಸಂಜಯ ಉವಾಚ

ಏವಮುಕ್ತೋ ಹೃಷಿಕೇಶೋ ಗುಡಾಕೇಶೇನ ಭಾರತ ।
ಸೇನಯೋರುಭಯೋರ್ಮಧ್ಯೇ ಸ್ಥಾಪಯಿತ್ವಾ ರಥೋತ್ತಮಂ ॥೨೪॥

ಭೀಷ್ಮದ್ರೋಣಪ್ರಮುಖತಸ್ಸರ್ವೇಷಾಂ ಚ ಮಹೀಕ್ಷಿತಾಮ್ ।
ಉವಾಚ ಪಾರ್ಥ ಪಶ್ಯೈತಾನ್ ಸಮವೇತಾನ್ ಕುರೂನಿತಿ ॥೨೫॥

ಅರಸ ಕಪಿಧ್ವಜನ ಅರ್ಜುನ ಸುಸಜ್ಜಿತರಾದ ಕೌರವರನ್ನು ನೋಡಿ ಶಸ್ತ್ರ ಪ್ರಯೋಗ ಮಾಡುವ ಮುನ್ನ ಬಿಲ್ಲನೇರಿಸಿ, ಹೃಷಿಕೇಶನೊಡನೆ ಹೀಗೆಂದ: ಅಚ್ಯುತ, ನನ್ನ ರಥವನ್ನು ಎರಡು ಸೈನ್ಯಗಳ ಮಧ್ಯೆ ನಿಲ್ಲಿಸು. ॥೨೦–೨೧॥

ಈ ರಣೋದ್ಯೋಗದಲ್ಲಿ ನಾನು ಯಾರೊಡನೆ ಯುದ್ಧ ಮಾಡಬೇಕೋ, ಯುದ್ಧ ಮಾಡುವ ಇಚ್ಛೆಯಿಂದ ಯಾರು ಯಾರು ನಿಂತಿದ್ದಾರೋ ನೋಡುತ್ತೇನೆ. ॥೨೨॥

ದುರ್ಬುದ್ಧಿಯ ದುರ್ಯೋಧನನಿಗೆ ಪ್ರಿಯವನ್ನು ಎಸಗಲು ಯೋಧರು ಯಾರು ಇಲ್ಲಿ ಸೇರಿದ್ದಾರೋ ನೋಡೋಣ. ॥೨೩॥

ಸಂಜಯ :

ದೊರೆಯೆ, ಶ್ರೀಕೃಷ್ಣನಿಗೆ ಅರ್ಜುನ ಹೀಗೆ ಹೇಳಿದಾಗ, ಅವನು ಭೀಷ್ಮ ದ್ರೋಣರ ಮುಂದೆ, ಸರ್ವರಾಜರ ಸಮಕ್ಷಮ ದಿವ್ಯರಥವನ್ನು ನಿಲ್ಲಿಸಿ – 'ಪಾರ್ಥ, ಇಲ್ಲಿ ಸೇರಿರುವ ಕೌರವರನ್ನು ನೋಡು' ಎಂದ. ॥೨೪–೨೫॥

ತತ್ರಾಪಶ್ಯತ್ಸ್ಥಿತಾನ್ ಪಾರ್ಥಃ ಪಿತೄನಥ ಪಿತಾಮಹಾನ್ ।
ಆಚಾರ್ಯಾನ್ ಮಾತುಲಾನ್ ಭ್ರಾತೄನ್ ಪುತ್ರಾನ್ ಪೌತ್ರಾನ್
ಸಖೀಂಸ್ತಥಾ ॥೨೬॥

ಶ್ವಶುರಾನ್ ಸುಹೃದಶ್ಚೈವ ಸೇನಯೋರುಭಯೋರಪಿ ।
ತಾನ್ ಸಮೀಕ್ಷ್ಯ ಸ ಕೌಂತೇಯಃ ಸರ್ವಾನ್ ಬಂಧೂನವಸ್ಥಿತಾನ್ ॥೨೭॥

ಕೃಪಯಾ ಪರಯಾಽಽವಿಷ್ಟೋ ವಿಷೀದನ್ನಿದಮಬ್ರವೀತ್ ।

ಅರ್ಜುನ ಉವಾಚ

ದೃಷ್ಟ್ವೇಮಂ ಸ್ವಜನಂ ಕೃಷ್ಣ ಯುಯುತ್ಸುಂ ಸಮುಪಸ್ಥಿತಮ್ ॥೨೮॥

ಸೀದಂತಿ ಮಮ ಗಾತ್ರಾಣಿ ಮುಖಂ ಚ ಪರಿಶುಷ್ಯತಿ ।
ವೇಪಥುಶ್ಚ ಶರೀರೇ ಮೇ ರೋಮಹರ್ಷಶ್ಚ ಜಾಯತೇ ॥೨೯॥

ಗಾಂಡೀವಂ ಸ್ರಂಸತೇ ಹಸ್ತಾತ್ ತ್ವಕ್ಚೈವ ಪರಿದಹ್ಯತೇ ।
ನ ಚ ಶಕ್ನೋಮ್ಯವಸ್ಥಾತುಂ ಭ್ರಮತೀವ ಚ ಮೇ ಮನಃ ॥೩೦॥

ನಿಮಿತ್ತಾನಿ ಚ ಪಶ್ಯಾಮಿ ವಿಪರೀತಾನಿ ಕೇಶವ ।
ನ ಚ ಶ್ರೇಯೋಽನುಪಶ್ಯಾಮಿ ಹತ್ವಾ ಸ್ವಜನಮಾಹವೇ ॥೩೧॥

ಆಗ ಅರ್ಜುನ ಎರಡೂ ಸೈನ್ಯದಲ್ಲಿ ತನ್ನ ಗುರುಜನ, ಪಿತಾಮಹ, ಆಚಾರ್ಯ, ಮಾತುಲ, ಮಾವಂದಿರು, ಸೋದರರು, ಮಕ್ಕಳು, ಮೊಮ್ಮಕ್ಕಳು, ಗೆಳೆಯರು ಇವರನ್ನು ನೋಡಿದ. ಹೀಗೆ ನಿಂತ ಬಂಧುಗಳೆಲ್ಲರನ್ನೂ ನೋಡಿ ಖೇದಗೊಂಡು ದೀನನಾದ ಕುಂತೀಪುತ್ರ ಈ ರೀತಿ ಹೇಳತೊಡಗಿದ. ॥೨೬-೨೮॥

ಅರ್ಜುನ :

ಕೃಷ್ಣ, ಯುದ್ಧ ಮಾಡಲು ಉತ್ಸುಕರಾಗಿ ಇಲ್ಲಿ ನಿಂತಿರುವ ಈ ಸ್ವಜನರನ್ನು, ಗೆಳೆಯರನ್ನು ನೋಡಿ ನನ್ನ ಅವಯವಗಳು ಸಡಿಲವಾಗುತ್ತಿವೆ. ಮುಖ ಬಾಡುತ್ತಿದೆ. ಮೈಯಲ್ಲಿ ನಡುಕ, ರೋಮಾಂಚ ಹುಟ್ಟುತ್ತಿದೆ. ಕೈಯಿಂದ ಗಾಂಡೀವ ಧನುಸ್ಸು ಜಾರುತ್ತಿದೆ. ಚರ್ಮ ಬಹಳ ತಪಿಸುತ್ತಿದೆ. ನಾನು ನಿಲ್ಲಲಾರೆ. ನನ್ನ ತಲೆ ತಿರುಗುತ್ತಿದೆ.

॥೨೯-೩೦॥

ಇದಲ್ಲದೆ ಕೇಶವ, ನನಗೆ ದುರ್ನಿಮಿತ್ತಗಳು ಕಾಣುತ್ತಿವೆ. ಯುದ್ಧದಲ್ಲಿ ಸ್ವಜನರನ್ನು ಕೊಲ್ಲುವುದರಿಂದ ಯಾವ ಶ್ರೇಯಸ್ಸೂ ಇಲ್ಲ. ॥೩೧॥

ನ ಕಾಂಕ್ಷೇ ವಿಜಯಂ ಕೃಷ್ಣ ನ ಚ ರಾಜ್ಯಂ ಸುಖಾನಿ ಚ ।
ಕಿಂ ನೋ ರಾಜ್ಯೇನ ಗೋವಿಂದ ಕಿಂ ಭೋಗ್ಯೈರ್ಜೀವಿತೇನ ವಾ ॥೩೨॥

ಯೇಷಾಮರ್ಥೇ ಕಾಂಕ್ಷಿತಂ ನೋ ರಾಜ್ಯಂ ಭೋಗಸ್ಸುಖಾನಿ ಚ ।
ತ ಇಮೇಽವಸ್ಥಿತಾ ಯುದ್ಧೇ ಪ್ರಾಣಾಂಸ್ತ್ಯಕ್ತ್ವಾ ಧನಾನಿ ಚ ॥೩೩॥

ಆಚಾರ್ಯಾಃ ಪಿತರಃ ಪುತ್ರಾಸ್ತಥೈವ ಚ ಪಿತಾಮಹಾಃ ।
ಮಾತುಲಾಶ್ಶ್ವಶುರಾಃ ಪೌತ್ರಾಃ ಶ್ಯಾಲಾಸ್ಸಂಬಂಧಿನಸ್ತಥಾ ॥೩೪॥

ಏತಾನ್ ನ ಹಂತುಮಿಚ್ಛಾಮಿ ಘ್ನತೋಽಪಿ ಮಧುಸೂದನ ।
ಅಪಿ ತ್ರೈಲೋಕ್ಯರಾಜ್ಯಸ್ಯ ಹೇತೋಃ ಕಿಂ ನು ಮಹೀಕೃತೇ ॥೩೫॥

ನಿಹತ್ಯ ಧಾರ್ತರಾಷ್ಟ್ರಾನ್ನಃ ಕಾ ಪ್ರೀತಿಸ್ಸ್ಯಾಜ್ಜನಾರ್ದನ ।
ಪಾಪಮೇವಾಶ್ರಯೇದಸ್ಮಾನ್ ಹತ್ವೈತಾನಾತತಾಯಿನಃ ॥೩೬॥

ತಸ್ಮಾನ್ನಾರ್ಹಾ ವಯಂ ಹಂತುಂ ಧಾರ್ತರಾಷ್ಟ್ರಾನ್ ಸ್ವಬಾಂಧವಾನ್ ।
ಸ್ವಜನಂ ಹಿ ಕಥಂ ಹತ್ವಾ ಸುಖಿನಸ್ಸ್ಯಾಮ ಮಾಧವ ॥೩೭॥

ಅವರನ್ನು ಕೊಂದು ನಾನು ಗೆಲವು ಪಡೆಯಲಾಶಿಸುವುದಿಲ್ಲ. ನನಗೆ ರಾಜ್ಯವೂ ಬೇಡ, ಸುಖವೂ ಬೇಡ. ರಾಜ್ಯ, ಭೋಗ, ಜೀವಿತ ಯಾವುದರಿಂದ ನನಗೇನು ಪ್ರಯೋಜನ ?

॥೩೨॥

ಯಾರಿಗೋಸ್ಕರ ರಾಜ್ಯ, ಭೋಗ, ಸುಖ ಬೇಕೋ ಆ ಆಚಾರ್ಯ, ತಂದೆಗಳು, ಮಕ್ಕಳು, ತಾತಂದಿರು, ಮಾವಂದಿರು ಶ್ವಶುರರು, ಮೊಮ್ಮಕ್ಕಳು, ಮೈದುನರು ಮೊದಲಾದ ಸಂಬಂಧಿಗಳು ಜೀವದ, ಧನದ ಆಸೆ ತೊರೆದು ಯುದ್ಧಕ್ಕಾಗಿ ನಿಂತಿದ್ದಾರೆ.

॥೩೩.–೩೪॥

ಅವರು ನನ್ನನ್ನು ಕೊಂದರೂ ಚಿಂತೆಯಿಲ್ಲ, ಮಧುಸೂದನ. ನನಗೆ ಮೂರು ಲೋಕಗಳ ಸಾಮ್ರಾಜ್ಯ ಲಭಿಸಿದರೂ ನಾನು ಅವರನ್ನು ಕೊಲ್ಲಲು ಬಯಸೆ. ಹೀಗಿರುವಾಗ ಒಂದು ತುಂಡು ಭೂಮಿಗಾಗಿ ಏಕೆ ಕೊಲ್ಲಲಿ? ॥೩೫॥

ಜನಾರ್ದನ, ಧೃತರಾಷ್ಟ್ರನ ಮಕ್ಕಳನ್ನು ಕೊಂದು ನನಗಾಗುವ ಆನಂದ ಯಾವುದು? ಈ ಆತತಾಯಿಗಳನ್ನು ಕೊಂದರೂ ನಮಗೆ ಪಾಪವೇ. ॥೩೬॥

ಆದುದರಿಂದ ಮಾಧವ, ನಮ್ಮ ಬಂಧುಗಳಾದ ಧೃತರಾಷ್ಟ್ರಪುತ್ರರನ್ನು ಕೊಲ್ಲುವುದು ನಮಗೆ ಉಚಿತವಲ್ಲ. ಸ್ವಜನರನ್ನು ಕೊಂದು ನಮಗೆ ಬರುವ ಸುಖವೇನು? ॥೩೭॥

ಯದ್ಯಪ್ಯೇತೇ ನ ಪಶ್ಯಂತಿ ಲೋಭೋಪಹತಚೇತಸಃ ।
ಕುಲಕ್ಷಯಕೃತಂ ದೋಷಂ ಮಿತ್ರದ್ರೋಹೇ ಚ ಪಾತಕಮ್ ॥೩೮॥

ಕಥಂ ನ ಜ್ಞೇಯಮಸ್ಮಾಭಿಃ ಪಾಪಾದಸ್ಮಾನ್ನಿವರ್ತಿತುಮ್ ।
ಕುಲಕ್ಷಯಕೃತಂ ದೋಷಂ ಪ್ರಪಶ್ಯದ್ಭಿರ್ಜನಾರ್ದನ ॥೩೯॥

ಕುಲಕ್ಷಯೇ ಪ್ರಣಶ್ಯಂತಿ ಕುಲಧರ್ಮಾಸ್ಸನಾತನಾಃ ।
ಧರ್ಮೇ ನಷ್ಟೇ ಕುಲಂ ಕೃತ್ಸ್ನಮಧರ್ಮೋಽಭಿಭವತ್ಯುತ ॥೪೦॥

ಅಧರ್ಮಾಭಿಭವಾತ್ಕೃಷ್ಣ ಪ್ರದುಷ್ಯಂತಿ ಕುಲಸ್ತ್ರಿಯಃ ।
ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರಃ ॥೪೧॥

ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ ।
ಪತಂತಿ ಪಿತರೋ ಹ್ಯೇಷಾಂ ಲುಪ್ತಪಿಂಡೋದಕಕ್ರಿಯಾಃ ॥೪೨॥

ದೋಷೈರೇತೈಃ ಕುಲಘ್ನಾನಾಂ ವರ್ಣಸಂಕರಕಾರಕೈಃ ।
ಉತ್ಸಾದ್ಯಂತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ ॥೪೩॥

ಲೋಭದಿಂದ ಮಲಿನಚಿತ್ತರಾದವರಿಗೆ ಕುಲಕ್ಷಯದಿಂದಾಗುವ ದೋಷವಾಗಲಿ, ಮಿತ್ರ ದ್ರೋಹದಿಂದಾಗುವ ಪಾತಕವಾಗಲಿ ಕಾಣಿಸದು. ಆದರೆ ಜನಾರ್ದನ, ಕುಲಕ್ಷಯದ ಅನರ್ಥವನ್ನು ತಿಳಿದ ನಾವು ಈ ಪಾಪಕ್ಕೆ ಗುರಿಯಾಗಬಾರದೆಂದು ತಿಳಿಯುವುದಿಲ್ಲವೇಕೆ?

॥೩೮–೩೯॥

ಕುಲನಾಶದಿಂದ ಸನಾತನ ಕುಲಧರ್ಮಗಳು ನಾಶವಾಗುತ್ತವೆ. ಧರ್ಮ ನಾಶವಾದರೆ ಅಧರ್ಮವು ಸಕಲ ಕುಲಗಳನ್ನೂ ಮುಳುಗಿಸುತ್ತದೆ. ॥೪೦॥

ಕೃಷ್ಣ, ಅಧರ್ಮ ಹೆಚ್ಚಾದರೆ ಕುಲಸ್ತ್ರೀಯರು ಕೆಡುತ್ತಾರೆ. ಅವರು ಕೆಟ್ಟರೆ ವರ್ಣಸಂಕರವಾಗುತ್ತದೆ. ॥೪೧॥

ಇಂತಹ ಸಾಂಕರ್ಯದಿಂದ ಕುಲನಾಶಕರಿಗೂ ಅವರ ಕುಲಗಳಿಗೂ ನರಕವಾಸ. ಅದರಿಂದ ಪಿಂಡೋದಕ ಕ್ರಿಯೆಗಳಿಲ್ಲದೆ ಅವರ ಪಿತೃಗಳಿಗೆ ಅಧೋಗತಿಯುಂಟಾಗುತ್ತದೆ.

॥೪೨॥

ಕುಲಘಾತಕರ ಈ ವರ್ಣಸಂಕರಕಾರಕ ದೋಷಗಳಿಂದ ಸನಾತನ ಜಾತಿ ಧರ್ಮಗಳೂ ಕುಲಧರ್ಮಗಳೂ ನಾಶ ಹೊಂದುತ್ತವೆ. ॥೪೩॥

ಉತ್ಸನ್ನ ಕುಲಧರ್ಮಾಣಾಂ ಮನುಷ್ಯಾಣಾಂ ಜನಾರ್ಧನ ।
ನರಕೇऽನಿಯತಂ ವಾಸೋ ಭವತೀತ್ಯನುಶುಶ್ರುಮ ॥೪೪॥

ಅಹೋ ಬತ ಮಹತ್ಪಾಪಂ ಕರ್ತುಂ ವ್ಯವಸಿತಾ ವಯಮ್ ।
ಯದ್ರಾಜ್ಯಸುಖಲೋಭೇನ ಹಂತುಂ ಸ್ವಜನಮುದ್ಯತಾಃ ॥೪೫॥

ಯದಿ ಮಾಮಪ್ರತೀಕಾರಮಶಸ್ತ್ರಂ ಶಸ್ತ್ರಪಾಣಯಃ ।
ಧಾರ್ತರಾಷ್ಟ್ರಾ ರಣೇ ಹನ್ಯುಸ್ತನ್ಮೇ ಕ್ಷೇಮತರಂ ಭವೇತ್ ॥೪೬॥

ಸಂಜಯ ಉವಾಚ

ಏವಮುಕ್ತ್ವಾऽರ್ಜುನಸ್ಸಂಖ್ಯೇ ರಥೋಪಸ್ಥ ಉಪಾವಿಶತ್ ।
ವಿಸೃಜ್ಯ ಸಶರಂ ಚಾಪಂ ಶೋಕಸಂವಿಗ್ನಮಾನಸಃ ॥೪೭॥

ಹರಿ ಓಂ ತತ್ಸತ್

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ಅರ್ಜುನ ವಿಷಾದಯೋಗೋ ನಾಮ ಪ್ರಥಮೋऽಧ್ಯಾಯಃ ॥

ಜನಾರ್ದನ, ಕುಲಧರ್ಮ ನಾಶವಾದ ಮನುಷ್ಯ ಅವಶ್ಯವಾಗಿ ನರಕದಲ್ಲಿ ವಾಸಿಸಬೇಕೆಂದು ನಾವು ಕೇಳಿದ್ದೇವೆ. ॥೪೪॥

ರಾಜ್ಯಸುಖದ ಲೋಭದಿಂದ ಸ್ವಜನರ ಹತ್ಯೆಮಾಡಲು ತೊಡಗಿ ನಾವು ಮಹಾಪಾಪ ಕೃತ್ಯ ಮಾಡಲು ಸನ್ನದ್ಧರಾಗಿದ್ದೇವೆ. ಎಷ್ಟು ದುಃಖಕರ ವಿಚಾರ ಇದು ! ॥೪೫॥

ಶಸ್ತ್ರಹೀನನಾದ, ಪ್ರತೀಕಾರ ಮಾಡದ ನನ್ನನ್ನು ಶಸ್ತ್ರಧಾರಿಗಳಾದ ಧೃತರಾಷ್ಟ್ರ ಪುತ್ರರು ಯುದ್ಧದಲ್ಲಿ ಸಂಹಾರಮಾಡಲಿ. ಆ ಸಾವು ನನಗೆ ಅತ್ಯಂತ ಕಲ್ಯಾಣಕರವಾದೀತು. ॥೪೬॥

ಸಂಜಯ :

ಹೀಗೆ ಹೇಳಿ ರಣರಂಗದಲ್ಲಿ ಶೋಕದಿಂದ ವ್ಯಾಕುಲಚಿತ್ತನಾದ ಅರ್ಜುನ ಬಿಲ್ಲು ಬಾಣಗಳನ್ನು ಬಿಟ್ಟುಕೊಟ್ಟು, ರಥದ ಹಿಂಭಾಗದಲ್ಲಿ ಕುಳಿತುಬಿಟ್ಟ. ॥೪೭॥

ಓಂ ತತ್ಸತ್

ಈ ಬಗೆಯಾಗಿ ಶ್ರೀಮದ್ಭಗವದ್ಗೀತಾರೂಪ ಉಪನಿಷತ್ ಅಥವಾ ಬ್ರಹ್ಮ
ವಿದ್ಯಾಂತರ್ಗತ ಯೋಗಶಾಸ್ತ್ರದ ಶ್ರೀಕೃಷ್ಣಾರ್ಜುನಸಂವಾದದಲ್ಲಿ ಅರ್ಜುನ
ವಿಷಾದಯೋಗ ಎಂಬ ಮೊದಲನೆಯ ಅಧ್ಯಾಯ ಮುಗಿದುದು.

***

ಅಧ್ಯಾಯ ೨

ಸಾಂಖ್ಯಯೋಗ

[ಮೋಹವಶನಾಗಿ ಮನುಷ್ಯ ಅಧರ್ಮವನ್ನೇ ಧರ್ಮವೆಂದು ಭಾವಿಸುತ್ತಾನೆ. ಮೋಹವಶನಾದ್ದರಿಂದ ಅರ್ಜುನ ತನ್ನವರು, ಪರರು ಎಂಬ ಭೇದ ಮಾಡಿದ. ಈ ಭೇದ ಸುಳ್ಳು, ಮಿಥ್ಯೆ ಎಂದು ತೋರಿಸಲು ಶ್ರೀಕೃಷ್ಣ ದೇಹ–ಆತ್ಮಗಳ ಭಿನ್ನತೆಯನ್ನು ತಿಳಿಸುತ್ತಾನೆ. ದೇಹ ಅನಿತ್ಯ, ಪೃಥಕ್: ಆತ್ಮ ನಿತ್ಯ, ಏಕ ಎಂಬುದನ್ನು ವಿವರಿಸುತ್ತಾನೆ. ಮನುಷ್ಯನಿಗೆ ಕೇವಲ ಪುರುಷಾರ್ಥಕ್ಕೆ ಮಾತ್ರ ಅಧಿಕಾರ, ಪರಿಣಾಮಕ್ಕಲ್ಲ. ಆದುದರಿಂದ ಅವನು ತನ್ನ ಕರ್ತವ್ಯವನ್ನು ನಿಶ್ಚಯಿಸಿಕೊಂಡು ನಿಶ್ಚಿಂತೆಯಿಂದ ಅದರಲ್ಲಿ ತೊಡಗಿರಬೇಕು. ಇಂಥ ಪರಾಯಣತೆಯಿಂದ ಅವನು ಮೋಕ್ಷವನ್ನು ಹೊಂದಬಲ್ಲ.]

ಅಥ ದ್ವಿತೀಯೋಽಧ್ಯಾಯಃ

ಸಂಜಯ ಉವಾಚ

ತಂ ತಥಾ ಕೃಪಯಾಽವಿಷ್ಟಮಶ್ರುಪೂರ್ಣಾಕುಲೇಕ್ಷಣಮ್ ।
ವಿಷೀದಂತಮಿದಂ ವಾಕ್ಯಮುವಾಚ ಮಧುಸೂದನಃ ॥೧॥

ಸಂಜಯ :

ಇಂತು ಕರುಣಾವಶ, ದೀನ ಆದ, ಕಂಬನಿ ತುಂಬಿದ, ವ್ಯಾಕುಲನೇತ್ರದ, ದುಃಖಿ ಅರ್ಜುನನಿಗೆ ಮಧುಸೂದನ ಹೀಗೆ ಹೇಳಿದ.

ಶ್ರೀ ಭಗವಾನುವಾಚ

ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಮ್ ।
ಅನಾರ್ಯಜುಷ್ಟಮಸ್ವರ್ಗ್ಯಮಕೀರ್ತಿಕರಮರ್ಜುನ ॥೨॥

ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ।
ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥೩॥

ಅರ್ಜುನ ಉವಾಚ

ಕಥಂ ಭೀಷ್ಮಮಹಂ ಸಂಖ್ಯೇ ದ್ರೋಣಂ ಚ ಮಧುಸೂದನ ।
ಇಷುಭಿಃ ಪ್ರತಿಯೋತ್ಸ್ಯಾಮಿ ಪೂಜಾರ್ಹಾವರಿಸೂದನ ॥೪॥

ಗುರೂನಹತ್ವಾ ಹಿ ಮಹಾನುಭಾವಾನ್
ಶ್ರೇಯೋ ಭೋಕ್ತುಂ ಭೈಕ್ಷ್ಯಮಪೀಹ ಲೋಕೇ ।
ಹತ್ವಾಽರ್ಥಕಾಮಾಂಸ್ತು ಗುರೂನಿಹೈವ
ಭುಂಜೀಯಭೋಗಾನ್ ರುಧಿರಪ್ರದಿಗ್ಧಾನ್ ॥೫॥

ನ ಚೈತದ್ವಿದ್ಮಃ ಕತರನ್ನೋ ಗರೀಯೋ
ಯದ್ವಾ ಜಯೇಮ ಯದಿ ವಾ ನೋ ಜಯೇಯುಃ ।
ಯಾನೇವ ಹತ್ವಾ ನ ಜಿಜೀವಿಷಾಮ
ಸ್ತೇಽವಸ್ಥಿತಾಃ ಪ್ರಮುಖೇ ಧಾರ್ತರಾಷ್ಟ್ರಾಃ ॥೬॥

ಶ್ರೀ ಭಗವಂತ :

ಅರ್ಜುನ, ಶ್ರೇಷ್ಠಪುರುಷರಿಗೆ ಅನುಚಿತವಾದ, ಸ್ವರ್ಗದಿಂದ ವಿಮುಖವಾದ, ಅಪಕೀರ್ತಿ ತರುವ ಈ ಮೋಹ ಇಂಥ ವಿಷಮ ಸಮಯದಲ್ಲಿ ಹೇಗೆ ಹುಟ್ಟಿತು? ॥೨॥

ಪಾರ್ಥ, ಷಂಡನಾಗಬೇಡ. ಅದು ನಿನಗೆ ಶೋಭಿಸದು. ಹೃದಯದ ಪಾಮರ ನಿರ್ಬಲತೆಯನ್ನು ತ್ಯಜಿಸಿ, ಪರಂತಪ, ಏಳು. ॥೩॥

ಅರ್ಜುನ :

ಮಧುಸೂದನ ! ಭೀಷ್ಮ-ದ್ರೋಣರನ್ನು ರಣಭೂಮಿಯಲ್ಲಿ ಬಾಣಗಳಿಂದ ನಾನು ಹೇಗೆ ಹೊಡೆಯಲಿ ? ॥೪॥

ಮಹಾನುಭಾವರಾದ ಗುರುಜನರನ್ನು ಸಂಹಾರ ಮಾಡುವುದಕ್ಕಿಂತ ಭಿಕ್ಷಾನ್ನ ತಿನ್ನುವುದು ಶ್ರೇಯಸ್ಕರ. ಏಕೆಂದರೆ, ಗುರುಜನರನ್ನು ಕೊಂದು ಅವರ ರಕ್ತದಿಂದ ತೊಯ್ದ ಅರ್ಥ, ಕಾಮಗಳ ಭೋಗವನ್ನೇ ಭೋಗಿಸಬೇಕಾಗುತ್ತದೆ. ॥೫॥

ನಾವು ಅವರನ್ನು ಗೆಲ್ಲಬೇಕೋ, ಅವರು ನಮ್ಮನ್ನು ಗೆಲ್ಲಬೇಕೋ, ಎರಡರಲ್ಲಿ ಯಾವುದು ಒಳ್ಳೆಯದೋ ನಾನರಿಯೆ. ಯಾರನ್ನು ಕೊಂದು ನಾನು ಬದುಕಲು ಇಚ್ಛಿಸೆನೋ ಆ ಧೃತರಾಷ್ಟ್ರನ ಪುತ್ರರೇ ಇಲ್ಲಿ ಎದುರಿಗೆ ನಿಂತಿದ್ದಾರೆ. ॥೬॥

ಕಾರ್ಪಣ್ಯ ದೋಷೋಪಹತಸ್ವಭಾವಃ
ಪೃಚ್ಛಾಮಿ ತ್ವಾಂ ಧರ್ಮಸಂಮೂಢಚೇತಾಃ ।
ಯಚ್ಛ್ರೇಯಸ್ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ
ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಾಂ ಪ್ರಪನ್ನಮ್ ॥೭॥

ನ ಹಿ ಪ್ರಪಶ್ಯಾಮಿ ಮಮಾಪನುದ್ಯಾ-
ದ್ಯಚ್ಛೋಕಮುಚ್ಛೋಷಣಮಿಂದ್ರಿಯಾಣಾಮ್ ।
ಅವಾಪ್ಯ ಭೂಮಾವಸಪತ್ನಮೃದ್ಧಂ
ರಾಜ್ಯಂ ಸುರಾಣಾಮಪಿ ಚಾಧಿಪತ್ಯಮ್ ॥೮॥

ಸಂಜಯ ಉವಾಚ

ಏವಮುಕ್ತ್ವಾ ಹೃಷಿಕೇಶಂ ಗುಡಾಕೇಶಃ ಪರಂತಪ ।
ನ ಯೋತ್ಸ್ಯ ಇತಿ ಗೋವಿಂದಮುಕ್ತ್ವಾ ತೂಷ್ಣೀಂ ಬಭೂವ ಹ ॥೯॥

ತಮುವಾಚ ಹೃಷಿಕೇಶಃ ಪ್ರಹಸನ್ನಿವ ಭಾರತ ।
ಸೇನಯೋರುಭಯೋರ್ಮಧ್ಯೇ ವಿಷೀದಂತಮಿದಂ ವಚಃ ॥೧೦॥

ಶ್ರೀ ಭಗವಾನುವಾಚ

ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ ।
ಗತಾಸೂನಗತಾಸೂಂಶ್ಚ ನಾನುಶೋಚಂತಿ ಪಂಡಿತಾಃ ॥೧೧॥

ಹೇಡಿತನದಿಂದ ನನ್ನ (ಸ್ವಾಭಾವಿಕ) ವೃತ್ತಿ ಅಳಿದಿದೆ. ಕರ್ತವ್ಯವಿಚಾರದಲ್ಲಿ ನಾನು ಮೂಢನಾಗಿದ್ದೇನೆ. ಆದುದರಿಂದ ನನಗೆ ಯಾವುದು ಹಿತವೋ ನಿಶ್ಚಯಿಸಿ ಹೇಳು; ನಿನ್ನನ್ನು ಪ್ರಾರ್ಥಿಸುತ್ತೇನೆ. ನಾನು ನಿನ್ನ ಶಿಷ್ಯ, ನಿನಗೆ ಶರಣಾಗತ, ನನಗೆ ದಾರಿ ತೋರು. ॥೭॥

ಈ ಲೋಕದಲ್ಲಿ ಧನಧಾನ್ಯಸಂಪನ್ನವಾದ ನಿಷ್ಕಂಟಕ ರಾಜ್ಯ ಸಿಗಲಿ, ಇಂದ್ರಾಸನ ಸಿಗಲಿ, ಇಂದ್ರಿಯಗಳನ್ನು ಶೋಷಿಸುವ ನನ್ನ ಈ ದುಃಖವನ್ನು ನಿವಾರಿಸುವ ಉಪಾಯವೇ ಅದರಲ್ಲಿ ನನಗೆ ಕಾಣುತ್ತಿಲ್ಲ ॥೮॥

ರಾಜ, ಗುಡಾಕೇಶ ಅರ್ಜುನ ಹೃಷಿಕೇಶ ಶ್ರೀಕೃಷ್ಣನಿಗೆ ಹೀಗೆ ಹೇಳಿ, 'ಯುದ್ಧ ಮಾಡುವುದಿಲ್ಲ' ಎಂದು ಸುಮ್ಮನಾದ. ॥೯॥

ಆಗ ಎರಡು ಸೈನ್ಯಗಳ ಮಧ್ಯೆ ಉದಾಸೀನನಾಗಿ ಕುಳಿತ ಅರ್ಜುನನೊಡನೆ ಮುಗುಳುನಗೆ ನಗುತ್ತ ಹೃಷಿಕೇಶ ಹೀಗೆಂದ. ॥೧೦॥

ಶ್ರೀ ಭಗವಂತ :

ಶೋಕಿಸಲು ಯೋಗ್ಯವಲ್ಲದುದಕ್ಕಾಗಿ ನೀನು ಶೋಕಿಸುತ್ತೀ. ಪಾಂಡಿತ್ಯದ ಮಾತು ಆಡುತ್ತಿದ್ದೀ. ಆದರೆ ಪಂಡಿತರು ಸತ್ತವರ ಅಥವಾ ಬದುಕಿರುವವರ ವಿಚಾರವಾಗಿ ಶೋಕಿಸರು. ॥೧೧॥

ನ ತ್ವೇವಾಹಂ ಜಾತು ನಾಸಂ ನ ತ್ವಂ ನೇಮೇ ಜನಾಧಿಪಾಃ ।
ನ ಚೈವ ನ ಭವಿಷ್ಯಾಮಸ್ಸರ್ವೇ ವಯಮತಃಪರಮ್ ॥೧೨॥

ದೇಹಿನೋಽಸ್ಮಿನ್ ಯಥಾ ದೇಹೇ ಕೌಮಾರಂ ಯೌವನಂ ಜರಾ ।
ತಥಾ ದೇಹಾಂತರಪ್ರಾಪ್ತಿರ್ಧೀರಸ್ತತ್ರ ನ ಮುಹ್ಯತಿ ॥೧೩॥

ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣಸುಖದುಃಖದಾಃ ।
ಆಗಮಾಪಾಯಿನೋಽನಿತ್ಯಾಸ್ತಾಂ ತಿತಿಕ್ಷಸ್ವ ಭಾರತ ॥೧೪॥

ಯಂ ಹಿ ನ ವ್ಯಥಯಂತ್ಯೇತೇ ಪುರುಷಂ ಪುರುಷರ್ಷಭ ।
ಸಮದುಃಖಸುಖಂ ಧೀರಂ ಸೋಽಮೃತತ್ವಾಯ ಕಲ್ಪತೇ ॥೧೫॥

ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।
ಉಭಯೋರಪಿ ದೃಷ್ಟೋಽಂತಸ್ತ್ವನಯೋಸ್ತತ್ತ್ವದರ್ಶಿಭಿಃ ॥೧೬॥

ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಮ್ ।
ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ಕರ್ತುಮರ್ಹತಿ ॥೧೭॥

ಸಂಜಯ :

ಏಕೆಂದರೆ ನಿಜವಾಗಿ ನೋಡಿದರೆ, ನಾನೂ ನೀನೂ ಈ ರಾಜರೂ ಹಿಂದೆ ಯಾವಾಗಲೂ ಇರದೆ ಇದ್ದುದಿಲ್ಲ, ಮುಂದೆಯೂ ಇರದೆ ಹೋಗುವುದಿಲ್ಲ. ॥೧೨॥

ದೇಹಧಾರಿಯ ದೇಹಕ್ಕೆ ಕೌಮಾರ, ಯೌವನ, ಮುಪ್ಪು ಹೇಗೆ ಬರುತ್ತವೆಯೋ ಹಾಗೆಯೇ ಬೇರೆ ದೇಹವೂ ಬರುತ್ತದೆ. ಅದರ ಬಗ್ಗೆ ಜ್ಞಾನಿಗಳಿಗೆ ಮೋಹವುಂಟಾಗದು. ॥೧೩॥

ಕುಂತೀಪುತ್ರ, ಇಂದ್ರಿಯಗಳ ಸಂಬಂಧದಿಂದ ಶೀತೋಷ್ಣ, ಸುಖದುಃಖ ಉಂಟಾಗುತ್ತವೆ. ಅವು ಅನಿತ್ಯ. ಬರುತ್ತವೆ, ಹೋಗುತ್ತವೆ. ಅವನ್ನು ನೀನು ಸಹನ ಮಾಡಿಕೊ. ॥೧೪॥

ಪುರುಷಶ್ರೇಷ್ಠ, ಸುಖದುಃಖಗಳಲ್ಲಿ ಸಮವಾಗಿರುವ ಜ್ಞಾನಿಯಾದ ಪುರುಷನಿಗೆ ಈ ವಿಷಯ ವ್ಯಾಕುಲವನ್ನುಂಟುಮಾಡದು. ಅವನು ಮೋಕ್ಷಕ್ಕೆ ಯೋಗ್ಯನಾಗುತ್ತಾನೆ. ॥೧೫॥

ಇಲ್ಲದ್ದು (ಅಸತ್) ಇರಲಾರದು. ಇರುವುದು (ಸತ್) ನಾಶವಾಗುವುದು. ಜ್ಞಾನಿಗಳು ಇವೆರಡರ ನಿರ್ಣಯ ಬಲ್ಲರು. ॥೧೬॥

ಯಾವುದರಿಂದ ಜಗತ್ತು ವ್ಯಾಪ್ತವಾಗಿದೆಯೊ ಅದು ಅವಿನಾಶಿ: ತಿಳಿದುಕೊ. ಆ ಅವ್ಯಯ (ತತ್ತ್ವ)ವನ್ನು ನಾಶಮಾಡುವ ಸಾಮರ್ಥ್ಯ ಯಾರಲ್ಲಿಯೂ ಇಲ್ಲ. ॥೧೭॥

ಅಂತವಂತ ಇಮೇ ದೇಹಾ ನಿತ್ಯಸ್ಯೋಕ್ತಾಶ್ಶರೀರಿಣಃ ।
ಅನಾಶಿನೋಽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ ॥೧೮॥

ಯ ಏನಂ ವೇತ್ತಿ ಹಂತಾರಂ ಯಶ್ಚೈನಂ ಮನ್ಯತೇ ಹತಮ್ ।
ಉಭೌ ತೌ ನ ವಿಜಾನೀತೋ ನಾಯಂ ಹಂತಿ ನ ಹನ್ಯತೇ ॥೧೯॥

ನ ಜಾಯತೇ ಮ್ರಿಯತೇ ವಾ ಕದಾಚಿ-
ನ್ನಾಯಂ ಭೂತ್ವಾಽಭವಿತಾ ವಾ ನ ಭೂಯಃ ।
ಅಜೋ ನಿತ್ಯಶ್ಶಾಶ್ವತೋಽಯಂ ಪುರಾಣೋ
ನ ಹನ್ಯತೇ ಹನ್ಯಮಾನೇ ಶರೀರೇ ॥೨೦॥

ವೇದಾವಿನಾಶಿನಂ ನಿತ್ಯಂ ಯ ಏನಮಜಮವ್ಯಯಮ್ ।
ಕಥಂ ಸ ಪುರುಷಃ ಪಾರ್ಥ ಕಂ ಘಾತಯತಿ ಹಂತಿ ಕಮ್ ॥೨೧॥

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪರಾಣಿ ।
ತಥಾ ಶರೀರಾಣಿ ವಿಹಾಯ ಜೀರ್ಣಾನ್
ಅನ್ಯಾನಿ ಸಂಯಾತಿ ನವಾನಿ ದೇಹೀ ॥೨೨॥

ದೇಹಿ ನಿತ್ಯ, ಅಪರಿಮಿತ, ಅವಿನಾಶಿ. ಅವನ ಈ ದೇಹವೋ ನಾಶವಂತ, ಅನಿತ್ಯ ಎಂದು ಹೇಳಿದ್ದಾರೆ. ಆದುದರಿಂದ, ಭಾರತ, ನೀನು ಯುದ್ಧಮಾಡು. ॥೧೮॥

ಇದನ್ನು ಕೊಲ್ಲುತ್ತೇನೆಂದು ತಿಳಿದವನೂ ಇದು ಹತವಾಯಿತೆಂದು ತಿಳಿದವನೂ– ಇಬ್ಬರೂ ಏನನ್ನೂ ಅರಿಯದವರು. ಈ ಆತ್ಮವನ್ನು ಯಾರೂ ಸಂಹರಿಸಲಾರರು, ಇದನ್ನು ಸಂಹರಿಸಲು ಆಗುವುದೂ ಇಲ್ಲ. ॥೧೯॥

ಇದಕ್ಕೆ ಹುಟ್ಟೂ ಇಲ್ಲ, ಸಾವೂ ಇಲ್ಲ. ಹಿಂದೆ ಇತ್ತು, ಮುಂದೆ ಇರುವುದಿಲ್ಲ ಎಂತಲೂ ಇಲ್ಲ. ಆದುದರಿಂದ ಇದು ಹುಟ್ಟಿಲ್ಲದುದು, ನಿತ್ಯ, ಶಾಶ್ವತ, ಪುರಾತನ. ಶರೀರ ನಾಶವಾದರೂ ಇದು ನಾಶವಾಗದು. ॥೨೦॥

ಪಾರ್ಥ ! ಆತ್ಮ ಅವಿನಾಶಿ, ನಿತ್ಯ, ಅಜನ್ಮ, ಅವ್ಯಯ ಎಂದು ತಿಳಿದವನು ಯಾರನ್ನು ಕೊಂದಾನು, ಹೇಗೆ ಕೊಂದಾನು? ಯಾರಿಂದ ಕೊಲೆ ಆದಾನು, ಹೇಗೆ ಕೊಲೆಯಾದಾನು?

॥೨೧॥

ಮನುಷ್ಯ ಹಳೇ ಬಟ್ಟೆ ಬಿಟ್ಟು ಹೊಸ ಬಟ್ಟೆ ಧರಿಸುವಂತೆ ದೇಹಧಾರಿ ಕೂಡ ಜೀರ್ಣ-ಶೀರ್ಣ ದೇಹವನ್ನು ಬಿಟ್ಟು ಬೇರೆ ಹೊಸ ದೇಹವನ್ನು ಪಡೆಯುತ್ತಾನೆ. ॥೨೨॥

ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ ।
ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ ॥೨೩॥

ಅಚ್ಛೇದ್ಯೋಽಯಮದಾಹ್ಯೋಽಯಮಕ್ಲೇದ್ಯೋಽಶೋಷ್ಯ ಏವ ಚ।
ನಿತ್ಯಸ್ಸರ್ವಗತಸ್ಸ್ಥಾಣುರಚಲೋಽಯಂ ಸನಾತನಃ ॥೨೪॥

ಅವ್ಯಕ್ತೋಽಯಮಚಿಂತ್ಯೋಽಯಮವಿಕಾರ್ಯೋಽಯಮುಚ್ಯತೇ ।
ತಸ್ಮಾದೇವಂ ವಿದಿತ್ವೈನಂ ನಾನುಶೋಚಿತುಮರ್ಹಸಿ ॥೨೫॥

ಅಥ ಚೈನಂ ನಿತ್ಯಜಾತಂ ನಿತ್ಯಂ ವಾ ಮನ್ಯಸೇ ಮೃತಮ್ ।
ತಥಾಪಿ ತ್ವಂ ಮಹಾಬಾಹೋ ನೈವಂ ಶೋಚಿತುಮರ್ಹಸಿ ॥೨೬॥

ಜಾತಸ್ಯ ಹಿ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ ।
ತಸ್ಮಾದಪರಿಹಾರ್ಯೇಽರ್ಥೇ ನ ತ್ವಂ ಶೋಚಿತುಮರ್ಹಸಿ ॥೨೭॥

ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ ।
ಅವ್ಯಕ್ತನಿಧನಾನ್ಯೇವ ತತ್ರ ಕಾ ಪರಿದೇವನಾ ॥೨೮॥

ಈ ಆತ್ಮನನ್ನು ಶಸ್ತ್ರ ಕತ್ತರಿಸದು, ಬೆಂಕಿ ಸುಡದು, ನೀರು ತೋಯಿಸಲಾರದು, ಗಾಳಿ ಒಣಗಿಸಲಾರದು. ॥೨೩॥

ಕತ್ತರಿಸಲಾಗದ, ಸುಡಲಾಗದ, ತೋಯಿಸಲಾಗದ, ಒಣಗಿಸಲಾಗದ ಆತ್ಮ ನಿತ್ಯ, ಸರ್ವಗತ, ಸ್ಥಿರ, ಅಚಲ, ಸನಾತನ. ॥೨೪॥

ಈ ಆತ್ಮ, ಇಂದ್ರಿಯಗಳಿಗೂ ಮನಸ್ಸಿಗೂ ತಿಳಿಯಲಾರದುದು, ವಿಕಾರ ರಹಿತ. ಆದುದರಿಂದ ಇದನ್ನು ತಿಳಿದೂ ನೀನು ಶೋಕಿಸುವುದು ಉಚಿತವಲ್ಲ. ॥೨೫॥

ಅಥವಾ ಆತ್ಮ ನಿತ್ಯವೂ ಹುಟ್ಟುತ್ತದೆ, ಸಾಯುತ್ತದೆ ಎಂದು ತಿಳಿದಿದ್ದೂ ನೀನು ಶೋಕಿಸುವುದು ಉಚಿತವಲ್ಲ. ॥೨೬॥

ಹುಟ್ಟಿದವನಿಗೆ ಸಾವೂ, ಸತ್ತವನಿಗೆ ಹುಟ್ಟೂ ಅನಿವಾರ್ಯ. ಈ ಅನಿವಾರ್ಯ ವಾದುದನ್ನು ಕುರಿತು ಶೋಕಿಸುವುದು ಉಚಿತವಲ್ಲ. ॥೨೭॥

ಭಾರತ, ಭೂತಮಾತ್ರದ ಹುಟ್ಟುವ ಪೂರ್ವದ, ಸತ್ತ ಮೇಲಿನ, ಸ್ಥಿತಿ ಕಾಣದು : ಅದು ಅವ್ಯಕ್ತ. ಮಧ್ಯದ ಸ್ಥಿತಿ ಮಾತ್ರ ವ್ಯಕ್ತ. ಇದರಲ್ಲಿ ಚಿಂತೆಗೇನು ಕಾರಣ? ॥೨೮॥

ಆಶ್ಚರ್ಯವತ್ಪಶ್ಯತಿ ಕಶ್ಚಿದೇನ-
ಮಾಶ್ಚರ್ಯವದ್ವದತಿ ತಥೈವ ಚಾನ್ಯಃ ।
ಆಶ್ಚರ್ಯವಚ್ಚೈನಮನ್ಯಶ್ಶೃಣೋತಿ
ಶ್ರುತ್ವಾಽಪ್ಯೇನಂ ವೇದ ನ ಚೈವ ಕಶ್ಚಿತ್ ॥೨೯॥

ದೇಹೀ ನಿತ್ಯಮವಧ್ಯೋಽಯಂ ದೇಹೇ ಸರ್ವಸ್ಯ ಭಾರತ ।
ತಸ್ಮಾತ್ಸರ್ವಾಣಿ ಭೂತಾನಿ ನ ತ್ವಂ ಶೋಚಿತುಮರ್ಹಸಿ ॥೩೦॥

ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಂಪಿತುಮರ್ಹಸಿ
ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ ॥೩೧॥

ಯದೃಚ್ಛಯಾ ಚೋಪಪನ್ನಂ ಸ್ವರ್ಗದ್ವಾರಮಪಾವೃತಮ್ ।
ಸುಖಿನಃ ಕ್ಷತ್ರಿಯಾಃ ಪಾರ್ಥ ಲಭಂತೇ ಯುದ್ಧಮೀದೃಶಮ್ ॥೩೨॥

ಅಥ ಚೇತ್ತ್ವಮಿಮಂ ಧರ್ಮ್ಯಂ ಸಂಗ್ರಾಮಂ ನ ಕರಿಷ್ಯಸಿ ।
ತತಸ್ಸ್ವಧರ್ಮಂ ಕೀರ್ತಿಂ ಚ ಹಿತ್ವಾ ಪಾಪಮವಾಪ್ಸ್ಯಸಿ ॥೩೩॥

ಟಿಪ್ಪಣಿ–ಭೂತ ಎಂದರೆ ಸ್ಥಾವರ–ಜಂಗಮ ಸೃಷ್ಟಿ.

ಕೆಲವರು ಆತ್ಮವನ್ನು ಅದ್ಭುತ ವಸ್ತುವೆಂದು ನೋಡುತ್ತಾರೆ. ಕೆಲವರು ಆಶ್ಚರ್ಯಕರವಾಗಿ ವರ್ಣಿಸುತ್ತಾರೆ. ಕೆಲವರು ಆ ಆಶ್ಚರ್ಯಕರ ವರ್ಣನೆ ಕೇಳುತ್ತಾರೆ. ಇಷ್ಟಾದರೂ ಆತ್ಮವನ್ನು ಯಾರೂ ಅರಿಯರು. ॥೨೯॥

ಭಾರತ, ಎಲ್ಲರ ದೇಹದಲ್ಲಿಯೂ ಇರುವ ಈ ದೇಹಧಾರಿ ಆತ್ಮ ಸರ್ವದಾ ಅವಧ್ಯ. ಆದುದರಿಂದ ನೀನು ಭೂತಮಾತ್ರದ ಬಗ್ಗೆ ಶೋಕಿಸುವುದು ಯೋಗ್ಯವಲ್ಲ. ॥೩೦॥

ಟಿಪ್ಪಣಿ–ಇಲ್ಲಿಯವರೆಗೆ ಶ್ರೀಕೃಷ್ಣ ಬುದ್ಧಿ ಪ್ರಯೋಗದ ಮೂಲಕ ಆತ್ಮದ ನಿತ್ಯತೆ, ದೇಹದ ಅನಿತ್ಯತೆಗಳನ್ನು ತೋರಿಸಿದ. ಏಕೆಂದರೆ, ಯಾವ ಸ್ಥಿತಿಯಲ್ಲಾದರೂ ದೇಹವನ್ನು ನಾಶಗೊಳಿಸುವುದು ಉಚಿತವೆಂದರೆ, ಆಗ ಸ್ವಜನ–ಪರಿಜನವೆಂಬ ಭೇದವೆಣಿಸಿ, ಕೌರವರು ಒಟಹುಟ್ಟಿದವರು, ಅವರನ್ನು ಹೇಗೆ ಕೊಲ್ಲಲಿ ಎಂಬುದು ಮೋಹಜನ್ಯ ವಿಚಾರ. ಈಗ ಅರ್ಜುನನಿಗೆ ಕ್ಷತ್ರಿಯ ಧರ್ಮವನ್ನು ಹೇಳುತ್ತಾನೆ.

ಸ್ವಧರ್ಮವನ್ನರಿತ ನೀನು ಹಿಂದೆ ಮುಂದೆ ನೋಡುವುದು ಸರಿಯಲ್ಲ. ಏಕೆಂದರೆ ಕ್ಷತ್ರಿಯನಿಗೆ ಧರ್ಮಯುದ್ಧಕ್ಕಿಂತಲೂ ಹೆಚ್ಚು ಶ್ರೇಯಸ್ಕರವಾದುದು ಮತ್ತೊಂದಿಲ್ಲ. ॥೩೧॥

ಪಾರ್ಥ ! ತಾನಾಗಿಯೇ ಒದಗಿದೆ ಈ ಯುದ್ಧ. ಸ್ವರ್ಗದ ಬಾಗಿಲನ್ನೇ ತೆರೆವ ಯುದ್ಧ ಬರುವುದು ಭಾಗ್ಯಶಾಲಿ ಕ್ಷತ್ರಿಯರ ಪಾಲಿಗೆ ಮಾತ್ರವೇ. ॥೩೨॥

ಧರ್ಮಪ್ರಾಪ್ತವಾದ ಈ ಯುದ್ಧವನ್ನು ನೀನು ಮಾಡದಿದ್ದರೆ ಸ್ವಧರ್ಮ, ಕೀರ್ತಿಗಳನ್ನು ನಾಶಮಾಡಿಕೊಂಡು, ಪಾಪಭಾಗಿಯಾಗುತ್ತೀಯೆ. ॥೩೩॥

ಅಕೀರ್ತಿಂ ಚಾಪಿ ಭೂತಾನಿ ಕಥಯಿಷ್ಯಂತಿ ತೇऽವ್ಯಯಾಮ್ ।
ಸಂಭಾವಿತಸ್ಯ ಚಾಕೀರ್ತಿರ್ಮರಣಾದತಿರಿಚ್ಯತೇ ॥೩೪॥

ಭಯಾದ್ರಣಾದುಪರತಂ ಮಂಸ್ಯಂತೇ ತ್ವಾಂ ಮಹಾರಥಾಃ ।
ಯೇಷಾಂ ಚ ತ್ವಂ ಬಹುಮತೋ ಭೂತ್ವಾ ಯಾಸ್ಯಸಿ ಲಾಘವಮ್ ॥೩೫॥

ಅವಾಚ್ಯವಾದಾಂಶ್ಚ ಬಹೂನ್ ವದಿಷ್ಯಂತಿ ತವಾಹಿತಾಃ ।
ನಿಂದಂತಸ್ತವ ಸಾಮರ್ಥ್ಯ ತತೋ ದುಃಖತರಂ ನು ಕಿಮ್ ॥೩೬॥

ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಂ ।
ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯಃ ॥೩೭॥

ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥೩೮॥

ಜನರೆಲ್ಲರೂ ಯಾವಾಗಲೂ ನಿನ್ನನ್ನು ನಿಂದಿಸುತ್ತಾರೆ. ಸಂಭಾವಿತನಿಗೆ ಅಪಕೀರ್ತಿ ಮರಣಕ್ಕಿಂತ ಹೆಚ್ಚು ಕೆಟ್ಟುದು. ॥೩೪॥

ಯಾವ ಮಹಾರಥಿಗಳು ನಿನ್ನನ್ನು ಈಗ ಮನ್ನಿಸುತ್ತಿದ್ದಾರೋ ಅವರೇ ನಿನ್ನನ್ನು, ನೀನು ರಣದಿಂದ ಹೆದರಿ ಓಡಿಹೋದೆ, ತುಚ್ಛ ಎಂದಾರು. ॥೩೫॥

ನಿನ್ನ ಶತ್ರುಗಳು ನಿನ್ನ ಬಲವನ್ನು ನಿಂದಿಸುವಾಗ ಅಪಚಾರದ ಮಾತನ್ನೆಲ್ಲ ಆಡಿಯಾರು. ಇದಕ್ಕಿಂತಲೂ ಹೆಚ್ಚು ದುಃಖದಾಯಕವೇನಿದೆ? ॥೩೬॥

ಹತನಾದರೆ ಸ್ವರ್ಗ, ಗೆದ್ದರೆ ಪೃಥ್ವಿಯ ಉಪಭೋಗ. ಆದುದರಿಂದ ಕೌಂತೇಯ, ಯುದ್ಧ ಮಾಡಲು ನಿಶ್ಚಯಿಸಿ ನಿಲ್ಲು. ॥೩೭॥

ಟಿಪ್ಪಣಿ–ಹೀಗೆ ಭಗವಂತ ಆತ್ಮದ ನಿತ್ಯತೆ, ದೇಹದ ಅನಿತ್ಯತೆಗಳನ್ನು ತೋರಿಸಿದ. ಆಮೇಲೆ ಸಹಜಪ್ರಾಪ್ತವಾದ ಯುದ್ಧ ಮಾಡುವುದರಲ್ಲಿ ಕ್ಷತ್ರಿಯರಿಗೆ ಧರ್ಮಬಾಧೆಯಿಲ್ಲ ಎಂಬುದನ್ನೂ ತೋರಿಸಿದ. ಹೀಗೆ ೩೧ ನೆ ಶ್ಲೋಕದಿಂದ ಭಗವಂತ ಪರಮಾರ್ಥದೊಂದಿಗೆ ಉಪಯುಕ್ತತೆಯನ್ನೂ ಜೋಡಿಸಿದ್ದಾನೆ. ಇಷ್ಟು ಹೇಳಿ ಭಗವಂತ ಮುಂದೆ ಒಂದು ಶ್ಲೋಕದಲ್ಲಿ ಗೀತೆಯ ಮುಖ್ಯ ಉಪದೇಶವನ್ನು ತುಂಬಿದಾನೆ.

ಸುಖ–ದುಃಖ, ಲಾಭ–ಹಾನಿ, ಜಯ–ಅಪಜಯಗಳನ್ನು ಸಮಾನವಾಗಿ ಭಾವಿಸಿ, ಯುದ್ಧ ಮಾಡಲು ಸಿದ್ಧನಾಗು. ಹಾಗೆ ಮಾಡುವುದರಿಂದ ನಿನಗೆ ಪಾಪ ತಗಲದು. ॥೩೮॥

ಏಷಾ ತೇಽಭಿಹಿತಾ ಸಾಂಖ್ಯೇ ಬುದ್ಧಿರ್ಯೋಗೇ ತ್ವಿಮಾಂ ಶೃಣು ।
ಬುದ್ಧ್ಯಾ ಯುಕ್ತೋ ಯಯಾ ಪಾರ್ಥ ಕರ್ಮಬಂಧಂ ಪ್ರಹಾಸ್ಯಸಿ ॥೩೯॥

ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ ।
ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ॥೪೦॥

ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ ।
ಬಹುಶಾಖಾ ಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಮ್ ॥೪೧॥

ಯಾಮಿಮಾಂ ಪುಷ್ಪಿತಾಂ ವಾಚಂ ಪ್ರವದಂತ್ಯವಿಪಶ್ಚಿತಃ ।
ವೇದವಾದರತಾಃ ಪಾರ್ಥ ನಾನ್ಯದಸ್ತೀತಿ ವಾದಿನಃ ॥೪೨॥

ಕಾಮಾತ್ಮಾನಸ್ಸ್ವರ್ಗಪರಾ ಜನ್ಮಕರ್ಮಫಲಪ್ರದಾಮ್ ।
ಕ್ರಿಯಾವಿಶೇಷಬಹುಲಾಂ ಭೋಗೈಶ್ವರ್ಯಗತಿಂ ಪ್ರತಿ ॥೪೩॥

ಭೋಗೈಶ್ವರ್ಯಪ್ರಸಕ್ತಾನಾಂ ತಯಾಽಪಹೃತಚೇತಸಾಮ್ ।
ವ್ಯವಸಾಯಾತ್ಮಿಕಾ ಬುದ್ಧಿಸ್ಸಮಾಧೌ ನ ವಿಧೀಯತೇ ॥೪೪॥

ನಾನು ನಿನಗೆ (ತರ್ಕವಾದ) ಸಾಂಖ್ಯಸಿದ್ಧಾಂತಕ್ಕೆ ಅನುಸಾರವಾಗಿ ನಿನ್ನ ಕರ್ತವ್ಯವನ್ನು ತಿಳಿಸಿದೆ. ಇನ್ನು ಕರ್ಮ ಯೋಗವಾದಕ್ಕೆ ಅನುಸಾರವಾಗಿ ತಿಳಿಸುತ್ತೇನೆ ಕೇಳು. ಇದರ ಆಶ್ರಯ ಪಡೆದರೆ ನೀನು ಕರ್ಮಬಂಧನಗಳನ್ನು ಹರಿದೊಗೆಯಬಲ್ಲೆ. ॥೩೯॥

ಇದರಲ್ಲಿ ಆರಂಭಕ್ಕೆ ನಾಶವಿಲ್ಲ; ವಿಪರೀತ ಪರಿಣಾಮವೂ ಆಗುವುದಿಲ್ಲ. ಈ ಧರ್ಮವನ್ನು ಸ್ವಲ್ಪಮಟ್ಟಿಗೆ ಅನುಸರಿಸಿದರೂ ಕೂಡ ಮಹಾಭಯದಿಂದ ಕಾಪಾಡುತ್ತದೆ. ॥೪೦॥

ಕುರುನಂದನ, ಯೋಗವಾದಿಗಳ ನಿಶ್ಚಯಾತ್ಮಕ ಬುದ್ಧಿ ಏಕರೂಪವಾಗಿರುತ್ತದೆ. ಅನಿಶ್ಚಯವಂತರ ಬುದ್ಧಿಗಳಿಗೆ ಬಹುಶಾಖೆಗಳು, ಅವಕ್ಕೆ ಕೊನೆಯಿಲ್ಲ. ॥೪೧॥

ಟಿಪ್ಪಣಿ–ಬುದ್ಧಿ ಒಂದು ತೆರನಾಗಿರದೆ, ಅನೇಕ ರೂಪ ತಾಳಿದಾಗ ಅದು ಬುದ್ಧಿ ಆಗದೆ ವಾಸನೆಯ ರೂಪ ತಳೆಯುತ್ತದೆ. ಆದುದರಿಂದ ಬುದ್ಧಿಗಳು ಎಂದರೆ ವಾಸನೆಗಳು ಎಂದರ್ಥ.

ಅಜ್ಞಾನಿಗಳಾದ ಪಂಡಿತರೂ, 'ಇದರ ವಿನಾ ಮತ್ತೇನೂ ಇಲ್ಲ' ಎನ್ನುವವರೂ, ಕಾಮಾತ್ಮರೂ, ಸ್ವರ್ಗವೇ ಶ್ರೇಷ್ಠವೆಂದು ಭಾವಿಸುವವರೂ, ಜನನ–ಮರಣ ರೂಪ ಕರ್ಮಫಲ ಕೊಡುವ ಭೋಗೈಶ್ವರ್ಯಗಳನ್ನು ಹೊಂದಲು ಮಾಡುವ ಕರ್ಮಗಳ ವರ್ಣನೆಯಿಂದ ತುಂಬಿದ ಮಾತುಗಳನ್ನು ಹರಟುತ್ತಾರೆ; ಭೋಗ–ಐಶ್ವರ್ಯಗಳಲ್ಲಿ ಆಸಕ್ತರಾದವರ ಬುದ್ಧಿ ನಷ್ಟವಾಗುತ್ತದೆ. ಅವರ ಬುದ್ಧಿ ನಿಶ್ಚಲವಾಗಲೂ ಆರದು, ಸಮಾಧಿಯಲ್ಲಿ ಸ್ಥಿರವಾಗಲೂ ಆರದು. ॥೪೨–೪೪॥

ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ ।
ನಿರ್ದ್ವಂದ್ವೋ ನಿತ್ಯಸತ್ತ್ವಸ್ಥೋ ನಿರ್ಯೋಗಕ್ಷೇಮ ಆತ್ಮವಾನ್ ॥೪೫॥

ಯಾವಾನರ್ಥ ಉದಪಾನೇ ಸರ್ವತಸ್ಸಂಪ್ಲುತೋದಕೇ ।
ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ ॥೪೬॥

ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।
ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವಕರ್ಮಣಿ ॥೪೭॥

ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ।
ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ ॥೪೮॥

ದೂರೇಣ ಹ್ಯವರಂ ಕರ್ಮ ಬುದ್ಧಿಯೋಗಾದ್ಧನಂಜಯ ।
ಬುದ್ಧೌ ಶರಣಮನ್ವಿಚ್ಛ ಕೃಪಣಾಃ ಫಲಹೇತವಃ ॥೪೯॥

ಟಿಪ್ಪಣಿ–ಮೇಲಿನ ಮೂರು ಶ್ಲೋಕಗಳಲ್ಲಿ ಯೋಗವಾದದ ವಿರುದ್ಧವಾಗಿ ಕರ್ಮಕಾಂಡ ಅಥವಾ ವೇದವಾದದ ವರ್ಣನೆ ಬಂದಿದೆ. ಕರ್ಮಕಾಂಡ ಅಥವಾ ವೇದವಾದ ಎಂದರೆ ಫಲ ಪಡೆಯಲು ಮಾಡುವ ಅಸಂಖ್ಯ ಕ್ರಿಯೆ. ಈ ಕ್ರಿಯೆಗಳೇ ಬೇರೆ. ವೇದರಹಸ್ಯ ವೇದಾಂತವೇ ಬೇರೆ. ಇವು ಅಲ್ಪ ಫಲ ಕೊಡುವಂಥವು. ಆದುದರಿಂದ ನಿರರ್ಥಕ.

ಅರ್ಜುನ ! ವೇದವಿಷಯಗಳಾದ ತ್ರಿಗುಣಗಳಿಂದ ನೀನು ಅಲಿಪ್ತನಾಗಿರು. ಸುಖದುಃಖಾದಿ ದ್ವಂದ್ವಗಳಿಂದ ಮುಕ್ತನಾಗು, ನಿತ್ಯ–ಸತ್ಯವಸ್ತುವಿನಲ್ಲಿ ಸ್ಥಿರನಾಗಿರು. ಯಾವುದೇ ವಸ್ತುವನ್ನು ಪಡೆವ, ಇಟ್ಟುಕೊಳ್ಳುವ, ಜಂಜಾಟದಿಂದ ದೂರವಿರು. ಆತ್ಮಪರಾಯಣನಾಗು. ॥೪೫॥

ಬಾವಿಯಿಂದಾಗುವ ಕೆಲಸವೆಲ್ಲವೂ, ಎಲ್ಲ ಬಗೆಯಲ್ಲೂ, ಸರೋವರದಿಂದಲೂ ಆಗುತ್ತದೆ: ಅದೇ ರೀತಿ ವೇದಗಳಲ್ಲಿರುವುದೆಲ್ಲ ಜ್ಞಾನಿಯಾದ ಬ್ರಹ್ಮಪರಾಯಣನಿಗೆ ಆತ್ಮಾನುಭವದಿಂದ ದೊರೆಯುತ್ತದೆ. ॥೪೬॥

ಕರ್ಮ ಮಾಡುವುದಕ್ಕೆ ಮಾತ್ರ ನಿನಗೆ ಅಧಿಕಾರ. ಅದರಿಂದ ಹುಟ್ಟುವ ಅನೇಕ ಫಲಗಳ ಅಧಿಕಾರವೆಂದಿಗೂ ಇಲ್ಲ. ಕರ್ಮಫಲ ನಿನ್ನ ಉದ್ದೇಶವಾಗದಿರಲಿ. ಕರ್ಮ ಮಾಡದಿರುವ ಅಗ್ರಹವೂ ನಿನಗೆ ಬೇಡ. ॥೪೭॥

ಧನಂಜಯ, ಆಸಕ್ತಿಯನ್ನು ಬಿಟ್ಟು, ಯೋಗಸ್ಥನಾಗಿ ಎಂದರೆ ಸಫಲತೆ ನಿಷ್ಫಲತೆಗಳಲ್ಲಿ ಸಮಾನ ಭಾವವನ್ನಿಟ್ಟು ಕರ್ಮಮಾಡು. ಸಮತ್ವವೇ ಯೋಗ. ॥೪೮॥

ಧನಂಜಯ, ಸಮತ್ವಬುದ್ಧಿಗೆ ಹೋಲಿಸಿದರೆ ಬರೀ ಕರ್ಮ ಬಹು ತುಚ್ಛ. ನೀನು ಸಮತ್ವಬುದ್ಧಿಯನ್ನು ಆಶ್ರಯಿಸು. ಫಲಹೇತುವುಳ್ಳವನು ದಯೆಗೆ ಪಾತ್ರ. ॥೪೯॥

ಬುದ್ಧಿಯುಕ್ತೋ ಜಹಾತೀಹ ಉಭೇ ಸುಕೃತದುಷ್ಕೃತೇ ।
ತಸ್ಮಾದ್ಯೋಗಾಯ ಯುಜ್ಯಸ್ವ ಯೋಗಃ ಕರ್ಮಸು ಕೌಶಲಮ್ ॥೫೦॥

ಕರ್ಮಜಂ ಬುದ್ಧಿಯುಕ್ತಾ ಹಿ ಫಲಂ ತ್ಯಕ್ತ್ವಾ ಮನೀಷಿಣಃ ।
ಜನ್ಮಬಂಧವಿನಿರ್ಮುಕ್ತಾಃ ಪದಂ ಗಚ್ಛಂತ್ಯನಾಮಯಮ್ ॥೫೧॥

ಯದಾ ತೇ ಮೋಹಕಲಿಲಂ ಬುದ್ಧಿರ್ವ್ಯತಿತರಿಷ್ಯತಿ ।
ತದಾ ಗಂತಾಸಿ ನಿರ್ವೇದಂ ಶ್ರೋತವ್ಯಸ್ಯ ಶ್ರುತಸ್ಯ ಚ ॥೫೨॥

ಶ್ರುತಿವಿಪ್ರತಿಪನ್ನಾ ತೇ ಯದಾ ಸ್ಥಾಸ್ಯತಿ ನಿಶ್ಚಲಾ ।
ಸಮಾಧಾವಚಲಾಬುದ್ಧಿಸ್ತದಾ ಯೋಗಮವಾಪ್ಸ್ಯಸಿ ॥೫೩॥

ಅರ್ಜುನ ಉವಾಚ

ಸ್ಥಿತಪ್ರಜ್ಞಸ್ಯ ಕಾ ಭಾಷಾ ಸಮಾಧಿಸ್ಥಸ್ಯ ಕೇಶವ ।
ಸ್ಥಿತಧೀಃ ಕಿಂ ಪ್ರಭಾಷೇತ ಕಿಮಾಸೀತ ವ್ರಜೇತ ಕಿಮ್ ॥೫೪॥

ಬುದ್ಧಿಯುಕ್ತನನ್ನು ಎಂದರೆ ಸಮತ್ವಭಾವದ ಪುರುಷನನ್ನು ಇಲ್ಲಿ ಪಾಪ ಪುಣ್ಯಗಳು ಸ್ಪರ್ಶಿಸಲಾರವು. ಆದುದರಿಂದ ನೀನು ಸಮತ್ವಕ್ಕಾಗಿ ಯತ್ನಿಸು. ಸಮತ್ವ(ಯೋಗ)ವೇ ಕಾರ್ಯಕುಶಲತೆ. ॥೫೦॥

ಏಕೆಂದರೆ, ಸಮತ್ವ ಬುದ್ಧಿಯುಳ್ಳವರು ಕರ್ಮದಿಂದ ಹುಟ್ಟುವ ಫಲಗಳನ್ನು ತ್ಯಾಗಮಾಡಿ ಜನ್ಮಬಂಧನದಿಂದ ಮುಕ್ತರಾಗಿ, ನಿಷ್ಕಲಂಕ ಗತಿಯನ್ನು–ಮೋಕ್ಷವನ್ನು ಹೊಂದುತ್ತಾರೆ. ॥೫೧॥

ಯಾವಾಗ ನಿನ್ನ ಬುದ್ಧಿ ಮೋಹರೂಪ ದೋಷದಿಂದ ಪಾರಾಗುವುದೋ ಆಗ ನೀನು ಹಿಂದೆ ಕೇಳಿದಂಥ ಮುಂದೆ ಕೇಳುವಂಥ ವಿಷಯಗಳಲ್ಲಿ ಉದಾಸೀನತೆ ಬರುತ್ತದೆ. ॥೫೨॥

ಅನೇಕ ಬಗೆಯ ಸಿದ್ಧಾಂತಗಳನ್ನು ಕೇಳಿ ನಿನ್ನ ಬುದ್ಧಿ ವ್ಯಗ್ರವಾಗಿದೆ. ಅದು ಸಮಾಧಿಯಲ್ಲಿ ಸ್ಥಿರವಾದಾಗ ನಿನಗೆ ಸಮತೆ ಬರುತ್ತದೆ. ॥೫೩॥

ಅರ್ಜುನ :

ಕೇಶವ ! ಸ್ಥಿತಪ್ರಜ್ಞ ಅಥವಾ ಸಮಾಧಿಸ್ಥನ ಲಕ್ಷಣಗಳೇನು? ಸ್ಥಿತಪ್ರಜ್ಞನ ನಡೆನುಡಿ ಹೇಗಿರುತ್ತವೆ? ॥೫೪॥

ೀ ಭಗವಾನುವಾಚ

ಜಹಾತಿ ಯದಾ ಕಾಮಾನ್ ಸರ್ವಾನ್ ಪಾರ್ಥ ಮನೋಗತಾನ್ ।
ತ್ಮನ್ಯೇವಾತ್ಮನಾ ತುಷ್ಟಸ್ಥಿತಪ್ರಜ್ಞಸ್ತದೋಚ್ಯತೇ ॥೫೫॥

ಃಖೇಷ್ವನುದ್ವಿಗ್ನಮನಾಸ್ಸುಖೇಷು ವಿಗತಸ್ಪೃಹಃ ।
ೀತರಾಗಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ ॥೫೬॥

ಯಸ್ಸರ್ವತ್ರಾನಭಿಸ್ನೇಹಸ್ತತ್ತತ್ಪ್ರಾಪ್ಯ ಶುಭಾಶುಭಮ್ ।
ಾಭಿನಂದತಿ ನ ದ್ವೇಷ್ಟಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥೫೭॥

ಯದಾ ಸಂಹರತೇ ಚಾಯಂ ಕೂರ್ಮೋಽಂಗಾನೀವ ಸರ್ವಶಃ ।
ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥೫೮॥

ಟಿಪ್ಪಣಿ–ಆತ್ಮನ ಮೂಲಕ ಆತ್ಮದಲ್ಲಿಯೇ ತೃಪ್ತಿಹೊಂದುವುದು ಎಂದರೆ ತ್ಮದ ಆನಂದವನ್ನು ಒಳಗೇ ಅರಸುವುದು. ಸುಖ-ದುಃಖ ಕೊಡುವ ಹೊರಗಣ ಸ್ತುಗಳಲ್ಲಿ ಆನಂದವನ್ನು ಹುಡುಕಬಾರದು. ಆನಂದ ಬೇರೆ, ಸುಖ ಬೇರೆ. ಇದನ್ನರಿಯ ೇಕು. ನನಗೆ ಧನ ಸಿಕ್ಕಿದರೆ ಅದರಲ್ಲಿ ಸುಖ ಎಂಬ ಭಾವನೆ ಮೋಹ. ಭಿಕಾರಿ ಯಾದರೂ, ಹಸಿವಿನಿಂದ ಸಂಕಟಪಟ್ಟರೂ ಚಿಂತೆಯಿಲ್ಲ. ನಾನು ಕಳ್ಳತನ ಮಾಡೆ, ುತ್ತಾವುದಾದರೂ ಪ್ರಲೋಭನದಲ್ಲಿ ಬೀಳೆ ಎಂಬುದಲ್ಲಿ ಆನಂದವಿದೆ. ಅದುವೇ ಆತ್ಮ ಂತೋಷ.

ೀ ಭಗವಂತ :

ಪಾರ್ಥ, ಮನಸ್ಸಿನಲ್ಲಿ ಹುಟ್ಟುವ ಎಲ್ಲ ಕಾಮುಗಳನ್ನೂ ಮನುಷ್ಯ ಯಾವಾಗ ಿಡುತ್ತಾನೋ, ಆತ್ಮದ ಮೂಲಕ ಆತ್ಮದಲ್ಲಿಯೇ ತೃಪ್ತಿ ಹೊಂದುತ್ತಾನೋ ಆಗ ಸ್ಥಿತ ಪ್ರಜ್ಞನೆನಿಸಿಕೊಳ್ಳುತ್ತಾನೆ. ॥೫೫॥

ಯಾರು ದುಃಖದಿಂದ ದುಃಖಿಯಾಗನೋ, ಸುಖವನ್ನು ಬಯಸನೋ, ಯಾರು ಾಗ ಭಯ ಕ್ರೋಧರಹಿತನೋ ಅವನು ಸ್ಥಿರಬುದ್ಧಿಯ ಮುನಿ ಎನಿಸಿಕೊಳ್ಳುತ್ತಾನೆ. ॥೫೬॥

ಯಾವ ಪುರುಷ ಸರ್ವತ್ರ ರಾಗರಹಿತನಾಗಿ, ಶುಭಾಶುಭಗಳು ಬಂದಾಗ ಂತೋಷಗೊಳ್ಳನೋ, ಶೋಕಮಾಡನೋ ಅವನದು ಸ್ಥಿರಬುದ್ಧಿ. ॥೫೭॥

ಆಮೆ ನಾಲ್ಕೂ ಕಡೆಗಳಿಂದಲೂ ತನ್ನ ಅಂಗಗಳನ್ನು ಒಳಗೆಳೆದುಕೊಳ್ಳುವಂತೆ ಪುರುಷ ನ್ನ ಇಂದ್ರಿಯಗಳನ್ನು ಇಂದ್ರಿಯ ವಿಷಯಗಳಿಗೆ ಸಿಗದಂತೆ ಬಿಗಿ ಹಿಡಿದಾಗ ಅವನ ಬುದ್ಧಿ ್ಥಿರವಾದುದು ಎನ್ನುತ್ತಾರೆ. ॥೫೮॥

ತಸ್ಮಾದ್ಯಸ್ಯ ಮಹಾಬಾಹೋ ನಿಗೃಹೀತಾನಿ ಸರ್ವಶಃ ।
ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥೬೮॥

ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ।
ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥೬೯॥

ಆಪೂರ್ಯಮಾಣಮಚಲಪ್ರತಿಷ್ಠಂ
ಸಮುದ್ರಮಾಪಃ ಪ್ರವಿಶಂತಿ ಯದ್ವತ್ ।
ತದ್ವತ್ಕಾಮಾ ಯಂ ಪ್ರವಿಶಂತಿ ಸರ್ವೇ
ಸ ಶಾಂತಿಮಾಪ್ನೋತಿ ನ ಕಾಮಕಾಮೀ ॥೭೦॥

ವಿಹಾಯ ಕಾಮಾನ್ ಯಸ್ಸರ್ವಾನ್ ಪುಮಾಂಶ್ಚರತಿ ನಿಸ್ಪೃಹಃ ।
ನಿರ್ಮಮೋ ನಿರಹಂಕಾರಃ ಸ ಶಾಂತಿಮಧಿಗಚ್ಛತಿ ॥೭೧॥

ಆದುದರಿಂದ, ಮಹಾಬಾಹು, ಯಾರ ಇಂದ್ರಿಯಗಳು ಸುತ್ತಲಿನ ವಿಷಯಗಳನ್ನು ಬಿಟ್ಟು ಅವನ ವಶವರ್ತಿಗಳಾಗುತ್ತವೆಯೋ ಅವನ ಬುದ್ಧಿ ಸ್ಥಿರವಾಗುತ್ತವೆ ಪ್ರಾಣಿ ಮಾತ್ರ ವೆಲ್ಲವೂ ನಿದ್ರಿಸುವಾಗ ಸಂಯಮಿ ಎಚ್ಚತ್ತಿರುತ್ತಾನೆ. ಜನರು ಎಚ್ಚರವಾಗಿರುವಾಗ ಜ್ಞಾನವಂತನಾದ ಮುನಿ ನಿದ್ರಿಸುತ್ತಾನೆ. ॥೬೮–೬೯॥

ಟಿಪ್ಪಣಿ–ಭೋಗಿಯಾದ ಮನುಷ್ಯ ರಾತ್ರಿ ೧೨ ಘಂಟೆಯವರೆಗೆ ನರ್ತನ, ನಾಟ್ಯ ಆಹಾರ ಪಾನಾದಿಗಳಲ್ಲಿ ತನ್ನ ಹೊತ್ತು ಕಳೆಯುತ್ತಾನೆ. ಬೆಳಿಗ್ಗೆ ೭–೮ ಘಂಟೆಯವರೆಗೆ ಮಲಗುತ್ತಾನೆ. ಸಂಯಮಿಗಳು ರಾತ್ರಿ ೭–೮ ಘಂಟೆಗೆ ಮಲಗಿ ಅರ್ಧರಾತ್ರಿಯ ಮೇಲೆ ಎದ್ದು ಈಶ್ವರನ ಧ್ಯಾನ ಮಾಡುತ್ತಾರೆ. ಭೋಗಿಗಳು ಸಂಸಾರವನ್ನು ಬೆಳೆಸಿಕೊಂಡು ಈಶ್ವರನನ್ನು ಮರೆಯುತ್ತಾರೆ. ಸಂಯಮಿ ಸಾಂಸಾರಿಕ ಪ್ರಪಂಚದ ಪರಿವೆಯಿಲ್ಲದೆ ಈಶ್ವರ ಸಾಕ್ಷಾತ್ಕಾರ ಪಡೆಯುತ್ತಾನೆ. ಈ ರೀತಿ ಇಬ್ಬರದೂ ಎರಡು ಬೇರೆ ಬೇರೆ ಪಂಥ. ಈ ಶ್ಲೋಕದಲ್ಲಿ ಇದನ್ನೇ ಭಗವಂತ ಹೇಳಿದ್ದಾನೆ.

ನದಿಗಳು ಬಂದು ಬಿದ್ದು ತುಂಬುತ್ತಿದ್ದರೂ ಸಮುದ್ರ ಅಚಲವಾಗಿರುವಂತೆ, ಯಾವ ಮನುಷ್ಯನಲ್ಲಿ ಸಾಂಸಾರಿಕ ಭೋಗ ಶಾಂತವಾಗುತ್ತವೆಯೋ ಅವನೇ ಶಾಂತಿಯನ್ನು ಪಡೆಯುತ್ತಾನೆ. ಕಾಮಗಳಲ್ಲಿ ಇಚ್ಛೆಯುಳ್ಳವನು ಪಡೆಯಲಾರ. ॥೭೦॥

ಎಲ್ಲ ಬಗೆಯ ಆಸಕ್ತಿಗಳನ್ನು ಬಿಟ್ಟು ಯಾವ ಪುರುಷ ಇಚ್ಛೆ, ಮಮತೆ, ಅಹಂಕಾರ ಗಳಿಲ್ಲದೆ ನಡೆಯುತ್ತಾನೋ, ಅವನೇ ಶಾಂತಿಯನ್ನು ಪಡೆಯುತ್ತಾನೆ. ॥೭೧॥

ಏಷಾ ಬ್ರಾಹ್ಮೀಸ್ಥಿತಿಃ ಪಾರ್ಥ ನೈನಾಂ ಪ್ರಾಪ್ಯ ವಿಮುಹ್ಯತಿ ।
ಸ್ಥಿತ್ವಾಽಸ್ಯಾಮಂತಕಾಲೇಽಪಿ ಬ್ರಹ್ಮನಿರ್ವಾಣಮೃಚ್ಛತಿ ॥೭೨॥

ಹರಿಃ ಓಂ ತತ್ಸತ್

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ

ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ಸಾಂಖ್ಯಯೋಗೋನಾಮ

ದ್ವಿತೀಯೋಽಧ್ಯಾಯಃ ॥

ಪಾರ್ಥ ! ಈಶ್ವರನನ್ನು ತಿಳಿದವನ ಸ್ಥಿತಿಯ ಚಿತ್ರ ಇದೇ. ಇದನ್ನು ಹೊಂದಿದ ಬಳಿಕ ಅವನು ಮೋಹವಶನಾಗುವುದಿಲ್ಲ. ಅಂತ್ಯಕಾಲದಲ್ಲಿ ಕೂಡ ಈ ಸ್ಥಿತಿಯಲ್ಲಿಯೆ ಇರುವವನು ಬ್ರಹ್ಮನಿರ್ವಾಣವನ್ನು ಹೊಂದುತ್ತಾನೆ. ॥೭೨॥

ಓಂ ತತ್ಸತ್

ಈ ಬಗೆಯಾಗಿ ಶ್ರೀಮದ್ಭಗವದ್ಗೀತಾರೂಪ ಉಪನಿಷತ್ ಅಥವಾ
ಬ್ರಹ್ಮ ವಿದ್ಯಾಂತರ್ಗತ ಯೋಗಶಾಸ್ತ್ರದ ಶ್ರೀಕೃಷ್ಣಾರ್ಜುನ ಸಂವಾದದಲ್ಲಿ
ಸಾಂಖ್ಯಯೋಗವೆಂಬ ಎರಡನೆಯ ಅಧ್ಯಾಯ.

***

ಯಸ್ತ್ವಿಂದ್ರಿಯಾಣಿ ಮನಸಾ ನಿಯಮ್ಯಾರಭತೇಽರ್ಜುನ ।
ಕರ್ಮೇಂದ್ರಿಯೈಃ ಕರ್ಮಯೋಗಮಸಕ್ತಸ್ಸ ವಿಶಿಷ್ಯತೇ ॥೭॥

ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ ।
ಶರೀರಯಾತ್ರಾಽಪಿ ಚ ತೇ ನ ಪ್ರಸಿದ್ಧ್ಯೇದಕರ್ಮಣಃ ॥೮॥

ಟಿಪ್ಪಣಿ......ಉದಾಹರಣಾರ್ಥ. ಒಬ್ಬ ತನ್ನ ನಾಲಗೆ ಬಿಗಿಹಿಡಿದಾನು: ಆದರೆ ಮನಸ್ಸಿನಲ್ಲಿಯೇ ಇತರರನ್ನು ನಿಂದಿಸಬಹುದು. ಅವನು ನಿಷ್ಕರ್ಮಿಯಲ್ಲ, ಮಿಥ್ಯಾಚಾರಿ. ಹೀಗೆ ಹೇಳಿದರೆ, ಮನಸ್ಸನ್ನು ಬಿಗಿಹಿಡಿಯದಿರುವವರೆಗೆ ಶರೀರವನ್ನು ಬಿಗಿಹಿಡಿಯುವುದು ನಿರರ್ಥಕವೆಂದಲ್ಲ.

ಶರೀರವನ್ನು ವಶಪಡಿಸಿಕೊಳ್ಳದ ಹೊರತು ಮನಸ್ಸಿನ ಅಂಕೆ ಸಾಧ್ಯವಲ್ಲ. ಆದರೆ ಶರೀರವನ್ನು ನಿಗ್ರಹಿಸುವಾಗಲೇ ಮನಸ್ಸನ್ನೂ ವಶಪಡಿಕೊಳ್ಳುವ ಪ್ರಯತ್ನ ನಡೆಯಬೇಕು. ಭಯದಿಂದ ಅಥವಾ ಬೇರೆ ಬಾಹ್ಯ ಕಾರಣಗಳಿಂದ ಶರೀರವನ್ನು ಬಿಗಿಹಿಡಿದು ಮನಸ್ಸನ್ನು ಯಾರು ನಿಗ್ರಹಿಸರೋ, ಅಷ್ಟು ಮಾತ್ರವಲ್ಲದೆ ಮನಸ್ಸಿನಲ್ಲಿ ಆ ವಿಷಯವನ್ನು ಭೋಗಿಸುತ್ತ, ಅವಕಾಶ ದೊರೆತಾಗ ಶರೀರದಿಂದಲೂ ಅದನ್ನು ಭೋಗಿಸುತ್ತಾರೋ, ಅಂಥ ಮಿಥ್ಯಾಚಾರಿಗಳ ನಿಂದೆ ಮಾಡಿದೆ ಇಲ್ಲಿ. ಮುಂದಿನ ಶ್ಲೋಕ ಸ್ಪಷ್ಟವಾಗಿ ಇದಕ್ಕೆ ವಿರುದ್ಧ ಭಾವವನ್ನು ತೋರಿಸುತ್ತದೆ.

ಆದರೆ ಅರ್ಜುನ ! ಯಾರು ಮನಸ್ಸಿನಿಂದ ಇಂದ್ರಿಯಗಳನ್ನು ನಿರ್ಬಂಧಿಸಿ ನಿಸ್ಸಂಗಿಯಾಗಿ ಕರ್ಮೇಂದ್ರಿಯಗಳ ಮೂಲಕ ಕರ್ಮಯೋಗವನ್ನಾರಂಭಿಸುತ್ತಾನೋ ಅವನೇ ಶ್ರೇಷ್ಠ ಪುರುಷ. ॥೭॥

ಟಿಪ್ಪಣಿ–ಇದರಲ್ಲಿ ಬಹಿರಂಗ–ಅಂತರಂಗಗಳ ಮೇಳವನ್ನು ಸಾಧಿಸಲಾಗಿದೆ. ಮನಸ್ಸನ್ನು ಅಂಕೆಯಲ್ಲಿಟ್ಟಿದ್ದರೂ ಶರೀರದ ಮೂಲಕ ಎಂದರೆ ಕರ್ಮೇಂದ್ರಿಯಗಳ ಮೂಲಕ ಮನುಷ್ಯ ಏನಾದರೂ ಕೆಲಸ ಮಾಡಿಯೇ ಮಾಡುತ್ತಾನೆ. ಆದರೆ ಯಾರ ಮನಸ್ಸು ಸ್ವಾಧೀನವಲ್ಲಿದೆಯೋ ಅಂಥವನ ಕಿವಿ ದೂಷಣೆಯ ಮಾತನ್ನು ಕೇಳವು. ಈಶ್ವರ ಭಜನೆ ಕೇಳುತ್ತವೆ. ಸತ್ಪುರುಷರ ವಚನವನ್ನು ಕೇಳುತ್ತವೆ. ಯಾರ ಮನಸ್ಸು ಸ್ವಾಧೀನದಲ್ಲಿದೆಯೋ ಅಂಥವನು ವಿಷಯವಿಲಾಸಗಳಲ್ಲಿ ಮುಳುಗುವುದಿಲ್ಲ. ಅಂಥ ಮನುಷ್ಯ ಆತ್ಮ ಶೋಭೆಯನ್ನು ಹೆಚ್ಚಿಸುವ ಕೆಲಸವನ್ನೇ ಮಾಡುತ್ತಾನೆ. ಈ ಬಗೆಯ ಕರ್ಮ ಮಾಡುವುದೇ ಕರ್ಮಮಾರ್ಗ. ಯಾವುದರ ಮೂಲಕ ಆತ್ಮ ಶರೀರಬಂಧನದಿಂದ ಮುಕ್ತವಾಗುವ ಯೋಗ ಸಾಧಿಸುತ್ತದೆಯೋ ಅದೇ ಕರ್ಮಯೋಗ. ಇದರಲ್ಲಿ ವಿಷಯಾಸಕ್ತಿಗೆ ಸ್ಥಾನವೇ ಇರಲಾರದು.

ಆದುದರಿಂದ ನೀನು ನಿಯತಕರ್ಮವನ್ನು ಮಾಡು. ಕರ್ಮ ಮಾಡದಿರುವುದಕ್ಕಿಂತ ಕರ್ಮ ಮಾಡುವುದೇ ಬಹಳ ಮೇಲು. ಕರ್ಮ ಮಾಡದೆ ನಿನ್ನ ಶರೀರವ್ಯಾಪಾರ ಕೂಡ ನಡೆಯಲಾರದು. ॥೮॥

ಯಜ್ಞಾರ್ಥಾತ್ ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮ ಬಂಧನಃ ।
ತದರ್ಥಂ ಕರ್ಮ ಕೌಂತೇಯ ಮುಕ್ತಸಂಗಸ್ಸಮಾಚರ ॥೯॥

ಸಹಯಜ್ಞಾಃ ಪ್ರಜಾಸ್ಸೃಷ್ಟ್ವಾ ಪುರೋವಾಚ ಪ್ರಜಾಪತಿಃ ।
ಅನೇನ ಪ್ರಸವಿಷ್ಯಧ್ವಮೇಷವೋಽಸ್ತ್ವಿಷ್ಟಕಾಮಧುಕ್ ॥೧೦॥

ದೇವಾನ್ ಭಾವಯತಾಽನೇನ ತೇ ದೇವಾ ಭಾವಯಂತು ವಃ ।
ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ ॥೧೧॥

ಇಷ್ಟಾನ್ ಭೋಗಾನ್ ಹಿ ವೋ ದೇವಾ ದಾಸ್ಯಂತೇ ಯಜ್ಞಭಾವಿತಾಃ ।
ತೈರ್ದತ್ತಾನಪ್ರದಾಯ್ಯೆಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ ॥೧೨॥

ಟಿಪ್ಪಣಿ–ನಿಯತವೆಂಬ ಶಬ್ದ ಮೂಲ ಶ್ಲೋಕದಲ್ಲಿಯೇ ಇದೆ. ಅದು ಹಿಂದಿನ ಶ್ಲೋಕಕ್ಕೆ ಸಂಬಂಧಿಸಿದುದು. ಆ ಶ್ಲೋಕದಲ್ಲಿ, ಮನಸ್ಸಿನಿಂದ ಇಂದ್ರಿಯಗಳನ್ನು ಸಂಯಮದಲ್ಲಿಟ್ಟು, ಸಂಗರಹಿತನಾಗಿ (ಅನಾಸಕ್ತನಾಗಿ) ಕರ್ಮಮಾಡುವವನ ಸ್ತುತಿ ಮಾಡಿದೆ. ಈ ಶ್ಲೋಕದಲ್ಲಿ, ನಿಯತಕರ್ಮಗಳನ್ನು ಅಥವಾ ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ಮಾಡುವ ಕೆಲಸಗಳನ್ನು ಹೇಳಿದೆ.

ಯಜ್ಞಾರ್ಥವಾಗಿ ಮಾಡುವ ಕರ್ಮವಲ್ಲದೆ ಉಳಿದವುಗಳಿಂದ ಈ ಲೋಕದಲ್ಲಿ ಬಂಧನವುಂಟಾಗುತ್ತದೆ. ಆದುದರಿಂದ, ಕೌಂತೇಯ, ನೀನು ರಾಗರಹಿತನಾಗಿ ಯಜ್ಞಾರ್ಥ ಕರ್ಮ ಮಾಡು. ॥೯॥

ಟಿಪ್ಪಣಿ–ಯಜ್ಞವೆಂದರೆ ಪರೋಪಕಾರಾರ್ಥ, ಈಶ್ವರಾರ್ಥ ಮಾಡಿದ ಕರ್ಮ.

ಪ್ರಜಾಪತಿ ಬ್ರಹ್ಮ ಯಜ್ಞಸಹಿತ ಪ್ರಜೆಗಳನ್ನು ಸೃಷ್ಟಿಸಿ ಹೀಗೆ ಹೇಳಿದ: ಯಜ್ಞದ ಮೂಲಕ ಅಭಿವೃದ್ಧಿ ಹೊಂದಿರಿ. ಇದು ನಿಮಗೆ ಇಷ್ಟಿತ ಫಲ ಕೊಡಲಿ. ॥೧೦॥

ನೀವು ಯಜ್ಞದ ಮೂಲಕ ದೇವತೆಗಳ ಪೋಷಣೆಮಾಡಿ. ಅವರು ನಿಮ್ಮನ್ನು ಪೋಷಿಸಲಿ. ಹೀಗೆ ಪರಸ್ಪರ ಪೋಷಣೆಯಿಂದ ನಿಮಗೆ ಪರಮ ಕಲ್ಯಾಣವಾಗಲಿ. ಯಜ್ಞದಿಂದ ಸಂತುಷ್ಟರಾದ ದೇವತೆಗಳು ನಿಮಗೆ ಇಷ್ಟಿತ ಭೋಗವನ್ನು ಕೊಡುತ್ತಾರೆ. ಆದರೆ ಅವರಿಗೆ ಹಿಂತಿರುಗಿ ಏನನ್ನೂ ಕೊಡದೆ ಅವರು ಕೊಟ್ಟುದನ್ನು ಭೋಗಿಸುವವರು ಅವಶ್ಯವಾಗಿ ಕಳ್ಳರೇ ಸರಿ. ॥೧೧–೧೨॥

ಟಿಪ್ಪಣಿ–ಇಲ್ಲಿ ದೇವತೆಗಳೆಂದರೆ ಭೂತಮಾತ್ರ ಅಥವಾ ಈಶ್ವರನ ಸಮಗ್ರ ಸೃಷ್ಟಿ. ಭೂತಮಾತ್ರಗಳ ಸೇವೆಯೆ ದೇವತಾಸೇವೆ. ಅದೇ ಯಜ್ಞ.

ಉತ್ಸೀದೇಯುರಿಮೇ ಲೋಕಾ ನ ಕುರ್ಯಾಂ ಕರ್ಮ ಚೇದಹಮ್ ।
ಸಂಕರಸ್ಯ ಚ ಕರ್ತಾ ಸ್ಯಾಮುಪಹನ್ಯಾಮಿಮಾಃ ಪ್ರಜಾಃ ॥೨೪॥

ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾ ಕುರ್ವಂತಿ ಭಾರತ ।
ಕುರ್ಯಾದ್ವಿದ್ವಾಂಸ್ತಥಾಽಸಕ್ತಶ್ಚಿಕೀರ್ಷುರ್ಲೋಕಸಂಗ್ರಹಮ್ ॥೨೫॥

ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಮ್ ।
ಜೋಷಯೇತ್ಸರ್ವಕರ್ಮಾಣಿ ವಿದ್ವಾನ್ ಯುಕ್ತಸ್ಸಮಾಚರನ್ ॥೨೬॥

ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ ।
ಅಹಂಕಾರವಿಮೂಢಾತ್ಮಾ ಕರ್ತಾಽಹಮಿತಿ ಮನ್ಯತೇ ॥೨೭॥

ತತ್ತ್ವವಿತ್ತು ಮಹಾಬಾಹೋ ಗುಣಕರ್ಮವಿಭಾಗಯೋಃ ।
ಗುಣಾ ಗುಣೇಷು ವರ್ತಂತ ಇತಿ ಮತ್ವಾ ನ ಸಜ್ಜತೇ ॥೨೮॥

ನಾನು ಕರ್ಮ ಮಾಡದಿದ್ದರೆ ಈ ಲೋಕಗಳು ಭ್ರಷ್ಟವಾಗುತ್ತವೆ. ಅವ್ಯವಸ್ಥೆಗೆ ಕಾರಣನಾಗಿ ನಾನು ಈ ಪ್ರಜೆಗಳ ನಾಶಮಾಡಿದಂತಾಗುತ್ತದೆ. ॥೨೪॥

ಭಾರತ, ಅಜ್ಞಾನಿಗಳು ಆಸಕ್ತರಾಗಿ ಕೆಲಸಮಾಡುವಂತೆಯೆ ಜ್ಞಾನಿಗಳು ಆಸಕ್ತಿಯಿಲ್ಲದೆ ಕೇವಲ ಲೋಕಕಲ್ಯಾಣದ ಇಚ್ಛೆಯಿಂದ ಕೆಲಸಮಾಡಬೇಕು. ॥೨೫॥

ಕರ್ಮದಲ್ಲಿ ಆಸಕ್ತರಾದ ಅಜ್ಞಾನಿಗಳ ಬುದ್ಧಿಯಲ್ಲಿ ಜ್ಞಾನಿಗಳು ಭೇದವನ್ನು ಹುಟ್ಟಿಸದೆ ಎಲ್ಲ ಕೆಲಸಗಳನ್ನೂ ತಾವು ಸಮತ್ವದಿಂದ ಮಾಡುತ್ತ ಅವರೂ ಎಲ್ಲ ಕೆಲಸಗಳನ್ನೂ ಮಾಡುವಂತೆ ಪ್ರೇರೇಪಿಸಬೇಕು.

ಪ್ರಕೃತಿಯ ಗುಣಗಳ ಮೂಲಕ ಎಲ್ಲ ಕರ್ಮವೂ ನಡೆಯುತ್ತಿದೆ. ಅಹಂಕಾರದಿಂದ ಮೂಢನಾದ ಮನುಷ್ಯ 'ನಾನೇ ಕರ್ತೃ' ಎಂದು ತಿಳಿಯುತ್ತಾನೆ.

ಮಹಾಬಾಹು, ಗುಣಕರ್ಮಗಳ ವಿಭಾಗದ ರಹಸ್ಯವನ್ನರಿತ ಪುರುಷ 'ಗುಣ ತನ್ನ ಕೆಲಸಮಾಡುತ್ತಲಿದೆ' ಎಂದು ತಿಳಿದು ಅದರಲ್ಲಿ ಆಸಕ್ತನಾಗನು. ॥೨೮॥

ಟಿಪ್ಪಣಿ–ಶ್ವಾಸೋಚ್ಛ್ವಾಸಾದಿ ಕ್ರಿಯೆಗಳು ಸಹಜವಾಗಿ ಆಗುತ್ತಿರುವುದರಿಂದ ಅದರಲ್ಲಿ ಮನುಷ್ಯ ಆಸಕ್ತನಾಗಿಲ್ಲ. ಆದರೆ ಶರೀರದ ಒಂದು ಭಾಗಕ್ಕೆ ರೋಗ ಬಂದರೆ ಮನುಷ್ಯ ಅದರ ಚಿಂತೆ ಮಾಡ ಬೇಕಾಗುತ್ತದೆ. ಆಗ ಅವನಿಗೆ ಆ ಅಂಗದ ಅರಿವಾಗುತ್ತದೆ. ಹಾಗೆ ಸ್ವಾಭಾವಿಕ ಕರ್ಮಗಳು ತಾವಾಗಿ ನಡೆವಾಗ ಅವುಗಳಲ್ಲಿ ಆಸಕ್ತಿಯಿರುವುದಿಲ್ಲ. ಉದಾರ ಸ್ವಭಾವದವನಿಗೆ ತನ್ನ ಸ್ವಭಾವ ಉದಾರವೆಂಬುದೇ ಗೊತ್ತಿರುವುದಿಲ್ಲ. ದಾನ ಮಾಡದಿದ್ದರೆ ಅವನ ಮನಸ್ಸಿಗೆ ಹಿತವಿಲ್ಲ. ಈ ಬಗೆಯ ಅನಾಸಕ್ತಿ ಅಭ್ಯಾಸ, ಈಶ್ವರ ಕೃಪೆಗಳಿಂದ ಮಾತ್ರ ಲಭ್ಯ

ಪ್ರಕೃತೇರ್ಗುಣಸಂಮೂಢಾಃ ಸಜ್ಜಂತೇ ಗುಣಕರ್ಮಸು ।
ತಾನಕೃತ್ಸ್ನವಿದೋ ಮಂದಾನ್ ಕೃತ್ಸ್ನವಿನ್ನ ವಿಚಾಲಯೇತ್ ॥೨೯॥

ಮಯಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯಾಧ್ಯಾತ್ಮಚೇತಸಾ ।
ನಿರಾಶೀರ್ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ ॥೩೦॥

ಯೇ ಮೇ ಮತಮಿದಂ ನಿತ್ಯಮನುತಿಷ್ಠಂತಿ ಮಾನವಾಃ ।
ಶ್ರದ್ಧಾವಂತೋಽನಸೂಯಂತೋ ಮುಚ್ಯಂತೇ ತೇಽಪಿ ಕರ್ಮಭಿಃ ॥೩೧॥

ಯೇ ತ್ವೇತದಭ್ಯಸೂಯಂತೋ ನಾನುತಿಷ್ಠಂತಿ ಮೇ ಮತಮ್ ।
ಸರ್ವಜ್ಞಾನವಿಮೂಢಾಂಸ್ತಾನ್ ವಿದ್ಧಿನಷ್ಟಾನಚೇತಸಃ ॥೩೨॥

ಸದೃಶಂ ಚೇಷ್ಟತೇ ಸ್ವಸ್ಯಾಃ ಪ್ರಕೃತೇರ್ಜ್ಞಾನವಾನಪಿ ।
ಪ್ರಕೃತಿಂ ಯಾಂತಿ ಭೂತಾನಿ ನಿಗ್ರಹಃ ಕಿಂ ಕರಿಷ್ಯತಿ ॥೩೩॥

ಪ್ರಕೃತಿಯ ಗುಣಗಳಿಂದ ಮೋಹಿತರಾದ ಮನುಷ್ಯರು ತ್ರಿಗುಣಗಳ ಕರ್ಮಗಳಲ್ಲಿ ಆಸಕ್ತರಾಗುತ್ತಾರೆ. ಇಂಥ ಅಜ್ಞಾನಿ, ಮಂದಬುದ್ಧಿಗಳನ್ನು ಜ್ಞಾನಿಗಳು ಅಸ್ಥಿರರಾಗಿ ಮಾಡಕೂಡದು. ॥೨೯॥

ಅಧ್ಯಾತ್ಮವೃತ್ತಿಯನ್ನು ಧಾರಣೆಮಾಡಿ, ಎಲ್ಲ ಕರ್ಮಗಳನ್ನೂ ನನಗೆ ಅರ್ಪಿಸಿ, ಆಸಕ್ತಿ–ಮಮತ್ವಗಳನ್ನು ಬಿಟ್ಟು ರಾಗರಹಿತನಾಗಿ ನೀನು ಯುದ್ಧ ಮಾಡು. ॥೩೦॥

ಟಿಪ್ಪಣಿ–ದೇಹದಲ್ಲಿರುವ ಆತ್ಮವನ್ನು ಗುರುತಿಸಿ, ಅದನ್ನು ಪರಮಾತ್ಮನ ಅಂಶವೆಂದು ತಿಳಿದವನು ತಾನು ಮಾಡಿದುದನ್ನೆಲ್ಲ–ಒಡೆಯನ ಬಲದಿಂದ ಕಾರ್ಯವನ್ನು ನಿರ್ವಹಿಸಿ ಸೇವಕ ತನ್ನ ಸರ್ವಸ್ವವನ್ನೂ ಒಡೆಯನಿಗೆ ಅರ್ಪಿಸುವಂತೆ–ಪರಮಾತ್ಮನಿಗೇ ಅರ್ಪಿಸುತ್ತಾನೆ.

ಶ್ರದ್ಧೆಯನ್ನಿಟ್ಟು, ದ್ವೇಷ ಬಿಟ್ಟು, ನನ್ನ ಈ ಮಾತಿನಂತೆ ಯಾರು ನಡೆಯುತ್ತಾರೋ ಅವರು ಕರ್ಮಬಂಧನದಿಂದ ಮುಕ್ತರಾಗುತ್ತಾರೆ.

ಆದರೆ ಯಾರು ನನ್ನೀ ಮಾತಿನಲ್ಲಿ ದೋಷ ಬಗೆಯುತ್ತ ನನ್ನ ಮಾತಿನಂತೆ ಆಚರಿಸರೋ ಅವರು ಜ್ಞಾನಹೀನ ಮೂರ್ಖರು. ಅವರ ನಾಶ ಖಂಡಿತ, ತಿಳಿದುಕೋ. ॥೩೨॥

ಜ್ಞಾನಿಗಳೂ ತಮ್ಮ ಸ್ವಭಾವಕ್ಕನುಸಾರವಾಗಿ ನಡೆಯುತ್ತಾರೆ. ಪ್ರಾಣಿಗಳೂ ತಮ್ಮ ತಮ್ಮ ಸ್ವಭಾವದಂತೆ ನಡೆಯುತ್ತವೆ. ಇದರಲ್ಲಿ ಒತ್ತಾಯವೇನು ಮಾಡಬಲ್ಲದು? ॥೩೩॥

ತಸ್ಮಾತ್ ತ್ವಮಿಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ ।
ಪಾಪ್ಮಾನಂ ಪ್ರಜಹಿ ಹ್ಯೇನಂ ಜ್ಞಾನವಿಜ್ಞಾನನಾಶನಮ್ ॥೪೧॥

ಇಂದ್ರಿಯಾಣಿ ಪರಾಣ್ಯಾಹುರಿಂದ್ರಿಯೇಭ್ಯಃ ಪರಂ ಮನಃ ।
ಮನಸಸ್ತು ಪರಾಬುದ್ಧಿರ್ಯೋ ಬುದ್ಧೇಃ ಪರತಸ್ತು ಸಃ ॥೪೨॥

ಏವಂ ಬುದ್ಧೇಃ ಪರಂ ಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ ।
ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಮ್ ॥೪೩॥

ಹರಿಃ ಓಂ ತತ್ಸತ್

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ಕರ್ಮಯೋಗೋ ನಾಮ ತೃತೀಯೋಽಧ್ಯಾಯಃ ॥

ಟಿಪ್ಪಣಿ–ಇಂದ್ರಿಯಗಳಲ್ಲಿ ಕಾಮ ತುಂಬುವುದರಿಂದ ಮನಸ್ಸು ಮಲಿನವಾಗುತ್ತದೆ, ವಿವೇಕಶಕ್ತಿ ಮಂದವಾಗುತ್ತದೆ. (ಅ. ೨. ಶ್ಲೋಕ ೬೨–೬೪ ನೋಡಿ).

ಆದುದರಿಂದ ಭರತವರ್ಷ, ಎಲ್ಲಕ್ಕೂ ಮೊದಲು ನೀನು ಇಂದ್ರಿಯಗಳನ್ನು ಸ್ವಾಧೀನಪಡಿಸಿಕೊಂಡು ಜ್ಞಾನ, ಅನುಭವಗಳನ್ನು ನಾಶಗೊಳಿಸುವ ಈ ಪಾಪಿಯನ್ನು ಅವಶ್ಯವಾಗಿ ತ್ಯಜಿಸು. ॥೪೧॥

ಇಂದ್ರಿಯಗಳು ಸೂಕ್ಷ್ಮ. ಅವಕ್ಕಿಂತ ಮನಸ್ಸು ಸೂಕ್ಷ್ಮ. ಮನಸ್ಸಿಗಿಂತಲೂ ಬುದ್ಧಿ ಹೆಚ್ಚು ಸೂಕ್ಷ್ಮ. ಬುದ್ಧಿಗಿಂತಲೂ ಆತ್ಮ ಅತಿಶಯ ಸೂಕ್ಷ್ಮ. ॥೪೨॥

ಟಿಪ್ಪಣಿ–ಆದುದರಿಂದ ಇಂದ್ರಿಯಗಳು ವಶದಲ್ಲಿದ್ದರೆ, ಸೂಕ್ಷ್ಮ ಕಾಮವನ್ನು ಗೆಲ್ಲುವುದು ಸುಲಭ.

ಈ ಬಗೆಯಾಗಿ ಬುದ್ಧಿಗೆ ಅತೀತವಾದ ಆತ್ಮವನ್ನು ಅರಿತು ಆತ್ಮದ ಮೂಲಕ ಮನಸ್ಸನ್ನು ವಶಪಡಿಸಿಕೊಂಡು, ಕಾಮರೂಪವಾದ ದುರ್ಜಯ ಶತ್ರುವನ್ನು ನೀನು ಸಂಹರಿಸು. ॥೪೩॥

ಟಿಪ್ಪಣಿ–ಮನುಷ್ಯ ತನ್ನ ದೇಹದಲ್ಲಿರುವ ಆತ್ಮವನ್ನರಿತರೆ ಮನಸ್ಸು ಅವನ ವಶವಾದೀತೇ ವಿನಾ ಇಂದ್ರಿಯಗಳ ವಶವಾಗದು. ಮನಸ್ಸನ್ನು ಗೆದ್ದ ನಂತರ ಕಾಮವೇನು ಮಾಡಬಲ್ಲದು?

ಓಂ ತತ್ಸತ್

ಈ ಬಗೆಯಾಗಿ ಶ್ರೀಮದ್ಭಗವದ್ಗೀತಾರೂಪ ಉಪನಿಷತ್ ಅಥವಾ
ಬ್ರಹ್ಮ ವಿದ್ಯಾಂತರ್ಗತ ಯೋಗಶಾಸ್ತ್ರದ ಶ್ರೀ ಕೃಷ್ಣಾರ್ಜುನಸಂವಾದದಲ್ಲಿ ಕರ್ಮಯೋಗವೆಂಬ
ಮೂರನೆಯ ಅಧ್ಯಾಯ.

***

ಅಧ್ಯಾಯ ೪

ಜ್ಞಾನ-ಕರ್ಮ-ಸಂನ್ಯಾಸಯೋಗ

[ಈ ಅಧ್ಯಾಯದಲ್ಲಿ ಮೂರನೆಯ ಅಧ್ಯಾಯದ ವಿಶೇಷ ವಿವೇಚನೆ ಅಡಗಿದೆ. ಭಿನ್ನ ಭಿನ್ನ ಪ್ರಕಾರದ ಕೆಲವು ಯಜ್ಞಗಳ ವರ್ಣನೆಯೂ ಇದೆ.]

ಅಥ ಚತುರ್ಥೋऽಧ್ಯಾಯಃ

ಶ್ರೀ ಭಗವಾನುವಾಚ

ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹಮವ್ಯಯಮ್ ।
ವಿವಸ್ವಾನ್ ಮನವೇ ಪ್ರಾಹ ಮನುರಿಕ್ಷ್ವಾಕವೇऽಬ್ರವೀತ್ ॥೧॥

ಏವಂ ಪರಂಪರಾಪ್ರಾಪ್ತಮಿಮಂ ರಾಜರ್ಷಯೋ ವಿದುಃ ।
ಸ ಕಾಲೇನೇಹ ಮಹತಾ ಯೋಗೋ ನಷ್ಟಃ ಪರಂತಪ ॥೨॥

ಸ ಏವಾಯಂ ಮಯಾ ತೇऽದ್ಯ ಯೋಗಃ ಪ್ರೋಕ್ತಃ ಪುರಾತನಃ ।
ಭಕ್ತೋऽಸಿ ಮೇ ಸಖಾ ಚೇತಿ ರಹಸ್ಯಂ ಹ್ಯೇತದುತ್ತಮಮ್ ॥೩॥

ಶ್ರೀ ಭಗವಂತ :

ಅವಿನಾಶಿಯಾದ ಈ ಯೋಗವನ್ನು ನಾನು ವಿವಸ್ವಾನ್ ಸೂರ್ಯನಿಗೆ ಹೇಳಿದೆ. ಅವನು ಮನುವಿಗೆ ಹೇಳಿದ. ಮನು ಇಕ್ಷ್ವಾಕುವಿಗೆ ಹೇಳಿದ. ॥೧॥

ಈ ರೀತಿ ಪರಂಪರೆಯಿಂದ ಬಂದಿರುವ, ರಾಜರ್ಷಿಗಳು ತಿಳಿದುಕೊಂಡು ಇರುವ, ಈ ಯೋಗ ದೀರ್ಘಕಾಲವಾದುದರಿಂದ ಅಳಿದುಹೋಗಿದೆ. ॥೨॥

ಅದೇ ಪುರಾತನಯೋಗವನ್ನು ನಾನು ಇಂದು ನಿನಗೆ ಹೇಳಿದ್ದೇನೆ. ಏಕೆಂದರೆ, ನೀನು ನನ್ನ ಭಕ್ತ, ಸಖಿ. ಈ ಯೋಗವೋ ಉತ್ತಮ ರಹಸ್ಯ. ॥೩॥

ಅಪರಂ ಭವತೋ ಜನ್ಮ ಪರಂ ಜನ್ಮ ವಿವಸ್ವತಃ ।
ಕಥಮೇತದ್ವಿಜಾನೀಯಾಂ ತ್ವಮಾದೌ ಪ್ರೋಕ್ತವಾನಿತಿ ॥೪॥

ಶ್ರೀ ಭಗವಾನುವಾಚ

ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ ।
ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ ॥೫॥

ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್ ।
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥೬॥

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥೭॥

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥೮॥

ಅರ್ಜುನ :

ನೀನು ಈಗ ಹುಟ್ಟಿರುವವನು. ವಿವಸ್ವಾನನು ಹಿಂದೆಯೇ ಆಗಿಹೋದ. ಹೀಗಿರುವಾಗ ಈ ಯೋಗವನ್ನು ನೀನು ಹಿಂದೆಯೇ ಹೇಳಿದೆಯೆಂದು ನಾನು ಹೇಗೆ ತಿಳಿಯಲಿ ? ॥೪॥

ಶ್ರೀ ಭಗವಂತ :

ಅರ್ಜುನ ! ನನಗೂ ನಿನಗೂ ಅನೇಕ ಜನ್ಮಗಳಾಗಿವೆ. ನಾನು ಅವೆಲ್ಲವನ್ನೂ ಬಲ್ಲೆ. ನೀನು ಅರಿಯೆ. ॥೫॥

ನಾನು ಜನ್ಮರಹಿತ, ಅವಿನಾಶಿ, ಅಲ್ಲದೆ ಭೂತಮಾತ್ರಗಳಿಗೆ ಸ್ವಾಮಿ, ಆದರೂ ನನ್ನ ಸ್ವಭಾವದ ದೆಸೆಯಿಂದ ಮಾಯಾಬಲದ ಮೂಲಕ ಜನ್ಮಧಾರಣೆ ಮಾಡುತ್ತಿದ್ದೇನೆ. ॥೬॥

ಭಾರತ ! ಯಾವ ಕಾಲದಲ್ಲಿ ಧರ್ಮ ಮಂದವಾಗಿ ಅಧರ್ಮ ಪ್ರಬಲವಾಗುತ್ತದೋ ಆಗ ನಾನು ಜನಿಸುತ್ತೇನೆ. ॥೭॥

ಸಾಧುಗಳ ರಕ್ಷಣೆ, ದುಷ್ಟರ ನಾಶ, ಧರ್ಮದ ಪುನರುದ್ಧಾರಗಳಿಗಾಗಿ ಯುಗ ಯುಗದಲ್ಲಿಯೂ ನಾನು ಹುಟ್ಟುತ್ತೇನೆ. ॥೮॥

ನ್ಮ ಕರ್ಮ ಚ ಮೇ ದಿವ್ಯಮೇವಂ ಯೋ ವೇತ್ತಿ ತತ್ತ್ವತಃ ।
ಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ ॥೯॥

ೀತರಾಗಭಯಕ್ರೋಧಾ ಮನ್ಮಯಾ ಮಾಮುಪಾಶ್ರಿತಾಃ ।
ಹವೋ ಜ್ಞಾನತಪಸಾ ಪೂತಾ ಮದ್ಭಾವಮಾಗತಾಃ ॥೧೦॥

ೀ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್ ।
ಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥೧೧॥

ಟಿಪ್ಪಣಿ-ಶ್ರದ್ಧಾವಂತನಿಗೆ ಇದು ಆಶ್ವಾಸನ, ಸತ್ಯದ-ಧರ್ಮದ-ಅವಿಚಲತೆಯ ಗ್ಗೆ ಮಾಡಿದ ಪ್ರತಿಜ್ಞೆ ಈ ಜಗತ್ತಿನಲ್ಲಿ ಏರಿಳಿತಗಳು ಇದ್ದೇ ಇವೆ.ಆದರೆ ಕೊನೆಯಲ್ಲಿ ಧರ್ಮಕ್ಕೇ ಯವಾಗುತ್ತದೆ. ಸಂತರಿಗೆ ನಾಶವಿಲ್ಲ. ದುಷ್ಟರ ನಾಶ ನಿಶ್ಚಯ. ಏಕೆಂದರೆ ಅಸತ್ಯಕ್ಕೆ ಸ್ತಿತ್ವವೇ ಇಲ್ಲ. ಇದನ್ನು ತಿಳಿದು ಮನುಷ್ಯ ತಾನೇ ಸ್ವಯಂಕರ್ತನೆಂದು ಭಾವಿಸಿ ಕೊಂಡು ಭಿಮಾನವಶನಾಗಿ ಹಿಂಸೆ ಮಾಡದಿರಲಿ, ದುರಾಚಾರ ಮಾಡದಿರಲಿ. ಈಶ್ವರನ ಗಹನ ಾಯೆ ತನ್ನ ಕೆಲಸವನ್ನು ಮಾಡುತ್ತಲೇ ಇರುತ್ತದೆ. ಇದೇ ಅವತಾರ. ಈಶ್ವರನ ಜನ್ಮ. ಸ್ತುತಃ, ಈಶ್ವರನ ಜನ್ಮಧಾರಣೆ ಆಗುವುದೇ ಇಲ್ಲ.

ಅರ್ಜುನ, ನನ್ನ ಈ ದಿವ್ಯ ಜನ್ಮ ಕರ್ಮಗಳ ರಹಸ್ಯವನ್ನರಿತವನು, ದೇಹತ್ಯಾಗ ಾಡಿದನಂತರ, ಮತ್ತೆ ಜನ್ಮಪಡೆಯದೆ ನನ್ನನ್ನು ಸೇರುತ್ತಾನೆ. ॥೯॥

ಟಿಪ್ಪಣಿ-ಏಕೆಂದರೆ, ಈಶ್ವರ ಸತ್ಯವನ್ನೇ ಗೆಲ್ಲಿಸುತ್ತಾನೆಂದು ಮನುಷ್ಯನಿಗೆ ದೃಢ ಶ್ವಾಸವುಂಟಾದರೆ, ಅವನು ಸತ್ಯವನ್ನು ಬಿಡ. ಧೈರ್ಯ ತಳೆದು ದುಃಖವನ್ನು ಸಹಿಸುತ್ತಾನೆ. ುಮತಾರಹಿತನಾದುದರಿಂದ ಅವನು ಜನನ-ಮರಣಗಳ ಸುಳಿಯಿಂದ ಮುಕ್ತನಾಗಿ ಈಶ್ವರನ ಧ್ಯಾನವನ್ನೇ ಮಾಡುತ್ತ ಅವನಲ್ಲಿಯೇ ಲೀನನಾಗುತ್ತಾನೆ.

ರಾಗ, ಭಯ, ಕ್ರೋಧರಹಿತನಾಗಿ, ನನ್ನ ಧ್ಯಾನದಲ್ಲಿಯೇ ಮಗ್ನರಾಗಿ, ನನ್ನ ೊರೆಹೊಕ್ಕು ಜ್ಞಾನರೂಪ ತಪಸ್ಸಿನಿಂದ ಪವಿತ್ರರಾದ ಅನೇಕರು ನನ್ನ ಸ್ವರೂಪವನ್ನು ಹೊಂದಿದ್ದಾರೆ. ॥೧೦॥

ಯಾರು ಯಾವ ರೀತಿ ನನ್ನ ಆಶ್ರಯ ಪಡೆಯುತ್ತಾರೋ ಆ ರೀತಿಯ ಫಲವನ್ನೇ ಾನು ಅವರಿಗೆ, ಕೊಡುತ್ತೇನೆ. ಯಾವ ರೀತಿಯಿಂದಲೆ ಆಗಲಿ, ಅರ್ಜುನ, ಮನುಷ್ಯರು ನನ್ನ ಮಾರ್ಗವನ್ನೇ ಅನುಸರಿಸುತ್ತಾರೆ. ನನ್ನ ಶಾಸನಕ್ಕೆ ಅಧೀನರಾಗಿರುತ್ತಾರೆ. ॥೧೧॥

ಟಿಪ್ಪಣಿ-ಅರ್ಥಾತ್ ಯಾರೂ ಈಶ್ವರೀಯ ನಿಯಮವನ್ನು ಉಲ್ಲಂಘಿಸಲಾರರು. ಿತ್ತಿದಂತೆ ಬೆಳೆ, ಕಾರ್ಯಕ್ಕೆ ತಕ್ಕ ಫಲ. ಈಶ್ವರೀಯ ನಿಯಮಕ್ಕೆ-ಕರ್ಮನಿಯಮಕ್ಕೆ- ಅಪವಾದವಿಲ್ಲ. ಎಲ್ಲರಿಗೂ ಸಮಾನವಾಗಿ, ಅವರವರ ಯೋಗ್ಯತಾನುಸಾರ ನ್ಯಾಯ ಲಭಿಸುತ್ತದೆ.

ಕಾಂಕ್ಷಂತಃ ಕರ್ಮಣಾಂ ಸಿದ್ಧಿಂ ಯಜಂತ ಇಹ ದೇವತಾಃ ।
ಕ್ಷಿಪ್ರಂ ಹಿ ಮಾನುಷೇ ಲೋಕೇ ಸಿದ್ಧಿರ್ಭವತಿ ಕರ್ಮಜಾ ॥೧೨॥

ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ।
ತಸ್ಯ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಮ್ ॥೧೩॥

ನ ಮಾಂ ಕರ್ಮಾಣಿ ಲಿಂಪಂತಿ ನ ಮೇ ಕರ್ಮಫಲೇ ಸ್ಪೃಹಾ ।
ಇತಿ ಮಾಂ ಯೋಽಭಿಜಾನಾತಿ ಕರ್ಮಭಿರ್ನ ಸ ಬಧ್ಯತೇ ॥೧೪॥

ಏವಂ ಜ್ಞಾತ್ವಾ ಕೃತಂ ಕರ್ಮ ಪೂರ್ವೈರಪಿ ಮುಮುಕ್ಷುಭಿಃ ।
ಕುರು ಕರ್ಮೈವ ತಸ್ಮಾತ್ತ್ವಂ ಪೂರ್ವೈಃ ಪೂರ್ವತರಂ ಕೃತಮ್ ॥೧೫॥

ಕರ್ಮಸಿದ್ಧಿಯನ್ನಪೇಕ್ಷಿಸುವವರು ಈ ಲೋಕದಲ್ಲಿ ದೇವತೆಗಳನ್ನು ಪೂಜಿಸುತ್ತಾರೆ. ಆದುದರಿಂದ ಅವರ ಕರ್ಮಜನ್ಯ ಫಲ ಕೂಡಲೆ ಈ ಮನುಷ್ಯ ಲೋಕದಲ್ಲಿಯೇ ಲಭಿಸುತ್ತವೆ. ॥೧೨॥

ಟಿಪ್ಪಣಿ–ದೇವತೆಗಳೆಂದರೆ ಈಶ್ವರನ ಅಂಶರೂಪ ಶಕ್ತಿ. ಈ ಅರ್ಥದಲ್ಲಿ ಮನುಷ್ಯನೂ ದೇವತೆಯೆ. ಹಬೆ, ಮಿಂಚು ಮುಂತಾದ ದೊಡ್ಡ ದೊಡ್ಡ ಶಕ್ತಿಗಳೂ ದೇವತೆಗಳೇ. ಇವುಗಳ ಆರಾಧನೆಯ ಫಲ ಒಡನೆಯೆ ಈ ಲೋಕದಲ್ಲಿಯೇ ಲಭಿಸುವುದನ್ನು ನಾವು ನೋಡುತ್ತೇವೆ. ಈ ಫಲ ಕ್ಷಣಿಕ. ಇದರಿಂದ ಆತ್ಮನಿಗೆ ಸಂತೋಷವಾಗದು. ಇನ್ನು ಇದರಿಂದ ಮೋಕ್ಷ ಹೇಗೆ ಲಭಿಸಬೇಕು?

ಗುಣ, ಕರ್ಮ ವಿಭಾಗಾನುಸಾರ ನಾನು ನಾಲ್ಕು ವರ್ಣಗಳನ್ನು ಸೃಷ್ಟಿಸಿದ್ದೇನೆ. ನಾನು ಅವುಗಳ ಕರ್ತೃವಾಗಿದ್ದರೂ, ನಾನು ಅವಿನಾಶಿ, ಅಕರ್ತೃ ಎಂದು ನೀನು ತಿಳಿ. ॥೧೩॥

ಕರ್ಮಗಳು ನನ್ನನ್ನು ಸ್ಪರ್ಶಿಸವು. ಅವುಗಳ ಫಲದಲ್ಲಿ ನನಗೆ ಲಾಲಸೆ ಇಲ್ಲ. ಈ ಬಗೆಯಾಗಿ ನನ್ನನ್ನು ಚೆನ್ನಾಗಿ ಅರಿತುಕೊಂಡವನನ್ನು ಕರ್ಮ ಬಂಧಿಸದು. ॥೧೪॥

ಟಿಪ್ಪಣಿ–ಏಕೆಂದರೆ, ಕರ್ಮವನ್ನು ಮಾಡುತ್ತಿದ್ದರೂ ಅಕರ್ಮಿಯಾಗಿರುವ ಸರ್ವೋತ್ತಮ ದೃಷ್ಟಾಂತ ಮನುಷ್ಯನೆದುರಿಗಿದೆ. ಅಲ್ಲದೆ ಪ್ರತಿಯೊಂದು ಕೆಲಸಕ್ಕೂ ಈಶ್ವರನೇ ಕರ್ತ. ನಾವು ಕೇವಲ ನಿಮಿತ್ತಮಾತ್ರ. ಹೀಗಿರುವಾಗ ನಾವು ಕರ್ತೃತ್ವದ ಅಭಿಮಾನವನ್ನೇಕೆ ತಳೆಯಬೇಕು?

ಇದನ್ನು ತಿಳಿದವರಾಗಿ ಪೂರ್ವಕಾಲದ ಮುಮುಕ್ಷುಗಳು ಕರ್ಮವನ್ನು ಮಾಡಿದರು. ಆದುದರಿಂದ ಪೂರ್ವಜರು ಹೇಗೆ ಯಾವಾಗಲೂ ಮಾಡುತ್ತಾ ಬಂದರೋ ನೀನೂ ಹಾಗೆ ಮಾಡು. ॥೧೫॥

ಂ ಕರ್ಮ ಕಿಮಕರ್ಮೇತಿ ಕವಯೋಽಪ್ಯತ್ರ ಮೋಹಿತಾಃ ।
ತ್ತೇ ಕರ್ಮ ಪ್ರವಕ್ಷ್ಯಾಮಿ ಯಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥೧೬॥

ರ್ಮಣೋ ಹ್ಯಪಿ ಬೋದ್ಧವ್ಯಂ ಬೋದ್ಧವ್ಯಂ ಚ ವಿಕರ್ಮಣಃ ।
ಕರ್ಮಣಶ್ಚ ಬೋದ್ಧವ್ಯಂ ಗಹನಾ ಕರ್ಮಣೋ ಗತಿಃ ॥೧೭॥

ರ್ಮಣ್ಯಕರ್ಮ ಯಃ ಪಶ್ಯೇದಕರ್ಮಣಿ ಚ ಕರ್ಮ ಯಃ ।
ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್ ॥೧೮॥

ಕರ್ಮವಾವುದು ಅಕರ್ಮವಾವುದು ಎಂಬೀ ವಿಷಯದಲ್ಲಿ ತಿಳಿದವರು ಕೂಡ ೋಹವಶರಾಗಿದ್ದಾರೆ. ಈ ಕರ್ಮ ವಿಚಾರವನ್ನು ನಾನು ನಿನಗೆ ಸರಿಯಾಗಿ ತಿಳಿಸುತ್ತೇನೆ. ದನ್ನರಿತು ನೀನು ಅಶುಭದಿಂದ ಪಾರಾಗುತ್ತೀ. ॥೧೬॥

ಕರ್ಮ, ನಿಷಿದ್ಧ ಕರ್ಮ, ಅಕರ್ಮ-ಇವುಗಳ ಭೇದವನ್ನು ಅರಿಯಬೇಕು. ರ್ಮದ ಗತಿ ಗೂಢ. ॥೧೭॥

ಕರ್ಮದಲ್ಲಿ ಅಕರ್ಮವನ್ನು, ಅಕರ್ಮದಲ್ಲಿ ಕರ್ಮವನ್ನು ಕಾಣುವವನು ಲೋಕದಲ್ಲಿ ಾಣನೆನಿಸುತ್ತಾನೆ. ಅವನೇ ಯೋಗಿ. ಅವನೇ ಸಂಪೂರ್ಣ ಕರ್ಮ ಮಾಡುವವನು. ॥೧೮॥

ಟಿಪ್ಪಣಿ-ಕರ್ಮವನ್ನು ಮಾಡುತ್ತಿದ್ದರೂ ಯಾರು ಕರ್ತೃತ್ವದ ಅಭಿಮಾನ ತಳೆ ಯುವುದಿಲ್ಲವೋ, ಅವನ ಕರ್ಮ ಅಕರ್ಮ. ಬಹಿರಂಗವಾಗಿ ಕರ್ಮತ್ಯಾಗ ಮಾಡುತ್ತಿದ್ದರೂ ಮನಸ್ಸಿನಲ್ಲಿ ಯಾರು ಕರ್ತೃತ್ವದ ಅಭಿಮಾನ ತಳೆಯುವುದಿಲ್ಲವೋ, ಅವನ ಕರ್ಮ ಅಕರ್ಮ. ಬಹಿರಂಗವಾಗಿ ಕರ್ಮತ್ಯಾಗಮಾಡುತ್ತಿದ್ದರೂ ಮನಸ್ಸಿನಲ್ಲಿ ಯಾರು ಮಹಲನ್ನು ಟ್ಟುತ್ತಾನೋ ಅವನ ಅಕರ್ಮವೂ ಕರ್ಮವೆ. ಪಾರ್ಶ್ವ ವಾಯುವಾದವನು ಇಚ್ಛಾ ಪೂರ್ವಕ-ಅಭಿಮಾನಪೂರ್ವಕ-ನಿಶ್ಚೇಷ್ಟ ಅಂಗವನ್ನು ಅಲ್ಲಾಡಿಸಿದಾಗಲೇ ಅದು ಅಲ್ಲಾಡುತ್ತದೆ. ಅವನು ಆ ವಾಯುಬಡಿದ ಅಂಗವನ್ನಲ್ಲಾಡಿಸುವ ಕ್ರಿಯೆಯ ಕರ್ತೃ ಾದ. ಆತ್ಮದಗುಣ ಅಕರ್ತೃವಿನ ಗುಣ. ಯಾರು ಭ್ರಮೆಯಿಂದ ತಾನೇ ಕರ್ತೃವೆಂದು ಾವಿಸುತ್ತಾನೋ ಅವನ ಆತ್ಮಕ್ಕೆ ಪಾರ್ಶ್ವ ವಾಯು ಆಗಿದೆಯೆಂದು ತಿಳಿಯಬೇಕು. ವನು ಅಭಿಮಾನವಶನಾಗಿ ಕೆಲಸ ಮಾಡುತ್ತಿದ್ದಾನೆ. ಯಾರು ಕರ್ಮದ ಈ ಗತಿ ಯನ್ನರಿಯುತ್ತಾನೋ ಅವನೇ ಜಾಣ, ಯೋಗಿ, ಕರ್ತವ್ಯಪರಾಯಣ ಎಂದು ಾವಿಸಬೇಕು. 'ನಾನೇ ಕರ್ತ' ಎನ್ನುವವನು ಕರ್ಮವಿಕರ್ಮದ ಭೇದಗಳನ್ನು ಮರೆಯುವ ಲ್ಲದೆ, ಸಾಧನೆಯ ಸಾರಾಸಾರ ವಿಚಾರವನ್ನೂ ಮಾಡ. ಆತ್ಮದ ಸ್ವಾಭಾವಿಕ ಗತಿ ಊರ್ಧ್ವಮುಖ. ಆದುದರಿಂದ ಮನುಷ್ಯ ನೀತಿ ಮಾರ್ಗವನ್ನು ತ್ಯಜಿಸಿದಾಗ ಅವನಲ್ಲಿ ಅಹಂ' ಭಾವವಿದೆ ಎನ್ನಬೇಕು. ಅಭಿಮಾನ ರಹಿತ ಪುರುಷನ ಕರ್ಮ ಸಹಜವಾಗಿ ಾತ್ವಿಕವಾಗಿರುತ್ತದೆ.

ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ ।
ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಂಡಿತಂ ಬುಧಾಃ ॥೧೯॥

ತ್ಯಕ್ತ್ವಾ ಕರ್ಮಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ ।
ಕರ್ಮಣ್ಯಭಿಪ್ರವೃತ್ತೋऽಪಿ ನೈವ ಕಿಂಚಿತ್ಕರೋತಿ ಸಃ ॥೨೦॥

ನಿರಾಶೀರ್ಯತಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ ।
ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್ ॥೨೧॥

ಯದೃಚ್ಛಾಲಾಭಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ ।
ಸಮಸ್ಸಿದ್ಧಾವಸಿದ್ಧೌ ಚ ಕೃತ್ವಾऽಪಿ ನ ನಿಬಧ್ಯತೇ ॥೨೨॥

ಯಾರ ಸಕಲ ಸಮಾರಂಭಗಳು ಆಸೆ, ಸಂಕಲ್ಪರಹಿತವೋ ಅವನ ಕರ್ಮಗಳು ಜ್ಞಾನರೂಪವಾದ ಅಗ್ನಿಯಿಂದ ದಹಿಸಲ್ಪಡುತ್ತವೆ. ಅವನನ್ನು ಜ್ಞಾನಿಗಳು ಪಂಡಿತ ಎನ್ನುತ್ತಾರೆ. ॥೧೯॥

ಯಾರು ಕರ್ಮಫಲ ತ್ಯಾಗಮಾಡಿದ್ದಾನೋ, ಯಾರು ಸದಾ ಸಂತುಷ್ಟನೋ, ಯಾರಿಗೆ ಯಾವ ಆಶ್ರಯವಿಲ್ಲವೋ ಲಾಲಸೆಯಿಲ್ಲವೋ ಅಂಥವನು ಕರ್ಮದಲ್ಲಿ ನಿರತನಾಗಿದ್ದರೂ ಅವನು ಯಾವುದನ್ನೂ ಮಾಡುತ್ತಿಲ್ಲವೆನ್ನಬಹುದು. ॥೨೦॥

ಟಿಪ್ಪಣಿ–ಅರ್ಥಾತ್ ಅವನು ಕರ್ಮಬಂಧನವನ್ನು ಭೋಗಿಸಬೇಕಾಗುವುದಿಲ್ಲ.

ಯಾರು ಆಶಾರಹಿತನೋ, ಯಾರ ಮನಸ್ಸು ಸ್ವಾಧೀನವಲ್ಲಿದೆಯೋ, ಯಾರು ಸರ್ವಸಂಗವನ್ನೂ ತ್ಯಜಿಸಿದಾನೋ, ಯಾರ ಕೇವಲ ಶರೀರ ಮಾತ್ರ ಕೆಲಸ ಮಾಡುತ್ತಿದೆಯೋ ಅವನು ಕರ್ಮವನ್ನು ಮಾಡುತ್ತಿದ್ದರೂ ದೋಷಿಯಾಗನು. ॥೨೧॥

ಟಿಪ್ಪಣಿ–ಅಭಿಮಾನಪೂರ್ವಕ ಮಾಡಿದ ಪ್ರತಿಯೊಂದು ಕರ್ಮವೂ ಎಷ್ಟೇ ಸಾತ್ವಿಕವಾಗಿದ್ದರೂ ಬಂಧನಕಾರಕ. ಅದನ್ನೇ ಈಶ್ವರಾರ್ಪಣಬುದ್ಧಿಯಿಂದ ಅಭಿಮಾನ ರಹಿತವಾಗಿ ಮಾಡಿದಾಗ ಅದು ಬಂಧನರಹಿತವಾಗುತ್ತದೆ. ಯಾರಲ್ಲಿ 'ನಾನು' ಎಂಬುದು ಅಳಿದು ಹೋಗಿದೆಯೋ ಅವನ ಶರೀರ ಮಾತ್ರ ಕೆಲಸ ಮಾಡುತ್ತದೆ. ನಿದ್ರಿಸುವಾಗ ಮನುಷ್ಯನ ಶರೀರ ಮಾತ್ರವೆ ಕೆಲಸ ಮಾಡುತ್ತದೆ. ಕೈದಿ ಅಸಹಾಯನಾಗಿ ಅನಿಚ್ಛೆಯಿಂದ ಉಳುತ್ತಿರುವಾಗ ಅವನ ಶರೀರ ಮಾತ್ರ ಕೆಲಸ ಮಾಡುತ್ತದೆ. ಯಾರು ಸ್ವೇಚ್ಛೆಯಿಂದ ಈಶ್ವರನ ಕೈದಿಯಾಗಿದ್ದಾನೋ ಅವನೂ ಅಷ್ಟೇ. ಅವನ ಶರೀರ ಮಾತ್ರವೇ ಕೆಲಸ ಮಾಡುತ್ತದೆ. ಅವನು ಸ್ವಯಂ ಶೂನ್ಯ ಅವನಿಗೆ ಪ್ರೇರಕ ಈಶ್ವರ.

ಸಹಜವಾಗಿ ದೊರೆತುದರಲ್ಲಿಯೆ ಯಾರು ಸಂತುಷ್ಟನಾಗಿರುತ್ತಾನೋ, ಸುಖ ದುಃಖಾದಿ ದ್ವಂದ್ವಗಳಿಂದ ಯಾರು ಮುಕ್ತನೋ, ಯಾರು ದ್ವೇಷರಹಿತನೋ, ಸಫಲತೆ–ನಿಷ್ಫಲತೆಗಳಿಗೆ ಯಾರು ಉದಾಸೀನನೋ (ಎರಡೂ ಸಮಾನವೆಂದು ತಿಳಿದವನು) ಅವನು ಕರ್ಮ ಮಾಡುತ್ತಿದ್ದರೂ ಅದರ ಬಂಧನಕ್ಕೆ ಸಿಗುವುದಿಲ್ಲ. ॥೨೨॥

ಗತಸಂಗಸ್ಯ ಮುಕ್ತಸ್ಯ ಜ್ಞಾನಾವಸ್ಥಿತಚೇತಸಃ ।
ಯಜ್ಞಾಯಾಚರತಃ ಕರ್ಮ ಸಮಗ್ರಂ ಪ್ರವಿಲೀಯತೇ ॥೨೩॥

ಬ್ರಹ್ಮಾರ್ಪಣಂ ಬ್ರಹ್ಮಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್ ।
ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮಸಮಾಧಿನಾ ॥೨೪॥

ದೈವಮೇವಾಪರೇ ಯಜ್ಞಂ ಯೋಗಿನಃ ಪರ್ಯುಪಾಸತೇ ।
ಬ್ರಹ್ಮಾಗ್ನಾವಪರೇ ಯಜ್ಞಂ ಯಜ್ಞೇನೈವೋಪಜುಹ್ವತಿ ॥೨೫॥

ಶ್ರೋತ್ರಾದೀನೀಂದ್ರಿಯಾಣ್ಯನ್ಯೇ ಸಂಯಮಾಗ್ನಿಷು ಜುಹ್ವತಿ ।
ಶಬ್ದಾದೀನ್ ವಿಷಯಾನನ್ಯೇ ಇಂದ್ರಿಯಾಗ್ನಿಷು ಜುಹ್ವತಿ ॥೨೬॥

ಸರ್ವಾಣೀಂದ್ರಿಯಕರ್ಮಾಣಿ ಪ್ರಾಣಕರ್ಮಾಣಿ ಚಾಪರೇ ।
ಆತ್ಮಸಂಯಮಯೋಗಾಗ್ನೌ ಜುಹ್ವತಿ ಜ್ಞಾನದೀಪಿತೇ ॥೨೭॥

ಯಾರು ಆಸಕ್ತಿರಹಿತನೋ, ಯಾರ ಚಿತ್ತ ಜ್ಞಾನಮಯವೋ, ಯಾರು ಮುಕ್ತನೋ, ಯಜ್ಞವೆಂದೇ ಯಾರು ಕರ್ಮವನ್ನು ಮಾಡುತ್ತಾನೋ ಅವನ ಕರ್ಮವೆಲ್ಲ ಲಯವಾಗುತ್ತದೆ. ॥೨೩॥

(ಯಜ್ಞದಲ್ಲಿ) ಅರ್ಪಣೆ ಬ್ರಹ್ಮ, ಹವಿಸ್ಸು, ಹವನಮಾಡುವ ವಸ್ತುವೂ ಬ್ರಹ್ಮವೇ. ಬ್ರಹ್ಮರೂಪ ಅಗ್ನಿಯಲ್ಲಿ ಹವನ ಮಾಡುವವನೂ ಬ್ರಹ್ಮನೇ. ಹೀಗೆ ಕರ್ಮದೊಂದಿಗೆ ಬ್ರಹ್ಮನ ಮಿಲನವನ್ನು ಸಾಧಿಸಿದವನು ಬ್ರಹ್ಮವನ್ನೇ ಹೊಂದುತ್ತಾನೆ. ॥೨೪॥

ಬೇರೆ ಕೆಲವರು ಯೋಗಿಗಳು ದೇವತೆಗಳ ಪೂಜನರೂಪ ಯಜ್ಞವನ್ನು ಮಾಡುತ್ತಾರೆ. ಕೆಲವರು ಬ್ರಹ್ಮರೂಪಾಗ್ನಿಯಲ್ಲಿ ಯಜ್ಞ ಮಾಡಿ ಯಜ್ಞವನ್ನೇ ಹವನ ಮಾಡುತ್ತಾರೆ. ॥೨೫॥

ಕೆಲವರು ಶ್ರವಣಾದಿ ಇಂದ್ರಿಯಗಳ ಸಂಯಮರೂಪದಿಂದ ಯಜ್ಞ ಮಾಡುತ್ತಾರೆ ಇನ್ನು ಕೆಲವರು ಶಬ್ದಾದಿವಿಷಯಗಳನ್ನು ಇಂದ್ರಿಯಾಗ್ನಿಯಲ್ಲಿ ಯಜ್ಞ ಮಾಡುತ್ತಾರೆ. ॥೨೬॥

ಟಿಪ್ಪಣಿ–ಕೇಳುವ ಕ್ರಿಯೆ ಮೊದಲಾದುವನ್ನು ಸಂಯಮ ಮಾಡುವುದು ಒಂದು ವಿಚಾರ : ಇಂದ್ರಿಯಗಳನ್ನು ಉಪಯೋಗಿಸುವಾಗಲೂ ಅವುಗಳ ವಿಷಯಗಳನ್ನು ಪ್ರಭುವಿನ ಪ್ರೀತಿಯ ಕೆಲಸಗಳಲ್ಲಿ ತೊಡಗಿಸುವುದು ಮತ್ತೊಂದು ವಿಚಾರ ಉದಾ : ಭಜನಾದಿಗಳನ್ನು ಕೇಳುವುದು. ವಸ್ತುತಃ ಎರಡು ಒಂದೇ.

ಬೇರೆ ಕೆಲವರು ಎಲ್ಲ ಇಂದ್ರಿಯ ಕರ್ಮ, ಪ್ರಾಣಕರ್ಮಗಳನ್ನೂ ಜ್ಞಾನ ದೀಪದಿಂದ ಹೊತ್ತಿಸಲ್ಪಟ್ಟ ಆತ್ಮಸಂಯಮವೆಂಬ ಯೋಗಾಗ್ನಿಯಲ್ಲಿ ಹೋಮ ಮಾಡುತ್ತಾರೆ. ॥೨೭॥

ದ್ರವ್ಯಯಜ್ಞಾಸ್ತಪೋಯಜ್ಞಾ ಯೋಗಯಜ್ಞಾಸ್ತಥಾಪರೇ ।
ಸ್ವಾಧ್ಯಾಯಜ್ಞಾನಯಜ್ಞಾಶ್ಚ ಯತಯಸ್ಸಂಶಿತವ್ರತಾಃ ॥೨೮॥

ಅಪಾನೇ ಜುಹ್ವತಿ ಪ್ರಾಣಂ ಪ್ರಾಣೇಽಪಾನಂ ತಥಾಪರೇ ।
ಪ್ರಾಣಾಪಾನಗತೀ ರುದ್ಧ್ವಾ ಪ್ರಾಣಾಯಾಮಪರಾಯಣಾ ಃ ॥೨೯॥

ಅಪರೇ ನಿಯತಾಹಾರಾಃ ಪ್ರಾಣಾನ್ ಪ್ರಾಣೇಷು ಜುಹ್ವತಿ ।
ಸರ್ವೇಽಪ್ಯೇತೇ ಯಜ್ಞವಿದೋ ಯಜ್ಞಕ್ಷಪಿತಕಲ್ಮಷಾಃ ॥೩೦॥

ಯಜ್ಞಶಿಷ್ಟಾಮೃತಭುಜೋ ಯಾಂತಿ ಬ್ರಹ್ಮಸನಾತನಮ್ ।
ನಾಯಂ ಲೋಕೋಽಸ್ತ್ಯಯಜ್ಞಸ್ಯ ಕುತೋಽನ್ಯಃ ಕುರುಸತ್ತಮ ॥೩೧॥

ಟಿಪ್ಪಣಿ–ಎಂದರೆ, ಪರಮಾತ್ಮನಲ್ಲಿ ತಲ್ಲೀನರಾಗುತ್ತಾರೆ.

ಈ ರೀತಿ ಕೆಲವರು ಯಜ್ಞಕ್ಕೋಸುಗ ದ್ರವ್ಯವನ್ನು ಕೊಡುತ್ತಾರೆ. ಕೆಲವರು ತಪಸ್ಸು ಮಾಡುತ್ತಾರೆ, ಕೆಲವರು ಅಷ್ಟಾಂಗಯೋಗ ಸಾಧಕರಾಗುತ್ತಾರೆ. ಕೆಲವರು ಸ್ವಾಧ್ಯಾಯ ಯಜ್ಞವನ್ನೂ ಜ್ಞಾನಯಜ್ಞವನ್ನೂ ಮಾಡುತ್ತಾರೆ. ಈ ಎಲ್ಲ ಕಠಿನ ವ್ರತಧಾರಿಗಳೂ ಪ್ರಯತ್ನಶೀಲ ಯಾಜ್ಞಿಕರೆನಿಸುತ್ತಾರೆ.

ಇನ್ನು ಬೇರೆ ಕೆಲವರು ಪ್ರಾಣಾಯಾಮದಲ್ಲಿ ತತ್ಪರರಾಗಿ, ಅಪಾನ ವಾಯುವನ್ನು ಪ್ರಾಣವಾಯುವಿನಲ್ಲಿ ಹವನ ಮಾಡುತ್ತಾರೆ, ಪ್ರಾಣವನ್ನು ಅಪಾನದಲ್ಲಿ ಹೋಮ ಮಾಡುತ್ತಾರೆ. ಅಥವಾ ಪ್ರಾಣ, ಅಪಾನಗಳೆರಡನ್ನೂ ನಿರೋಧಿಸುತ್ತಾರೆ. ॥೨೯॥

ಟಿಪ್ಪಣಿ–ಪ್ರಾಣಾಯಾಮ ರೇಚಕ, ಪೂರಕ, ಕುಂಭಕ ಎಂದು ಮೂರು ಬಗೆ. ಸಂಸ್ಕೃತದಲ್ಲಿ ಒಳಗಿನಿಂದ ಹೊರಗೆ ಹೋಗುವುದು ಪ್ರಾಣವಾಯು. ಹೊರಗಿನಿಂದ ಒಳಕ್ಕೆ ಎಳೆದುಕೊಳ್ಳುವ ವಾಯುವನ್ನು ನಾವು ಪ್ರಾಣವಾಯು (ಆಕ್ಸಿಜನ್) ಎನ್ನುತ್ತೇವೆ.

ಮತ್ತೊಂದು ಬಗೆಯ ಜನರು ಆಹಾರ ಸಂಯಮ ಮಾಡಿ ಪ್ರಾಣಗಳನ್ನೇ ಪ್ರಾಣದಲ್ಲಿ ಹೋಮ ಮಾಡುತ್ತಾರೆ. ಯಜ್ಞದಿಂದ ತಮ್ಮ ಪಾಪವನ್ನು ನೀಗಿಕೊಂಡ ಇವರೆಲ್ಲರೂ ಯಜ್ಞವನ್ನರಿತವರು. ॥೩೦॥

ಕುರುಸತ್ತಮ ! ಯಜ್ಞದಲ್ಲುಳಿದ ಅಮೃತವನ್ನು ಭುಜಿಸುವವರು ಸನಾತನ ಬ್ರಹ್ಮವನ್ನೈದುತ್ತಾರೆ. ಯಜ್ಞಮಾಡದವನಿಗೆ ಈ ಲೋಕವೇ ಇಲ್ಲ. ಇನ್ನು ಪರಲೋಕದಲ್ಲಿಯದು ? ॥೩೧॥

ಏವಂ ಬಹುವಿಧಾ ಯಜ್ಞಾ ವಿತತಾ ಬ್ರಹ್ಮಣೋ ಮುಖೇ ।
ಕರ್ಮಜಾನ್ ವಿದ್ಧಿ ತಾನ್ ಸರ್ವಾನೇವಂ ಜ್ಞಾತ್ವಾ ವಿಮೋಕ್ಷ್ಯಸೇ ॥೩೨॥

ಶ್ರೇಯಾನ್ ದ್ರವ್ಯಮಯಾದ್ಯಜ್ಞಾತ್ ಜ್ಞಾನಯಜ್ಞಃ ಪರಂತಪ ।
ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ॥೩೩॥

ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।
ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವ ದರ್ಶಿನಃ ॥೩೪॥

ವೇದಗಳಲ್ಲಿ ಇಂಥ ಅನೇಕ ಬಗೆಯ ಯಜ್ಞಗಳ ವರ್ಣನೆ ಮಾಡಿದೆ. ಅವೆಲ್ಲವೂ ಕರ್ಮದಿಂದ ಉತ್ಪನ್ನವಾದವು, ತಿಳಿ. ಇವೆಲ್ಲವನ್ನೂ ಅರಿತರೆ, ನೀನು ಮೋಕ್ಷವನ್ನು ಪಡೆಯುವೆ. ॥೩೨॥

ಟಿಪ್ಪಣಿ-ಇಲ್ಲಿ ಕರ್ಮದ ಅರ್ಥ ವ್ಯಾಪಕವಾಗಿ : ಶಾರೀರಕ, ಮಾನಸಿಕ, ಆತ್ಮಿಕ. ಇಂತಹ ಕರ್ಮವಿಲ್ಲದೆ ಯಜ್ಞವಾಗಲಾರದು : ಯಜ್ಞವಿಲ್ಲದೆ ಮೋಕ್ಷ ಲಭಿಸದು. ಈ ವಿಚಾರವನ್ನು ತಿಳಿದು ತದನುಸಾರ ಆಚರಣೆ ಮಾಡುವುದೇ ಈ ಯಜ್ಞಗಳನ್ನು ತಿಳಿಯುವ ವಿಧಾನ. ತಾತ್ಪರ್ಯವೇನೆಂದರೆ-ಮನುಷ್ಯ ತನ್ನ ಶರೀರ, ಬುದ್ಧಿ, ಆತ್ಮಗಳ ಉಪಯೋಗವನ್ನು ಪ್ರಭುಪ್ರೀತ್ಯರ್ಥವಾಗಿ, ಲೋಕಸೇವಾರ್ಥವಾಗಿ ಮಾಡದಿದ್ದರೆ ಅಂಥವನು ಕಳ್ಳ. ಅವನು ಮೋಕ್ಷಕ್ಕೆ ಯೋಗ್ಯನಾಗಲಾರ. ಯಾರು ಕೇವಲ ಬುದ್ಧಿ ಶಕ್ತಿಯನ್ನು ಉಪಯೋಗಿಸುತ್ತ, ಶರೀರ, ಆತ್ಮಗಳನ್ನು ಕದಿಯುತ್ತಾನೋ ಅವನು ಪೂರ್ಣ ಯಾಜ್ಞಿಕನಲ್ಲ. ಈ ಶಕ್ತಿಗಳನ್ನು ಪಡೆಯದೆ ಅವನು ಪರೋಪಕಾರಕ್ಕಾಗಿ ಉಪಯೋಗಿಸಲಾರ. ಆದುದರಿಂದ ಆತ್ಮಶುದ್ಧಿಯಿಲ್ಲದೆ ಲೋಕಸೇವೆ ಅಸಂಭವ. ಶರೀರ, ಬುದ್ಧಿ, ಆತ್ಮ (ನೀತಿ) - ಈ ಮೂರನ್ನೂ ಸಮಾನವಾಗಿ ವಿಕಾಸಗೊಳಿಸಬೇಕಾದುದು ಸೇವಕನ ಕರ್ತವ್ಯ.

ಪರಂತಪ ! ದ್ರವ್ಯಯಜ್ಞಕ್ಕಿಂತಲೂ ಜ್ಞಾನಯಜ್ಞ ಹೆಚ್ಚು ಶ್ರೇಷ್ಠ. ಏಕೆಂದರೆ ಅರ್ಜುನ, ಎಲ್ಲ ಕರ್ಮಗಳ ಪರಾಕಾಷ್ಠೆ ಜ್ಞಾನದಲ್ಲಿಯೇ. ॥೩೩॥

ಟಿಪ್ಪಣಿ-ಪರೋಪಕಾರಭಾವನೆಯಿಂದ ಕೊಟ್ಟ ಧನ ಕೂಡ, ಜ್ಞಾನಪೂರ್ವಕ ಕೊಡದಿದ್ದರೆ, ಬಹುಶಃ ಹಾನಿಯನ್ನೇ ತರುತ್ತದೆ. ಇದರ ಅನುಭವ ಯಾರಿಗಿಲ್ಲ ? ಒಳ್ಳೆಯ ಭಾವನೆಯಿಂದ ಮಾಡುವ ಕರ್ಮಗಳಿಗೆಲ್ಲ ಅವುಗಳೊಂದಿಗೆ ಜ್ಞಾನ ಸೇರಿದಾಗಲೇ ಶೋಭೆ. ಆದುದರಿಂದ ಸರ್ವಕರ್ಮಗಳ ಪೂರ್ಣಾಹುತಿ ಜ್ಞಾನದಲ್ಲಿಯೇ.

ತತ್ತ್ವವಿದರಾದ ಜ್ಞಾನಿಗಳ ಸೇವೆ ಮಾಡಿ, ನಮ್ರತಾಪೂರ್ವಕ ವಿವೇಕದಿಂದ ಬಾರಿಬಾರಿಗೂ (ಅವರನ್ನು) ಪ್ರಶ್ನಿಸಿ ತಿಳಿದುಕೊಳ್ಳಬೇಕು. ಅವರು ನಿನ್ನ ಜಿಜ್ಞಾಸೆಯನ್ನು ತೃಪ್ತಿಗೊಳಿಸುತ್ತಾರೆ. ॥೩೪॥

ಯಜ್ಜ್ಞಾತ್ವಾ ನ ಪುನರ್ಮೋಹಮೇವಂ ಯಾಸ್ಯಸಿ ಪಾಂಡವ ।
ಯೇನ ಭೂತಾನ್ಯಶೇಷೇಣ ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ ॥೩೫॥

ಅಪಿ ಚೇದಸಿ ಪಾಪೇಭ್ಯಸ್ಸರ್ವೇಭ್ಯಃ ಪಾಪಕೃತ್ತಮಃ ।
ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ॥೩೬॥

ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ಕುರುತೇಽರ್ಜುನ ।
ಜ್ಞಾನಾಗ್ನಿಸ್ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ ॥ ॥೩೭॥

ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ।
ತತ್ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿಂದತಿ ॥೩೮॥

ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಸ್ಸಂಯತೇಂದ್ರಿಯಃ ।
ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ ॥೩೯॥

ಅಜ್ಞಶ್ಚಾಶ್ರದ್ಧಧಾನಶ್ಚ ಸಂಶಯಾತ್ಮಾ ವಿನಶ್ಯತಿ ।
ನಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ ॥೪೦॥

ಈ ಜ್ಞಾನ ಲಭಿಸಿದ ನಂತರ, ನಿನಗೆ ಮತ್ತೆ ಮೋಹವುಂಟಾಗದು. ಆ ಜ್ಞಾನದಿಂದ ಆತ್ಮನಲ್ಲಿಯೂ (ನಿನ್ನಲ್ಲಿಯೂ) ನನ್ನಲ್ಲಿಯೂ ಭೂತಮಾತ್ರಗಳನ್ನು ನೋಡಬಲ್ಲೆ. ॥೩೫॥

ಟಿಪ್ಪಣಿ–'ಯಥಾ ಪಿಂಡೇ ತಥಾ ಬ್ರಹ್ಮಾಂಡೇ' ಎಂಬುದರ ಅರ್ಥ ಇದೇ. ಆತ್ಮದರ್ಶನವಾದವನು ತನ್ನ–ಬೇರೆಯವರ ಆತ್ಮಗಳಲ್ಲಿ ಯಾವ ಭೇದವನ್ನೂ ಕಾಣಲಾರ.

ಪಾಪಿಗಳೆಲ್ಲರಲ್ಲಿ ನೀನು ಹೆಚ್ಚು ಪಾಪಿಯಾಗಿದ್ದರೂ ಜ್ಞಾನದ ದೋಣಿಯ ಮೂಲಕ ಆ ಪಾಪಗಳಿಂದ ನೀನು ಪಾರಾಗುತ್ತೀಯೆ. ॥೩೬॥

ಅರ್ಜುನ! ಉರಿಯುವ ಬೆಂಕಿ ಕಟ್ಟಿಗೆಯನ್ನು ಸುಟ್ಟು ಬೂದಿಮಾಡುವಂತೆ, ಜ್ಞಾನದ ಬೆಂಕಿ ಸಕಲ ಕರ್ಮಗಳನ್ನೂ ಭಸ್ಮ ಮಾಡಿಬಿಡುತ್ತದೆ. ॥೩೭॥

ಜ್ಞಾನಕ್ಕಿಂತ ಪವಿತ್ರ ವಸ್ತು ಈ ಜಗತ್ತಿನಲ್ಲಿ ಮತ್ತೊಂದಿಲ್ಲ. ಯೋಗದಲ್ಲಿ–ಸಮತ್ವದಲ್ಲಿ ಪೂರ್ಣತೆ ಪಡೆದ ಮಾನವ ಕಾಲಾನುಸಾರವಾಗಿ ತನ್ನಲ್ಲಿಯೆ ಆ ಜ್ಞಾನದ ದರ್ಶನ ಪಡೆಯುತ್ತಾನೆ. ॥೩೮॥

ಶ್ರದ್ಧಾವಂತ, ಈಶ್ವರಪರಾಯಣ, ಜಿತೇಂದ್ರಿಯ ಆದ ಪುರುಷ ಜ್ಞಾನವನ್ನು ಗಳಿಸುತ್ತಾನೆ. ಜ್ಞಾನವನ್ನು ಪಡೆದು ತೀವ್ರವಾಗಿ ಪರಮಶಾಂತಿಯನ್ನು ಪಡೆಯುತ್ತಾನೆ. ॥೩೯॥

ಅಜ್ಞಾನಿಯೂ ಶ್ರದ್ಧಾವಿಹೀನನೂ ಆದ ಸಂಶಯಾತ್ಮ ನಾಶಹೊಂದುತ್ತಾನೆ. ಸಂಶಯಾತ್ಮನಿಗೆ ಈ ಲೋಕವೂ ಇಲ್ಲ, ಪರಲೋಕವೂ ಇಲ್ಲ. ಅವನಿಗೆ ಎಲ್ಲಿಯೂ ಸುಖವಿಲ್ಲ. ॥೪೦॥

ಯೋಗಸಂನ್ಯಸ್ತಕರ್ಮಾಣಂ ಜ್ಞಾನಸಂಛಿನ್ನ ಸಂಶಯಮ್ ।
ಆತ್ಮವಂತಂ ನ ಕರ್ಮಾಣಿ ನಿಬಧ್ನಂತಿ ಧನಂಜಯ ॥೪೧॥

ತಸ್ಮಾದಜ್ಞಾನಸಂಭೂತಂ ಹೃತ್ಸ್ಥಂ ಜ್ಞಾನಾಸಿನಾಽಽತ್ಮನಃ ।
ಛಿತ್ತ್ವೈನಂ ಸಂಶಯಂ ಯೋಗಮಾತಿಷ್ಠೋತ್ತಿಷ್ಠ ಭಾರತ ॥೪೨॥

ಹರಿಃ ಓಂ ತತ್ಸತ್

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀ ಕೃಷ್ಣಾರ್ಜುನಸಂವಾದೇ
ಜ್ಞಾನಕರ್ಮಸಂನ್ಯಾಸಯೋಗೋ ನಾಮ ಚತುರ್ಥೋಽಧ್ಯಾಯಃ ॥

ಸಮತ್ವರೂಪವಾದ ಯೋಗದಿಂದ ಕರ್ಮಗಳನ್ನು ಎಂದರೆ ಕರ್ಮಫಲವನ್ನು ಯಾರು ತ್ಯಜಿಸುತ್ತಾನೋ, ಜ್ಞಾನದಿಂದ ಸಂಶಯಗಳನ್ನು ನಾಶಗೊಳಿಸುತ್ತಾನೋ, ಅಂಥ ಆತ್ಮದರ್ಶಿಗೆ ಕರ್ಮಬಂಧನವುಂಟಾಗದು. ॥೪೧॥

ಆದುದರಿಂದ ಭಾರತ, ಹೃದಯದಲ್ಲಿ ಅಜ್ಞಾನದಿಂದ ಹುಟ್ಟಿದ ಸಂಶಯವನ್ನು ಆತ್ಮಜ್ಞಾನದ ಕತ್ತಿಯಿಂದ ಕತ್ತರಿಸಿ ಯೋಗಸಮತ್ವವನ್ನಾಶ್ರಯಿಸು. ಎದ್ದು ನಿಲ್ಲು. ॥೪೨॥

ಓಂ ತತ್ಸತ್

ಈ ಬಗೆಯಾಗಿ ಶ್ರೀಮದ್ಭಗವದ್ಗೀತಾರೂಪ ಉಪನಿಷತ್ ಅಥವಾ ಬ್ರಹ್ಮವಿದ್ಯಾಂತರ್ಗತ
ಯೋಗಶಾಸ್ತ್ರದ ಶ್ರೀ ಕೃಷ್ಣಾರ್ಜುನ ಸಂವಾದದಲ್ಲಿ ಜ್ಞಾನ-ಕರ್ಮ-
ಸಂನ್ಯಾಸಯೋಗವೆಂಬ ನಾಲ್ಕನೆಯ ಅಧ್ಯಾಯ

***

ಅಧ್ಯಾಯ ೫

ಕರ್ಮಸಂನ್ಯಾಸಯೋಗ

(ಈ ಅಧ್ಯಾಯದಲ್ಲಿ ಕರ್ಮಯೋಗವಿಲ್ಲದೆ ಕರ್ಮಸಂನ್ಯಾಸವಿಲ್ಲ,
ವಸ್ತುತಃ ಅವೆರಡೂ ಒಂದೇ ಎಂಬುದನ್ನು ಹೇಳಿದೆ.)

ಪಂಚಮೋಽಧ್ಯಾಯಃ

ಅರ್ಜುನ ಉವಾಚ

ಸಂನ್ಯಾಸಂ ಕರ್ಮಣಾಂ ಕೃಷ್ಣ ಪುನರ್ಯೋಗಂ ಚ ಶಂಸಸಿ ।
ಯಚ್ಛ್ರೇಯ ಏತಯೋರೇಕಂ ತನ್ಮೇ ಬ್ರೂಹಿ ಸುನಿಶ್ಚಿತಮ್ ॥೧॥

ಶ್ರೀ ಭಗವಾನುವಾಚ

ಸಂನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸಕರಾವುಭೌ ।
ತಯೋಸ್ತು ಕರ್ಮಸಂನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ ॥೨॥

ಜ್ಞೇಯಸ್ಸ ನಿತ್ಯಸಂನ್ಯಾಸೀ ಯೋ ನ ದ್ವೇಷ್ಟಿ ನ ಕಾಂಕ್ಷತಿ ।
ನಿರ್ದ್ವಂದ್ವೋ ಹಿ ಮಹಾಬಾಹೋ ಸುಖಂ ಬಂಧಾತ್ ಪ್ರಮುಚ್ಯತೇ ॥೩॥

ಅರ್ಜುನ :

ಕೃಷ್ಣ ! ನೀನು ಒಂದು ಸಲ ಕರ್ಮಯೋಗವನ್ನು, ಒಂದು ಸಲ ಕರ್ಮತ್ಯಾಗವನ್ನು ಹೊಗಳುತ್ತೀಯೆ. ಇವೆರಡರಲ್ಲಿ ಯಾವುದು ಶ್ರೇಯಸ್ಕರವೋ ಸರಿಯಾಗಿ ನಿಶ್ಚಯಿಸಿ ಹೇಳು. ॥೧॥

ಶ್ರೀ ಭಗವಂತ :

ಕರ್ಮಗಳ ತ್ಯಾಗ, ಯೋಗ ಎರಡೂ ಮೋಕ್ಷವನ್ನು ಕೊಡುತ್ತವೆ. ಆದರೂ ಅವೆರಡರಲ್ಲಿ ಕರ್ಮಸಂನ್ಯಾಸಕ್ಕಿಂತ ಕರ್ಮಯೋಗವೇ ಹೆಚ್ಚಿನದು. ॥೨॥

ಯಾವ ಮನುಷ್ಯನು ದ್ವೇಷಿಸನೋ ಏನನ್ನೂ ಇಚ್ಛಿಸನೋ ಅವನು ನಿತ್ಯಸಂನ್ಯಾಸಿ ಯೆಂದು ತಿಳಿ. ಸುಖದುಃಖಾದಿ ದ್ವಂದ್ವಗಳಿಂದ ಮುಕ್ತನಾದವನು ಸಹಜವಾಗಿ ಬಂಧನಗಳಿಂದ ಮುಕ್ತನಾಗುತ್ತಾನೆ. ॥೩॥

ಸಾಂಖ್ಯಯೋಗೌ ಪ್ರಥಗ್ಬಾಲಾಃ ಪ್ರವದಂತಿ ನ ಪಂಡಿತಾಃ ।
ಏಕಮಪ್ಯಾಸ್ಥಿತಸ್ಸಮ್ಯಗುಭಯೋರ್ವಿಂದತೇ ಫಲಮ್ ॥೪॥

ಯತ್ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ ತದ್ಯೋಗೈರಪಿ ಗಮ್ಯತೇ ।
ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ ॥೫॥

ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ ।
ಯೋಗಯುಕ್ತೋ ಮುನಿರ್ಬ್ರಹ್ಮ ನ ಚಿರೇಣಾಧಿಗಚ್ಛತಿ ॥೬॥

ಯೋಗಯುಕ್ತೋ ವಿಶುದ್ಧಾತ್ಮಾ ವಿಜಿತಾತ್ಮಾ ಜಿತೇಂದ್ರಿಯಃ ।
ಸರ್ವಭೂತಾತ್ಮಭೂತಾತ್ಮಾ ಕುರ್ವನ್ನಪಿ ನ ಲಿಪ್ಯತೇ ॥೭॥

ಟಿಪ್ಪಣಿ–ಕರ್ಮತ್ಯಾಗ ಸಂನ್ಯಾಸದ ವಿಶಿಷ್ಟ ಲಕ್ಷಣವಲ್ಲ, ದ್ವಂದ್ವಾತೀತನಾಗುವುದು ಅದರ ಲಕ್ಷಣ. ಒಬ್ಬ ಕರ್ಮ ಮಾಡುತ್ತಿದ್ದರೂ ಸಂನ್ಯಾಸಿಯಾಗಬಲ್ಲ. ಮತ್ತೊಬ್ಬ ಕರ್ಮ ಮಾಡದಿದ್ದರೂ ಮಿಥ್ಯಾಚಾರಿಯಾಗಬಲ್ಲ. (ಅಧ್ಯಾಯ೩, ಶ್ಲೋಕ ೬ ನೋಡಿ).

ಅಜ್ಞಾನಿಗಳು 'ಸಾಂಖ್ಯಯೋಗ, ಜ್ಞಾನಕರ್ಮ ಇವೆರಡನ್ನೂ ಬೇರೆ ಬೇರೆ ಎಂದು ತಿಳಿಯುತ್ತಾರೆ; ಪಂಡಿತರು ಹಾಗೆ ಭಾವಿಸರು. ಸಂಪೂರ್ಣವಾಗಿ ಸ್ಥಿರನಾದವನು ಎರಡರ ಫಲವನ್ನೂ ಹೊಂದುತ್ತಾನೆ. ॥೪॥

ಸಾಂಖ್ಯಮಾರ್ಗಿ ಪಡೆವ ಸ್ಥಾನವನ್ನೇ ಯೋಗಿಯೂ ಪಡೆಯುತ್ತಾನೆ. ಸಾಂಖ್ಯ, ಯೋಗಗಳನ್ನು ಒಂದೇ ರೂಪದಿಂದ ನೋಡುವವನೇ ನಿಜವಾಗಿ ನೋಡಬಲ್ಲವನು. ॥೫॥

ಟಿಪ್ಪಣಿ–ಜ್ಞಾನಯೋಗಿ ಲೋಕಸಂಗ್ರಹದ ಕರ್ಮಯೋಗದ ವಿಶೇಷ ಫಲವನ್ನು ಸಂಕಲ್ಪಮಾತ್ರದಿಂದಲೇ ಪಡೆಯುತ್ತಾನೆ. ಕರ್ಮಯೋಗಿ ತನ್ನ ಅನಾಸಕ್ತಿಯಿಂದ ಬಾಹ್ಯ ಕರ್ಮವನ್ನು ಮಾಡುತ್ತಿದ್ದರೂ, ಜ್ಞಾನಯೋಗಿಯ ಶಾಂತಿಯನ್ನು ಅನಾಯಾಸವಾಗಿ ಪಡೆಯುತ್ತಾನೆ.

ಮಹಾಬಾಹು ! ಕರ್ಮಯೋಗವಿಲ್ಲದೆ ಕರ್ಮತ್ಯಾಗ ಕಷ್ಟ ಸಾಧ್ಯ. ಆದರೆ ಸಮತ್ವವುಳ್ಳ ಮುನಿ ಶೀಘ್ರವಾಗಿ ಮೋಕ್ಷವನ್ನೈದುತ್ತಾನೆ. ॥೬॥

ಯೋಗಸಾಧನೆ ಮಾಡಿದ, ಹೃದಯವನ್ನು ಶುದ್ಧಗೊಳಿಸಿದ, ಮನಸ್ಸನ್ನೂ ಇಂದ್ರಿಯಗಳನ್ನೂ ಜಯಿಸಿದ, ಭೂತಮಾತ್ರಗಳೆಲ್ಲವನ್ನೂ ತನ್ನಂತೆ ಭಾವಿಸುವ ಮನುಷ್ಯ ಕರ್ಮ ಮಾಡುತ್ತಿದ್ದರೂ ಅಲಿಪ್ತನೇ. ॥೭॥

ನೈವ ಕಿಂಚಿತ್ಕರೋಮಿತಿ ಯುಕ್ತೋ ಮನ್ಯೇತ ತತ್ತ್ವವಿತ್ ।
ಪಶ್ಯನ್ ಶೃಣ್ವನ್ ಸ್ಪೃಶನ್ ಜಿಘ್ರನ್ನಶ್ನನ್ ಗಚ್ಛನ್ ಸ್ವಪನ್ ಶ್ವಸನ್ ॥೮॥

ಪ್ರಲಪನ್ ವಿಸೃಜನ್ ಗೃಹ್ಣನ್ನುನ್ಮಿಷನ್ನಿಮಿಷನ್ನಪಿ ।
ಇಂದ್ರಿಯಾಣೀಂದ್ರಿಯಾರ್ಥೇಷು ವರ್ತಂತ ಇತಿ ಧಾರಯನ್ ॥೯॥

ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿ ಯಃ ।
ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥೧೦॥

ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ ।
ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾತ್ಮ ಶುದ್ಧಯೇ ॥೧೧॥

ಯುಕ್ತಃ ಕರ್ಮಫಲಂ ತ್ಯಕ್ತ್ವಾ ಶಾಂತಿಮಾಪ್ನೋತಿ ನೈಷ್ಠಿಕೀಮ್ ।
ಅಯುಕ್ತಃ ಕಾಮಕಾರೇಣ ಫಲೇ ಸಕ್ತೋ ನಿಬಧ್ಯತೇ ॥೧೨॥

ನೋಡುವಾಗ, ಕೇಳುವಾಗ, ಸ್ಪರ್ಶ ಮಾಡುವಾಗ, ಮೂಸುವಾಗ, ತಿನ್ನುವಾಗ, ನಡೆಯುವಾಗ, ಮಲಗಿರುವಾಗ, ಮಾತಾಡುವಾಗ, ಬಿಡುವಾಗ, ತೆಗೆದುಕೊಳ್ಳುವಾಗ, ಕಣ್ಣು ತೆರೆಯುವಾಗ, ಮುಚ್ಚುವಾಗ ಕೇವಲ ಇಂದ್ರಿಯಗಳೇ ತಮ್ಮ ತಮ್ಮ ಕೆಲಸ ಮಾಡುತ್ತಿವೆ ಎಂಬ ಭಾವನೆ ಇಟ್ಟುಕೊಂಡು, ತತ್ತ್ವಜ್ಞವಾದ ಯೋಗಿ 'ನಾನು ಏನೂ ಮಾಡುತ್ತಿಲ್ಲ' ಎಂದು ಅರಿಯಬೇಕು. ॥೮–೯॥

ಟಿಪ್ಪಣಿ–ಅಭಿಮಾನವಿರುವವರಿಗೆ ಈ ಅಲಿಪ್ತ ಸ್ಥಿತಿ ಬಾರದು. ಆದುದರಿಂದ ವಿಷಯಾಸಕ್ತನಾದ ಮನುಷ್ಯ 'ನಾನು ವಿಷಯಭೋಗ ಮಾಡುತ್ತಿಲ್ಲ. ಇಂದ್ರಿಯಗಳು ತಮ್ಮ ಕೆಲಸ ಮಾಡುತ್ತಿವೆ' ಎಂದು ಹೇಳಿ ಬಿಡುಗಡೆ ಹೊಂದಲಾರ. ಇಂಥ ಅನರ್ಥಕಾರಿ. ಗೀತೆಯನ್ನೂ ಅರಿಯ. ಕೆಳಗಿನ ಶ್ಲೋಕ ಈ ವಿಚಾರವನ್ನು ಚೆನ್ನಾಗಿ ಸ್ಪಷ್ಟಗೊಳಿಸುತ್ತದೆ.

ಯಾರು ಕರ್ಮಗಳನ್ನು ಬ್ರಹ್ಮಾರ್ಪಣಮಾಡಿ ಆಸಕ್ತಿ ಬಿಟ್ಟು ವರ್ತಿಸುವನೋ ಅವನು ನೀರಿನಲ್ಲಿರುವ ಕಮಲದಂತೆ ಪಾಪದಿಂದ ಅಲಿಪ್ತನಾಗಿರುತ್ತಾನೆ. ॥೧೦॥

ಆಸಕ್ತಿರಹಿತರಾಗಿ ಯೋಗಿಗಳು ಶರೀರದಿಂದ, ಮನದಿಂದ, ಬುದ್ಧಿಯಿಂದ, ಇಂದ್ರಿಯಗಳಿಂದಲೂ ಕೇವಲ ಆತ್ಮಶುದ್ಧಿಗಾಗಿ ಕರ್ಮ ಮಾಡುತ್ತಾರೆ. ॥೧೧॥

ಸಮತಾವಂತರು ಕರ್ಮಫಲವನ್ನು ತ್ಯಜಿಸಿ ಪರಮ ಶಾಂತಿಯನ್ನು ಹೊಂದುತ್ತಾರೆ. ಅಸ್ಥಿರಚಿತ್ತರು ಕಾಮನಾವಶರಾಗಿ ಫಲದ ಬಲೆಗೆ ಸಿಕ್ಕಿ ಬಂಧನದಲ್ಲಿರುತ್ತಾರೆ. ॥೧೨॥

ಸರ್ವಕರ್ಮಾಣಿ ಮನಸಾ ಸಂನ್ಯಸ್ಯಾಸ್ತೇ ಸುಖಂ ವಶೀ ।
ನವದ್ವಾರೇ ಪುರೇ ದೇಹೀ ನೈವ ಕುರ್ವನ್ನಕಾರಯನ್ ॥೧೩॥

ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ ।
ನ ಕರ್ಮಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ ॥೧೪॥

ನಾದತ್ತೇ ಕಸ್ಯಚಿತ್ಪಾಪಂ ನ ಚೈವ ಸುಕೃತಂ ವಿಭುಃ ।
ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ ॥೧೫॥

ಸಂಯಮಿಯಾದ ಪುರುಷ ಮನಸ್ಸಿನಿಂದ ಎಲ್ಲ ಕರ್ಮಗಳನ್ನೂ ತ್ಯಾಗಮಾಡಿ, ನವದ್ವಾರವುಳ್ಳ ನಗರವಂತಿರುವ ಶರೀರದಲ್ಲಿದ್ದರೂ, ಏನೂ ಮಾಡದೆ, ಮಾಡಿಸದೆ ಸುಖವಾಗಿರುತ್ತಾನೆ.

ಟಿಪ್ಪಣಿ–ಎರಡು ಮೂಗು, ಎರಡು ಕಿವಿ, ಎರಡು ಕಣ್ಣು, ಮಲ ಮೂತ್ರೇಂದ್ರಿಯಗಳೆರಡು, ಮುಖ–ಈ ರೀತಿಯಾಗಿ ಶರೀರದಲ್ಲಿ ಒಂಬತ್ತು ಮುಖ್ಯದ್ವಾರಗಳು. ಹಾಗೆ ನೋಡಿದರೆ ಚರ್ಮದಲ್ಲಿರುವ ಅಸಂಖ್ಯ ರಂಧ್ರಗಳೂ ದ್ವಾರಗಳೇ. ಈ ದ್ವಾರಗಳ ಕಾವಲುಗಾರ ಇವುಗಳಲ್ಲಿ ಅಧಿಕಾರಿಗಳನ್ನು ಮಾತ್ರ ಬರಹೋಗಗೊಡುತ್ತ ತನ್ನ ಧರ್ಮವನ್ನು ಪಾಲಿಸಿಕೊಂಡಿದ್ದರೆ, ಈ ಆಗಮನ–ನಿರ್ಗಮನದಲ್ಲಿ ಅವನು ಭಾಗಿಯಲ್ಲ, ಕೇವಲ ಸಾಕ್ಷಿ. ಅವನು ಯಾವುದನ್ನೂ ಮಾಡಲಿಲ್ಲ, ಮಾಡಿಸಲೂ ಇಲ್ಲ.

ಜಗತ್ತಿನ ಸ್ವಾಮಿ ಕರ್ತೃತ್ವವನ್ನೂ ರಚಿಸುವುದಿಲ್ಲ. ಕರ್ಮವನ್ನೂ ನಿರ್ಮಿಸುವುದಿಲ್ಲ; ಕರ್ಮವನ್ನು ಫಲವನ್ನು ಕೂಡಿಸುವುದಿಲ್ಲ. ಇವೆಲ್ಲವನ್ನೂ ಮಾಡುವುದು ಪ್ರಕೃತಿಯೇ. ॥೧೪॥

ಟಿಪ್ಪಣಿ–ಈಶ್ವರ ಕರ್ತನಲ್ಲ. ಕರ್ಮ–ನಿಯಮ ಅಚಲ, ಅನಿವಾರ್ಯ. ಯಾರೇ ಆಗಲಿ, ತಾನು ಮಾಡಿದ್ದನ್ನು ಉಣ್ಣಬೇಕು. ಇದರಲ್ಲಿ ಈಶ್ವರನ ಮಹಾದಯೆ, ನ್ಯಾಯ ವಿದ್ಯಮಾನವಾಗಿದೆ. ಶುದ್ಧ ನ್ಯಾಯದಲ್ಲಿ ಶುದ್ಧ ದಯೆಯಿದೆ. ನ್ಯಾಯ ವಿರೋಧಿಯಾದ ದಯೆ ದಯೆಯಲ್ಲ; ಕ್ರೌರ್ಯ. ಆದರೆ ಮನುಷ್ಯ ತ್ರಿಕಾಲದರ್ಶಿಯಲ್ಲ. ಆದುದರಿಂದ ಅವನಿಗೆ ದಯೆ–ಕ್ಷಮೆಗಳೇ ನ್ಯಾಯ. ಅವನು ಸ್ವಯಂ ನಿರಂತರವೂ ನ್ಯಾಯಪಾತ್ರ, ಕ್ಷಮಾಯಾಚಕ. ಕ್ಷಮೆಯಿಂದಲೇ ಅವನು ಪರರಿಗೆ ನ್ಯಾಯ ಮಾಡಬಲ್ಲ. ಕ್ಷಮಾಗುಣ ಪಡೆದ ಮೇಲೆಯೆ ಕೊನೆಗೆ ಅವನು ಅಕರ್ತ–ಯೋಗಿ–ಸಮತಾವಂತ–ಕರ್ಮಕುಶಲ ಆಗುತ್ತಾನೆ.

ಈಶ್ವರ ಯಾರ ಪಾಪವನ್ನಾಗಲಿ ಪುಣ್ಯವನ್ನಾಗಲಿ ಹೊತ್ತುಕೊಳ್ಳುವುದಿಲ್ಲ. ಜ್ಞಾನದ ಮೇಲೆ ಅಜ್ಞಾನ ಮುಸುಕಿರುತ್ತದೆ. ಆದರಿಂದ ಜನರು ಮೋಹದಲ್ಲಿ ಬೀಳುತ್ತಾರೆ. ॥೧೫॥

ಟಿಪ್ಪಣಿ–ಅಜ್ಞಾನವಶರಾಗಿ 'ನಾನು ಮಾಡುತ್ತೇನೆ' ಎಂಬ ವೃತ್ತಿಯಿಂದ ಮನುಷ್ಯರು ತಾವು ಕರ್ಮಬಂಧನದಲ್ಲಿ ಸಿಲುಕಿದರೂ [illegible] ಫಲಗಳ ಆರೋಪವನ್ನು ಈಶ್ವರನ ಮೇಲೆ ಹೊರಿಸುತ್ತಾರೆ. ಇದೇ ಮೋಹಜಾಲ.

ಜ್ಞಾನೇನ ತು ತದಜ್ಞಾನಂ ಯೇಷಾಂ ನಾಶಿತಮಾತ್ಮನಃ ।
ತೇಷಾಮಾದಿತ್ಯವಜ್ಜ್ಞಾನಂ ಪ್ರಕಾಶಯತಿ ತತ್ಪರಮ್ ॥೧೬॥

ತದ್ಬುದ್ಧಯಸ್ತದಾತ್ಮಾನಸ್ತನ್ನಿಷ್ಠಾಸ್ತತ್ಪರಾಯಣಾಃ ।
ಗಚ್ಛಂತ್ಯಪುನರಾವೃತ್ತಿಂ ಜ್ಞಾನ ನಿರ್ಧೂತಕಲ್ಮಷಾಃ ॥೧೭॥

ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇ ಚ ಪಂಡಿತಸ್ಸಮದರ್ಶಿನಃ ॥೧೮॥

ಇಹೈವ ತೈರ್ಜಿತಸ್ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ ।
ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್ಬ್ರಹ್ಮಣಿ ತೇ ಸ್ಥಿತಾಃ ॥೧೯॥

ಆದರೆ ಆತ್ಮಜ್ಞಾನದ ಮೂಲಕ ಯಾರ ಅಜ್ಞಾನ ನಾಶವಾಗಿದೆಯೋ ಅವನು ಸೂರ್ಯನಂತೆ ಪ್ರಕಾಶಮಯವಾದ ಜ್ಞಾನದ, ಪರಮತತ್ತ್ವದ, ದರ್ಶನ ಹೊಂದುತ್ತಾನೆ. ॥೧೬॥

ಜ್ಞಾನದ ಮೂಲಕ ಪಾಪವನ್ನು ತೊಳೆದುಕೊಂಡು, ಈಶ್ವರನ ಧ್ಯಾನ ಮಾಡುತ್ತ ತನ್ಮಯರಾಗಿ, ಅದರಲ್ಲೇ ಸ್ಥಿರವಾಗಿದ್ದು, ಅದನ್ನೇ ಸರ್ವಸ್ವವೆಂದು ಭಾವಿಸುವವರು ಮೋಕ್ಷವನ್ನೈದುತ್ತಾರೆ. ॥೧೭॥

ವಿದ್ಯಾವಂತ–ವಿನಯವಂತ ಆದ ಬ್ರಾಹ್ಮಣನಲ್ಲಿಯೂ, ಹಸು, ಆನೆ, ನಾಯಿಗಳಲ್ಲಿಯೂ, ನಾಯಿಯನ್ನು ತಿನ್ನುವ ಮನುಷ್ಯರಲ್ಲಿಯೂ ಜ್ಞಾನಿಗಳು ಸಮದೃಷ್ಟಿಯನ್ನಿಡುತ್ತಾರೆ. ॥೧೮॥

ಟಿಪ್ಪಣಿ–ಎಲ್ಲರಿಗೂ ಅವರವರ ಅವಶ್ಯಕತಾನುಸಾರ ಸೇವೆ ಮಾಡುತ್ತಾರೆ. ಬ್ರಾಹ್ಮಣ–ಚಂಡಾಲರಲ್ಲಿ ಸಮಭಾವವಿಡುವರೆಂದರೆ, ಬ್ರಾಹ್ಮಣನಿಗೆ ಹಾವು ಕಚ್ಚಿದಾಗ ಪ್ರೇಮಭಾವದಿಂದ ಜ್ಞಾನಿಗಳು ಹೇಗೆ ಕಡಿದ ಸ್ಥಳವನ್ನು ಹೀರಿ ಅವನನ್ನು ವಿಷಮುಕ್ತನಾಗಿ ಮಾಡಲೆತ್ನಿಸುವರೊ ಹಾಗೆಯೆ ಚಂಡಾಲನಿಗೆ ಹಾವು ಕಡಿದಾಗಲೂ ಅವನ ವಿಷಯವನ್ನು ನಿವಾರಿಸಲು ಪ್ರಯತ್ನವನ್ನು ಮಾಡುತ್ತಾರೆಂದು ತಿಳಿಯಬೇಕು.

ಯಾರ ಮನಸ್ಸು ಸಮತ್ವದಲ್ಲಿ ಸ್ಥಿರವಾಗಿದೆಯೋ ಅವರು ಈ ದೇಹದಲ್ಲಿದ್ದೇ ಸಂಸಾರವನ್ನು ಗೆಲ್ಲುತ್ತಾರೆ. ಬ್ರಹ್ಮ ನಿರ್ದೋಷವಾಗಿದೆ; ಸಮಭಾವ ಪೂರ್ಣವಾಗಿದೆ. ಆದುದರಿಂದ ಅವರು ಬ್ರಹ್ಮನಲ್ಲಿ ಸ್ಥಿರರಾಗುತ್ತಾರೆ.

ಟಿಪ್ಪಣಿ–ಮನುಷ್ಯ ಯಾವುದನ್ನು ಕುರಿತು ಹೇಗೆ ಚಿಂತಿಸುತ್ತಾನೋ ಹಾಗೆಯೇ ಆಗುತ್ತಾನೆ. ಆದುದರಿಂದ ಸಮತ್ವವನ್ನು ಚಿಂತಿಸಿ ದೋಷರಹಿತನಾಗಿ, ಸಮತ್ವದ ಮೂರ್ತಿಯಾದ ನಿರ್ದೋಷ ಬ್ರಹ್ಮವನ್ನು ಪಡೆಯುತ್ತಾನೆ.

ಪ್ರಹೃಷ್ಯೇತ್ ಪ್ರಿಯಂ ಪ್ರಾಪ್ಯ ನೋದ್ವಿಜೇತ್ ಪ್ರಾಪ್ಯ ಚಾಪ್ರಿಯಮ್ ।
ರಬುದ್ಧಿರಸಮ್ಮೂಢೋ ಬ್ರಹ್ಮವಿದ್ಬ್ರಹ್ಮಣಿ ಸ್ಥಿತಃ ॥೨೦॥

ಹ್ಯ ಸ್ಪರ್ಶೇಷ್ವಸಕ್ತಾತ್ಮಾ ವಿಂದತ್ಯಾತ್ಮನಿ ಯತ್ಸುಖಮ್ ।
ಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯ್ಯಮಶ್ನುತೇ ॥೨೧॥

ೕ ಹಿ ಸಂಸ್ಪರ್ಶಜಾ ಭೋಗಾ ದುಃಖಯೋನಯ ಏವ ತೇ ।
ದ್ಯಂತವಂತಃ ಕೌಂತೇಯ ನ ತೇಷು ರಮತೇ ಬುಧಃ ॥೨೨॥

ಕ್ನೋತೀಹೈವ ಯಸ್ಸೋಢುಂ ಪ್ರಾಕ್ ಶರೀರವಿಮೋಕ್ಷಣಾತ್ ।
ಮಕ್ರೋಧೋದ್ಭವಂ ವೇಗಂ ಸಂಯುಕ್ತಸ್ಸಸುಖೀ ನರಃ ॥೨೩॥

ೋಽಂತಸ್ಸುಖೋಽಂತರಾರಾಮಸ್ತಥಾಂತರ್ಜ್ಯೋತಿರೇವ ಯಃ ।
ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮಭೂತೋಽಧಿಗಚ್ಛತಿ ॥೨೪॥

ಯಾರ ಬುದ್ಧಿ ಸ್ಥಿರವಾಗಿದೆಯೋ, ಯಾರ ಮೋಹ ನಷ್ಟವಾಗಿದೆಯೋ, ಯಾರು ತ್ವವನ್ನು ಅರಿತು ಬ್ರಹ್ಮಪರಾಯಣನಾಗಿದಾನೆಯೋ ಅವನು ಇಷ್ಟಾರ್ಥವನ್ನು ಪಡೆದರೆ ುಖ ಪಡ. ಅಪ್ರಿಯವಾದರೆ ದುಃಖ ಪಡ. ॥೨೦॥

ಬಾಹ್ಯ ವಿಷಯಗಳಲ್ಲಿ ಆಸಕ್ತಿಯಿಲ್ಲದ ಪುರುಷ ಆತ್ಮದಲ್ಲಿ ಯಾವ ಆನಂದವನ್ನು ಉಪಭೋಗಿಸುತ್ತಾನೋ ಅದೇ ಅಕ್ಷಯ ಆನಂದವನ್ನು ಬ್ರಹ್ಮ ಪರಾಯಣ ಪುರುಷನೂ ನುಭವಿಸುತ್ತಾನೆ.

ಟಿಪ್ಪಣಿ–ಅಂತರ್ಮುಖಿಯಾದವನೇ ಈಶ್ವರ ಸಾಕ್ಷಾತ್ಕಾರ ಪಡೆದು ಪರಮ ನಂದ ಹೊಂದುತ್ತಾನೆ. ವಿಷಯಗಳಿಂದ ನಿವೃತ್ತರಾಗಿ ಕರ್ಮಮಾಡುವುದು, ಬ್ರಹ್ಮ ಮಾಧಿಯಲ್ಲಿ ನಿರತರಾಗಿರುವುದು–ಇವೆರಡೂ ಭಿನ್ನವಸ್ತುಗಳಲ್ಲ. ಒಂದೇ ವಸ್ತುವನ್ನು ೋಡುವ ಎರಡು ಬಗೆಯ ದೃಷ್ಟಿ : ಒಂದೇ ನಾಣ್ಯದ ಎರಡು ಪಕ್ಕಗಳಂತೆ.

ವಿಷಯಜನ್ಯ ಭೋಗಗಳು ಅವಶ್ಯವಾಗಿಯೂ ದುಃಖಕ್ಕೆ ಕಾರಣ. ಕೌಂತೇಯ, ವಕ್ಕೆ ಆದಿ–ಅಂತ್ಯ ಇದೆ. ತಿಳಿದವರು ಇವುಗಳಲ್ಲಿ ತೊಡಗರು. ॥೨೨॥

ದೇಹತ್ಯಾಗಕ್ಕೆ ಮುಂಚೆಯೇ ಈ ದೇಹದಿಂದಲೇ ಕಾಮ–ಕ್ರೋಧಗಳ ವೇಗವನ್ನು ಹಿಸುವ ಶಕ್ತಿ ಪಡೆದ ಮನುಷ್ಯ ಸಮತ್ವವನ್ನು ಹೊಂದಿದಾನೆ. ಅವನೇ ಸುಖಿ. ॥೨೩॥

ಟಿಪ್ಪಣಿ–ಪ್ರಾಣವಿಲ್ಲದ ಶರೀರಕ್ಕೆ ಇಚ್ಛೆ, ದ್ವೇಷ, ಸುಖ–ದುಃಖ ಉಂಟಾಗದು ದರಂತೆ, ಬದುಕಿದ್ದರೂ ಹೆಣದಂತೆ ಯಾರು ಜಡಭರತನ ಹಾಗೆ ದೇಹಾತೀತನಾಗಿದ್ದಾ ೆಯೋ ಅವನು ಈ ಜಗತ್ತಿನಲ್ಲಿ ವಿಜಯಿ. ಅವನು ನಿಜವಾದ ಸುಖವನ್ನರಿತವನು.

ಆಂತರಿಕ ಆನಂದವನ್ನು ಹೊಂದಿದ, ಅಂತಶ್ಶಾಂತಿಯುಳ್ಳ ಅಂತರ್ಜ್ಞಾನವುಳ್ಳ ಆ ್ರಹ್ಮರೂಪಿಯಾದ ಯೋಗಿ ಬ್ರಹ್ಮನಿರ್ವಾಣವನ್ನೈದುತ್ತಾನೆ. ॥೨೪॥

ಲಭಂತೇ ಬ್ರಹ್ಮನಿರ್ವಾಣಮೃಷಯಃ ಕ್ಷೀಣಕಲ್ಮಷಾಃ ।
ಛಿನ್ನದ್ವೈಧಾ ಯತಾತ್ಮಾನಸ್ಸರ್ವ ಭೂತಹಿತೇ ರತಾಃ ॥೨೫॥

ಕಾಮಕ್ರೋಧವಿಯುಕ್ತಾನಾಂ ಯತೀನಾಂ ಯತಚೇತಸಾಮ್ ।
ಅಭಿತೋ ಬ್ರಹ್ಮನಿರ್ವಾಣಂ ವರ್ತತೇ ವಿದಿತಾತ್ಮನಾಮ್ ॥೨೬॥

ಸ್ಪರ್ಶಾನ್ ಕೃತ್ವಾ ಬಹಿರ್ಬಾಹ್ಯಾಂಶ್ಚಕ್ಷುಶ್ಚೈವಾಂತರೇ ಭ್ರುವೋಃ ।
ಪ್ರಾಣಾಪಾನೌ ಸಮೌ ಕೃತ್ವಾ ನಾಸಾಭ್ಯಂತರಚಾರಿಣೌ ॥೨೭॥

ಯತೇಂದ್ರಿಯ ಮನೋಬುದ್ಧಿರ್ಮುನಿರ್ಮೋಕ್ಷಪರಾಯಣಃ ।
ವಿಗತೇಚ್ಛಾಭಯಕ್ರೋಧೋ ಯಸ್ಸದಾ ಮುಕ್ತ ಏವ ಸಃ ॥೨೮॥

ಯಾರ ಪಾಪಗಳು ನಾಶವಾಗಿವೆಯೋ, ಯಾರ ಸಂಶಯಗಳು ದೂರವಾಗಿವೆಯೋ, ಯಾರಿಗೆ ತಮ್ಮ ಮನಸ್ಸಿನ ಮೇಲೆ ಅಧಿಕಾರವಿದೆಯೋ, ಯಾರು ಪ್ರಾಣಿಮಾತ್ರಗಳ ಹಿತದಲ್ಲಿಯೇ ನಿರತರೊ ಅಂಥ ಋಷಿಗಳು ಬ್ರಹ್ಮನಿರ್ವಾಣವನ್ನು ಹೊಂದುತ್ತಾರೆ. ॥೨೫॥

ಯಾರು ಆತ್ಮಜ್ಞಾನ ಪಡೆದಿದ್ದಾರೋ, ಯಾರು ಕಾಮಕ್ರೋಧಗಳನ್ನು ಗೆದ್ದಿದ್ದಾರೋ, ಯಾರು ಮನಸ್ಸನ್ನು ವಶಪಡಿಸಿಕೊಂಡಿದ್ದಾರೋ, ಅಂಥ ಋಷಿಗಳಿಗೆ ಸರ್ವತ್ರ ಬ್ರಹ್ಮನಿರ್ವಾಣ ಲಭಿಸುತ್ತದೆ. ॥೨೬॥

ಹೊರಗಣ ವಿಷಯಭೋಗಗಳನ್ನು ಬಹಿಷ್ಕರಿಸಿ, ದೃಷ್ಟಿಯನ್ನು ಎರಡು ಹುಬ್ಬುಗಳ ಮಧ್ಯೆ ಸ್ಥಿರವಾಗಿ ನಿಲ್ಲಿಸಿ, ಮೂಗಿನ ರಂಧ್ರಗಳ ಮೂಲಕ ಹೋಗಿ ಬರುವ ಪ್ರಾಣ–ಅಪಾನ ವಾಯುಗಳ ಗತಿಯನ್ನು ಒಂದೇ ಸಮವಾಗಿಟ್ಟುಕೊಂಡು, ಇಂದ್ರಿಯ–ಮನಸ್ಸು–ಬುದ್ಧಿಗಳನ್ನು ಸ್ವಾಧೀನದಲ್ಲಿಟ್ಟುಕೊಂಡು, ಇಚ್ಛೆ–ಭಯ–ಕ್ರೋಧಗಳಿಲ್ಲದೆ, ಮೋಕ್ಷಪರಾಯಣನಾಗಿರುವ ಮುನಿ ನಿರಂತರ ಮುಕ್ತ. ॥೨೭–೨೮॥

ಟಿಪ್ಪಣಿ–ಒಳಗಿನಿಂದ ಹೊರಗೆ ಬರುವುದು ಅಪಾನವಾಯು. ಹೊರಗಿನಿಂದ ಒಳಗೆ ಹೋಗುವುದು ಪ್ರಾಣವಾಯು. ಈ ಶ್ಲೋಕದಲ್ಲಿ ಪ್ರಾಣಾಯಾಮಾದಿ ಯೌಗಿಕ ಕ್ರಿಯೆಗಳ ಸಮರ್ಥನವಿದೆ. ಪ್ರಾಣಾಯಾಮಾದಿಗಳು ಬಾಹ್ಯ ಕ್ರಿಯೆಗಳು. ಶರೀರವನ್ನು ಸ್ವಸ್ಥವಾಗಿಡುವುದು, ಅದನ್ನು ಪರಮಾತ್ಮನ ವಾಸಕ್ಕೆ ಯೋಗ್ಯ ಮಂದಿರವಾಗಿ ಮಾಡುವುದು ಇಷ್ಟೇ ಅದರ ಉಪಯೋಗ. ಸಾಮಾನ್ಯ ವ್ಯಾಯಾಮಗಳಿಂದ ಭೋಗಿಗೆ ಯಾವ ಉದ್ದೇಶ್ಯ ಸಾಧನೆಯಾಗುತ್ತದೋ, ಯೋಗಿಗೆ ಅದೇ ಉದ್ದೇಶ್ಯಸಾಧನೆ ಪ್ರಾಣಾಯಾಮಗಳಿಂದ ಸಿದ್ಧಿಸುತ್ತದೆ. ವ್ಯಾಯಾಮಾದಿಗಳು ಭೋಗಿಯ ಇಂದ್ರಿಯಗಳನ್ನು ಉತ್ತೇಜನಗೊಳಿಸಲು ಸಹಾಯಕ. ಪ್ರಾಣಾಯಾಮಾದಿಗಳು ಶರೀರವನ್ನು ನಿರೋಗವಾಗಿಯೂ ಗಟ್ಟಿಯಾಗಿಯೂ ಮಾಡಿದರೂ, ಅವನ ಇಂದ್ರಿಯಗಳನ್ನು ಶಾಂತವಾಗಿರಿಸಲು ಸಹಾಯಕ. ಈಗಿನ ಕಾಲದಲ್ಲಿ ಪ್ರಾಣಾಯಾಮಾದಿ ವಿಧಿಗಳು ಕೆಲವರಿಗೆ ಮಾತ್ರ ಗೊತ್ತಿದೆ. ಅವರಲ್ಲಿಯೂ ಸ್ವಲ್ಪ ಜನ ಮಾತ್ರವೇ ಅವುಗಳ ಸದುಪಯೋಗ ಮಾಡುತ್ತಾರೆ.

ಭೋಕ್ತಾರಂ ಯಜ್ಞತಪಸಾಂ ಸರ್ವಲೋಕಮಹೇಶ್ವರಮ್ ।
ಸುಹೃದಯಂ ಸರ್ವಭೂತಾನಾಂ ಜ್ಞಾತ್ವಾ ಮಾಂ ಶಾಂತಿಮೃಚ್ಛತಿ ॥೨೯॥

ಹರಿಃ ಓಂ ತತ್ಸತ್

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀ ಕೃಷ್ಣಾರ್ಜುನಸಂವಾದೇ
ಕರ್ಮಸಂನ್ಯಾಸಯೋಗೋ ನಾಮ ಪಂಚಮೋಽಧ್ಯಾಯಃ ॥

ಇಂದ್ರಿಯ, ಮನಸ್ಸು, ಬುದ್ಧಿಗಳನ್ನು ಸ್ವಲ್ಪವಾದರೂ ಸ್ವಾಧೀನಪಡಿಸಿಕೊಂಡವರಿಗೆ, ಮೋಕ್ಷಪರಾಯಣರಿಗೆ, ರಾಗದ್ವೇಷಾದಿಗಳನ್ನು ಗೆದ್ದು ಭಯವನ್ನು ತ್ಯಜಿಸಿದವರಿಗೆ, ಪ್ರಾಣಾಯಾಮಾದಿಗಳು ಪ್ರಯೋಜನಕರ, ಸಹಾಯಕ. ಅಂತಶ್ಶೌಚಹೀನ ಪ್ರಾಣಾಯಾಮಾದಿಗಳು ಬಂಧನದ ಕಾರಣವಾಗಿ ಮನುಷ್ಯನನ್ನು ಮೋಹಕೂಪದಲ್ಲಿ ಬಹಳ ಆಳಕ್ಕೆ ಒಯ್ಯಬಲ್ಲವು. ಒಯ್ಯುತ್ತವೆ ಎಂಬುದು ಬಹುಜನರ ಅನುಭವ. ಆದುದರಿಂದ ಯೋಗೀಂದ್ರ ಪತಂಜಲಿ ಯಮನಿಯಮಗಳಿಗೆ ಪ್ರಥಮ ಸ್ಥಾನವನ್ನಿತ್ತು, ಅವುಗಳ ಸಾಧಕರಿಗೇ ಪ್ರಾಣಾಯಾಮಾದಿಗಳು ಮೋಕ್ಷಮಾರ್ಗದಲ್ಲಿ ಸಹಾಯಕ ಎಂದು ಹೇಳಿದಾರೆ.

ಯಮ ಐದು ಬಗೆ–ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ : ನಿಯಮವೂ ಐದು ಬಗೆ–ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ, ಈಶ್ವರಪ್ರಣಿಧಾನ.

ಯಜ್ಞ–ತಪಸ್ಸುಗಳ ಭೋಕ್ತ ಸರ್ವಲೋಕಮಹೇಶ್ವರ, ಭೂತ ಮಾತ್ರಗಳ ಹಿತಕಾರಿ ಎಂದು ನನ್ನನ್ನು ತಿಳಿದು (ಮುನಿ) ಶಾಂತಿಹೊಂದುತ್ತಾನೆ. ॥೨೯॥

ಟಿಪ್ಪಣಿ–ಈ ಅಧ್ಯಾಯದಲ್ಲಿ ಹದಿನಾಲ್ಕು, ಹದಿನೈದು ಹಾಗೂ ಎರಡನೆಯ ಶ್ಲೋಕಗಳಿಗೆ ಈ ಶ್ಲೋಕ ವಿರೋಧವೆಂದು ಭಾವಿಸಬಾರದು. ಈಶ್ವರ ಸರ್ವಶಕ್ತಿವಂತನಾದುದರಿಂದ ಕರ್ತ–ಅಕರ್ತ, ಭೋಕ್ತ–ಅಭೋಕ್ತ–ಹೀಗೆ ಬೇಕಾದುದು ಆಗಿರಬಹುದು, ಆಗದೆಯೂ ಇರಬಹುದು. ಆ ವಿಚಾರ ಅವರ್ಣನೀಯ. ಮನುಷ್ಯನ ಭಾಷೆಗೆ ಅದು ಅತೀತ. ಆದುದರಿಂದ ಅವನಲ್ಲಿ ಪರಸ್ಪರ ವಿರುದ್ಧ ಗುಣ–ಶಕ್ತಿಗಳನ್ನು ಆರೋಪಿಸಿಯೂ ಕೂಡ ಮನುಷ್ಯ ಅವನನ್ನು ದರ್ಶಿಸುವ ಆಸೆಯಿಟ್ಟುಕೊಳ್ಳುತ್ತಾನೆ.

ಓಂ ತತ್ಸತ್

ಈ ಬಗೆಯಾಗಿ ಶ್ರೀಮದ್ಭಗವದ್ಗೀತಾರೂಪ ಉಪನಿಷತ್ ಅಥವಾ
ಬ್ರಹ್ಮವಿದ್ಯಾಂತರ್ಗತ ಯೋಗಶಾಸ್ತ್ರದ ಶ್ರೀ ಕೃಷ್ಣಾರ್ಜುನಸಂವಾದದಲ್ಲಿ
ಕರ್ಮಸಂನ್ಯಾಸಯೋಗವೆಂಬ ಐದನೆಯ ಅಧ್ಯಾಯ.

***

ಅಧ್ಯಾಯ ೬

ಧ್ಯಾನಯೋಗ

(ಈ ಅಧ್ಯಾಯದಲ್ಲಿ ಯೋಗಸಾಧನೆಗೆ, ಸಮತ್ವಪ್ರಾಪ್ತಿಗೆ
ಕೆಲವು ಸಾಧನಗಳನ್ನು ಹೇಳಲಾಗಿದೆ.)

ಅಥ ಷಷ್ಠೋಽಧ್ಯಾಯಃ

ಶ್ರೀ ಭಗವಾನುವಾಚ

ಅನಾಶ್ರಿತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿ ಯಃ ।
ಸ ಸಂನ್ಯಾಸೀ ಚ ಯೋಗೀ ಚ ನ ನಿರಗ್ನಿರ್ನ ಚಾಕ್ರಿಯಃ ॥೧॥

ಯಂ ಸಂನ್ಯಾಸಮಿತಿ ಪ್ರಾಹುರ್ಯೋಗಂ ತಂ ವಿದ್ಧಿ ಪಾಂಡವ ।
ನ ಹ್ಯಸಂನ್ಯಸ್ತಸಂಕಲ್ಪೋ ಯೋಗೀ ಭವತಿ ಕಶ್ಚನ ॥೨॥

ಶ್ರೀ ಭಗವಂತ :

ಕರ್ಮಫಲವನ್ನು ಆಶ್ರಯಿಸದೆ ವಿಹಿತ (ಕರ್ತವ್ಯ) ಕರ್ಮವನ್ನು ಮಾಡುವ ಮನುಷ್ಯನೇ ಸಂನ್ಯಾಸಿ, ಅವನೇ ಯೋಗಿ; ಅಗ್ನಿಯನ್ನು ಎಲ್ಲಾ ಬಗೆಯ ಕ್ರಿಯೆಗಳನ್ನು ತ್ಯಾಗಮಾಡಿ ಕುಳಿತವನಲ್ಲ. ॥೧॥

ಟಿಪ್ಪಣಿ–ಅಗ್ನಿಯೆಂದರೆ ಸಾಧನಮಾತ್ರವೆಂದು ಅರ್ಥ. ಅಗ್ನಿಯ ಮೂಲಕ ಹೋಮವಾಗುತ್ತಿದ್ದಾಗ ಅಗ್ನಿಯ ಅವಶ್ಯಕತೆಯಿತ್ತು. ಈ ಯುಗದಲ್ಲಿ ರಾಟೆ ಸೇವೆಯ ಸಾಧನವಾಗಿದೆ. ಅದರ ತ್ಯಾಗದಿಂದ ಯಾರೂ ಸಂನ್ಯಾಸಿಯಾಗಲಾರ.

ಪಾಂಡವ ! ಸಂನ್ಯಾಸವೇ ಯೋಗ ಎಂದು ನೀನು ತಿಳಿದುಕೊ. ಯಾರು ಮನಸ್ಸಿನ ಸಂಕಲ್ಪಗಳನ್ನು ಬಿಟ್ಟಿಲ್ಲವೊ ಅವನು ಯೋಗಿಯಾಗಲಾರ. ॥೨॥

ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ ।
ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥೩॥

ಯದಾ ಹಿ ನೇಂದ್ರಿಯಾರ್ಥೇಷು ನ ಕರ್ಮಸ್ವನುಷಜ್ಜತೇ ।
ಸರ್ವಸಂಕಲ್ಪಸಂನ್ಯಾಸೀ ಯೋಗಾರೂಢಸ್ತದೋಚ್ಯತೇ ॥೪॥

ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।
ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ॥೫॥

ಬಂಧುರಾತ್ಮಾತ್ಮನಸ್ತಸ್ಯ ಯೇನಾತ್ಮೈವಾತ್ಮನಾ ಜಿತಃ ।
ಅನಾತ್ಮನಸ್ತು ಶತ್ರುತ್ವೇ ವರ್ತೇತಾತ್ಮೈವ ಶತ್ರುವತ್ ॥೬॥

ಜಿತಾತ್ಮನಃ ಪ್ರಶಾಂತಸ್ಯ ಪರಮಾತ್ಮಾ ಸಮಾಹಿತಃ ।
ಶೀತೋಷ್ಣಸುಖದುಃಖೇಷು ತಥಾ ಮಾನಾಪಮಾನಯೋಃ ॥೭॥

ಯೋಗದ ಸಾಧಕನಿಗೆ ಕರ್ಮ ಸಾಧನ. ಅದನ್ನು ಸಾಧಿಸಿದವನಿಗೆ ಶಾಂತಿ ಸಾಧನ. ॥೩॥

ಟಿಪ್ಪಣಿ–ಆತ್ಮಶುದ್ಧಿಯಾದವನಿಗೆ, ಸಮತ್ವ ಸಿದ್ಧಿಸಿದವನಿಗೆ ಆತ್ಮದರ್ಶನ ಸ್ವಾಭಾವಿಕ. ಇದರ ಅರ್ಥ, ಯೋಗಾರೂಢನಾದ ವ್ಯಕ್ತಿ ಲೋಕಸಂಗ್ರಹಕ್ಕಾಗಿಯೂ ಕರ್ಮ ಮಾಡಬೇಕಾಗಿಲ್ಲವೆಂದಲ್ಲ. ಲೋಕಸಂಗ್ರಹದ ವಿನಾ ಅವನು ಜೀವಿಸಲಾರ. ಆದುದರಿಂದ ಅವನಿಗೆ ಸೇವಾಕರ್ಮ ಮಾಡುವುದು ಸ್ವಾಭಾವಿಕವಾಗುತ್ತದೆ. ತೋರಿಕೆಗಾಗಿ ಅವನು ಯಾವುದನ್ನೂ ಮಾಡ. (ಅಧ್ಯಾಯ ೩–೪, ಅಧ್ಯಾಯ ೫–೨ ಸೇರಿಸಿ ನೋಡಿ).

ಯಾವಾಗ ಮನುಷ್ಯ ಇಂದ್ರಿಯ ವಿಷಯಗಳಲ್ಲಾಗಲಿ ಕರ್ಮಗಳಲ್ಲಿ ಆಗಲಿ ಅನಾಸಕ್ತನಾಗುವನೋ, ಸರ್ವಸಂಕಲ್ಪಗಳನ್ನೂ ತ್ಯಜಿಸುವನೋ, ಆಗ ಅವನು ಯೋಗಾರೂಢನೆಂದು ಹೇಳುತ್ತಾರೆ. ॥೪॥

ಆತ್ಮದ ಮೂಲಕ ಮನುಷ್ಯ ಆತ್ಮದ ಉದ್ಧಾರ ಮಾಡಬೇಕು. ಅದಕ್ಕೆ ಅಧೋಗತಿ ತರಬಾರದು. ಆತ್ಮವೇ ಆತ್ಮಕ್ಕೆ ಬಂಧು, ಆತ್ಮವೇ ಆತ್ಮಕ್ಕೆ ಶತ್ರು. ॥೫॥

ತನ್ನ ಬಲದಿಂದ ಮನಸ್ಸನ್ನು ಯಾರು ಗೆದ್ದಿದ್ದಾನೋ ಅವನಿಗೆ ಆತ್ಮವೇ ಬಂಧು. ಆತ್ಮವನ್ನು ಸ್ವಾಧೀನಪಡಿಸಿಕೊಳ್ಳದವನು ತನಗೆ ತಾನೇ ಶತ್ರುವಿನಂತೆ ವ್ಯವಹರಿಸುತ್ತಾನೆ. ॥೬॥

ತನ್ನ ಮನಸ್ಸನ್ನು ಗೆದ್ದು ಸಂಪೂರ್ಣ ಶಾಂತನಾದವನ ಆತ್ಮ ಶೀತೋಷ್ಣಗಳಲ್ಲಿ, ಸುಖದುಃಖಗಳಲ್ಲಿ ಮಾನಾಪಮಾನಗಳಲ್ಲಿ ಒಂದೇ ಸಮನಾಗಿರುತ್ತದೆ. ॥೭॥

ಜ್ಞಾನವಿಜ್ಞಾನತೃಪ್ತಾತ್ಮಾ ಕೂಟಸ್ಥೋ ವಿಜಿತೇಂದ್ರಿಯಃ ।
ಯುಕ್ತ ಇತ್ಯುಚ್ಯತೇ ಯೋಗೀ ಸಮಲೋಷ್ಟಾಶ್ಮಕಾಂಚನಃ ॥೮॥

ಸುಹೃನ್ಮಿತ್ರಾರ್ಯುದಾಸೀನ ಮಧ್ಯಸ್ಥದ್ವೇಷ್ಯಬಂಧುಷು ।
ಸಾಧುಷ್ವಪಿ ಚ ಪಾಪೇಷು ಸಮಬುದ್ಧಿರ್ವಿಶಿಷ್ಯತೇ ॥೯॥

ಯೋಗೀ ಯುಂಜೀತ ಸತತಮಾತ್ಮಾನಂ ರಹಸಿ ಸ್ಥಿತಃ ।
ಏಕಾಕೀ ಯತಚಿತ್ತಾತ್ಮಾ ನಿರಾಶೀರಪರಿಗ್ರಹಃ ॥೧೦॥

ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ ।
ನಾತ್ಯುಚ್ಛ್ರಿತಂ ನಾತಿನೀಚಂ ಚೈಲಾಜಿನಕುಶೋತ್ತರಮ್ ॥೧೧॥

ತತ್ರೈಕಾಗ್ರಂ ಮನಃ ಕೃತ್ವಾ ಯತಚಿತ್ತೇಂದ್ರಿಯಕ್ರಿಯಃ ।
ಉಪವಿಶ್ಯಾಸನೇ ಯುಂಜ್ಯಾದ್ಯೋಗಮಾತ್ಮವಿಶುದ್ಧಯೇ ॥೧೨॥

ಜ್ಞಾನಾನುಭವಗಳಿಂದ ತೃಪ್ತ, ಅವಿಚಲ, ಇಂದ್ರಿಯಜಿತ ಯಾರೋ; ಯಾರ ಮನಸ್ಸಿಗೆ ಕಲ್ಲು–ಮಣ್ಣು–ಬಂಗಾರಗಳು ಸಮಾನವೋ, ಅಂಥ ಈಶ್ವರ ಪರಾಯಣ ಮನುಷ್ಯ ಯೋಗಿ ಎನಿಸುತ್ತಾನೆ. ॥೮॥

ಹಿತೈಷಿ, ಮಿತ್ರ, ಶತ್ರು, ನಿಷ್ಪಕ್ಷಪಾತಿ, ಇಬ್ಬರ ಹಿತವನ್ನೂ ಬಯಸುವವನು, ದ್ವೇಷ ಪಾತ್ರ, ಬಂಧು, ಸಾಧು, ಪಾಪಿ–ಇವರೆಲ್ಲರಲ್ಲಿ ಸಮಭಾವ ಇಡುವವನು ಶ್ರೇಷ್ಠ. ॥೯॥

ಚಿತ್ತವನ್ನು ಸ್ಥಿರಗೊಳಿಸಿ, ವಾಸನೆ–ಸಂಗ್ರಹಗಳನ್ನು ತ್ಯಜಿಸಿ, ಒಬ್ಬನೇ ಏಕಾಂತ ದಲ್ಲಿದ್ದು, ಯೋಗಿ ನಿರಂತರವೂ ಆತ್ಮವನ್ನು ಪರಮಾತ್ಮನೊಂದಿಗೆ ಸೇರಿಸಬೇಕು. ॥೧೦॥

ಪವಿತ್ರವಾದ ಸ್ಥಳದಲ್ಲಿ, ಬಹಳ ಎತ್ತರವಾಗಲಿ ಬಹಳ ಕೆಳಗಾಗಲಿ ಇರದಂತೆ, ಮೊದಲು ದರ್ಭೆ, ಮೃಗಚರ್ಮ, ವಸ್ತ್ರಗಳನ್ನು ಹಾಸಿ ತನಗಾಗಿ ಸ್ಥಿರ ಆಸನವನ್ನು ಮಾಡಿ, ಅದರ ಮೇಲೆ ಏಕಾಗ್ರಮನಸ್ಸಿನಿಂದ ಕುಳಿತು ಚಿತ್ತವನ್ನೂ ಇಂದ್ರಿಯಗಳನ್ನೂ ಸ್ವಾಧೀನಪಡಿಸಿಕೊಂಡು, ಆತ್ಮಶುದ್ಧಿಗಾಗಿ ಯೋಗವನ್ನು ಸಾಧಿಸಬೇಕು. ॥೧೧–೧೨॥

ಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ ।
ಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್ ॥೧೩॥

ಶಾಂತಾತ್ಮಾ ವಿಗತಭೀರ್ಬ್ರಹ್ಮಚಾರಿವ್ರತೇ ಸ್ಥಿತಃ ।
ನಸ್ಸಂಯಮ್ಯ ಮಚ್ಚಿತ್ತೋ ಯುಕ್ತ ಅಸೀತ ಮತ್ಪರಃ ॥೧೪॥

ಯುಂಜನ್ನೇವಂ ಸದಾತ್ಮಾನಂ ಯೋಗೀ ನಿಯತಮಾನಸಃ ।
ಂತಿಂ ನಿರ್ವಾಣಪರಮಾಂ ಮತ್ಸಂಸ್ಥಾಮಧಿಗಚ್ಛತಿ ॥೧೫॥

ತ್ಯಶ್ನತಸ್ತು ಯೋಗೋಽಸ್ತಿ ನ ಚೈಕಾಂತಮನಶ್ನತಃ ।
ಚಾತಿಸ್ವಪ್ನನಶೀಲಸ್ಯ ಜಾಗ್ರತೋ ನೈವ ಚಾರ್ಜುನ ॥೧೬॥

ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ।
ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥೧೭॥

ಯದಾ ವಿನಿಯತಂ ಚಿತ್ತಮಾತ್ಮನ್ಯೇವಾವತಿಷ್ಠತೇ ।
ಸ್ಪೃಹಸ್ಸರ್ವಕಾಮೇಭ್ಯೋ ಯುಕ್ತ ಇತ್ಯುಚ್ಯತೇ ಸದಾ ॥೧೮॥

ಶರೀರ, ಕುತ್ತಿಗೆ ತಲೆಗಳನ್ನು ಸಮವಾಗಿ ಏಕರೇಷೆಯಲ್ಲಿ ನಿಶ್ಚಲವಾಗಿ ಹಿಡಿದು
ಅಲ್ಲಿ-ಇಲ್ಲಿ ನೋಡದೆ ತನ್ನ ನಾಸಿಕಾಗ್ರದಲ್ಲಿ ದೃಷ್ಟಿ ನೆಟ್ಟು, ಶಾಂತಿಯಿಂದ ಭಯರಹಿತ
ನಾಗಿ, ಬ್ರಹ್ಮಚರ್ಯೆಯಲ್ಲಿ ದೃಢನಾಗಿ, ಮನಸ್ಸನ್ನು ಬಿಗಿ ಹಿಡಿದು ನನ್ನಲ್ಲಿ ಪರಾಯಣ
ನಾಗಿ, ಯೋಗಿ ನನ್ನ ಧ್ಯಾನದಲ್ಲಿ ಮಗ್ನನಾಗಿ ಕುಳಿತುಕೊಳ್ಳಬೇಕು. ॥೧೩-೧೪॥

ಟಿಪ್ಪಣಿ–ನಾಸಿಕಾಗ್ರವೆಂದರೆ ಹುಬ್ಬುಗಳ ನಡುವಿನ ಭಾಗ. (ಅಧ್ಯಾಯ ೫, ಶ್ಲೋಕ೨೭) ಬ್ರಹ್ಮಚರ್ಯ ವ್ರತವೆಂದರೆ ಕೇವಲ ವೀರ್ಯಸಂಗ್ರಹ ಮಾತ್ರವಲ್ಲ; ಬ್ರಹ್ಮಪ್ರಾಪ್ತಿಗಾಗಿ ಅವಶ್ಯಕವಾದ ಅಹಿಂಸಾದಿ ಸಕಲ ವ್ರತಗಳೂ.

ಯಾರ ಮನಸ್ಸು ಹೀಗೆ ನಿಯಮಬದ್ಧವೋ ಅಂಥ ಯೋಗಿ ಆತ್ಮವನ್ನು ಪರಮಾತ್ಮ
ನಲ್ಲಿ ಸೇರಿಸುತ್ತಾನೆ. ನನ್ನನ್ನು ಪಡೆದರೆ ಸಿಗುವ ಮೋಕ್ಷ ರೂಪವಾದ ಪರಮಶಾಂತಿಯನ್ನು
ಅವನು ಪಡೆಯುತ್ತಾನೆ. ॥೧೫॥

ಅರ್ಜುನ, ಹೊಟ್ಟೆ ಬಾಕನಿಗಾಗಲಿ, ಉಪವಾಸ ಮಾಡುವವನಿಗಾಗಲಿ, ಈ ಸಮತ್ವ ರೂಪ ಯೋಗ ಲಭಿಸದು ; ವಿಶೇಷ ನಿದ್ದೆ ಮಾಡುವವನಿಗೂ, ಬಹಳ ನಿದ್ದೆಗೇಡಿಗೂ ಲಭಿಸದು. ॥೧೬॥

ಆಹಾರವಿಹಾರದಲ್ಲಿಯೂ, ಬೇರೆ ಕರ್ಮಗಳಲ್ಲಿಯೂ ನಿದ್ದೆ-ಎಚ್ಚರಗಳಲ್ಲಿಯೂ ಪರಿಮಿತಿಯುಳ್ಳ ಮನುಷ್ಯನ ಯೋಗ ದುಃಖನಾಶಕವಾಗುತ್ತದೆ. ॥೧೭॥

ಚೆನ್ನಾಗಿ ನಿಯಮಬದ್ಧವಾದ ಮನಸ್ಸು ಆತ್ಮದಲ್ಲಿ ಸ್ಥಿರವಾದಾಗ, ಮನುಷ್ಯ ಎಲ್ಲಾ ಕಾಮನೆಗಳಿಂದ ನಿಸ್ಪೃಹನಾಗಿ ಕುಳಿತಾಗ ಅವನು ಯೋಗಿ ಎನ್ನುತ್ತಾರೆ. ॥೧೮॥

ಯಥಾ ದೀಪೋ ನಿವಾತಸ್ಥೋ ನೇಂಗತೇ ಸೋಪಮಾ ಸ್ಮೃತಾ ।
ಯೋಗಿನೋ ಯತಚಿತ್ತಸ್ಯ ಯುಂಜತೋ ಯೋಗಮಾತ್ಮನಃ ॥೧೯॥

ಯತ್ರೋಪರಮತೇ ಚಿತ್ತಂ ನಿರುದ್ಧಂ ಯೋಗಸೇವಯಾ ।
ಯತ್ರ ಚೈವಾತ್ಮನಾತ್ಮಾನಂ ಪಶ್ಯನ್ನಾತ್ಮನಿ ತುಷ್ಯತಿ ॥೨೦॥

ಸುಖಮಾತ್ಯಂತಿಕಂ ಯತ್ತದ್ಬುದ್ಧಿಗ್ರಾಹ್ಯಮತೀಂದ್ರಿಯಮ್ ।
ವೇತ್ತಿ ಯತ್ರ ನ ಚೈವಾಯಂ ಸ್ಥಿತಶ್ಚಲತಿ ತತ್ತ್ವತಃ ॥೨೧॥

ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ ।
ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಪಿ ವಿಚಾಲ್ಯತೇ ॥೨೨॥

ತಂ ವಿದ್ಯಾದ್ದುಃಖಸಂಯೋಗವಿಯೋಗಂ ಯೋಗಸಂಜ್ಞಿತಮ್ ।
ಸ ನಿಶ್ಚಯೇನ ಯೋಕ್ತವ್ಯೋ ಯೋಗೋಽನಿರ್ವಿಣ್ಣಚೇತಸಾ ॥೨೩॥

ಸಂಕಲ್ಪ ಪ್ರಭವಾನ್ ಕಾಮಾಂಸ್ತ್ಯಕ್ತ್ವಾ ಸರ್ವಾನಶೇಷತಃ ।
ಮನಸೈವೇಂದ್ರಿಯಗ್ರಾಮಂ ವಿನಿಯಮ್ಯ ಸಮಂತತಃ ॥೨೪॥

ಶನೈಶ್ಶನೈರುಪರಮೇದ್ಬುದ್ಧ್ಯಾ ಧೃತಿಗೃಹೀತಯಾ ।
ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿಂತಯೇತ್ ॥೨೫॥

ಆತ್ಮವನ್ನು ಪರಮಾತ್ಮನೊಂದಿಗೆ ಬೆರಸುವ ಪ್ರಯತ್ನ ಮಾಡುವ ಸ್ಥಿರ ಚಿತ್ತನಾದ ಯೋಗಿಯ ಸ್ಥಿತಿ ಗಾಳಿಯಿಲ್ಲದ ಸ್ಥಳದಲ್ಲಿ ಅಲುಗಾಡದೆ ಉರಿಯುವ ದೀಪಕ್ಕೆ ಸಮ. ॥೧೯॥

ಯೋಗದಿಂದ ಸ್ವಾಧೀನಕ್ಕೆ ಬಂದ ಮನಸ್ಸು ಎಲ್ಲಿ ಶಾಂತಿ ಹೊಂದುತ್ತದೋ, ಆತ್ಮದ ಮೂಲಕವೇ ಆತ್ಮವನ್ನು ಕಂಡು ಎಲ್ಲಿ ಮನುಷ್ಯ ಆತ್ಮವಿಚಾರದಲ್ಲಿ ಸಂತೋಷಿಸುತ್ತಾನೋ. ಇಂದ್ರಿಯಗಳಿಗೆ ದೂರವಾಗಿ. ಬುದ್ಧಿಯಿಂದ ಗ್ರಹಿಸಲ್ಪಡಲು ಯೋಗ್ಯವಾದ ಅನಂತಸುಖಗಳ ಅನುಭವ ಎಲ್ಲಿ ಆಗುತ್ತದೋ ಎಲ್ಲಿದ್ದುಕೊಂಡು ಮನುಷ್ಯ ಮೂಲವಸ್ತುವಿನಿಂದ ಚಲಾಯಮಾನನಾಗನೋ. ಯಾವುದನ್ನು ಪಡೆದರೆ ಬೇರಾವ ಲಾಭವೂ ಹೆಚ್ಚೆಂದು ಮನುಷ್ಯ ಭಾವಿಸನೋ. ಎಲ್ಲಿ ಸ್ಥಿರವಾದ ಬಳಿಕ ಮಹಾದುಃಖಗಳಿಂದ ಅವನು ಕಂಪಿತನಾಗನೋ. ದುಃಖಸಹಿತವಾದ ಆ ಸ್ಥಿತಿಯ ಹೆಸರು ಯೋಗದ ಸ್ಥಿತಿಯೆಂದು ಅರಿಯಬೇಕು. ಈ ಯೋಗ ಬೇಸರವಿಲ್ಲದೆಯೂ ದೃಢತೆಯಿಂದಲೂ ಸಾಧಿಸಲು ಯೋಗ್ಯವಾದುದು. ॥೨೦-೨೩॥

ಸಂಕಲ್ಪದಿಂದ ಹುಟ್ಟುವ ಸಕಲ ಕಾಮಗಳನ್ನೂ ಸಂಪೂರ್ಣವಾಗಿ ಬಿಟ್ಟು, ಮನಸ್ಸಿನ ಮೂಲಕವೇ ಇಂದ್ರಿಯ ಸಮೂಹಗಳನ್ನು ಎಲ್ಲ ಬಗೆಯಿಂದಲೂ ಚೆನ್ನಾಗಿ ವಶಪಡಿಸಿಕೊಂಡು, ಅಚಲ ಬುದ್ಧಿಯಿಂದ ಯೋಗಿ ಮೆಲ್ಲಮೆಲ್ಲನೆ ಶಾಂತನಾಗಬೇಕು. ಮನಸ್ಸನ್ನು ಆತ್ಮದಲ್ಲಿಯೆ ನೆಟ್ಟು, ಮತ್ತಾವ ವಿಚಾರವನ್ನೂ ಮಾಡಕೂಡದು. ॥೨೪-೨೫॥

ಯತೋ ಯತೋ ನಿಶ್ಚರತಿ ಮನಶ್ಚಂಚಲಮಸ್ಥಿರಮ್ ।
ತತಸ್ತತೋ ನಿಯಮ್ಯೈತದಾತ್ಮನ್ಯೇವ ವಶಂ ನಯೇತ್ ॥೨೬॥

ಪ್ರಶಾಂತಮನಸಂ ಹ್ಯೇನಂ ಯೋಗಿನಂ ಸುಖಮುತ್ತಮಮ್ ।
ಉಪೈತಿ ಶಾಂತರಜಸಂ ಬ್ರಹ್ಮಭೂತಮಕಲ್ಮಷಮ್ ॥೨೭॥

ಯುಂಜನ್ನೇವಂ ಸದಾತ್ಮಾನಂ ಯೋಗೀ ವಿಗತಕಲ್ಮಷಃ ।
ಸುಖೇನ ಬ್ರಹ್ಮಸಂಸ್ಪರ್ಶಮತ್ಯಂತಂ ಸುಖಮಶ್ನುತೇ ॥೨೮॥

ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ॥೨೯॥

ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ ।
ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ ॥೩೦॥

ಸರ್ವಭೂತಸ್ಥಿತಂ ಯೋ ಮಾಂ ಭಜತ್ಯೇಕತ್ವಮಾಸ್ಥಿತಃ ।
ಸರ್ವಥಾ ವರ್ತಮಾನೋಽಪಿ ಸ ಯೋಗೀ ಮಯಿ ವರ್ತತೇ ॥೩೧॥

ಚಂಚಲವೂ ಅಸ್ಥಿರವೂ ಆದ ಮನಸ್ಸು ಎತ್ತೆತ್ತ ಓಡಿಹೋಗುತ್ತದೋ ಅತ್ತತ್ತಣಿಂದ ಅದನ್ನು (ಯೋಗಿ) ನಿಯಮಕ್ಕೆ ತಂದುಕೊಂಡು ವಶಪಡಿಸಿಕೊಳ್ಳಬೇಕು. ॥೨೬॥

ಯಾರ ಮನಸ್ಸು ವಿಶೇಷವಾಗಿ ಶಾಂತವಾಗಿದೆಯೊ, ಯಾರ ವಿಕಾರ, ನಾಶವಾಗಿದೆಯೊ, ಆ ಬ್ರಹ್ಮಮಯನೂ ಪಾಪರಹಿತನೂ ಆದ ಯೋಗಿ ಅವಶ್ಯವಾಗಿ ಉತ್ತಮ ಸುಖವನ್ನು ಹೊಂದುತ್ತಾನೆ. ॥೨೭॥

ಆತ್ಮನೊಂದಿಗೆ ನಿರಂತರ ಅನುಸಂಧಾನ ಮಾಡುತ್ತ ಪಾಪರಹಿತನಾದ ಯೋಗಿ ಸುಲಭವಾಗಿ ಬ್ರಹ್ಮಪ್ರಾಪ್ತಿಯ ಅನಂತ ಸುಖದ ಅನುಭವ ಪಡೆಯುತ್ತಾನೆ. ॥೨೮॥

ಸರ್ವತ್ರ ಸಮಭಾವವನ್ನಿಡುವ ಯೋಗಿ ತನ್ನನ್ನು ಸಕಲ ಭೂತಗಳಲ್ಲಿಯೂ, ಭೂತಗಳನ್ನು ತನ್ನಲ್ಲಿಯೂ ಕಾಣುತ್ತಾನೆ. ॥೨೯॥

ಯಾರು ನನ್ನನ್ನು ಎಲ್ಲೆಲ್ಲಿಯೂ ನೋಡುತ್ತಾರೋ ಎಲ್ಲವನ್ನೂ ನನ್ನಲ್ಲಿ ನೋಡುತ್ತಾರೋ ಅವರು ನನ್ನ ದೃಷ್ಟಿಯಿಂದ ದೂರರಾಗರು. ನಾನೂ ಅವರ ದೃಷ್ಟಿಯಿಂದ ದೂರನಾಗೆ. ॥೩೦॥

ನನ್ನಲ್ಲಿ ಲೀನನಾಗಿ, ಸರ್ವಭೂತಸ್ಥಿತನಾದ ನನ್ನನ್ನು ಭಜಿಸುವ ಯೋಗಿ ಯಾವ ರೀತಿ ನಡೆದರೂ ನನ್ನಲ್ಲಿಯೇ ರತ. ॥೩೧॥

ಟಿಪ್ಪಣಿ–'ಸ್ವಯಂ" ಎಂಬುದು ಎಲ್ಲಿಯವರೆಗಿರುವುದೋ ಅಲ್ಲಿಯವರೆಗೆ ಪರಮಾತ್ಮ ಪೃಥಕ್ಕಾಗಿ ಕಾಣಿಸುತ್ತಾನೆ. 'ಸ್ವಯಂ' ಎಂಬುದು ಶೂನ್ಯವಾದ ಬಳಿಕ ಆ ಒಬ್ಬ ಪರಮಾತ್ಮನೇ ಎಲ್ಲೆಲ್ಲಿಯೂ ಕಾಣಿಸಲಾರಂಭಿಸುತ್ತಾನೆ. (ನೋಡಿ : ಟಿಪ್ಪಣಿ, ಅಧ್ಯಾಯ ೧೩–೨೩).

ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ ।
ಸುಖಂ ವಾ ಯದಿ ವಾ ದುಃಖಂ ಸ ಯೋಗೀ ಪರಮೋ ಮತಃ ॥೩೨॥

ಅರ್ಜುನ ಉವಾಚ

ಯೋಽಯಂ ಯೋಗಸ್ತ್ವಯಾ ಪ್ರೋಕ್ತಃ ಸಾಮ್ಯೇನ ಮಧುಸೂದನ ।
ಏತಸ್ಯಾಹಂ ನ ಪಶ್ಯಾಮಿ ಚಂಚಲತ್ವಾತ್ ಸ್ಥಿತಿಂ ಸ್ಥಿರಾಮ್ ॥೩೩॥

ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ದೃಢಮ್ ।
ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಮ್ ॥೩೪॥

ಶ್ರೀ ಭಗವಾನುವಾಚ

ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಮ್ ।
ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥೩೫॥

ಅಸಂಯತಾತ್ಮನಾ ಯೋಗೋ ದುಷ್ಪ್ರಾಪ ಇತಿ ಮೇ ಮತಿಃ ।
ವಶ್ಯಾತ್ಮನಾ ತು ಯತತಾ ಶಕ್ಯೋಽವಾಪ್ತುಮುಪಾಯತಃ ॥೩೬॥

ಅರ್ಜುನ, ಯಾವ ಮನುಷ್ಯ ಎಲ್ಲರನ್ನೂ ತನ್ನಂತೆ ನೋಡುತ್ತಾನೋ, ಸುಖ-ದುಃಖಗಳು ಸಮಾನವೆಂದು ಭಾವಿಸುತ್ತಾನೋ, ಅವನು ಶ್ರೇಷ್ಠನಾದ ಯೋಗಿ. ॥೩೨॥

ಅರ್ಜುನ :

ಮಧುಸೂದನ, ನೀನು (ಸಮತ್ವದ) ಯೋಗವನ್ನು ಹೇಳಿದೆ. ಚಂಚಲತೆಯ ದೆಸೆಯಿಂದ ನಾನು ಅದರ ಸ್ಥಿರತೆಯನ್ನು ಕಾಣಲಾರದಿದ್ದೇನೆ. ॥೩೩॥

ಏಕೆಂದರೆ, ಕೃಷ್ಣ, ಮನಸ್ಸು ಚಂಚಲ. ಅದು ಮನುಷ್ಯನನ್ನು (ಮಥಿಸಿ) ಕಡೆದು ಬಿಡುತ್ತದೆ. ಅದು ಬಹು ಬಲಿಷ್ಠ. ವಾಯುವನ್ನು ಒತ್ತಿಡುವುದು ಕಷ್ಟವಾಗಿರುವಂತೆಯೆ ಮನಸ್ಸನ್ನು ವಶಪಡಿಸಿಕೊಳ್ಳುವುದೂ ಕಷ್ಟವೆಂದು ನಾನು ತಿಳಿದಿದ್ದೇನೆ. ॥೩೪॥

ಶ್ರೀ ಭಗವಂತ :

ಮಹಾಬಾಹು, ಚಂಚಲವಾದುದರಿಂದ ಮನಸ್ಸನ್ನು ವಶಪಡಿಸಿಕೊಳ್ಳುವುದು ಕಷ್ಟ, ನಿಜ. ಆದರೆ, ಕೌಂತೇಯ, ಅಭ್ಯಾಸ-ವೈರಾಗ್ಯಗಳಿಂದ ಅದನ್ನು ವಶಪಡಿಸಿಕೊಳ್ಳಬಹುದು. ॥೩೫॥

ಮನಸ್ಸು ಸ್ವಾಧೀನವಿಲ್ಲದವನಿಗೆ ಯೋಗಸಾಧನೆ ಬಹಳ ಕಷ್ಟವೆಂದು ನನ್ನ ಅಭಿಪ್ರಾಯ. ಆದರೆ ಯಾರಿಗೆ ಮನಸ್ಸು ತನ್ನ ವಶವೋ, ಯಾರು ಪ್ರಯತ್ನಶೀಲನೋ, ಅವನು ಉಪಾಯದಿಂದ ಯೋಗಸಿದ್ಧಿ ಪಡೆಯಬಲ್ಲ. ॥೩೬॥

ಅಯತಿಶ್ಶ್ರದ್ಧಯೋಪೇತೋ ಯೋಗಾಚ್ಚಲಿತಮಾನಸಃ ।
ಅಪ್ರಾಪ್ಯ ಯೋಗಸಂಸಿದ್ಧಿಂ ಕಾಂ ಗತಿಂ ಕೃಷ್ಣ ಗಚ್ಛತಿ ॥೩೭॥

ಕಚ್ಚಿನ್ನೋಭಯವಿಭ್ರಷ್ಟಶ್ಛಿನ್ನಾಭ್ರಮಿವ ನಶ್ಯತಿ ।
ಅಪ್ರತಿಷ್ಠೋ ಮಹಾಬಾಹೋ ವಿಮೂಢೋ ಬ್ರಹ್ಮಣಃ ಪಥಿ ॥೩೮॥

ಏತನ್ಮೇ ಸಂಶಯಂ ಕೃಷ್ಣ ಛೇತ್ತುಮರ್ಹಸ್ಯಶೇಷತಃ ।
ತ್ವದನ್ಯಸ್ಸಂಶಯಸ್ಯಾಸ್ಯ ಛೇತ್ತಾ ನ ಹ್ಯುಪಪದ್ಯತೇ ॥೩೯॥

ಶ್ರೀ ಭಗವಾನುವಾಚ

ಪಾರ್ಥ ನೈವೇಹ ನಾಮುತ್ರ ವಿನಾಶಸ್ತಸ್ಯ ವಿದ್ಯತೇ ।
ನ ಹಿ ಕಲ್ಯಾಣಕೃತ್ ಕಶ್ಚಿದ್ದುರ್ಗತಿಂ ತಾತ ಗಚ್ಛತಿ ॥೪೦॥

ಪ್ರಾಪ್ಯ ಪುಣ್ಯಕೃತಾನ್ ಲೋಕಾನುಷಿತ್ವಾ ಶಾಶ್ವತೀಸ್ಸಮಾಃ ।
ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ ॥೪೧॥

ಅರ್ಜುನ :

ಕೃಷ್ಣ! ಶ್ರದ್ಧಾವಂತನಾದರೂ ಪ್ರಯತ್ನ ಮಂದವಾದುದರಿಂದ ಯಾರು ಯೋಗಭ್ರಷ್ಟನಾಗುತ್ತಾನೋ ಅಸಫಲನಾಗುತ್ತಾನೋ ಅವನ ಗತಿಯೇನು? ॥೩೭॥

ಯೋಗಭ್ರಷ್ಟನಾಗಿ, ಬ್ರಹ್ಮಮಾರ್ಗದಲ್ಲಿ ದಾರಿ ತಪ್ಪಿದವನು ಚದರಿದ ಮೋಡಗಳಂತೆ ಉಭಯಭ್ರಷ್ಟನಾಗಿ ನಾಶಹೊಂದುವುದಿಲ್ಲವಷ್ಟೇ ? ॥೩೮॥

ಕೃಷ್ಣ, ನನ್ನ ಈ ಸಂಶಯಗಳನ್ನು ನೀನು ಕಳೆಯಬೇಕು. ಈ ಸಂಶಯಗಳನ್ನು ಕಳೆಯಲು ನಿನ್ನನ್ನು ಬಿಟ್ಟರೆ ಮತ್ತಾರೂ ದೊರೆಯಲಾರರು. ॥೩೯॥

ಶ್ರೀ ಭಗವಂತ :

ಪಾರ್ಥ ! ಇಂಥ ಜನರಿಗೆ ಈ ಲೋಕದಲ್ಲಾಗಲಿ ಪರಲೋಕದಲ್ಲಾಗಲಿ ನಾಶವಿಲ್ಲ. ಕಲ್ಯಾಣಮಾರ್ಗದಲ್ಲಿ ಹೋಗುವವರಿಗೆ ಎಂದಿಗೂ ದುರ್ಗತಿಯಿಲ್ಲ. ॥೪೦॥

ಪುಣ್ಯಶಾಲಿ ಜನರು ಪಡೆವ ಸ್ಥಾನವನ್ನೆ ಪಡೆದು, ಅಲ್ಲಿ ಬಹಳ ಕಾಲ ಇದ್ದು, ಯೋಗಭ್ರಷ್ಟನಾದ ಮನುಷ್ಯ ಪವಿತ್ರರೂ ಸಾಧನಸಂಪನ್ನರೂ ಆದವರ ಮನೆಯಲ್ಲಿ ಹುಟ್ಟುತ್ತಾನೆ. ॥೪೧॥

ಅಥವಾ ಯೋಗಿನಾಮೇವ ಕುಲೇ ಭವತಿ ಧೀಮತಾಮ್ ।
ಏತದ್ಧಿ ದುರ್ಲಭತರಂ ಲೋಕೇ ಜನ್ಮ ಯದೀದೃಶಮ್ ॥೪೨॥

ತತ್ರ ತಂ ಬುದ್ಧಿಸಂಯೋಗಂ ಲಭತೇ ಪೌರ್ವದೇಹಿಕಮ್ ।
ಯತತೇ ಚ ತತೋ ಭೂಯಃ ಸಂಸಿದ್ಧೌ ಕುರುನಂದನ ॥೪೩॥

ಪೂರ್ವಾಭ್ಯಾಸೇನ ತೇನೈವ ಹ್ರಿಯತೇ ಹ್ಯವಶೋಽಪಿ ಸಃ ।
ಜಿಜ್ಞಾಸುರಪಿ ಯೋಗಸ್ಯ ಶಬ್ದ ಬ್ರಹ್ಮಾತಿವರ್ತತೇ ॥೪೪॥

ಪ್ರಯತ್ನಾದ್ಯತಮಾನಸ್ತು ಯೋಗೀ ಸಂಶುದ್ಧ ಕಿಲ್ಬಿಷಃ ।
ಅನೇಕ ಜನ್ಮಸಂಸಿದ್ಧಸ್ತತೋ ಯಾತಿ ಪರಾಂ ಗತಿಮ್ ॥೪೫॥

ತಪಸ್ವಿಭ್ಯೋಽಧಿಕೋ ಯೋಗೀ ಜ್ಞಾನಿಭ್ಯೋಽಪಿ ಮತೋಽಧಿಕಃ ।
ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್ಯೋಗೀ ಭವಾರ್ಜುನ ॥೪೬॥

ಅಥವಾ ಜ್ಞಾನಿಯಾದ ಯೋಗಿಯ ಕುಲದಲ್ಲಿಯೆ ಹುಟ್ಟುತ್ತಾನೆ. ಜಗತ್ತಿನಲ್ಲಿ ನಿಜವಾಗಿ ಇಂಥ ಜನ್ಮ ಬಹು ದುರ್ಲಭ. ॥೪೨॥

ಕುರುನಂದನ! ಅಲ್ಲಿ ಅವನಿಗೆ ಪೂರ್ವಜನ್ಮದ ಬುದ್ಧಿ ಸಂಸ್ಕಾರ ದೊರೆಯುತ್ತದೆ. ಅಲ್ಲಿಂದ ಅವನು ಮೋಕ್ಷಕ್ಕಾಗಿ ಮುಂಬರಿಯುತ್ತಾನೆ. ॥೪೩॥

ಆ ಪೂರ್ವಾಭ್ಯಾಸದಿಂದಲೇ ಅವನು ಅವಶ್ಯವಾಗಿ ಯೋಗದ ಕಡೆ ಸೆಳೆಯಲ್ಪಡುತ್ತಾನೆ. ಸಕಾಮನಾಗಿ ವೈದಿಕ ಕರ್ಮ ಮಾಡುವವನ ಸ್ಥಿತಿಯನ್ನು ಯೋಗಜಿಜ್ಞಾಸು ಕೂಡ ದಾಟಿಹೋಗುತ್ತಾನೆ. ॥೪೪॥

ಪ್ರಯತ್ನದಲ್ಲಿಯೆ ಮುಳುಗಿರುವ ಯೋಗಿ ಪಾಪಮುಕ್ತನಾಗಿ ಅನೇಕ ಜನ್ಮಗಳಿಂದ ವಿಶುದ್ಧನಾಗಿ ಪರಮಗತಿಯನ್ನು ಹೊಂದುತ್ತಾನೆ. ॥೪೫॥

ತಪಸ್ವಿಗಿಂತ ಯೋಗಿ ಶ್ರೇಷ್ಠ. ಜ್ಞಾನಿಗಿಂತಲೂ ಶ್ರೇಷ್ಠ. ಹಾಗೆಯೇ ಕರ್ಮಿಗಳಿಗಿಂತಲೂ ಅಧಿಕಶ್ರೇಷ್ಠ. ಆದುದರಿಂದ, ಅರ್ಜುನ, ನೀನು ಯೋಗಿಯಾಗು. ॥೪೬॥

ಟಿಪ್ಪಣಿ–ಇಲ್ಲಿ ತಪಸ್ಸು ಫಲೇಚ್ಛೆಯುಳ್ಳದು. ಜ್ಞಾನಿಯೆಂದರೆ ಅನುಭವಜ್ಞಾನಿ ಎಂದಲ್ಲ.

ಯೋಗಿನಾಮಪಿ ಸರ್ವೇಷಾಂ ಮದ್ಗತೇನಾಂತರಾತ್ಮನಾ ।
ಶ್ರದ್ಧಾವಾನ್ ಭಜತೇ ಯೋ ಮಾಂ ಸ ಮೇ ಯುಕ್ತತಮೋ ಮತಃ ॥೪೭॥

ಹರಿಃ ಓಂ ತತ್ಸತ್

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀ ಕೃಷ್ಣಾರ್ಜುನಸಂವಾದೇ
ಧ್ಯಾನಯೋಗೋ ನಾಮ ಷಷ್ಠೋಽಧ್ಯಾಯಃ ॥

ನನ್ನಲ್ಲಿ ಮನಸ್ಸನ್ನು ಲೀನಮಾಡಿ, ಶ್ರದ್ಧೆಯಿಂದ ನನ್ನ ಭಜನೆ ಮಾಡುವವನೇ ಯೋಗಿಗಳಲ್ಲಿ ಸರ್ವಶ್ರೇಷ್ಠನೆಂದು ನಾನು ತಿಳಿಯುತ್ತೇನೆ. ॥೪೭॥

ಓಂ ತತ್ಸತ್

ಈ ಬಗೆಯಾಗಿ ಶ್ರೀಮದ್ಭಗವದ್ಗೀತಾರೂಪ ಉಪನಿಷತ್ ಅಥವಾ
ಬ್ರಹ್ಮವಿದ್ಯಾಂತರ್ಗತ ಯೋಗಶಾಸ್ತ್ರದ ಶ್ರೀಕೃಷ್ಣಾರ್ಜುನ ಸಂವಾದದಲ್ಲಿ
ಧ್ಯಾನಯೋಗವೆಂಬ ಆರನೆಯ ಅಧ್ಯಾಯ.

***

ಅಧ್ಯಾಯ ೭

ಜ್ಞಾನವಿಜ್ಞಾನಯೋಗ

(ಈ ಅಧ್ಯಾಯದಲ್ಲಿ ಈಶ್ವರತತ್ತ್ವ, ಈಶ್ವರ ಭಕ್ತಿಗಳನ್ನು ತಿಳಿಸಲು ಆರಂಭಿಸಿದೆ.)

ಅಥ ಸಪ್ತಮೋಽಧ್ಯಾಯಃ

ಶ್ರೀ ಭಗವಾನುವಾಚ

ಮಯ್ಯಾಸಕ್ತಮನಾಃ ಪಾರ್ಥ ಯೋಗಂ ಯುಂಜನ್ ಮದಾಶ್ರಯಃ ।
ಅಸಂಶಯಂ ಸಮಗ್ರಂ ಮಾಂ ಯಥಾ ಜ್ಞಾಸ್ಯಸಿ ತಚ್ಛೃಣು ॥೧॥

ಜ್ಞಾನಂ ತೇಽಹಂ ಸವಿಜ್ಞಾನಮಿದಂ ವಕ್ಷ್ಯಾಮ್ಯಶೇಷತಃ ।
ಜ್ಞಾತ್ವಾ ನೇಹ ಭೂಯೋಽನ್ಯತ್ ಜ್ಞಾತವ್ಯಮವಶಿಷ್ಯತೇ ॥೨॥

ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ ॥೩॥

ಶ್ರೀ ಭಗವಂತ :

ಪಾರ್ಥ ! ನನ್ನಲ್ಲಿ ಮನಸ್ಸು ನೆಟ್ಟು ನನ್ನ ಆಶ್ರಯಹೊಂದಿ, ಯೋಗ ಸಾಧನೆಯನ್ನು ಮಾಡುತ್ತ, ನೀನು ನನ್ನನ್ನು ನಿಜವಾಗಿ ಸಂಪೂರ್ಣವಾಗಿ ಹೇಗೆ ಅರಿಯಬಲ್ಲೆಯೋ ಕೇಳು. ॥೧॥

ಈ ಅನುಭವಯುಕ್ತ ಜ್ಞಾನವನ್ನು ನಿನಗೆ ಸಂಪೂರ್ಣವಾಗಿ ತಿಳಿಸುತ್ತೇನೆ. ಅದನ್ನು ತಿಳಿದಮೇಲೆ ಈ ಲೋಕದಲ್ಲಿ ಇನ್ನು ತಿಳಿಯಬೇಕಾದುದೇನೂ ಇರದು. ॥೨॥

ಸಾವಿರಾರು ಮನುಷ್ಯರಲ್ಲಿ ಸಿದ್ಧಿಪಡೆಯಲು ಯತ್ನಿಸುವವರು ಕೆಲವರೇ. ಪ್ರಯತ್ನಶೀಲರಾದ ಸಿದ್ಧರಲ್ಲಿಯೂ ನನ್ನನ್ನು ನಿಜವಾಗಿ ಅರಿತವರು ವಿರಳ. ॥೩॥

ಭೂಮಿರಾಪೋಽನಲೋ ವಾಯುಃ ಖಂ ಮನೋ ಬುದ್ಧಿರೇವ ಚ ।
ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ ॥೪॥

ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಮ್ ।
ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್ ॥೫॥

ಏತದ್ಯೋನೀನಿ ಭೂತಾನಿ ಸರ್ವಾಣೀತ್ಯುಪಧಾರಯ ।
ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ ॥೬॥

ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ।
ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥೭॥

ರಸೋಽಹಮಪ್ಸು ಕೌಂತೇಯ ಪ್ರಭಾಸ್ಮಿ ಶಶಿಸೂರ್ಯಯೋಃ ।
ಪ್ರಣವಸ್ಸರ್ವವೇದೇಷು ಶಬ್ದಃ ಖೇ ಪೌರುಷಂ ನೃಷು ॥೮॥

ಪುಣ್ಯೋ ಗಂಧಃ ಪೃಥಿವ್ಯಾಂ ಚ ತೇಜಶ್ಚಾಸ್ಮಿ ವಿಭಾವಸೌ ।
ಜೀವನಂ ಸರ್ವಭೂತೇಷು ತಪಶ್ಚಾಸ್ಮಿ ತಪಸ್ವಿಷು ॥೯॥

ಪೃಥ್ವಿ, ನೀರು, ಅಗ್ನಿ (ತೇಜಸ್ಸು) ವಾಯು, ಆಕಾಶ, ಮನಸ್ಸು, ಬುದ್ಧಿ, ಅಹಂಭಾವ–ಹೀಗೆ ಎಂಟು ವಿಧ ನನ್ನ ಪ್ರಕೃತಿ. ॥೪॥

ಟಿಪ್ಪಣಿ–ಈ ಎಂಟು ತತ್ವಗಳ ಸ್ವರೂಪವೇ ಕ್ಷೇತ್ರ ಅಥವಾ ಕ್ಷರಪುರುಷ. (ಅಧ್ಯಾಯ ೧೩ ಶ್ಲೋಕ೫, ಅಧ್ಯಾಯ ೧೫ ಶ್ಲೋಕ ೬).

ಇದು ಅಪರಾಪ್ರಕೃತಿ. ಇದಕ್ಕಿಂತಲೂ ಶ್ರೇಷ್ಠವಾದುದು ಜೀವರೂಪದ ಪರಾಪ್ರಕೃತಿ. ಈ ಜಗತ್ತು ಅದರ ಆಧಾರದ ಮೇಲೆ ನಿಂತಿದೆ. ॥೫॥

ಇವೆರಡೂ ಸಕಲ ಭೂತಗಳ ಉತ್ಪತ್ತಿಗೆ ಕಾರಣವೆಂದು ತಿಳಿ. ಸಮಗ್ರ ಜಗತ್ತಿನ ಉತ್ಪತ್ತಿ–ಲಯಗಳಿಗೆ ಕಾರಣ ನಾನೇ. ॥೬॥

ಧನಂಜಯ, ನನಗಿಂತಲೂ ಉಚ್ಚವಾದುದು ಯಾವುದೂ ಇಲ್ಲ. ದಾರದಲ್ಲಿ ಹೇಗೆ ಮಣಿಗಳು ಪೋಣಿಸಿರುತ್ತವೆಯೋ ಹಾಗೆ ಇವೆಲ್ಲವೂ ನನ್ನಲ್ಲಿ ಪೋಣಿಸಿವೆ. ॥೭॥

ಕೌಂತೇಯ! ನೀರಿನಲ್ಲಿ ರಸ ನಾನು, ಸೂರ್ಯಚಂದ್ರರ ತೇಜಸ್ಸು ನಾನು, ಸರ್ವ ವೇದಗಳ ಓಂಕಾರ ನಾನು, ಆಕಾಶದ ಶಬ್ದ ನಾನು, ಪುರುಷರಲ್ಲಿ ಪರಾಕ್ರಮ ನಾನೇ. ॥೮॥

ಪೃಥ್ವಿಯ ಸುಗಂಧ ನಾನು, ಅಗ್ನಿಯ ತೇಜಸ್ಸು ನಾನು, ಪ್ರಾಣಿಮಾತ್ರಗಳ ಜೀವ, ತಪಸ್ವಿಗಳ ತಪಸ್ಸು ನಾನೇ. ॥೯॥

ಬೀಜಂ ಮಾಂ ಸರ್ವಭೂತಾನಾಂ ವಿದ್ಧಿ ಪಾರ್ಥ ಸನಾತನಮ್ ।
ಬುದ್ಧಿರ್ಬುದ್ಧಿಮತಾಮಸ್ಮಿ ತೇಜಸ್ತೇಜಸ್ವಿನಾಮಹಮ್ ॥೧೦॥

ಬಲಂ ಬಲವತಾಂ ಚಾಹಂ ಕಾಮರಾಗವಿವರ್ಜಿತಮ್ ।
ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ ॥೧೧॥

ಯೇ ಚೈವ ಸಾತ್ತ್ವಿಕಾ ಭಾವಾ ರಾಜಸಾಸ್ತಾಮಸಾಶ್ಚ ಯೇ ।
ಮತ್ತ ಏವೇತಿ ತಾನ್ ವಿದ್ಧಿ ನ ತ್ವಹಂ ತೇಷು ತೇ ಮಯಿ ॥೧೨॥

ತ್ರಿಭಿರ್ಗುಣಮಯೈರ್ಭಾವೈರೇಭಿಸ್ಸರ್ವಮಿದಂ ಜಗತ್ ।
ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಮ್ ॥೧೩॥

ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।
ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ ॥೧೪॥

ನ ಮಾಂ ದುಷ್ಕೃತಿನೋ ಮೂಢಾಃ ಪ್ರಪದ್ಯಂತೇ ನರಾಧಮಾಃ ।
ಮಾಯಯಾಪಹೃತಜ್ಞಾನಾ ಅಸುರಂ ಭಾವಮಾಶ್ರಿತಾಃ ॥೧೫॥

ಪಾರ್ಥ, ಸಕಲ ಜೀವಗಳ ಸನಾತನ ಬೀಜ ನಾನು, ತಿಳಿ. ಬುದ್ಧಿವಂತರ ಬುದ್ಧಿ, ತೇಜಸ್ವಿಗಳ ತೇಜಸ್ಸು ನಾನು. ॥೧೦॥

ಬಲವಂತರ ಕಾಮ, ರಾಗರಹಿತ ಬಲ ನಾನು; ಪ್ರಾಣಿಗಳಲ್ಲಿ ಧರ್ಮಕ್ಕೆ ವಿರುದ್ಧವಲ್ಲದ ಕಾಮ ನಾನು. ॥೧೧॥

ಸಾತ್ವಿಕ, ರಾಜಸ, ತಾಮಸ ಭಾವಗಳೆಲ್ಲವೂ ನನ್ನಿಂದಲೇ ಹುಟ್ಟಿದವು; ತಿಳಿ. ಆದರೆ ನಾನು ಅವುಗಳಲ್ಲಿಲ್ಲ. ಅವು ನನ್ನಲ್ಲಿವೆ. ॥೧೨॥

ಟಿಪ್ಪಣಿ–ಪರಮಾತ್ಮ ಈ ಭಾವಗಳ ಮೇಲೆ ಆಧಾರಗೊಂಡಿಲ್ಲ. ಆದರೆ ಅವು ಆತನ ಆಧಾರದ ಮೇಲಿವೆ. ಅಲ್ಲದೆ ಆತನ ವಶದಲ್ಲಿವೆ.

ಈ ತ್ರಿಗುಣಮಯ ಭಾವಗಳಿಂದ ಇಡೀ ಜಗತ್ತು ಮೋಹಿತವಾಗಿದೆ. ಆದುದರಿಂದಲೇ ಅವುಗಳಿಂದ ಉಚ್ಚ, ಭಿನ್ನ ಆದ ನನ್ನನ್ನು–ಅವಿನಾಶಿಯನ್ನು ಅದು ತಿಳಿಯಲಾರದು. ॥೧೩॥

ನನ್ನ ಈ ತ್ರಿಗುಣಮಯ ದೈವೀಮಾಯೆಯಿಂದ ಪಾರಾಗುವುದು ದುಸ್ತರ. ಆದರೆ ನನಗೆ ಶರಣಾಗತರಾದವರು ಈ ಮಾಯೆಯಿಂದ ಪಾರಾಗುತ್ತಾರೆ. ॥೧೪॥

ದುರಾಚಾರಿಗಳು, ಮೂಢರು, ಅಧಮ ಮನುಷ್ಯರು ನನಗೆ ಶರಣುಬಾರರು. ಅವರು ಅಸುರೀ ಭಾವವುಳ್ಳವರು. ಮಾಯೆಯಿಂದ ಅವರ ಜ್ಞಾನ ಹರಣವಾಗುತ್ತದೆ.॥೧೫॥

ತುರ್ವಿಧಾ ಭಜಂತೇ ಮಾಂ ಜನಾಸ್ಸುಕೃತಿನೋಽರ್ಜುನ ।
ರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥೧೬॥

ಷಾಂ ಜ್ಞಾನೀ ನಿತ್ಯಯುಕ್ತಃ ಏಕಭಕ್ತಿರ್ವಿಶಿಷ್ಯತೇ ।
ಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ ॥೧೭॥

ದಾರಾಸ್ಸರ್ವ ಏವೈತೇ ಜ್ಞಾನೀ ತ್ವಾತ್ಮೈವ ಮೇ ಮತಮ್ ।
ಸ್ಥಿತಸ್ಸ ಹಿ ಯುಕ್ತಾತ್ಮಾ ಮಾಮೇವಾನುತ್ತಮಾಂ ಗತಿಮ್ ॥೧೮॥

ಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ ।
ಾಸುದೇವಸ್ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ ॥೧೯॥

ಾಮೈಸ್ತೈಸ್ತೈರ್ಹೃತಜ್ಞಾನಾಃ ಪ್ರಪದ್ಯಂತೇಽನ್ಯದೇವತಾಃ ।
ಂ ತಂ ನಿಯಮಮಾಸ್ಥಾಯ ಪ್ರಕೃತ್ಯಾ ನಿಯತಾಸ್ಸ್ವಯಾ ॥೨೦॥

ರೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ ।
ಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಮ್ ॥೨೧॥

ಅರ್ಜುನ, ದುಃಖಿ, ಜಿಜ್ಞಾಸು, ಏನಾದರೂ ಪಡೆಯುವ ಆಸೆಯುಳ್ಳವರು, ಜ್ಞಾನಿ–ಈ ನಾಲ್ಕು ಬಗೆಯ ಸದಾಚಾರಿಗಳೂ ನನ್ನನ್ನು ಭಜಿಸುತ್ತಾರೆ. ॥೧೬॥

ಇವರಲ್ಲಿ ನಿತ್ಯ ಸಮಾಧಾನಿಯಾಗಿ, ಒಂದೇ ಭಾವದಿಂದ ಭಜಿಸುವ ಜ್ಞಾನಿಯೇ ಶ್ರೇಷ್ಠ. ನಾನು ಜ್ಞಾನಿಗೆ ಅತ್ಯಂತ ಪ್ರಿಯ, ನನಗೂ ಜ್ಞಾನಿ ಪ್ರಿಯ. ॥೧೭॥

ಈ ಭಕ್ತರೆಲ್ಲರೂ ಉತ್ತಮರೇ. ಆದರೆ ಜ್ಞಾನಿ ನನ್ನ ಆತ್ಮ. ಏಕೆಂದರೆ, ನನ್ನನ್ನು ಪಡೆಯುವುದಕ್ಕಿಂತಲೂ ಹೆಚ್ಚಿನ ಶ್ರೇಷ್ಠ ಗತಿ ಮತ್ತೊಂದಿಲ್ಲವೆಂದು ತಿಳಿದು ಆ ಯೋಗಿ ನನ್ನ ಆಶ್ರಯವನ್ನೇ ಪಡೆಯುತ್ತಾನೆ. ॥೧೮॥

ಅನೇಕ ಜನ್ಮಗಳ ನಂತರ ಕೊನೆಯಲ್ಲಿ ಜ್ಞಾನಿ ನನ್ನನ್ನು ಪಡೆಯುತ್ತಾನೆ. ಸಕಲವೂ ವಾಸುದೇವಮಯ ಎಂಬುದನ್ನು ಅರಿತ ಮಹಾತ್ಮ ಬಹು ದುರ್ಲಭ. ॥೧೯॥

ಅನೇಕ ಕಾಮನೆಗಳಿಂದ ಯಾರ ಜ್ಞಾನ ನಷ್ಟವಾಗಿದೆಯೋ ಅವರು ತಮ್ಮ ತಮ್ಮ ಪ್ರಕೃತಿಯಂತೆ ಭಿನ್ನ ಭಿನ್ನ ವಿಧಿಗಳ ಆಶ್ರಯ ಪಡೆದು ಬೇರೆ ದೇವತೆಗಳಿಗೆ ಶರಣು ಹೋಗುತ್ತಾರೆ. ॥೨೦॥

ಯಾರು ಯಾರು ಯಾವ ಯಾವ ಸ್ವರೂಪದಲ್ಲಿ ಭಕ್ತಿಯಿಡುತ್ತಾರೋ ಶ್ರದ್ಧೆಯಿಂದ ಆಯಾ ರೂಪದಲ್ಲಿಯೇ ಅವರ ಭಕ್ತಿಯನ್ನು ಸ್ಥಿರಗೊಳಿಸುತ್ತೇನೆ. ॥೨೧॥

ಸ ತಯಾ ಶ್ರದ್ಧಯಾ ಯುಕ್ತಸ್ತಸ್ಯಾರಾಧನಮೀಹತೇ ।
ಲಭತೇ ಚ ತತಃ ಕಾಮಾನ್ಮಯೈವ ವಿಹಿತಾನ್ ಹಿ ತಾನ್ ॥೨೨॥

ಅಂತವತ್ತು ಫಲಂ ತೇಷಾಂ ತದ್ಭವತ್ಯಲ್ಪಮೇಧಸಾಮ್ ।
ದೇವಾನ್ ದೇವಯಜೋ ಯಾಂತಿ ಮದ್ಭಕ್ತಾ ಯಾಂತಿ ಮಾ ಮಪಿ ॥೨೩॥

ಅವ್ಯಕ್ತಂ ವ್ಯಕ್ತಿಮಾಪನ್ನಂ ಮನ್ಯಂತೇ ಮಾಮಬುದ್ಧಯಃ ।
ಪರಂ ಭಾವಮಜಾನಂತೋ ಮಮಾವ್ಯಯಮನುತ್ತಮಮ್ ॥೨೪॥

ನಾಹಂ ಪ್ರಕಾಶಸ್ಸರ್ವಸ್ಯ ಯೋಗಮಾಯಾಸಮಾವೃತಃ ।
ಮೂಢೋಽಯಂ ನಾಭಿಜಾನಾತಿ ಲೋಕೋ ಮಾಮಜಮವ್ಯಯಮ್ ॥೨೫॥

ವೇದಾಹಂ ಸಮತೀತಾನಿ ವರ್ತಮಾನಾನಿ ಚಾರ್ಜುನ ।
ಭವಿಷ್ಯಾಣಿ ಚ ಭೂತಾನಿ ಮಾಂ ತು ವೇದ ನ ಕಶ್ಚನ ॥೨೬॥

ಇಚ್ಛಾದ್ವೇಷಸಮುತ್ಥೇನ ದ್ವಂದ್ವಮೋಹೇನ ಭಾರತ ।
ಸರ್ವಭೂತಾನಿ ಸಮ್ಮೋಹಂ ಸರ್ಗೇ ಯಾಂತಿ ಪರಂತಪ ॥೨೭॥

ಅವನು ಶ್ರದ್ಧಾಪೂರ್ವಕ ಆಯಾ ಸ್ವರೂಪದ ಆರಾಧನೆ ಮಾಡಿ, ಅದರ ಮೂಲಕ ತನ್ನಿಂದ ನಿರ್ಮಿತವಾದ ಹಾಗೂ ಅವನಿಗೆ ಬೇಕಾದ ಕಾಮಫಲಗಳನ್ನು ಹೊಂದುತ್ತಾನೆ. ॥೨೨॥

ಈ ಅಲ್ಪಬುದ್ಧಿಗಳಿಗೆ ದೊರೆವ ಫಲ ನಾಶವಂತ ಫಲ. ದೇವತೆಗಳನ್ನು ಭಜಿಸುವವರು ದೇವತೆಗಳನ್ನೈದುತ್ತಾರೆ. ನನ್ನನ್ನು ಭಜಿಸುವವರು ನನ್ನನ್ನು ಪಡೆಯುತ್ತಾರೆ. ॥೨೩॥

ಪರಮ ಅವಿನಾಶಿ, ಅನುಪಮ ಆದ ನನ್ನ ಸ್ವರೂಪವನ್ನು ಅರಿಯದ ಬುದ್ಧಿಹೀನರು ಇಂದ್ರಿಯಾತೀತನಾದ ನನ್ನನ್ನು ಇಂದ್ರಿಯಗಮ್ಯನೆಂದು ಭಾವಿಸುತ್ತಾರೆ. ॥೨೪॥

ನನ್ನ ಯೋಗಮಾಯೆಯಿಂದ ಮುಚ್ಚಿಕೊಂಡಿರುವ ನಾನು ಎಲ್ಲರಿಗೂ ಪ್ರಕಟನಾಗಿಲ್ಲ. ಈ ಮೂಢ ಜಗತ್ತು ಅಜನ್ಮನೂ ಅವ್ಯಕ್ತನೂ ಆದ ನನ್ನನ್ನು ಸರಿಯಾಗಿ ತಿಳಿಯುವುದಿಲ್ಲ. ॥೨೫॥

ಟಿಪ್ಪಣಿ–ಈ ಗೋಚರ ಜಗತ್ತನ್ನು ಸೃಷ್ಟಿಸುವ ಶಕ್ತಿ ಇದ್ದರೂ ಅಲಿಪ್ತನಾಗಿರುವುದರಿಂದ ಪರಮಾತ್ಮ ಅದೃಶ್ಯನಾಗಿದಾನೆ. ಇದೇ ಆತನ ಯೋಗಮಾಯೆ.

ಹಿಂದೆ ಆಗಿಹೋದ, ಈಗಿರುವ, ಮುಂದೆ ಆಗುವ ಸಕಲ ಭೂತಗಳನ್ನೂ ನಾನು ಬಲ್ಲೆ. ಆದರೆ ನನ್ನನ್ನು ಯಾರೂ ಅರಿತಿಲ್ಲ.

ಪರಂತಪ ! ಇಚ್ಛೆ–ದ್ವೇಷಗಳಿಂದ ಹುಟ್ಟುವ ಸುಖದುಃಖಾದಿ ದ್ವಂದ್ವಗಳ ಮೋಹದಿಂದ ಪ್ರಾಣಿಮಾತ್ರಗಳು ಈ ಜಗತ್ತಿನಲ್ಲಿ ಮೋಹಗ್ರಸ್ತವಾಗಿರುತ್ತವೆ. ॥೨೭॥

ಷಾಂ ತ್ವಂತಗತಂ ಪಾಪಂ ಜನಾನಾಂ ಪುಣ್ಯಕರ್ಮಣಾಮ್ ।
ದ್ವಂದ್ವಮೋಹನಿರ್ಮುಕ್ತಾಃ ಭಜಂತೇ ಮಾಂ ದೃಢವ್ರತಾಃ ॥೨೮॥

ರಾಮರಣಮೋಕ್ಷಾಯ ಮಾಮಾಶ್ರಿತ್ಯ ಯತಂತಿ ಯೇ ।
ಬ್ರಹ್ಮ ತದ್ವಿದುಃ ಕೃತ್ಸ್ನ ಮಧ್ಯಾತ್ಮಂ ಕರ್ಮ ಚಾಖಿಲಮ್ ॥೨೯॥

ಧಿಭೂತಾಧಿದೈವಂ ಮಾಂ ಸಾಧಿಯಜ್ಞಂ ಚ ಯೇ ವಿದುಃ ।
ಯಾಣಕಾಲೇಽಪಿ ಚ ಮಾಂ ತೇ ವಿದುರ್ಯುಕ್ತಚೇತಸಃ ॥೩೦॥

ಹರಿಃ ಓಂ ತತ್ಸತ್

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ಜ್ಞಾನವಿಜ್ಞಾನಯೋಗೋ ನಾಮ ಸಪ್ತಮೋಽಧ್ಯಾಯಃ ॥

ಆದರೆ ಯಾರ ಪಾಪಗಳು ನಾಶವಾಗಿವೆಯೋ ಆ ಸದಾಚಾರಿಗಳೂ, ದ್ವಂದ್ವ ೋಹದಿಂದ ಮುಕ್ತರಾದವರೂ ದೃಢವ್ರತದಿಂದ ನನ್ನ ಭಜನೆ ಮಾಡುತ್ತಾರೆ. ॥೨೮॥

ನನ್ನ ಆಶ್ರಯವನ್ನು ಹೊಂದಿ, ಜರಾ–ಮರಣಗಳಿಂದ ಮುಕ್ತರಾಗಲು ಪ್ರಯತ್ನಿಸು ವರು ಪೂರ್ಣಬ್ರಹ್ಮವನ್ನೂ ಅಧ್ಯಾತ್ಮವನ್ನೂ ಅಖಿಲ ಕರ್ಮವನ್ನೂ ತಿಳಿಯುತ್ತಾರೆ. ॥೨೯॥

ಅಧಿಭೂತ, ಅಧಿದೈವ, ಅಧಿಯಜ್ಞ ರೂಪದಲ್ಲಿ ನನ್ನನ್ನು ತಿಳಿದವರು ಸಮತ್ವವನ್ನೈದಿ ರಣಸಮಯದಲ್ಲಿ ಕೂಡ ನನ್ನನ್ನು ಅರಿಯುತ್ತಾರೆ. ॥೩೦॥

ಟಿಪ್ಪಣಿ–ಅದಿಭೂತಾದಿಗಳ ಅರ್ಥ ಎಂಟನೆಯ ಅಧ್ಯಾಯದಲ್ಲಿದೆ. 'ಈ ಜಗತ್ತಿನಲ್ಲಿ ಶ್ವರನ ವಿನಾ ಬೇರೆ ಯಾವುದೂ ಇಲ್ಲ, ಸಕಲ ಕರ್ಮಗಳ ಕರ್ತನೂ ಅವನೇ, ಭೋಕ್ತನೂ ವನೇ' ಎಂದು ತಿಳಿದು ಮರಣಸಮಯದಲ್ಲಿ ಶಾಂತರಾಗಿದ್ದು, ಆಗ ಯಾವ ಬಗೆಯ ಾಸನೆಯನ್ನೂ ಇಟ್ಟುಕೊಳ್ಳದೆ ಈಶ್ವರನಲ್ಲಿಯೇ ತನ್ಮಯನಾಗಿರುವಂತಹವರು ಈಶ್ವರನನ್ನು ಳಿದವರು, ಅವರೇ ಮೋಕ್ಷ ಪಡೆದವರು ಎಂಬುದೇ ಈ ಶ್ಲೋಕದ ಅಭಿಪ್ರಾಯ.

ಓಂ ತತ್ಸತ್

ಈ ಬಗೆಯಾಗಿ ಶ್ರೀಮದ್ಭಗವದ್ಗೀತಾರೂಪ ಉಪನಿಷತ್ ಅಥವಾ
ಬ್ರಹ್ಮವಿದ್ಯಾಂತರ್ಗತ ಯೋಗಶಾಸ್ತ್ರದ ಶ್ರೀಕೃಷ್ಣಾರ್ಜುನ ಸಂವಾದದಲ್ಲಿ
ಜ್ಞಾನವಿಜ್ಞಾನಯೋಗವೆಂಬ ಏಳನೆಯ ಅಧ್ಯಾಯ.

***

ಅಧ್ಯಾಯ ೮

ಅಕ್ಷರಬ್ರಹ್ಮಯೋಗ

(ಈ ಅಧ್ಯಾಯದಲ್ಲಿ ಈಶ್ವರತತ್ತ್ವವನ್ನು ವಿಶೇಷರೂಪದಿಂದ ತಿಳಿಸಲಾಗಿದೆ.)

ಅಥಾಷ್ಟಮೋಽಧ್ಯಾಯಃ

ಅರ್ಜುನ ಉವಾಚ

ಕಿಂ ತದ್ಬ್ರಹ್ಮ ಕಿಮಧ್ಯಾತ್ಮಂ ಕಿಂ ಕರ್ಮ ಪುರುಷೋತ್ತಮ ।
ಅಧಿಭೂತಂ ಚ ಕಿಂ ಪ್ರೋಕ್ತಮಧಿದೈವಂ ಕಿಮುಚ್ಯತೇ ॥೧॥

ಅಧಿಯಜ್ಞಃ ಕಥಂ ಕೋಽತ್ರ ದೇಹೇಽಸ್ಮಿನ್ ಮಧುಸೂದನ ।
ಪ್ರಯಾಣಕಾಲೇ ಚ ಕಥಂ ಜ್ಞೇಯೋಽಸಿ ನಿಯತಾತ್ಮಭಿಃ ॥೨॥

ಶ್ರೀ ಭಗವಾನುವಾಚ

ಅಕ್ಷರಂ ಬ್ರಹ್ಮ ಪರಮಂ ಸ್ವಭಾವೋಽಧ್ಯಾತ್ಮಮುಚ್ಯತೇ ।
ಭೂತಭಾವೋದ್ಭವಕರೋ ವಿಸರ್ಗಃ ಕರ್ಮಸಂಜ್ಞಿತಃ ॥೩॥

ಅರ್ಜುನ :

ಪುರುಷೋತ್ತಮ! ಈ ಬ್ರಹ್ಮದ ಸ್ವರೂಪವೆಂತಹುದು? ಅಧ್ಯಾತ್ಮ ಎಂದರೇನು? ಕರ್ಮವೆಂದರೇನು? ಅಧಿಭೂತ ಯಾವುದು? ಅಧಿದೈವ ಎಂಬುದು ಯಾವುದು? ॥೧॥

ಮಧುಸೂದನ, ಈ ದೇಹದಲ್ಲಿ ಅಧಿಯಜ್ಞ ಎಂದರೇನು? ಅದು ಹೇಗಿದೆ? ಮರಣಸಮಯದಲ್ಲಿ ಸಂಯಮಿಗಳು ನಿನ್ನನ್ನು ಹೇಗೆ ಅರಿತುಕೊಳ್ಳುತ್ತಾರೆ? ॥೨॥

ಶ್ರೀ ಭಗವಂತ :

ಯಾವುದು ಸರ್ವೋತ್ತಮವೋ ಅವಿನಾಶಿಯೋ ಅದು ಬ್ರಹ್ಮ; ಪ್ರಾಣಿ ಮಾತ್ರದಲ್ಲಿ ಯಾವುದು ತನ್ನ ಬಲದಿಂದ ಇರುತ್ತದೆಯೋ ಅದು ಅಧ್ಯಾತ್ಮ; ಪ್ರಾಣಿ ಮಾತ್ರಗಳನ್ನು ಉತ್ಪನ್ನ ಮಾಡುವ ಸೃಷ್ಟಿ ಮಾಡುವ ಸೃಷ್ಟಿವ್ಯಾಪಾರವೇ ಕರ್ಮ. ॥೩॥

ಅಧಿಭೂತಂ ಕ್ಷರೋ ಭಾವಃ ಪುರುಷಶ್ಚಾಧಿದೈವತಮ್ ।
ಅಧಿಯಜ್ಞೋऽಹಮೇವಾತ್ರ ದೇಹೇ ದೇಹಭೃತಾಂ ವರ ॥೪॥

ಅಂತಕಾಲೇ ಚ ಮಾಮೇವ ಸ್ಮರನ್ ಮುಕ್ತ್ವಾ ಕಲೇವರಮ್ ।
ಯಃ ಪ್ರಯಾತಿ ಸ ಮದ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ ॥೫॥

ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಮ್ ।
ತಂ ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ ॥೬॥

ತಸ್ಮಾತ್ಸರ್ವೇಷು ಕಾಲೇಷು ಮಾಮನುಸ್ಮರ ಯುಧ್ಯ ಚ ।
ಮಯ್ಯರ್ಪಿತಮನೋಬುದ್ಧಿರ್ಮಾಮೇವೈಷ್ಯಸ್ಯ ಸಂಶಯಂ ॥೭॥

ಅಭ್ಯಾಸಯೋಗಯುಕ್ತೇನ ಚೇತಸಾ ನಾನ್ಯಗಾಮಿನಾ ।
ಪರಮಂ ಪುರುಷಂ ದಿವ್ಯಂ ಯಾತಿ ಪಾರ್ಥಾನುಚಿಂತಯನ್ ॥೮॥

ನನ್ನ ನಾಶವಂತ ಸ್ವರೂಪವೇ ಅಧಿಭೂತ. ಅದರಲ್ಲಿರುವ ನನ್ನ ಜೀವ ಸ್ವರೂಪವೇ ಅಧಿದೈವತ. ಈ ದೇಹದಲ್ಲಿ ಇರುವ. ಯಜ್ಞದ ಮೂಲಕ ಶುದ್ಧವಾದ ಜೀವ ಸ್ವರೂಪ ಅಧಿಯಜ್ಞ ॥೪॥

ಟಿಪ್ಪಣಿ–ಎಂದರೆ ಅವ್ಯಕ್ತಬ್ರಹ್ಮನಿಂದ ಮೊದಲ್ಗೊಂಡು ನಾಶವಂತವಾದ ದೃಶ್ಯ ಪದಾರ್ಥಮಾತ್ರವೆಲ್ಲವೂ ಪರಮಾತ್ಮನೇ. ಎಲ್ಲವೂ ಅವನ ಕೃತಿ. ಇಂತಹ ಪರಿಸ್ಥಿತಿಯಲ್ಲಿ ಮನುಷ್ಯಪ್ರಾಣಿ ತನ್ನ ಕರ್ತೃತ್ವದ ಅಭಿಮಾನ ತಳೆಯುವುದಕ್ಕೆ ಬದಲಾಗಿ ಪರಮಾತ್ಮನ ದಾಸನಾಗಿ ಸಕಲವನ್ನೂ ಆತನಿಗೆ ಅರ್ಪಣ ಮಾಡಬಾರದೇಕೆ ?

ಯಾರು ಅಂತ್ಯ ಸಮಯದಲ್ಲಿ ನನ್ನ ಸ್ಮರಣೆಯನ್ನೆ ಮಾಡುತ್ತ ದೇಹವನ್ನು ಬಿಡುತ್ತಾರೋ ಅವರು ನನ್ನ ಸ್ವರೂಪವನ್ನು ಪಡೆಯುತ್ತಾರೆ. ಸ್ವಲ್ಪವೂ ಸಂಶಯವಿಲ್ಲ. ॥೫॥

ಅಥವಾ ಮನುಷ್ಯ ನಿತ್ಯವೂ ಯಾವ ಯಾವ ಸ್ವರೂಪವನ್ನು ಧ್ಯಾನ ಮಾಡುತ್ತಾನೋ ಅದೇ ಸ್ವರೂಪವನ್ನು ಮರಣ ಸಮಯದಲ್ಲಿಯೂ ಸ್ಮರಿಸುತ್ತ ದೇಹವನ್ನು ಬಿಡುತ್ತಾನೆ. ಅದರಿಂದ ಅವನು ಆಯಾ ಸ್ವರೂಪಗಳನ್ನು ಹೊಂದುತ್ತಾನೆ. ॥೬॥

ಆದುದರಿಂದ ಯಾವಾಗಲೂ ನನ್ನ ಸ್ಮರಣೆಯನ್ನೇ ಮಾಡುತ್ತ ಯುದ್ಧ ಮಾಡುತ್ತಿರು. ಹೀಗೆ ನನ್ನಲ್ಲಿ ಮನಸ್ಸು–ಬುದ್ಧಿಗಳನ್ನು ಅರ್ಪಿಸಿದರೆ ಸಂದೇಹವಿಲ್ಲದೆ ನನ್ನನ್ನು ಹೊಂದುತ್ತೀಯೆ.

ಪಾರ್ಥ, ಅಭ್ಯಾಸದ ಮೂಲಕ ಚಿತ್ತವನ್ನು ಸ್ಥಿರಗೊಳಿಸಿ ಅದು ಎತ್ತಲೂ ಚದುರದಂತೆ ಮಾಡಿ, ಏಕಾಗ್ರನಾಗುವವನು ದಿವ್ಯವಾದ ಪರಮಪುರುಷನನ್ನು ಹೊಂದುತ್ತಾನೆ. ॥೮॥

ಅಣೋರಣೀಯಾಂಸಮನುಸ್ಮರೇದ್ಯಃ ।
ಸರ್ವಸ್ಯ ಧಾತಾರಮಚಿಂತ್ಯರೂಪಮ್
ಆದಿತ್ಯವರ್ಣಂ ತಮಸಃ ಪರಸ್ತಾತ್ ||೯||

ಪ್ರಯಾಣಕಾಲೇ ಮನಸಾಚಲೇನ
ಭಕ್ತ್ಯಾ ಯುಕ್ತೋ ಯೋಗಬಲೇನ ಚೈವ ।
ಭ್ರುವೋರ್ಮಧ್ಯೇ ಪ್ರಾಣಮಾವೇಶ್ಯ ಸಮ್ಯಕ್
ಸ ತಂ ಪರಂ ಪುರುಷಮುಪೈತಿ ದಿವ್ಯಮ್ ||೧೦||

ಯದಕ್ಷರಂ ವೇದವಿದೋ ವದಂತಿ
ವಿಶಂತಿ ಯದ್ಯತಯೋ ವೀತರಾಗಾಃ ।
ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ
ತತ್ತೇ ಪದಂ ಸಂಗ್ರಹೇಣ ಪ್ರವಕ್ಷ್ಯೇ ||೧೧||

ಸರ್ವದ್ವಾರಾಣಿ ಸಂಯಮ್ಯ ಮನೋ ಹೃದಿ ನಿರುಧ್ಯ ಚ ।
ಮೂರ್ಧ್ನ್ಯಾಧಾಯಾತ್ಮನಃ ಪ್ರಾಣಮಾಸ್ಥಿತೋ ಯೋಗಧಾರಣಾಮ್ ||೧೨||

ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಮನುಸ್ಮರನ್ ।
ಯಃ ಪ್ರಯಾತಿ ತ್ಯಜನ್ದೇಹಂ ಸ ಯಾತಿ ಪರಮಾಂ ಗತಿಮ್ ||೧೩||

ಯಾವ ಮನುಷ್ಯ ಮರಣ ಸಮಯದಲ್ಲಿ ಅಚಲಮನಸ್ಸಿನಿಂದ, ಭಕ್ತಿಪೂರ್ಣವಾಗಿ, ಯೋಗಬಲದಿಂದ ಹುಬ್ಬಿನ ಮಧ್ಯೆ ಪ್ರಾಣವನ್ನು ಚೆನ್ನಾಗಿ ಪ್ರತಿಷ್ಠಿಸಿ, ಸರ್ವಜ್ಞ, ಪುರಾತನ, ನಿಯಂತ, ಸೂಕ್ಷ್ಮತಮ, ಸಕಲಾಧಾರ, ಅಚಿಂತ್ಯ, ಸೂರ್ಯನಂತೆ ತೇಜಸ್ವಿ, ಅಜ್ಞಾನ ಸ್ವರೂಪದ ಅಂಧಕಾರದಿಂದ ಬೇರೆಯಾದ ಸ್ವರೂಪವುಳ್ಳ ನನ್ನನ್ನು ಚೆನ್ನಾಗಿ ಸ್ಮರಿಸುವವನು ದಿವ್ಯವಾದ ಪರಮ ಪುರುಷನನ್ನೈದುತ್ತಾನೆ. ||೯–೧೦||

ಯಾವುದನ್ನು ವೇದವಿದರು ಅಕ್ಷರವೆಂದು ವರ್ಣಿಸುವರೊ, ಯಾವುದರಲ್ಲಿ ವೀತರಾಗಿಗಳಾದ ಮುನಿಗಳು ಪ್ರವೇಶಿಸುತ್ತಾರೊ, ಯಾವುದನ್ನು ಪಡೆವ ಇಚ್ಛೆಯಿಂದ ಜನರು ಬ್ರಹ್ಮಚರ್ಯಪಾಲನೆ ಮಾಡುತ್ತಾರೊ, ಆ ಪದದ ಸಂಕ್ಷಿಪ್ತ ವರ್ಣನೆಯನ್ನು ನಾನು ನಿನಗೆ ಹೇಳುತ್ತೇನೆ. ||೧೧||

ಇಂದ್ರಿಯಗಳ ಸರ್ವದ್ವಾರಗಳನ್ನು ತಡೆದು, ಮನಸ್ಸನ್ನು ಹೃದಯದಲ್ಲಿ ಸ್ಥಿರಗೊಳಿಸಿ, ಪ್ರಾಣಗಳನ್ನು ಮಸ್ತಕಕ್ಕೆ ಏರಿಸಿ, ಸಮಾಧಿಸ್ಥನಾಗಿ ಓಂ ಎಂಬ ಏಕಾಕ್ಷರ ಬ್ರಹ್ಮನ ಉಚ್ಚಾರಣೆ ಮಾಡುತ್ತ, ನನ್ನನ್ನು ಸ್ಮರಿಸುತ್ತ ಯಾವ ಮಾನವ ದೇಹತ್ಯಾಗ ಮಾಡುತ್ತಾನೋ ಅವನಿಗೆ ಪರಮಗತಿ ಸಿಗುತ್ತದೆ. ||೧೨–೧೩||

ಮಾಮುಪೇತ್ಯ ಪುನರ್ಜನ್ಮ ದುಃಖಾಲಯಮಶಾಶ್ವತಮ್ ।
ನಾಪ್ನುವಂತಿ ಮಹಾತ್ಮಾನಸ್ಸಂಸಿದ್ಧಿಂ ಪರಮಾಂ ಗತಾಃ ॥೧೫॥

ಆಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ ।
ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ ॥೧೬॥

ಸಹಸ್ರ ಯುಗಪರ್ಯಂತಮಹರ್ಯದ್ಬ್ರಹ್ಮಣೋ ವಿದುಃ ।
ರಾತ್ರಿಂ ಯುಗಸಹಸ್ರಾಂತಾಂ ತೇಽಹೋರಾತ್ರವಿದೋ ಜನಾಃ ॥೧೭॥

ಅವ್ಯಕ್ತಾದ್ವ್ಯಕ್ತಯಸ್ಸರ್ವಾಃ ಪ್ರಭವಂತ್ಯಹರಾಗಮೇ ।
ರಾತ್ರ್ಯಾಗಮೇ ಪ್ರಲೀಯಂತೇ ತತ್ರೈವಾವ್ಯಕ್ತಸಂಜ್ಞಕೇ ॥೧೮॥

ಪಾರ್ಥ, ಚಿತ್ತವನ್ನು ಮತ್ತೆಲ್ಲಿಯೂ ಇಡದೆ ಯಾರು ನಿತ್ಯನಿರಂತರ ನನ್ನ ಸ್ಮರಣೆ ಮಾಡುತ್ತಾನೋ ಆ ನಿತ್ಯಯುಕ್ತ ಯೋಗಿ ನನ್ನನ್ನು ಸಹಜವಾಗಿ ಪಡೆಯುತ್ತಾನೆ. ॥೧೪॥

ನನ್ನನ್ನು ಸೇರಿ ಪರಮಗತಿಯನ್ನು ಪಡೆದ ಮಹಾತ್ಮರು ದುಃಖದ ಮನೆಯೂ ಅಶಾಶ್ವತವೂ ಆದ ಪುನರ್ಜನ್ಮವನ್ನು ಮತ್ತೆ ಹೊಂದರು. ॥೧೫॥

ಕೌಂತೇಯ, ಬ್ರಹ್ಮಲೋಕ ಮೊದಲ್ಗೊಂಡು ಸಕಲ ಲೋಕಗಳೂ ಮತ್ತೆ ಮತ್ತೆ ಲಭಿಸುವಂಥವು. ಆದರೆ ನನ್ನನ್ನು ಸೇರಿದ ಬಳಿಕ ಮನುಷ್ಯ ಮತ್ತೆ ಜನ್ಮ ತಾಳಬೇಕಾಗಿಲ್ಲ. ॥೧೬॥

ಬ್ರಹ್ಮನಿಗೆ ಸಾವಿರ ಯುಗ ಒಂದು ಹಗಲು, ಸಾವಿರ ಯುಗ ಒಂದು ರಾತ್ರಿ: ಇದನ್ನು ತಿಳಿದವರು 'ಅಹೋರಾತ್ರವಿದರು'. ॥೧೭॥

ಟಿಪ್ಪಣಿ–ಸಾರಾಂಶವೇನೆಂದರೆ, ನಮ್ಮ ಹಗಲಿರುಳುಗಳ ೨೪ ಗಂಟೆ ಸಮಯ ಕಾಲಚಕ್ರದಲ್ಲಿ ಒಂದು ಕ್ಷಣಕ್ಕಿಂತಲೂ ಸೂಕ್ಷ್ಮವಾದುದು. ಆದುದರಿಂದ ಅಷ್ಟು ಸಮಯವನ್ನು ಭಗವದ್ ಭಕ್ತಿಯಲ್ಲಿ, ಸೇವೆಯಲ್ಲಿ ಕಳೆದು ಸಾರ್ಥಕಗೊಳಿಸಬೇಕು. ಈಗಲೇ ಆತ್ಮದರ್ಶನವಾಗದಿದ್ದರೆ ತಾಳ್ಮೆ ತಳೆಯಬೇಕು.

(ಬ್ರಹ್ಮನ) ದಿನ ಹುಟ್ಟುತ್ತಲೇ ಅವ್ಯಕ್ತದಿಂದ ಎಲ್ಲವೂ ವ್ಯಕ್ತವಾಗುತ್ತದೆ. ರಾತ್ರಿಯಾದ ಕೂಡಲೇ ಅವುಗಳ ಪ್ರಳಯವಾಗುತ್ತದೆ, ಎಂದರೆ ಅವ್ಯಕ್ತದಲ್ಲಿ ಲೀನವಾಗುತ್ತವೆ. ॥೧೮॥

ಭೂತಗ್ರಾಮಸ್ಸ ಏವಾಯಂ ಭೂತ್ವಾ ಭೂತ್ವಾ ಪ್ರಲೀಯತೇ ।
ರಾತ್ರ್ಯಾಗಮೇಽವಶಃ ಪಾರ್ಥ ಪ್ರಭವತ್ಯಹರಾಗಮೇ ॥೧೯॥

ಪರಸ್ತಸ್ಮಾತ್ತು ಭಾವೋಽನ್ಯೋಽವ್ಯಕ್ತೋಽವ್ಯಕ್ತಾತ್ಸನಾತನಃ ।
ಯಸ್ಸ ಸರ್ವೇಷು ಭೂತೇಷು ನಶ್ಯತ್ಸು ನ ವಿನಶ್ಯತಿ ॥೨೦॥

ಅವ್ಯಕ್ತೋಽಕ್ಷರ ಇತ್ಯುಕ್ತಸ್ತಮಾಹುಃ ಪರಮಾಂ ಗತಿಮ್ ।
ಯಂ ಪ್ರಾಪ್ಯ ನ ನಿವರ್ತಂತೇ ತದ್ಧಾಮ ಪರಮಂ ಮಮ ॥೨೧॥

ಪುರುಷಸ್ಸ ಪರಃ ಪಾರ್ಥ ಭಕ್ತ್ಯಾ ಲಭ್ಯಸ್ತ್ವನನ್ಯಯಾ ।
ಯಸ್ಯಾಂತಸ್ಥಾನಿ ಭೂತಾನಿ ಯೇನ ಸರ್ವಮಿದಂ ತತಮ್ ॥೨೨॥

ಯತ್ರ ಕಾಲೇತ್ವನಾವೃತ್ತಿಮಾವೃತ್ತಿಂ ಚೈವ ಯೋಗಿನಃ ।
ಪ್ರಯಾತಾ ಯಾಂತಿ ತಂ ಕಾಲಂ ವಕ್ಷ್ಯಾಮಿ ಭರತರ್ಷಭ ॥೨೩॥

ಅಗ್ನಿರ್ಜ್ಯೋತಿರಹಃಶುಕ್ಲಃ ಷಣ್ಮಾಸಾ ಉತ್ತರಾಯಣಮ್ ।
ತತ್ರ ಪ್ರಯಾತಾ ಗಚ್ಛಂತಿ ಬ್ರಹ್ಮ ಬ್ರಹ್ಮವಿದೋ ಜನಾಃ ॥೨೪॥

ಟಿಪ್ಪಣಿ–ಇದನ್ನರಿತಾದರೂ ಮನುಷ್ಯ ತನ್ನ ಕೈಯಲ್ಲಿ ಬಹಳ ಕಡಿಮೆ ಅಧಿಕಾರ ಇದೆಯೆಂದು ತಿಳಿಯಬೇಕು. ಉತ್ಪತ್ತಿ, ನಾಶಗಳೆರಡೂ ಒಟ್ಟಿಗೆ ನಡೆಯುತ್ತವೆ.

ಪಾರ್ಥ, ಪ್ರಾಣಿಗಳ ಈ ಸಮುದಾಯ ಹೀಗೆ ಹುಟ್ಟಿ ಹುಟ್ಟಿ ರಾತ್ರಿ ಆದೊಡನೆ ವಿವಶವಾಗಿ ಲಯವಾಗುತ್ತದೆ. ಹಗಲಾಗುತ್ತಲೆ ಮತ್ತೆ ಹುಟ್ಟುತ್ತದೆ. ॥೧೯॥

ಈ ಅವ್ಯಕ್ತಕ್ಕೆ ಅತೀತವಾದ ಮತ್ತೊಂದು ಸನಾತನ ಅವ್ಯಕ್ತಭಾವವಿದೆ. ಸಕಲ ಪ್ರಾಣಿಗಳ ನಾಶವಾದರೂ ಈ ಸನಾತನ ಅವ್ಯಕ್ತಭಾವ ನಾಶವಾಗದು. ॥೨೦॥

ಅವ್ಯಕ್ತವೂ ಅಕ್ಷರ (ಅವಿನಾಶ)ವೂ ಆದುದಕ್ಕೆ ಪರಮಗತಿಯೆನ್ನುತ್ತಾರೆ. ಯಾವುದನ್ನು ಪಡೆದ ಮೇಲೆ ಪುನರ್ಜನ್ಮ ಇಲ್ಲವೊ ಅದೇ ನನ್ನ ಪರಮಧಾಮ. ॥೨೧॥

ಪಾರ್ಥ, ಈ ಉತ್ತಮ ಪುರುಷನ ದರ್ಶನ ಅನನ್ಯಭಕ್ತಿಯಿಂದ ಲಭಿಸುತ್ತದೆ. ಭೂತಮಾತ್ರವೆಲ್ಲವೂ ಅವನಲ್ಲಿ ಇದೆ. ಇವೆಲ್ಲವೂ ಅವನಿಂದ ವ್ಯಾಪ್ತ. ॥೨೨॥

ಯಾವ ಸಮಯದಲ್ಲಿ ಗತಿಸಿ ಯೋಗಿಗಳು ಮೋಕ್ಷ ಪಡೆಯುತ್ತಾರೆ, ಯಾವ ಸಮಯದಲ್ಲಿ ಮರಣವಾದರೆ ಅವರಿಗೆ ಪುನರ್ಜನ್ಮ ಬರುತ್ತದೋ, ಆ ಸಮಯವನ್ನು ನಿನಗೆ ತಿಳಿಸುತ್ತೇನೆ. ॥೨೩॥

ಉತ್ತರಾಯಣದ ಆರು ತಿಂಗಳು ಶುಕ್ಲ ಪಕ್ಷದ ಹಗಲಲ್ಲಿ ಅಗ್ನಿಜ್ವಾಲೆ ಪ್ರಜ್ವಲಿಸುತ್ತಿರುವಾಗ ಮರಣ ಹೊಂದಿದ ಬ್ರಹ್ಮವಿದರು ಬ್ರಹ್ಮವನ್ನೈದುತ್ತಾರೆ. ॥೨೪॥

ಧೂಮೋ ರಾತ್ರಿಸ್ತಥಾ ಕೃಷ್ಣಃ ಷಣ್ಮಾಸಾ ದಕ್ಷಿಣಾಯನಮ್ ।
ತತ್ರ ಚಾಂದ್ರಮಸಂ ಜ್ಯೋತಿರ್ಯೋಗೀ ಪ್ರಾಪ್ಯ ನಿವರ್ತತೇ ॥೨೫॥

ಶುಕ್ಲಕೃಷ್ಣೇ ಗತೀ ಹ್ಯೇತೇ ಜಗತಃ ಶಾಶ್ವತೇ ಮತೇ ।
ಏಕಯಾ ಯಾತ್ಯನಾವೃತ್ತಿಮನ್ಯಯಾವರ್ತತೇ ಪುನಃ ॥೨೬॥

ನೈತೇ ಸೃತೀ ಪಾರ್ಥ ಜಾನನ್ ಯೋಗೀ ಮುಹ್ಯತಿ ಕಶ್ಚನ ।
ತಸ್ಮಾತ್ಸರ್ವೇಷು ಕಾಲೇಷು ಯೋಗಯುಕ್ತೋ ಭವಾರ್ಜುನ ॥೨೭॥

ದಕ್ಷಿಣಾಯನದ ಆರು ತಿಂಗಳು ಕೃಷ್ಣಪಕ್ಷದ ರಾತ್ರಿಯಲ್ಲಿ, ಹೊಗೆ ಆಡುತ್ತಿರುವಾಗ ಮರಣಹೊಂದಿದವರು ಚಂದ್ರಲೋಕವನ್ನು ಸೇರಿ ಮತ್ತೆ ಹುಟ್ಟುತ್ತಾರೆ. ॥೨೫॥

ಟಿಪ್ಪಣಿ–ಇವೆರಡು (೨೪–೨೫) ಶ್ಲೋಕಗಳು ನನಗೆ ಸರಿಯಾಗಿ ತಿಳಿದಿಲ್ಲ. ಇವುಗಳ ಶಬ್ದಾರ್ಥ ಗೀತೆಯ ಶಿಕ್ಷಣಕ್ಕೆ ಹೊಂದದು. ಆ ಶಿಕ್ಷಣಾನುಸಾರ, ಭಕ್ತಿಪೂರ್ಣನಾಗಿ, ಸೇವಾ ಮಾರ್ಗದ ಉಪಾಸನೆ ಮಾಡುವವನಿಗೆ, ಜ್ಞಾನ ಪ್ರಾಪ್ತವಾದವನಿಗೆ, ಯಾವಾಗ ಸತ್ತರೂ ಮೋಕ್ಷ ಸಿಗಲೇಬೇಕು. ಈ ಶ್ಲೋಕಗಳ ಶಬ್ದಾರ್ಥ ಇದಕ್ಕೆ ವಿರೋಧವಾಗಿದೆ. ಯಜ್ಞ ಮಾಡುವವನಿಗೆ, ಜ್ಞಾನಪ್ರಾಪ್ತಿಯಾದವನಿಗೆ, ಬ್ರಹ್ಮವಿದನಿಗೆ ಎಂದರೆ ಜ್ಞಾನಿಯಾದವನಿಗೆ ಸಾಯುವಾಗಲೂ ಅದೇ ಸ್ಥಿತಿಯಿದ್ದರೆ ಮೋಕ್ಷ ಲಭಿಸುತ್ತದೆ ಎಂಬ ಭಾವಾರ್ಥವೂ ಆಗಬಹುದು. ಅದಕ್ಕೆ ಬದಲಾಗಿ ಯಜ್ಞಮಾಡದವನು, ಜ್ಞಾನ ಲಭಿಸದವನು, ಭಕ್ತಿಯ ಅರಿವಿಲ್ಲದವನು, ಚಂದ್ರಲೋಕವನ್ನು ಅಥವಾ ಕ್ಷಣಿಕ ಲೋಕವನ್ನು ಪಡೆದು, ಪುನಃ ಭವಚಕ್ರದಲ್ಲಿ ಸುತ್ತುತ್ತಾನೆ. ಚಂದ್ರನಿಗೆ ಸ್ವಂತ ಜ್ಯೋತಿಯಿಲ್ಲ.

ಜಗತ್ತಿನಲ್ಲಿ, ಜ್ಞಾನ ಅಜ್ಞಾನ–ಎರಡು ಪರಂಪರಾಗತ ಮಾರ್ಗ ಇವೆ. ಒಂದರಿಂದ, ಜ್ಞಾನಮಾರ್ಗದಿಂದ ಮನುಷ್ಯ ಮೋಕ್ಷ ಪಡೆಯುತ್ತಾನೆ : ಮತ್ತೊಂದರಿಂದ, ಅಜ್ಞಾನ ಮಾರ್ಗದಿಂದ ಪುನರ್ಜನ್ಮ ಹೊಂದುತ್ತಾನೆ. ॥೨೬॥

ಪಾರ್ಥ, ಈ ಎರಡೂ ಮಾರ್ಗಗಳನ್ನರಿತ ಯಾವ ಯೋಗಿಯೂ ಮೋಹವಶನಾಗನು. ಆದುದರಿಂದ ನೀನು ಯಾವಾಗಲೂ ಯೋಗಯುಕ್ತನಾಗಿರಬೇಕು. ॥೨೭॥

ಟಿಪ್ಪಣಿ–ಎರಡು ಮಾರ್ಗಗಳನ್ನೂ ಅರಿತವನು, ಸಮತ್ವಭಾವವುಳ್ಳವನು, ಕತ್ತಲೆಯ ಅಜ್ಞಾನದ ಮಾರ್ಗವನ್ನು ತುಳಿಯನು; ಮೋಹವಶನಾಗನೆಂದರೆ ಇದೇ ಅರ್ಥ.

ವೇದೇಷು ಯಜ್ಞೇಷು ತಪಸ್ಸು ಚೈವ
ದಾನೇಷು ಯತ್ಪುಣ್ಯಫಲಂ ಪ್ರದಿಷ್ಟಮ್ ।
ಅತ್ಯೇತಿ ತತ್ಸರ್ವಮಿದಂ ವಿದಿತ್ವಾ
ಯೋಗೀ ಪರಂ ಸ್ಥಾನಮುಪೈತಿ ಚಾದ್ಯಮ್ ॥೨೮॥

ಹರಿಃ ಓಂ ತತ್ಸತ್

ಇತಿ ಶ್ರೀ ಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀ ಕೃಷ್ಣಾರ್ಜುನಸಂವಾದೇ
ಅಕ್ಷರಬ್ರಹ್ಮಯೋಗೋ ನಾಮ ಅಷ್ಟಮೋಽಧ್ಯಾಯಃ ॥

ಇದನ್ನರಿತ ಬಳಿಕ ವೇದ, ಯಜ್ಞ, ತಪಸ್ಸು, ದಾನಗಳಲ್ಲಿ ಹೇಳಿರುವ ಪುಣ್ಯ ಫಲಗಳನ್ನು ದಾಟಿ ಯೋಗಿ ಉತ್ತಮವಾದ ಆದಿಸ್ಥಾನವನ್ನು ಹೊಂದುತ್ತಾನೆ. ॥೨೮॥

ಟಿಪ್ಪಣಿ–ಎಂದರೆ ಜ್ಞಾನ, ಭಕ್ತಿ, ಸೇವಾಕಾರ್ಯಗಳ ಮೂಲಕ ಸಮಭಾವ ಪಡೆದವನಿಗೆ ಸಕಲ ಪುಣ್ಯಗಳ ಫಲವೂ ಸಿಗುತ್ತದೆ. ಅಷ್ಟು ಮಾತ್ರವಲ್ಲದೆ ಅವನಿಗೆ ಪರಮ ಮೋಕ್ಷಪದವೂ ಲಭಿಸುತ್ತದೆ.

ಓಂ ತತ್ಸತ್

ಈ ಬಗೆಯಾಗಿ ಶ್ರೀಮದ್ಭಗವದ್ಗೀತಾರೂಪ ಉಪನಿಷತ್ ಅಥವಾ
ಬ್ರಹ್ಮವಿದ್ಯಾಂತರ್ಗತ ಯೋಗಶಾಸ್ತ್ರದ ಶ್ರೀ ಕೃಷ್ಣಾರ್ಜುನ ಸಂವಾದದಲ್ಲಿ
ಅಕ್ಷರ ಬ್ರಹ್ಮಯೋಗವೆಂಬ ಎಂಟನೆಯ ಅಧ್ಯಾಯ

***

ಅಧ್ಯಾಯ ೯

ರಾಜವಿದ್ಯಾ–ರಾಜಗುಹ್ಯಯೋಗ

(ಇದರಲ್ಲಿ ಭಕ್ತಿಮಹಿಮೆಯನ್ನು ವರ್ಣಿಸಿದೆ.)

ಅಥನವಮೋಽಧ್ಯಾಯಃ

ಶ್ರೀ ಭಗವಾನುವಾಚ

ಇದಂ ತು ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ
ಜ್ಞಾನಂ ವಿಜ್ಞಾನಸಹಿತಂ ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥೧॥

ರಾಜವಿದ್ಯಾ ರಾಜಗುಹ್ಯಂ ಪವಿತ್ರಮಿದಮುತ್ತಮಮ್ ।
ಪ್ರತ್ಯಕ್ಷಾವಗಮಂ ಧರ್ಮ್ಯಂ ಸುಸುಖಂ ಕರ್ತುಮವ್ಯಯಮ್ ॥೨॥

ಅಶ್ರದ್ದಧಾನಾಃ ಪುರುಷಾ ಧರ್ಮಸ್ಯಾಸ್ಯ ಪರಂತಪ ।
ಅಪ್ರಾಪ್ಯ ಮಾಂ ನಿವರ್ತಂತೇ ಮೃತ್ಯುಸಂಸಾರವರ್ತ್ಮನಿ ॥೩॥

ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ ।
ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥೪॥

ಶ್ರೀ ಭಗವಂತ :

ನೀನು ದ್ವೇಷರಹಿತ, ಆದುದರಿಂದ ಗುಹ್ಯಕ್ಕಿಂತ ಗುಹ್ಯವಾದ ಅನುಭವ ಪೂರ್ಣ ಜ್ಞಾನವನ್ನು ನಾನು ನಿನಗೆ ನೀಡುತ್ತೇನೆ. ಅದನ್ನರಿತು ನೀನು ಅಕಲ್ಯಾಣದಿಂದ ಮುಕ್ತನಾಗುತ್ತೀ. ॥೧॥

ವಿದ್ಯೆಗಳಲ್ಲೆಲ್ಲ, ಗೂಢಗಳಿಗೆಲ್ಲ ಇದು ರಾಜ. ಈ ವಿದ್ಯೆ ಪವಿತ್ರ, ಪ್ರತ್ಯಕ್ಷಾನುಭವಕ್ಕೆ ಯೋಗ್ಯ, ಧಾರ್ಮಿಕ. ಆಚರಿಸಲು ಸುಲಭ, ಅವಿನಾಶಿ. ॥೨॥

ಯಾರಿಗೆ ಈ ಧರ್ಮದಲ್ಲಿ ಶ್ರದ್ಧೆ ಇಲ್ಲವೋ ಅವರು ನನ್ನನ್ನು ಪಡೆಯದೆ ಮೃತ್ಯುಮಯ ಸಂಸಾರಮಾರ್ಗಕ್ಕೆ ಬಾರಿಬಾರಿಗೂ ಬರುತ್ತಾರೆ. ॥೩॥

ಈ ಸಮಗ್ರ ಜಗತ್ತು ನನ್ನ ಅವ್ಯಕ್ತಸ್ವರೂಪದಿಂದ ತುಂಬಿದೆ. ನನ್ನಲ್ಲಿ ನನ್ನ ಆಧಾರದ ಮೇಲೆ–ಎಲ್ಲ ಪ್ರಾಣಿಗಳೂ ಇವೆ. ನಾನು ಅವುಗಳ ಆಧಾರದ ಮೇಲಿಲ್ಲ. ॥೪॥

ನ ಚ ಮತ್ಸ್ಥಾನಿ ಭೂತಾನಿ ಪಶ್ಯ ಮೇ ಯೋಗಮೈಶ್ವರಮ್ ।
ಭೂತಭೃನ್ನ ಚ ಭೂತಸ್ಥೋ ಮಮಾತ್ಮಾ ಭೂತಭಾವನಃ ॥೫॥

ಯಥಾಕಾಶಸ್ಥಿತೋ ನಿತ್ಯಂ ವಾಯುಸ್ಸರ್ವತ್ರಗೋ ಮಹಾನ್ ।
ತಥಾ ಸರ್ವಾಣಿ ಭೂತಾನಿ ಮತ್ಸ್ಥಾನೀತ್ಯುಪಧಾರಯ ॥೬॥

ಸರ್ವಭೂತಾನಿ ಕೌಂತೇಯ ಪ್ರಕೃತಿಂ ಯಾಂತಿ ಮಾಮಿಕಾಂ ।
ಕಲ್ಪಕ್ಷಯೇ ಪುನಸ್ತಾನಿ ಕಲ್ಪಾದೌ ವಿಸೃಜಾಮ್ಯಹಮ್ ॥೭॥

ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃಪುನಃ ।
ಭೂತಗ್ರಾಮಮಿಮಂ ಕೃತ್ಸ್ನಮವಶಂ ಪ್ರಕೃತೇರ್ವಶಾತ್ ॥೮॥

ನ ಚ ಮಾಂ ತಾನಿ ಕರ್ಮಾಣಿ ನಿಬಧ್ನಂತಿ ಧನಂಜಯ ।
ಉದಾಸೀನವದಾಸೀನಮಸಕ್ತಂ ತೇಷು ಕರ್ಮಸು ॥೯॥

ಆದರೂ ಪ್ರಾಣಿಗಳು ನನ್ನಲ್ಲಿಲ್ಲವೆನ್ನಬಹುದು. ನನ್ನ ಈ ಯೋಗಬಲವನ್ನು ನೀನು ನೋಡು. ನಾನು ಜೀವಗಳನ್ನು ಪೋಷಣೆ ಮಾಡುವವನು; ಆದರೂ ನಾನು ಅವುಗಳಲ್ಲಿ ಇಲ್ಲ. ಆದರೆ ಅವುಗಳ ಉತ್ಪತ್ತಿಗೆ ನಾನು ಕಾರಣ. ॥೫॥

ಟಿಪ್ಪಣಿ– 'ನನ್ನಲ್ಲಿ ಸಕಲ ಭೂತಗಳೂ ಇವೆ, ಇಲ್ಲ; ಅವುಗಳಲ್ಲಿ ನಾನು ಇದ್ದೇನೆ, ಇಲ್ಲ' ಇದು ಈಶ್ವರನ ಯೋಗಬಲ, ಅವನ ಮಾಯೆ, ಅವನ ಚಮತ್ಕಾರ. ಭಗವಂತ ಕೂಡ ಮನುಷ್ಯ ಭಾಷೆಯಲ್ಲಿಯೇ ಈಶ್ವರನ ವರ್ಣನೆ ಮಾಡಬೇಕಾಯಿತು. ಆದರಿಂದ ಅನೇಕ ಪ್ರಕಾರದ ಭಾಷೆಯ ಪ್ರಯೋಗಮಾಡಿ ಆತ ಮನುಷ್ಯನನ್ನು ಸಂತುಷ್ಟಗೊಳಿಸಿದ್ದಾನೆ. ಎಲ್ಲವೂ ಈಶ್ವರಮಯ; ಆದ್ದರಿಂದ ಎಲ್ಲವೂ ಅವನಲ್ಲಿವೆ. ಅವನು ಅಲಿಪ್ತ, ಅವನು ಪ್ರಾಕೃತ ಕರ್ತನಾಗಿಲ್ಲ; ಆದ್ದರಿಂದ ಅವನಲ್ಲಿವೆ. ಅವನು ಅಲಿಪ್ತ, ಅವನು ಪ್ರಾಕೃತ ಕರ್ತನಾಗಿಲ್ಲ; ಆದ್ದರಿಂದ ಅವನಲ್ಲಿ ಜೀವ ಇಲ್ಲವೆನ್ನಬಹುದು. ಆದರೆ ಅವನ ಭಕ್ತರಲ್ಲಿ ಇದ್ದೇ ಇದ್ದಾನೆ. ನಾಸ್ತಿಕರಲ್ಲಿ ಅವರ ದೃಷ್ಟಿಯಿಂದ ಅವನು ಇಲ್ಲ. ಇದಕ್ಕೆ ಅವನ ಚಮತ್ಕಾರವಲ್ಲದಿದ್ದರೆ ಮತ್ತೇನೆನ್ನಬೇಕು.

ಸರ್ವತ್ರ ಸಂಚರಿಸುವ ಮಹಾವಾಯು ಆಕಾಶದಲ್ಲಿ ಇರುವಂತೆ ಎಲ್ಲ ಪ್ರಾಣಿಗಳೂ ನನ್ನಲ್ಲಿ ಇವೆ ಎಂಬುದನ್ನು ತಿಳಿದುಕೊ. ॥೬॥

ಕೌಂತೇಯ, ಎಲ್ಲಾ ಪ್ರಾಣಿಗಳೂ ಕಲ್ಪದ ಅಂತ್ಯದಲ್ಲಿ ನನ್ನ ಪ್ರಕೃತಿಯಲ್ಲಿ ಲಯವಾಗುತ್ತವೆ. ಮತ್ತೆ ಕಲ್ಪದ ಆರಂಭವಾಗುತ್ತಲೇ ಅವುಗಳನ್ನು ಮತ್ತೆ ನಾನು ಸೃಷ್ಟಿಸುತ್ತೇನೆ. ॥೭॥

ನನ್ನ ಮಾಯೆಯ ಬಲದಿಂದ ನಾನು ಈ ಪ್ರಕೃತಿಯ ಪ್ರಭಾವದ ಅಧೀನದಲ್ಲಿರುವ ಪ್ರಾಣಿಗಳ ಸಮಸ್ತ ಸಮುದಾಯವನ್ನೂ ಮತ್ತೆ ಮತ್ತೆ ಉತ್ಪನ್ನ ಮಾಡುತ್ತೇನೆ. ॥೮॥

ಧನಂಜಯ, ಈ ಕರ್ಮಗಳು ನನ್ನನ್ನು ಬಂಧಿಸವು. ಏಕೆಂದರೆ, ನಾನು ಅವುಗಳಲ್ಲಿ ಉದಾಸೀನನಾಗಿ, ಆಸಕ್ತಿರಹಿತನಾಗಿ ವರ್ತಿಸುತ್ತೇನೆ. ॥೯॥

ಮಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್ ।
ಹೇತುನಾನೇನ ಕೌಂತೇಯ ಜಗದ್ವಿಪರಿವರ್ತತೇ ॥೧೦॥

ಅವಜಾನಂತಿ ಮಾಂ ಮೂಢಾಃ ಮಾನುಷೀಂ ತನುಮಾಶ್ರಿತಮ್ ।
ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಮ್ ॥೧೧॥

ಮೋಘಾಶಾ ಮೋಘಕರ್ಮಾಣೋ ಮೋಘಜ್ಞಾನಾ ವಿಚೇತಸಃ ।
ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾಃ ॥೧೨॥

ಮಹಾತ್ಮಾನಸ್ತು ಮಾಂ ಪಾರ್ಥ ದೈವೀಂ ಪ್ರಕೃತಿಮಾ ಶ್ರಿತಾಃ ।
ಭಜಂತ್ಯನನ್ಯಮನಸೋ ಜ್ಞಾತ್ವಾ ಭೂತಾದಿಮವ್ಯಯಮ್ ॥೧೩॥

ಸತತಂ ಕೀರ್ತಯಂತೋ ಮಾಂ ಯತಂತಶ್ಚ ದೃಢವ್ರತಾಃ ।
ನಮಸ್ಯಂತಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ ॥೧೪॥

ಜ್ಞಾನಯಜ್ಞೇನ ಚಾಪ್ಯನ್ಯೇ ಯಜಂತೋ ಮಾಮುಪಾಸತೇ ।
ಏಕತ್ವೇನ ಪೃಥಕ್ತ್ವೇನ ಬಹುಧಾ ವಿಶ್ವತೋಮುಖಮ್ ॥೧೫॥

ನನ್ನ ಅಧಿಕಾರದಲ್ಲಿದ್ದು ಪ್ರಕೃತಿ ಸ್ಥಾವರ, ಜಂಗಮ ಜಗತ್ತನ್ನು ಉತ್ಪನ್ನ ಮಾಡುತ್ತದೆ. ಈ ಕಾರಣದಿಂದ ಜಗತ್ತು ಚಕ್ರದಂತೆ ಸುತ್ತುತ್ತಿರುತ್ತದೆ. ॥೧೦॥

ನಾನು ಪ್ರಾಣಿಮಾತ್ರಗಳ ಮಹೇಶ್ವರನೆಂದವರ ಭಾವವನ್ನರಿಯದೆ ಮೂರ್ಖರು ಮನುಷ್ಯ ರೂಪಧಾರಿಯೆಂದ ನನ್ನನ್ನು ಅವಜ್ಞೆಗೊಳಿಸುತ್ತಾರೆ. ॥೧೧॥

ಟಿಪ್ಪಣಿ–ಏಕೆಂದರೆ, ಈಶ್ವರನ ಸತ್ತೆಯನ್ನು ಮನ್ನಿಸದವರು ದೇಹದಲ್ಲಿರುವ ಅಂತರ್ಯಾಮಿಯನ್ನು ಅರಿಯಲಾರರು. ಅದರ ಅಸ್ತಿತ್ವವನ್ನು ತಿರಸ್ಕರಿಸುತ್ತಾ ಜಡವಾದಿಗಳಾಗಿಯೆ ಉಳಿಯುತ್ತಾರೆ.

ವ್ಯರ್ಥ ಆಸೆ ಪಡುವವರು, ವ್ಯರ್ಥ ಕೆಲಸ ಮಾಡುವವರು, ವ್ಯರ್ಥ ಜ್ಞಾನದ ಮೂಢ ಜನರು, ಮೋಹಾಸಕ್ತಿಯಲ್ಲಿ ಕೆಡುಹುವ ರಾಕ್ಷಸೀ–ಅಸುರೀ ಪ್ರಕೃತಿಯ ಆಶ್ರಯ ಹೊಂದುತ್ತಾರೆ. ॥೧೨॥

ಆದರೆ, ಪಾರ್ಥ, ಮಹಾತ್ಮರು ದೈವೀಪ್ರಕೃತಿಗೆ ಶರಣುಹೋಗಿ ನನ್ನನ್ನು ಪ್ರಾಣಿಗಳ ಆದಿಕಾರಣವಾದ ಅವಿನಾಶಿ ಎಂದರಿತು ಏಕನಿಷ್ಠೆಯಿಂದ ಭಜಿಸುತ್ತಾರೆ. ॥೧೩॥

ದೃಢವ್ರತರು, ಪ್ರಯತ್ನಶೀಲರು ನಿರಂತರವೂ ನನ್ನ ಕೀರ್ತನೆ ಮಾಡುತ್ತಾರೆ, ಭಕ್ತಿಯಿಂದ ನನಗೆ ನಮಿಸುತ್ತಾರೆ. ನಿತ್ಯವೂ ನನ್ನನ್ನೇ ಧ್ಯಾನಿಸುತ್ತ ನನ್ನ ಉಪಾಸನೆ ಮಾಡುತ್ತಾರೆ. ॥೧೪॥

ಮತ್ತೆ ಕೆಲವರು ಅದ್ವೈತರೂಪದಿಂದಲೋ, ದ್ವೈತರೂಪದಿಂದಲೋ ಅಥವಾ ಅನೇಕ ರೂಪಗಳಲ್ಲಿಯೋ ಸರ್ವತ್ರ ಇರುವ ನನ್ನನ್ನು ಜ್ಞಾನದ ಮೂಲಕ ಪೂಜೆ ಮಾಡುತ್ತಾರೆ. ॥೧೫॥

ಅಹಂ ಕ್ರತುರಹಂ ಯಜ್ಞಃ ಸ್ವಧಾಹಮಹಮೌಷಧಮ್ ।
ಮಂತ್ರೋಽಹಮಹಮೇವಾಜ್ಯಮಹಮಗ್ನಿರಹಂ ಹುತಮ್ ॥೧೬॥

ಪಿತಾಹಮಸ್ಯ ಜಗತೋ ಮಾತಾ ಧಾತಾ ಪಿತಾಮಹಃ ।
ವೇದ್ಯಂ ಪವಿತ್ರಮೋಂಕಾರ ಋಕ್ಸಾಮಯಜುರೇವ ಚ ॥೧೭॥

ಗತಿರ್ಭರ್ತಾ ಪ್ರಭುಸ್ಸಾಕ್ಷೀ ನಿವಾಸಶ್ಶರಣಂ ಸುಹೃತ್ ।
ಪ್ರಭವಃ ಪ್ರಲಯಃ ಸ್ಥಾನಂ ನಿಧಾನಂ ಬೀಜಮವ್ಯಯಮ್ ॥೧೮॥

ತಪಾಮ್ಯಹಮಹಂ ವರ್ಷಂ ನಿಗೃಹ್ಣಾಮ್ಯುತ್ಸೃಜಾಮಿ ಚ ।
ಅಮೃತಂ ಚೈವ ಮೃತ್ಯುಶ್ಚ ಸದಸಚ್ಚಾಹಮರ್ಜುನ ॥೧೯॥

ತ್ರೈವಿದ್ಯಾ ಮಾಂ ಸೋಮಪಾಃ ಪೂತಪಾಪಾಃ
ಯಜ್ಞೈರಿಷ್ಟ್ವಾ ಸ್ವರ್ಗತಿಂ ಪ್ರಾರ್ಥಯಂತೇ ।
ತೇ ಪುಣ್ಯಮಾಸಾದ್ಯ ಸುರೇಂದ್ರಲೋಕ-
ಮಶ್ನಂತಿ ದಿವ್ಯಾನ್ದಿವಿ ದೇವಭೋಗಾನ್ ॥೨೦॥

ಯಜ್ಞದ ಸಂಕಲ್ಪ ನಾನು. ಯಜ್ಞವೂ ನಾನು. ಯಜ್ಞದ ಮೂಲಕ ನಾನು ಪಿತೃಗಳಿಗೂ ಆಧಾರ. ಯಜ್ಞದ ವನಸ್ಪತಿಯೂ ನಾನೆ. ಮಂತ್ರವೂ ನಾನೆ. ಆಹುತಿಯೂ ನಾನೆ. ಅಗ್ನಿಯೂ ನಾನೆ. ಹವನದ್ರವ್ಯವೂ ನಾನೆ. ॥೧೬॥

ಈ ಜಗತ್ತಿನ ತಂದೆ, ತಾಯಿ, ಆಧಾರ, ಅಜ್ಜ, ತಿಳಿಯಲು ಯೋಗ್ಯ, ಪವಿತ್ರ ಓಂಕಾರ, ಋಗ್ವೇದ, ಸಾಮವೇದ, ಯಜುರ್ವೇದ - ಎಲ್ಲವೂ ನಾನೆ. ॥೧೭॥

ಗತಿ ನಾನು. ಸಕಲರ ಪೋಷಕ ನಾನು. ಪ್ರಭು, ಸಾಕ್ಷಿ, ನಿವಾಸ, ಆಶ್ರಯ, ಹಿತೇಚ್ಛು ನಾನು: ಉತ್ಪತ್ತಿ, ನಾಶ, ಸ್ಥಿತಿ, ಭಂಡಾರ, ಅವ್ಯಯ ಬೀಜ-ಎಲ್ಲವೂ ನಾನೇ. ॥೧೮॥

ಬಿಸಿಲನ್ನು ನಾನು ಕೊಡುತ್ತೇನೆ. ಮಳೆ ಸುರಿಸುತ್ತೇನೆ, ಅದನ್ನು ತಡೆಯುತ್ತೇನೆ. ನಾನೆ ಅಮರತ್ವ; ಮೃತ್ಯುವೂ ನಾನೇ. ಅರ್ಜುನ! ಸತ್-ಅಸತ್‌ಗಳೂ ನಾನೇ. ॥೧೯॥

ಮೂರು ವೇದಗಳಂತೆ (ಋಕ್, ಯಜುರ್, ಸಾಮಗಳ) ಕರ್ಮಮಾಡುವವರು ಸೋಮರಸ ಕುಡಿದು ನಿಷ್-ಪಾಪ ಯಜ್ಞದ ಮೂಲಕ ನನ್ನನ್ನು ಪೂಜಿಸಿ ಸ್ವರ್ಗವನ್ನು ಇಚ್ಛಿಸುತ್ತಾರೆ. ಅವರು ಪವಿತ್ರ ದೇವಲೋಕವನ್ನು ಪಡೆದು ದಿವ್ಯಭೋಗಗಳನ್ನು ಭೋಗಿಸುತ್ತಾರೆ. ॥೨೦॥

ಟಿಪ್ಪಣಿ-ಎಲ್ಲ ವೈದಿಕ ಕ್ರಿಯೆಗಳೂ ಫಲದ ಇಚ್ಛೆಯಿಂದಲೇ ಮಾಡಲ್ಪಡುತ್ತಿದ್ದವು. ಅವುಗಳಲ್ಲಿ ಹಲವು ಕ್ರಿಯೆಗಳಲ್ಲಿ ಸೋಮಪಾನ ಮಾಡುತ್ತಿದ್ದರು. ಅದರ ಪ್ರಸ್ತಾಪ ಇಲ್ಲಿದೆ. ಈ ಕ್ರಿಯೆಗಳಾವುವೋ ಸೋಮರಸವೆಂದರೇನೋ ಇಂದು ಯಾರೂ ಸರಿಯಾಗಿ ವಿವರಿಸಲಾರರು.

ೀ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ
ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ ।
ವಂ ತ್ರಯೀ ಧರ್ಮಮನುಪ್ರಪನ್ನಾ
ಗತಾಗತಂ ಕಾಮಕಾಮಾ ಲಭಂತೇ ॥೨೧॥

ನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ೀಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ॥೨೨॥

ಯೇಽಪ್ಯನ್ಯ ದೇವತಾ ಭಕ್ತಾ ಯಜಂತೇ ಶ್ರದ್ಧಯಾನ್ವಿತಾಃ ।
ೀಽಪಿ ಮಾಮೇವ ಕೌಂತೇಯ ಯಜಂತ್ಯವಿಧಿಪೂರ್ವಕಮ್ ॥೨೩॥

ಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ ।
ತು ಮಾಮಭಿಜಾನಂತಿ ತತ್ತ್ವೇನಾತಶ್ಚ್ಯವಂತಿ ತೇ ॥೨೪॥

ಆ ವಿಶಾಲ ಸ್ವರ್ಗವನ್ನು ಉಪಭೋಗಿಸಿ, ಪುಣ್ಯ ಕ್ಷೀಣವಾದ ಬಳಿಕ ಅವರು ಮತ್ತೆ ಮೃತ್ಯುಲೋಕಕ್ಕೆ ಹಿಂದಿರುಗುತ್ತಾರೆ. ಮೂರು ವೇದಗಳ ಅನುಸಾರವಾಗಿ ಕರ್ಮ ಮಾಡುವ ಇವರು ಫಲವನ್ನು ಬಯಸುವುದರಿಂದ ಜನನ–ಮರಣಗಳ ಸುಳಿಯಲ್ಲಿ ಕ್ಕಿರುತ್ತಾರೆ. ॥೨೧॥

ಯಾರು ಅನನ್ಯಭಾವದಿಂದ ನನ್ನನ್ನು ಚಿಂತಿಸುತ್ತಾ ನನ್ನನ್ನೇ ಭಜಿಸುತ್ತಾರೋ, ನನ್ನಲ್ಲಿಯೇ ರತವಾಗಿರುವ ಅಂಥವರ ಯೋಗಕ್ಷೇಮವನ್ನು ನಾನು ವಹಿಸಿಕೊಳ್ಳುತ್ತೇನೆ. ॥೨೨॥

ಟಿಪ್ಪಣಿ–ಯೋಗಿಗಳನ್ನು ಗುರುತಿಸಲು ಮೂರು ಸೊಗಸಾದ ಲಕ್ಷಣಗಳಿವೆ– ಸಮತ್ವ, ಕರ್ಮದಲ್ಲಿ ಕುಶಲತೆ, ಅನನ್ಯಭಕ್ತಿ. ಇವು ಮೂರೂ ಒಂದರಲ್ಲೊಂದು ೋತಪ್ರೋತವಾಗಿರಬೇಕು. ಭಕ್ತಿಯಿಲ್ಲದೆ ಸಮತ್ವಬಾರದು, ಸಮತ್ವವಿಲ್ಲದೆ ಭಕ್ತಿ ಹುಟ್ಟದು. ಕರ್ಮಕೌಶಲವಿಲ್ಲದೆ ಭಕ್ತಿ–ಸಮತ್ವಗಳು ಬರೀ ಅಭಾಸವಾಗುವ ಭಯವಿದೆ. ಸಿಗದ ವಸ್ತುವನ್ನು ಸಿಗುವಂತೆ ಮಾಡಿಕೊಳ್ಳುವುದೇ ಯೋಗ; ದೊರೆತುದನ್ನು ಸುರಕ್ಷಿತವಾಗಿ ಇಡುವುದೇ ಕ್ಷೇಮ.

ಕೌಂತೇಯ, ಯಾರು ಶ್ರದ್ಧಾಪೂರ್ವಕ ಅನ್ಯದೇವತೆಗಳನ್ನು ಪೂಜಿಸುತ್ತಾರೋ ಅವರೂ ಕೂಡ, ವಿಧಿವಿಹೀನವಾಗಿ ಪೂಜಿಸಿದರೂ, ನನ್ನನ್ನೇ ಪೂಜಿಸುತ್ತಾರೆ. ॥೨೩॥

ಟಿಪ್ಪಣಿ--ವಿಧಿವಿಹೀನವೆಂದರೆ ಅಜ್ಞಾನವಶರಾಗಿ. ನಾನು ನಿರಂಜನ–ನಿರಾಕಾರ ವಸ್ತು ಎಂದು ತಿಳಿಯದೆ ಇರುವುದು.

ಸಕಲ ಯಜ್ಞಗಳ ಭೋಕ್ತೃವಾದ ಸ್ವಾಮಿ ನಾನು. ಈ ನಿಜವಾದ ಸ್ವರೂಪವನ್ನು ಅರಿಯದೆ ಅವರು ಜಾರಿ ಬೀಳುತ್ತಾರೆ. ॥೨೪॥

ಯಾಂತಿ ದೇವವ್ರತಾ ದೇವಾನ್ ಪಿತ್ರೂನ್ ಯಾಂತಿ ಪಿತೃವ್ರತಾಃ।
ಭೂತಾನಿ ಯಾಂತಿ ಭೂತೇಜ್ಯಾ ಯಾಂತಿ ಮದ್ಯಾಜಿನೋಽಪಿ ಮಾಮ್ ॥೨೫॥

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥೨೬॥

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್ ॥೨೭॥

ಶುಭಾಶುಭಫಲೈರೇವಂ ಮೋಕ್ಷ್ಯಸೇ ಕರ್ಮಬಂಧನೈಃ।
ಸಂನ್ಯಾಸಯೋಗಯುಕ್ತಾತ್ಮಾ ವಿಮುಕ್ತೋ ಮಾಮುಪೈಷ್ಯಸಿ ॥೨೮॥

ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ।
ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್ ॥೨೯॥

ದೇವತೆಗಳ ಪೂಜೆ ಮಾಡುವವರಿಗೆ ದೇವಲೋಕ. ಪಿತೃಪೂಜೆ ಮಾಡುವವರಿಗೆ ಪಿತೃಲೋಕ. ಭೂತಪ್ರೇತಾದಿಗಳನ್ನು ಪೂಜಿಸುವವರಿಗೆ ಆ ಲೋಕಗಳು. ನನ್ನನ್ನು ಭಜಿಸುವವರು ನನ್ನನ್ನೇ ಹೊಂದುತ್ತಾರೆ. ॥೨೫॥

ಎಲೆ, ಹೂ, ಹಣ್ಣು, ನೀರು ಯಾವುದನ್ನೇ ಆಗಲಿ ಪ್ರಯತ್ನಶೀಲರು ಭಕ್ತಿಪೂರ್ವಕವಾಗಿ ನನಗೆ ಅರ್ಪಿಸಿದರೆ, ಭಕ್ತಿಪೂರ್ವಕ ಸಮರ್ಪಿಸಿದುದನ್ನು ನಾನು ಸೇವಿಸುತ್ತೇನೆ. ॥೨೬॥

ಟಿಪ್ಪಣಿ–ಎಂದರೆ ಈಶ್ವರಪ್ರೀತ್ಯರ್ಥವಾಗಿ ಸೇವಾಭಾವದಿಂದ ಏನು ಕೊಟ್ಟರೂ ಅದೆಲ್ಲವನ್ನೂ ಆಯಾ ಪ್ರಾಣಿಗಳಲ್ಲಿ ಅಂತರ್ಯಾಮಿಯಾಗಿರುವ ಭಗವಂತನೇ ಗ್ರಹಣ ಮಾಡುತ್ತಾನೆ.

ಆದುದರಿಂದ, ಕೌಂತೇಯ, ಮಾಡುವುದನ್ನು, ತಿನ್ನುವುದನ್ನು, ಹವನದಲ್ಲಿ ಹಾಕುವುದನ್ನು, ದಾನ ನೀಡುವುದನ್ನು, ತಪಸ್ಸು ಗೈಯುವುದನ್ನು ಎಲ್ಲವನ್ನೂ ನನಗೆ ಅರ್ಪಿಸಿಯೇ ಮಾಡು. ॥೨೭॥

ಇದರಿಂದ ಶುಭಾಶುಭ ಫಲರೂಪ ಕರ್ಮಬಂಧನದಿಂದ ನೀನು ಬಿಡುಗಡೆ ಹೊಂದಿ, ಫಲತ್ಯಾಗರೂಪದ ಸಮತ್ವವನ್ನೈದಿ, ಜನನ–ಮರಣಗಳಿಂದ ಮುಕ್ತನಾಗಿ ನನ್ನನ್ನು ಸೇರುತ್ತೀ. ॥೨೮॥

ಸಕಲ ಪ್ರಾಣಿಗಳಲ್ಲಿಯೂ ನಾನು ಸಮಭಾವದಿಂದಿದ್ದೇನೆ. ನನಗೆ ಅಪ್ರಿಯ, ಪ್ರಿಯ ಯಾವುದೂ ಇಲ್ಲ. ಯಾರು ಭಕ್ತಿ ಪೂರ್ವಕವಾಗಿ ನನ್ನನ್ನು ಭಜಿಸುತ್ತಾರೋ ಅವರು ನನ್ನಲ್ಲಿ ಇರುತ್ತಾರೆ. ನಾನೂ ಅವರಲ್ಲಿರುತ್ತೇನೆ. ॥೨೯॥

ಅಪಿ ಚೇತ್ಸುದುರಾಚಾರೋ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥೩೦॥

ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।
ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ ॥೩೧॥

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ ।
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂ ಗತಿಮ್ ॥೩೨॥

ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ ।
ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಮ್ ॥೩೩॥

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಯುಕ್ತ್ವೈವಮಾತ್ಮಾನಂ ಮತ್ಪರಾಯಣಃ ॥೩೪॥

ಅತ್ಯಂತ ದುರಾಚಾರಿ ಕೂಡ ಅನನ್ಯಭಾವದಿಂದ ನನ್ನ ಭಜನೆ ಮಾಡಿದರೆ ಅವನು ಸಾಧುವಾದನೆಂತಲೇ ತಿಳಿಯಬೇಕು. ಏಕೆಂದರೆ, ಈಗ ಅವನದು ಶುಭಸಂಕಲ್ಪ ॥೩೦॥

ಟಿಪ್ಪಣಿ – ಏಕೆಂದರೆ ಅನನ್ಯಭಕ್ತಿ ದುರಾಚಾರವನ್ನು ನಾಶಗೊಳಿಸುತ್ತದೆ.

ಅವನು ಬಹು ಬೇಗ ಧರ್ಮಾತ್ಮನಾಗಿ ನಿರಂತರ ಶಾಂತಿ ಹೊಂದುತ್ತಾನೆ. ಕೌಂತೇಯ, ನನ್ನ ಭಕ್ತನಿಗೆ ಎಂದಿಗೂ ನಾಶವಿಲ್ಲ; ತಿಳಿದುಕೋ. ॥೩೧॥

ಪಾಪಯೋನಿಗಳೂ ಹೆಂಗಸರು ವೈಶ್ಯರೂ ಶೂದ್ರರೂ ನನಗೆ ಶರಣು ಬಂದರೆ ಪರಮಗತಿಯನ್ನು ಹೊಂದುತ್ತಾರೆ. ॥೩೨॥

ಹೀಗಿರುವಾಗ, ನನ್ನ ಭಕ್ತರಾದ ಪುಣ್ಯಶಾಲಿ ಬ್ರಾಹ್ಮಣರ, ರಾಜಋಷಿಗಳ ವಿಚಾರ ಹೇಳಲೇನು ? ಆದುದರಿಂದ ಅನಿತ್ಯ ಸುಖರಹಿತ ಲೋಕದಲ್ಲಿ ಜನ್ಮವೆತ್ತಿ ನೀನು ನನ್ನನ್ನು ಭಜಿಸು. ॥೩೩॥

ನನ್ನಲ್ಲಿ ಮನಸ್ಸಿಡು, ನನ್ನ ಭಕ್ತನಾಗು, ನನ್ನ ನಿಮಿತ್ತ ಯಜ್ಞಮಾಡು, ನನ್ನನ್ನು ನಮಸ್ಕರಿಸು. ನನ್ನಲ್ಲಿ ಪರಾಯಣನಾಗಿ ನನ್ನೊಂದಿಗೆ ಆತ್ಮವನ್ನು ಸೇರಿಸು; ನೀನು ನನ್ನನ್ನೇ ಹೊಂದುತ್ತೀಯೆ. ॥೩೪॥

ಹರಿಃ ಓಂ ತತ್ಸತ್

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ರಾಜವಿದ್ಯಾರಾಜಗುಹ್ಯಯೋಗೋ ನಾಮ ನವಮೋಽಧ್ಯಾಯಃ ॥

ಓಂ ತತ್ಸತ್

ಈ ಬಗೆಯಾಗಿ ಶ್ರೀಮದ್ಭಗವದ್ಗೀತಾರೂಪ ಉಪನಿಷತ್ ಅಥವಾ
ಬ್ರಹ್ಮವಿದ್ಯಾಂತರ್ಗತ ಯೋಗಶಾಸ್ತ್ರದ ಶ್ರೀ ಕೃಷ್ಣಾರ್ಜುನ ಸಂವಾದದಲ್ಲಿ
ರಾಜವಿದ್ಯಾ-ರಾಜಗುಹ್ಯಯೋಗವೆಂಬ ಒಂಬತ್ತನೆಯ ಅಧ್ಯಾಯ.

***

ಅಧ್ಯಾಯ ೧೦

ವಿಭೂತಿಯೋಗ

[ಏಳು, ಎಂಟು, ಒಂಬತ್ತನೆಯ ಅಧ್ಯಾಯಗಳಲ್ಲಿ ಭಕ್ತಿ ಇತ್ಯಾದಿಗಳ ನಿರೂಪಣೆ ಮಾಡಿದನಂತರ ಭಗವಂತ ತನ್ನ ಭಕ್ತರಿಗಾಗಿ ಇಲ್ಲಿ ತನ್ನ ಅನಂತವಿಭೂತಿಗಳ ಕಿಂಚಿತ್ ದಿಗ್ದರ್ಶನ ಮಾಡಿಸುತ್ತಾನೆ.]

ಅಥ ದಶಮೋಽಧ್ಯಾಯಃ

ಭಗವಾನುವಾಚ

ಯ ಏವ ಮಹಾಬಾಹೋ ಶೃಣು ಮೇ ಪರಮಂ ವಚಃ ।
ತ್ತೇಽಹಂ ಪ್ರೀಯಮಾಣಾಯ ವಕ್ಷ್ಯಾಮಿ ಹಿತಕಾಮ್ಯಯಾ ॥೧॥

ಮೇ ವಿದುಸ್ಸುರಗಣಾಃ ಪ್ರಭವಂ ನ ಮಹರ್ಷಯಃ ।
ಮಾದಿರ್ಹಿ ದೇವಾನಾಂ ಮಹರ್ಷೀಣಾಂ ಚ ಸರ್ವಶಃ ॥೨॥

ೀ ಮಾಮಜಮನಾದಿಂ ಚ ವೇತ್ತಿ ಲೋಕಮಹೇಶ್ವರಮ್ ।
ಂಮೂಢಸ್ಸ ಮರ್ತ್ಯೇಷು ಸರ್ವಪಾಪೈಃ ಪ್ರಮುಚ್ಯತೇ ॥೩॥

ಭಗವಂತ :

ಮತ್ತೆ ನನ್ನ ಪರಮವಚನವನ್ನು ಕೇಳು. ಈ ವಚನಗಳನ್ನು ನಾನು ನಿನಗೆ ಣನಾದವನಿಗೆ, ನಿನ್ನ ಹಿತಕ್ಕೋಸ್ಕರ ಹೇಳುತ್ತೇನೆ. ॥೧॥

ದೇವತೆಗಳು, ಮಹರ್ಷಿಗಳು ನನ್ನ ಉತ್ಪತ್ತಿಯನ್ನು ತಿಳಿದಿಲ್ಲ. ಏಕೆಂದರೆ, ನಾನೇ ಪ್ರಕಾರದಿಂದ ದೇವತೆಗಳ, ಮಹರ್ಷಿಗಳ, ಆದಿಕಾರಣ. ॥೨॥

ಮೃತ್ಯುಲೋಕದಲ್ಲಿರುವ ಜ್ಞಾನಿಗಳು ಲೋಕಗಳ ಮಹೇಶ್ವರನಾದ ನನ್ನನ್ನು ಅಜನ್ಮ ದಿ ರೂಪದಲ್ಲಿ ತಿಳಿದು ಸಕಲ ಪಾಪಗಳಿಂದ ಮುಕ್ತರಾಗುತ್ತಾರೆ. ॥೩॥

ಬುದ್ಧಿರ್ಜ್ಞಾನಮಸಮ್ಮೋಹಃ ಕ್ಷಮಾ ಸತ್ಯಂ ದಮಶ್ಶಮಃ ।
ಸುಖಂ ದುಃಖಂ ಭವೋಽಭಾವೋ ಭಯಂ ಚಾಭಯಮೇವ ಚ ॥೪॥

ಅಹಿಂಸಾ ಸಮತಾ ತುಷ್ಟಿಸ್ತಪೋ ದಾನಂ ಯಶೋಽಯಶಃ ।
ಭವಂತಿ ಭಾವಾ ಭೂತಾನಾಂ ಮತ್ತ ಏವ ಪೃಥಗ್ವಿಧಾಃ ॥೫॥

ಮಹರ್ಷಯಸ್ಸಪ್ತ ಪೂರ್ವೇ ಚತ್ವಾರೋ ಮನವಸ್ತಥಾ ।
ಮದ್ಭಾವಾ ಮಾನಸಾ ಜಾತಾ ಯೇಷಾಂ ಲೋಕ ಇಮಾಃ ಪ್ರಜಾಃ ॥೬॥

ಏತಾಂ ವಿಭೂತಿಂ ಯೋಗಂ ಚ ಮಮ ಯೋ ವೇತ್ತಿ ತತ್ತ್ವತಃ ।
ಸೋಽವಿಕಂಪೇನ ಯೋಗೇನ ಯುಜ್ಯತೇ ನಾತ್ರ ಸಂಶಯಃ ॥೭॥

ಅಹಂ ಸರ್ವಸ್ಯ ಪ್ರಭವೋ ಮತ್ತಸ್ಸರ್ವಂ ಪ್ರವರ್ತತೇ ।
ಇತ ಮತ್ವಾ ಭಜಂತೇ ಮಾಂ ಬುಧಾ ಭಾವಸಮನ್ವಿತಾಃ ॥೮॥

ಮಚ್ಚಿತ್ತಾ ಮದ್ಗತ ಪ್ರಾಣಾ ಬೋಧಯಂತಃ ಪರಸ್ಪರಮ್ ।
ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿ ಚ ॥೯॥

ಬುದ್ಧಿ, ಜ್ಞಾನ, ಅಮೂಢತೆ, ಕ್ಷಮೆ, ಸತ್ಯ, ಇಂದ್ರಿಯನಿಗ್ರಹ, ಶಾಂತಿ, ಸುಖ, ದುಃಖ, ಜನ್ಮ, ಮೃತ್ಯು, ಅಭಯ, ಅಹಿಂಸೆ, ಸಮತೆ, ಸಂತೋಷ ತಪಸ್ಸು ದಾನ, ಯಶಸ್ಸು, ಅಪಯಶಸ್ಸು – ಹೀಗೆ ಪ್ರಾಣಿಗಳ ಭಿನ್ನಭಿನ್ನ ಭಾವಗಳು ನನ್ನಿಂದಲೇ ಉತ್ಪನ್ನವಾಗುತ್ತವೆ. ॥೪–೫॥

ಸಪ್ತಋಷಿಗಳು, ಅವರಿಗೆ ಮುಂಚೆ ನಾಲ್ವರು ಸನಕಾದಿಗಳು, (ಹದಿನಾಲ್ಕು ಜನ) ಮನುಗಳು, ನನ್ನ ಸಂಕಲ್ಪದಿಂದ ಹುಟ್ಟಿದರು. ಅವರಿಂದ ಈ ಲೋಕಗಳು ಹುಟ್ಟಿದವು. ॥೬॥

ನನ್ನ ಈ ವಿಭೂತಿಯನ್ನೂ ಶಕ್ತಿಯನ್ನೂ ಯಥಾರ್ಥವಾಗಿ ತಿಳಿದವನು ಅವಿಚಲವಾದ ಸಮತೆಯನ್ನು ಹೊಂದುತ್ತಾನೆ. ॥೭॥

ಎಲ್ಲದರ ಉತ್ಪತ್ತಿಗೂ ನಾನೇ ಕಾರಣ. ಎಲ್ಲವೂ ನನ್ನ ಮೂಲಕವೇ ಪ್ರವೃತ್ತವಾಗುತ್ತವೆ. ಇದನ್ನು ತಿಳಿದು ಜಾಣರು ಭಾವಪೂರ್ವಕ ನನ್ನನ್ನು ಭಜಿಸುತ್ತಾರೆ. ॥೮॥

ನನ್ನಲ್ಲಿಯೇ ಚಿತ್ತವಿಟ್ಟು ನನ್ನಲ್ಲಿಯೇ ಪ್ರಾಣಾರ್ಪಣೆ ಮಾಡಿದವರು ಪರಸ್ಪರ ಉಪದೇಶಮಾಡುತ್ತ ನಿತ್ಯವೂ ನನ್ನ ಕೀರ್ತನೆ ಮಾಡುತ್ತಾರೆ; ಸಂತೋಷ–ಆನಂದಗಳಿಂದ ಜೀವನ ನಡೆಸುತ್ತಾರೆ. ॥೯॥

ಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಂ ।
ಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ ॥೧೦॥

ಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ ।
ಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥೧೧॥

ರ್ಜುನ ಉವಾಚ

ರಂ ಬ್ರಹ್ಮ ಪರಂ ಧಾಮ ಪವಿತ್ರಂ ಪರಮಂ ಭವಾನ್ ।
ರುಷಂ ಶಾಶ್ವತಂ ದಿವ್ಯಮಾದಿದೇವಮಜಂ ವಿಭುಮ್ ॥೧೨॥

ಹುಸ್ತ್ವಾಮೃಷಯಸ್ಸರ್ವೇ ದೇವರ್ಷಿರ್ನಾರದಸ್ತಥಾ ।
ಸಿತೋ ದೇವಲೋ ವ್ಯಾಸಃ ಸ್ವಯಂ ಚೈವ ಬ್ರವೀಷಿ ಮೇ ॥೧೩॥

ರ್ವಮೇತದೃತಂ ಮನ್ಯೇ ಯನ್ಮಾಂ ವದಸಿ ಕೇಶವ ।
ಂ ತೇ ಭಗವನ್ವ್ಯಕ್ತಿಂ ವಿದುರ್ದೇವಾ ನ ದಾನವಾಃ ॥೧೪॥

ಯಮೇವಾತ್ಮನಾತ್ಮಾನಂ ವೇತ್ಥ ತ್ವಂ ಪುರುಷೋತ್ತಮ ।
ೂತಭಾವನ ಭೂತೇಶ ದೇವದೇವ ಜಗತ್ಪತೇ ॥೧೫॥

ನನ್ನಲ್ಲಿ ಈ ರೀತಿ ತನ್ಮಯರಾದವರಿಗೆ, ಪ್ರೇಮಪೂರ್ವಕ ನನ್ನ ಭಜನೆ ಮಾಡು
ವರಿಗೆ. ನಾನು ಜ್ಞಾನವನ್ನು ಕೊಡುತ್ತೇನೆ, ಅದರಿಂದ ಅವರು ನನ್ನನ್ನು ಹೊಂದುತ್ತಾರೆ. ॥೧೦॥

ಅವರಲ್ಲಿ ದಯೆಯಿಟ್ಟು ಅವರ ಹೃದಯದಲ್ಲಿ ವಾಸಿಸುವ ನಾನು ಜ್ಞಾನರೂಪದ
ಕಾಶಮಯ ದೀಪದಿಂದ ಅವರ ಅಜ್ಞಾನಾಂಧಕಾರವನ್ನು ನಾಶಗೊಳಿಸುತ್ತೇನೆ. ॥೧೧॥

ರ್ಜುನ :

ಭಗವಂತ ! ನೀನು ಪರಬ್ರಹ್ಮ, ಪರಮಧಾಮ, ಪರಮ ಪವಿತ್ರ. ಎಲ್ಲ ಋಷಿಗಳು,
ೇವ ಋಷಿ ನಾರದ, ಅಸಿತ, ದೇವಲ, ವ್ಯಾಸಾದಿಗಳು ನಿನ್ನನ್ನು ಅವಿನಾಶಿ, ದಿವ್ಯ
ುರುಷ, ಆದಿದೇವ, ಅಜನ್ಮ, ಈಶ್ವರರೂಪ ಎಂದು ತಿಳಿದಿದ್ದಾರೆ. ನೀನೂ ಅದನ್ನೇ
ೇಳುತ್ತಿದ್ದೀಯೆ. ॥೧೨–೧೩॥

ಕೇಶವ ! ನೀನು ಹೇಳಿದುದು ಸತ್ಯವೆಂದು ನಾನು ತಿಳಿದಿದ್ದೇನೆ. ಭಗವಂತ !
ೇವತೆಗಳಾಗಲಿ ದಾನವರಾಗಲಿ ನಿನ್ನ ಸ್ವರೂಪವನ್ನು ತಿಳಿಯರು. ॥೧೪॥

ಪುರುಷೋತ್ತಮ, ಜೀವಗಳ ಪಿತ, ಜೀವೇಶ್ವರ, ದೇವದೇವ, ಜಗದೀಶ್ವರ, ನಿನ್ನನ್ನು
ನೇ ಬಲ್ಲೆ. ॥೧೫॥

ವಕ್ತುಮರ್ಹಸ್ಯಶೇಷೇಣ ದಿವ್ಯಾ ಹ್ಯಾತ್ಮವಿಭೂತಯಃ ।
ಯಾಭಿರ್ವಿಭೂತಿಭಿರ್ಲೋಕಾನಿಮಾಂಸ್ತ್ವಂ ವ್ಯಾಪ್ಯ ತಿಷ್ಠಸಿ ॥೧೬॥

ಕಥಂ ವಿದ್ಯಾಮಹಂ ಯೋಗಿಂಸ್ತ್ವಾಂ ಸದಾ ಪರಿಚಿಂತಯನ್ ।
ಕೇಷು ಕೇಷು ಚ ಭಾವೇಷು ಚಿಂತ್ಯೋಽಸಿ ಭಗವನ್ಮಯಾ ॥೧೭॥

ವಿಸ್ತರೇಣಾತ್ಮನೋ ಯೋಗಂ ವಿಭೂತಿಂ ಚ ಜನಾರ್ದನ ।
ಭೂಯಃ ಕಥಯ ತೃಪ್ತಿರ್ಹಿ ಶೃಣ್ವತೋ ನಾಸ್ತಿ ಮೇಽಮೃತಮ್ ॥೧೮॥

ಶ್ರೀ ಭಗವಾನುವಾಚ

ಹಂತ ತೇ ಕಥಯಿಷ್ಯಾಮಿ ದಿವ್ಯಾ ಹ್ಯಾತ್ಮವಿಭೂತಯಃ ।
ಪ್ರಾಧಾನ್ಯತಃ ಕುರುಶ್ರೇಷ್ಠ ನಾಸ್ತ್ಯಂತೋ ವಿಸ್ತರಸ್ಯ ಮೇ ॥೧೯॥

ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ ।
ಅಹಮಾದಿಶ್ಚ ಮಧ್ಯಂ ಚ ಭೂತಾನಾಮಂತ ಏವ ಚ ॥೨೦॥

ಆದಿತ್ಯಾನಾಮಹಂ ವಿಷ್ಣುರ್ಜ್ಯೋತಿಷಾಂ ರವಿರಂಶುಮಾನ್ ।
ಮರೀಚಿರ್ಮರುತಾಮಸ್ಮಿ ನಕ್ಷತ್ರಾಣಾಮಹಂ ಶಶೀ ॥೨೧॥

ಯಾವ ವಿಭೂತಿಗಳ ದ್ವಾರ ನೀನು ಈ ಲೋಕಗಳಲ್ಲಿ ವ್ಯಾಪಿಸಿಕೊಂಡಿದೀಯೋ ಆ ನಿನ್ನ ದಿವ್ಯ ವಿಭೂತಿಗಳನ್ನು ನನಗೆ ಪೂರ್ಣವಾಗಿ ತಿಳಿಸು. ॥೧೬॥

ಯೋಗಿ, ನಿತ್ಯವೂ ನಿನ್ನ ಚಿಂತನೆ ಮಾಡುತ್ತ ನಿನ್ನನ್ನು ಹೇಗೆ ತಿಳಿಯಬಲ್ಲೆ ? ಭಗವನ್, ಯಾವ ಯಾವ ರೂಪದಲ್ಲಿ ನಿನ್ನ ಚಿಂತನೆ ಮಾಡಲಿ ? ॥೧೭॥

ಜನಾರ್ದನ ! ನಿನ್ನ ಶಕ್ತಿ–ವಿಭೂತಿಗಳ ವರ್ಣನೆಯನ್ನು ವಿಸ್ತಾರವಾಗಿ ಮತ್ತೆ ಹೇಳು ನಿನ್ನ ಅಮೃತಮಯ ವಾಣಿಯನ್ನು ಎಷ್ಟು ಕೇಳಿದರೂ ನನಗೆ ತೃಪ್ತಿಯೇ ಇಲ್ಲ. ॥೧೮॥

ಶ್ರೀ ಭಗವಂತ :

ಕುರುಶ್ರೇಷ್ಠ ! ನನ್ನ ಮುಖ್ಯ ಮುಖ್ಯ ದಿವ್ಯ ವಿಭೂತಿಗಳನ್ನು ಹೇಳುತ್ತೇನೆ. ಅವುಗಳ ವಿಸ್ತಾರಕ್ಕಂತೂ ಅಂತವೇ ಇಲ್ಲ. ॥೧೯॥

ನಾನು ಸಕಲ ಪ್ರಾಣಿಗಳ ಹೃದಯದಲ್ಲಿರುವ ಆತ್ಮ. ಭೂತಮಾತ್ರಗಳ ಆದಿಯೂ ಮಧ್ಯವೂ ಅಂತವೂ ನಾನೇ. ॥೨೦॥

ಆದಿತ್ಯರಲ್ಲಿ ವಿಷ್ಣು ನಾನು. ಜ್ಯೋತಿಗಳಲ್ಲಿ ಪ್ರಕಾಶಮಾನ ಸೂರ್ಯ ನಾನು ವಾಯುಗಳಲ್ಲಿ ಮರೀಚಿ, ನಕ್ಷತ್ರಗಳಲ್ಲಿ ಚಂದ್ರ ನಾನು. ॥೨೧॥

ವೇದಾನಾಂ ಸಾಮವೇದೋऽಸ್ಮಿ ದೇವಾನಾಮಸ್ಮಿ ವಾಸವಃ ।
ಇಂದ್ರಿಯಾಣಾಂ ಮನಶ್ಚಾಸ್ಮಿ ಭೂತಾನಾಮಸ್ಮಿ ಚೇತನಾ ॥೨೨॥

ರುದ್ರಾಣಾಂ ಶಂಕರಶ್ಚಾಸ್ಮಿ ವಿತ್ತೇಶೋ ಯಕ್ಷರಕ್ಷಸಾಮ್ ।
ವಸೂನಾಂ ಪಾವಕಶ್ಚಾಸ್ಮಿ ಮೇರುಶ್ಶಿಖರಿಣಾಮಹಮ್ ॥೨೩॥

ಪುರೋಧಸಾಂ ಚ ಮುಖ್ಯಂ ಮಾಂ ವಿದ್ಧಿ ಪಾರ್ಥ ಬೃಹಸ್ಪತಿಮ್ ।
ಸೇನಾನೀನಾಮಹಂ ಸ್ಕಂಧಃ ಸರಸಾಮಸ್ಮಿ ಸಾಗರ ಃ ॥೨೪॥

ಮಹರ್ಷೀಣಾಂ ಭೃಗುರಹಂ ಗಿರಾಮಸ್ಮ್ಯೇಕಮಕ್ಷರಮ್ ।
ಯಜ್ಞಾನಾಂ ಜಪಯಜ್ಞೋऽಸ್ಮಿ ಸ್ಥಾವರಾಣಾಂ ಹಿಮಾಲಯ ಃ ॥೨೫॥

ಅಶ್ವತ್ಥಸ್ಸರ್ವವೃಕ್ಷಾಣಾಂ ದೇವರ್ಷೀಣಾಂ ಚ ನಾರದ ಃ ।
ಗಂಧರ್ವಾಣಾಂ ಚಿತ್ರರಥಃ ಸಿದ್ಧಾನಾಂ ಕಪಿಲೋ ಮುನಿಃ ॥೨೬॥

ಉಚ್ಚೈಶ್ರ ವಸಮಶ್ವಾನಾಂ ವಿದ್ಧಿ ಮಾಮಮೃತೋದ್ಭವಮ್ ।
ಐರಾವತಂ ಗಜೇಂದ್ರಾಣಾಂ ನರಾಣಾಂ ಚ ನರಾಧಿಪಮ್ ॥೨೭॥

ವೇದಗಳಲ್ಲಿ ಸಾಮವೇದ, ದೇವತೆಗಳಲ್ಲಿ ಇಂದ್ರ, ಇಂದ್ರಿಯಗಳಲ್ಲಿ ಮನಸ್ಸು ಪ್ರಾಣಿಗಳಲ್ಲಿ ಚೇತನ ನಾನು. ॥೨೨॥

ರುದ್ರರಲ್ಲಿ ಶಂಕರ ನಾನು, ಯಕ್ಷರಾಕ್ಷಸರಲ್ಲಿ ಕುಬೇರ ನಾನು, ವಸುಗಳಲ್ಲಿ ಅಗ್ನಿ ಪರ್ವತಗಳಲ್ಲಿ ಮೇರು ನಾನೇ. ॥೨೩॥

ಪಾರ್ಥ, ಪುರೋಹಿತರಲ್ಲಿ ಮುಖ್ಯನಾದ ಬೃಹಸ್ಪತಿ ನಾನೆಂದು ತಿಳಿ ಸೇನಾಪತಿಗಳಲ್ಲಿ ಕಾರ್ತಿಕಸ್ವಾಮಿ ನಾನು, ಸರೋವರಗಳಲ್ಲಿ ಸಾಗರ ನಾನು. ॥೨೪॥

ಮಹರ್ಷಿಗಳಲ್ಲಿ ಭೃಗು ನಾನು, ವಚನಗಳಲ್ಲಿ ಏಕಾಕ್ಷರಿಯಾದ 'ಓಂ' ಕಾರ ನಾನೇ, ಯಜ್ಞಗಳಲ್ಲಿ ಜಪಯಜ್ಞ ಸ್ಥಾವರಗಳಲ್ಲಿ ಹಿಮಾಲಯ ನಾನು. ॥೨೫॥

ವೃಕ್ಷಗಳಲ್ಲಿ ಅಶ್ವತ್ಥ, ದೇವಋಷಿಗಳಲ್ಲಿ ನಾರದ, ಗಂಧರ್ವರಲ್ಲಿ ಚಿತ್ರರಥ, ಸಿದ್ಧರಲ್ಲಿ ಕಪಿಲಮುನಿಯೂ ನಾನೇ. ॥೨೬॥

ಅಶ್ವಗಳಲ್ಲಿ ಅಮೃತದಿಂದ ಹುಟ್ಟಿದ ಉಚ್ಚೈಶ್ರವ ನಾನೆಂದು ತಿಳಿ. ಆನೆಗಳಲ್ಲಿ ಐರಾವತ, ನರರಲ್ಲಿ ನರಪತಿ ನಾನು. ॥೨೭॥

ಆಯುಧಾನಾಮಹಂ ವಜ್ರಂ ಧೇನೂನಾಮಸ್ಮಿ ಕಾಮಧುಕ್ ।
ಪ್ರಜನಶ್ಚಾಸ್ಮಿ ಕಂದರ್ಪಃ ಸರ್ಪಾಣಾಮಸ್ಮಿ ವಾಸುಕಿಃ ॥೨೮॥

ಅನಂತಶ್ಚಾಸ್ಮಿ ನಾಗಾನಾಂ ವರುಣೋ ಯಾದಸಾಮಹಮ್ ।
ಪಿತೃಣಾಮರ್ಯಮಾ ಚಾಸ್ಮಿ ಯಮಸ್ಸಂಯಮತಾಮಹಮ್ ॥೨೯॥

ಪ್ರಹ್ಲಾದಶ್ಚಾಸ್ಮಿ ದೈತ್ಯಾನಾಂ ಕಾಲಃ ಕಲಯತಾಮಹಮ್ ।
ಮೃಗಾಣಾಂ ಚ ಮೃಗೇಂದ್ರೋಽಹಂ ವೈನತೇಯಶ್ಚ ಪಕ್ಷಿಣಾಮ್ ॥೩೦॥

ಪವನಃ ಪವತಾಮಸ್ಮಿ ರಾಮಶ್ಶಸ್ತ್ರಭೃತಾಮಹಮ್ ।
ಝಷಾಣಾಂ ಮಕರಶ್ಚಾಸ್ಮಿ ಸ್ರೋತಸಾಮಸ್ಮಿ ಜಾಹ್ನವೀ ॥೩೧॥

ಸರ್ಗಾಣಾಮಾದಿರಂತಶ್ಚ ಮಧ್ಯಂ ಚೈವಾಹಮರ್ಜುನ ।
ಅಧ್ಯಾತ್ಮವಿದ್ಯಾ ವಿದ್ಯಾನಾಂ ವಾದಃ ಪ್ರವದತಾಮಹಮ್ ॥೩೨॥

ಅಕ್ಷರಾಣಾಮಕಾರೋಽಸ್ಮಿ ದ್ವಂದ್ವಸ್ಸಾಮಾಸಿಕಸ್ಯ ಚ ।
ಅಹಮೇವಾಕ್ಷಯಃ ಕಾಲೋ ಧಾತಾಹಂ ವಿಶ್ವತೋಮುಖಃ ॥೩೩॥

ಮೃತ್ಯುಸ್ಸರ್ವಹರಶ್ಚಾಹಮುದ್ಭವಶ್ಚ ಭವಿಷ್ಯತಾಮ್ ।
ಕೀರ್ತಿಶ್ಶ್ರೀರ್ವಾಕ್ಚ ನಾರೀಣಾಂ ಸ್ಮೃತಿರ್ಮೇಧಾ ಧೃತಿಃ ಕ್ಷಮಾ ॥೩೪॥

ಆಯುಧಗಳಲ್ಲಿ ನಾನು ವಜ್ರ. ಗೋವುಗಳಲ್ಲಿ ಕಾಮಧೇನು. ಪ್ರಜೋತ್ಪತ್ತಿಯ ಕಾರಣವಾದ ಕಾಮದೇವ ನಾನು. ಸರ್ಪಗಳಲ್ಲಿ ವಾಸುಕಿ ನಾನು. ॥೨೮॥

ನಾಗಗಳಲ್ಲಿ ಆದಿಶೇಷ. ಜಲಚರಗಳಲ್ಲಿ ವರುಣ. ಪಿತೃಗಳಲ್ಲಿ ಅರ್ಯಮ. ಶಾಸಿಸುವವರಲ್ಲಿ ಯಮ ನಾನೇ. ॥೨೯॥

ದೈತ್ಯರಲ್ಲಿ ಪ್ರಹ್ಲಾದ ನಾನು, ಎಣಿಸುವವರಲ್ಲಿ ಕಾಲ ನಾನು. ಪಶುಗಳಲ್ಲಿ ಸಿಂಹ, ಪಕ್ಷಿಗಳಲ್ಲಿ ಗರುಡ. ॥೩೦॥

ಪಾವನಮಾಡುವವರಲ್ಲಿ ಪವನ. ಶಸ್ತ್ರಧಾರಿಗಳಲ್ಲಿ ಪರಶುರಾಮ. ಜಲಚರಗಳಲ್ಲಿ ಮೊಸಳೆ, ನದಿಗಳಲ್ಲಿ ಗಂಗೆ ನಾನು. ॥೩೧॥

ಅರ್ಜುನ. ಸೃಷ್ಟಿಯ ಆರಂಭ. ಮಧ್ಯ ಅಂತ ನಾನು. ವಿದ್ಯೆಗಳಲ್ಲಿ ಅಧ್ಯಾತ್ಮ. ವಿವಾದಮಾಡುವಲ್ಲಿ ವಾದ. ॥೩೨॥

ಅಕ್ಷರಗಳಲ್ಲಿ 'ಅ'ಕಾರ ಸಮಾಸಗಳಲ್ಲಿ ದ್ವಂದ್ವ ನಾನು. ಅವಿನಾಶಿಯಾದ ಕಾಲ ನಾನು, ಸರ್ವವ್ಯಾಪಕತ್ವವನ್ನು ಧರಿಸುವವನೂ ನಾನೇ. ॥೩೩॥

ಸಕಲವನ್ನೂ ಸಂಹರಿಸುವ ಮೃತ್ಯು ನಾನು. ಭವಿಷ್ಯದಲ್ಲಿ ಉತ್ಪನ್ನವಾಗುವುದರ ಉತ್ಪತ್ತಿಕಾರಣವೂ ನಾನೇ. ಸ್ತ್ರೀಯರಲ್ಲಿ ಕೀರ್ತಿ, ಲಕ್ಷ್ಮಿ, ವಾಣಿ ಸ್ಮೃತಿ, ಮೇಧಾ (ಬುದ್ಧಿ) ಧೃತಿ (ಧೈರ್ಯ), ಕ್ಷಮೆ ಇವು ನಾನು. ॥೩೪॥

ೃಹತ್ಸಾಮ ತಥಾ ಸಾಮ್ನಾಂ ಗಾಯತ್ರೀ ಛಂದಸಾಮಹಮ್ ।
ಮಾಸಾನಾಂ ಮಾರ್ಗಶೀರ್ಷೋಽಹಮೃತೂನಾಂ ಕುಸುಮಾಕರಃ ॥೩೫॥

ದ್ಯೂತಂ ಛಲಯತಾಮಸ್ಮಿ ತೇಜಸ್ತೇಜಸ್ವಿನಾಮಹಮ್ ।
ಜಯೋಽಸ್ಮಿ ವ್ಯವಸಾಯೋಽಸ್ಮಿ ಸತ್ತ್ವಂ ಸತ್ತ್ವವತಾಮಹಮ್ ॥೩೬॥

ವೃಷ್ಣೀನಾಂ ವಾಸುದೇವೋಽಸ್ಮಿ ಪಾಂಡವಾನಾಂ ಧನಂಜಯಃ ।
ಮುನೀನಾಮಪ್ಯಹಂ ವ್ಯಾಸಃ ಕವೀನಾಮುಶನಾ ಕವಿಃ ॥೩೭॥

ದಂಡೋ ದಮಯತಾಮಸ್ಮಿ ನೀತಿರಸ್ಮಿ ಜಿಗೀಷತಾಮ್ ।
ಮೌನಂ ಚೈವಾಸ್ಮಿ ಗುಹ್ಯಾನಾಂ ಜ್ಞಾನಂ ಜ್ಞಾನವತಾಮಹಂ ॥೩೮॥

ಯಚ್ಚಾಪಿ ಸರ್ವಭೂತಾನಾಂ ಬೀಜಂ ತದಹಮರ್ಜುನ ।
ನ ತದಸ್ತಿ ವಿನಾ ಯತ್ಸ್ಯಾತ್ ಮಯಾ ಭೂತಂ ಚರಾಚರಮ್ ॥೩೯॥

ನಾಂತೋಽಸ್ತಿ ಮಮ ದಿವ್ಯಾನಾಂ ವಿಭೂತೀನಾಂ ಪರಂತಪ ।
ಏಷ ತೂದ್ದೇಶತಃ ಪ್ರೋಕ್ತೋ ವಿಭೂತೇರ್ವಿಸ್ತರೋ ಮಯಾ ॥೪೦॥

ಸಾಮಗಳಲ್ಲಿ ಬೃಹತ್ (ದೊಡ್ಡ) ಸಾಮ, ಛಂದಸ್ಸುಗಳಲ್ಲಿ ಗಾಯತ್ರಿ ನಾನು. ತಿಂಗಳಲ್ಲಿ ಮಾರ್ಗಶೀರ್ಷ, ಋತುಗಳಲ್ಲಿ ವಸಂತ. ॥೩೫॥

ವಂಚಕರಲ್ಲಿ ದ್ಯೂತ ನಾನು. ಪ್ರತಾಪಶಾಲಿಗಳಲ್ಲಿ ಪ್ರತಾಪ, ಜಯ ನಿಶ್ಚಯ. ಸಾತ್ತ್ವಿಕಭಾವವುಳ್ಳವರ ಸತ್ತ್ವ ನಾನು. ॥೩೬॥

ಟಿಪ್ಪಣಿ – ವಂಚಕರಲ್ಲಿ ದ್ಯೂತ ನಾನು ಎಂದು ಹೇಳಿರುವುದರಿಂದ ಗಾಬರಿಯಾಗುವ ಕಾರಣವಿಲ್ಲ. ಇಲ್ಲಿ ಸಾರಾಸಾರದ ನಿರ್ಣಯವಿಲ್ಲ. ಆಗುವುದೆಲ್ಲವೂ ಈಶ್ವರನ ಆಜ್ಞೆ ಇಲ್ಲದೆ ಆಗಲಾರದೆಂಬುದನ್ನು ತೋರಲಾಗಿದೆ. ಎಲ್ಲವೂ ಈಶ್ವರಾಧೀನ ಎಂಬುದನ್ನು ತಿಳಿದರೆ ವಂಚಕನೂ ತನ್ನ ಅಭಿಮಾನವನ್ನು ಬಿಟ್ಟು ಮೋಸವನ್ನು ತ್ಯಜಿಸುತ್ತಾನೆ.

ವೃಷ್ಣಿಕುಲದಲ್ಲಿ ವಾಸುದೇವ, ಪಾಂಡವರಲ್ಲಿ ಧನಂಜಯ, ಮುನಿಗಳಲ್ಲಿ ವ್ಯಾಸ ಕವಿಗಳಲ್ಲಿ ಉಶನ ನಾನು. ॥೩೭॥

ರಾಜ್ಯಕರ್ತರ ದಂಡ, ಜಯ ಬಯಸುವವನ ನೀತಿ ನಾನು: ಗುಹ್ಯಗಳ ಮೌನ, ಜ್ಞಾನಿಗಳ ಜ್ಞಾನ ನಾನು. ॥೩೮॥

ಅರ್ಜುನ, ಸಕಲ ಪ್ರಾಣಿಗಳ ಉತ್ಪತ್ತಿಕಾರಣ ನಾನು. ಸ್ಥಾವರ – ಜಂಗಮಗಳಲ್ಲಿ ನನ್ನ ಹೊರತು ಯಾವುದೂ ಇಲ್ಲ. ॥೩೯॥

ಪರಂತಪ, ನನ್ನ ದಿವ್ಯವಿಭೂತಿಗಳಿಗೆ ಪಾರವೇ ಇಲ್ಲ. ವಿಭೂತಿಗಳ ಈ ವಿಸ್ತಾರವನ್ನು ನಾನು ಕೇವಲ ದೃಷ್ಟಾಂತಕ್ಕಾಗಿ ಹೇಳಿದೆ. ॥೪೦॥

ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ ।
ತತ್ತದೇವಾವಗಚ್ಛ ತ್ವಂ ಮಮ ತೇಜೋಂಽಶಸಂಭವಮ್ ॥೪೦॥

ಅಥವಾ ಬಹುನೈತೇನ ಕಿಂ ಜ್ಞಾತೇನ ತವಾರ್ಜುನ ।
ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್ ॥೪೦॥

ಹರಿಃ ಓಂ ತತ್ಸತ್

ಇತಿ ಶ್ರೀಮದ್‌ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀ ಕೃಷ್ಣಾರ್ಜುನಸಂವಾದೇ
ವಿಭೂತಿಯೋಗೋ ನಾಮ ದಶಮೋಽಧ್ಯಾಯಃ

ಯಾವುದು ವಿಭೂತಿಮಂತ, ಲಕ್ಷ್ಮೀಯುತ, ಪ್ರಭಾವಶಾಲಿಯೋ ಅದೆಲ್ಲವೂ ನನ್ನ ತೇಜಸ್ಸಿನ ಅಂಶದಿಂದಲೇ ಆಯಿತು: ತಿಳಿ. ॥೪೧॥

ಅಥವಾ ಅರ್ಜುನ, ಇದನ್ನು ವಿಸ್ತಾರವಾಗಿ ತಿಳಿದು ಏನು ಮಾಡುತ್ತೀ ? ನನ್ನ ಒಂದು ಅಂಶಮಾತ್ರದಿಂದ ಈ ಸಮಗ್ರ ಜಗತ್ತನ್ನೆಲ್ಲಾ ಧಾರಣೆ ಮಾಡಿದ್ದೇನೆ. ॥೪೨॥

ಓಂ ತತ್ಸತ್

ಈ ಬಗೆಯಾಗಿ ಶ್ರೀ ಮದ್ಭಗವದ್ಗೀತಾರೂಪ ಉಪನಿಷತ್ತು ಅಥವಾ
ಬ್ರಹ್ಮವಿದ್ಯಾಂತರ್ಗತ ಯೋಗಶಾಸ್ತ್ರದ ಶ್ರೀ ಕೃಷ್ಣಾರ್ಜುನ ಸಂವಾದದಲ್ಲಿ
ವಿಭೂತಿಯೋಗವೆಂಬ ಹತ್ತನೆಯ ಅಧ್ಯಾಯ.

***

ಅಧ್ಯಾಯ ೧೧

ವಿಶ್ವರೂಪದರ್ಶನಯೋಗ

[ಈ ಅಧ್ಯಾಯದಲ್ಲಿ ಭಗವಂತ ಅರ್ಜುನನಿಗೆ ತನ್ನ ವಿರಾಟ್ ಸ್ವರೂಪವನ್ನು ತೋರುತ್ತಾನೆ. ಭಕ್ತರಿಗೆ ಈ ಅಧ್ಯಾಯ ಬಹು ಪ್ರಿಯ. ಪಾಠವಲ್ಲ ಬರೀ ಕಾವ್ಯ ಈ ಅಧ್ಯಾಯವನ್ನು ಪಠಿಸುವಾಗ ಮನುಷ್ಯನಿಗೆ ಆಯಾಸವಾಗದು.]

ಅಥೈಕಾದಶೋಽಧ್ಯಾಯಃ

ಅರ್ಜುನ ಉವಾಚ

ಮದನುಗ್ರಹಾಯ ಪರಮಂ ಗುಹ್ಯಮಧ್ಯಾತ್ಮಸಂಜ್ಞಿತಮ್ ।
ಯತ್ತ್ವಯೋಕ್ತಂ ವಚಸ್ತೇನ ಮೋಹೋಽಯಂ ವಿಗತೋ ಮಮ ॥೧॥

ಭವಾಪ್ಯಯೌ ಹಿ ಭೂತಾನಾಂ ಶ್ರುತೌ ವಿಸ್ತರಶೋ ಮಯಾ ।
ತ್ವತ್ತಃ ಕಮಲಪತ್ರಾಕ್ಷ ಮಾಹಾತ್ಮ್ಯಮಪಿ ಚಾವ್ಯಯಮ್ ॥೨॥

ಏವ ಮೇತದ್ಯಥಾತ್ಥ ತ್ವಮಾತ್ಮಾನಂ ಪರಮೇಶ್ವರ ।
ದ್ರಷ್ಟುಮಿಚ್ಛಾಮಿ ತೇ ರೂಪಮೈಶ್ವರಂ ಪುರುಷೋತ್ತಮ ॥೩॥

ಮನ್ಯಸೇ ಯದಿ ತಚ್ಛಕ್ಯಂ ಮಯಾ ದ್ರಷ್ಟುಮಿತಿ ಪ್ರಭೋ ।
ಯೋಗೇಶ್ವರ ತತೋ. ಮೇ ತ್ವಂ ದರ್ಶಯಾತ್ಮನಮವ್ಯಯಂ ॥೪॥

ಅರ್ಜುನ :

ನನ್ನಲ್ಲಿ ಕೃಪೆಯಿಟ್ಟು ನೀನು ಈ ಅಧ್ಯಾತ್ಮಿಕ ಪರಮ ರಹಸ್ಯವನ್ನು ಹೇಳಿದೆ. ನೀನು ಹೇಳಿದ ಈ ವಚನಗಳಿಂದ ನನ್ನ ಮೋಹ ದೂರವಾಯಿತು. ॥೧॥

ಪ್ರಾಣಿಗಳ ಉತ್ಪತ್ತಿ, ನಾಶದ ವಿಚಾರವಲ್ಲಿ ವಿಸ್ತಾರವಾಗಿ ನಿನ್ನಿಂದ ಕೇಳಿದೆ. ಕಮಲ ಪತ್ರಾಕ್ಷ ! ಅದೇ ರೀತಿ ನಿನ್ನ ಅವಿನಾಶಿ ಮಹಾತ್ಮ್ಯವನ್ನೂ ಕೇಳಿದೆ. ॥೨॥

ಪರಮೇಶ್ವರ, ನೀನು ನಿನ್ನ ಪರಿಚಯವನ್ನು ಹೇಗೆ ಮಾಡಿಸುತ್ತೀಯೋ ಹಾಗೆ, ಪುರು ಷೋತ್ತಮ, ನಿನ್ನ ಈಶ್ವರೀರೂಪದ ದರ್ಶನ ಮಾಡಲು ನನಗೆ ಬಯಕೆಯಾಗುತ್ತದೆ. ॥೩॥

ಪ್ರಭೋ, ನನ್ನಂಥವನಿಗೆ ಈ ದರ್ಶನ ಶಕ್ಯವೆಂದು ನೀನು ತಿಳಿದರೆ, ಆ ಅವ್ಯಯ ರೂಪದ ದರ್ಶನ ಮಾಡಿಸು. ॥೪॥

ಪಶ್ಯ ಮೇ ಪಾರ್ಥ ರೂಪಾಣಿ ಶತಶೋಽಥ ಸಹಸ್ರಶಃ ।
ನಾನಾವಿಧಾನಿ ದಿವ್ಯಾನಿ ನಾನಾವರ್ಣಾಕೃತೀನಿ ಚ ॥೫॥

ಪಶ್ಯಾದಿತ್ಯಾನ್ ವಸೂನ್ ರುದ್ರಾನಶ್ವಿನೌ ಮರುತಸ್ತಥಾ ।
ಬಹೂನ್ಯದೃಷ್ಟಪೂರ್ವಾಣಿ ಪಶ್ಯಾಶ್ಚರ್ಯಾಣಿ ಭಾರತ ॥೬॥

ಇಹೈಕಸ್ಥಂ ಜಗತ್ಕೃತ್ಸ್ನಂ ಪಶ್ಯಾದ್ಯ ಸಚರಾಚರಮ್ ।
ಮಮ ದೇಹೇ ಗುಡಾಕೇಶ ಯಚ್ಚಾನ್ಯದ್ದ್ರಷ್ಟುಮಿಚ್ಛಸಿ ॥೭॥

ನ ತು ಮಾಂ ಶಕ್ಯಸೇ ದ್ರಷ್ಟುಮನೇನೈವ ಸ್ವಚಕ್ಷುಷಾ ।
ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯ ಮೇ ಯೋಗಮೈಶ್ವರಮ್ ॥೮॥

ಸಂಜಯ ಉವಾಚ :

ಏವಮುಕ್ತ್ವಾ ತತೋ ರಾಜನ್ ಮಹಾಯೋಗೇಶ್ವರೋ ಹರಿಃ ।
ದರ್ಶಯಾಮಾಸ ಪಾರ್ಥಾಯ ಪರಮಂ ರೂಪಮೈಶ್ವರಮ್ ॥೯॥

ಅನೇಕ ವಕ್ತ್ರನಯನಮನೇಕಾದ್ಭುತದರ್ಶನಮ್ ।
ಅನೇಕದಿವ್ಯಾಭರಣಂ ದಿವ್ಯಾನೇಕೋದ್ಯತಾಯುಧಮ್ ॥೧೦॥

ಶ್ರೀ ಭಗವಂತ :

ಪಾರ್ಥ, ನನಗೆ ನೂರಾರು ಸಾವಿರಾರು ರೂಪಗಳಿವೆ. ದಿವ್ಯ, ಭಿನ್ನ ಭಿನ್ನ ಆಕೃತಿಗಳ ವಿವಿಧ ರೂಪ ಅವು. ॥೫॥

ಭಾರತ ! ಆದಿತ್ಯ, ವಸು, ರುದ್ರ, ಅಶ್ವಿನಿಗಳನ್ನು ಮರುತರನ್ನು ನೋಡು. ಹಿಂದೆ ನೋಡದೆ ಇದ್ದ ಅನೇಕ ಆಶ್ಚರ್ಯಗಳನ್ನೂ ನೋಡು ॥೬॥

ನನ್ನೀ ದೇಹದಲ್ಲಿ ಏಕರೂಪದಲ್ಲಿ ಅಡಗಿರುವ ಸಕಲ ಸ್ಥಾವರ–ಜಂಗಮ ಜಗತ್ತನ್ನೂ, ಯಾವುದನ್ನು ನೀನು ನೋಡಲು ಅಪೇಕ್ಷಿಸುತ್ತಿದ್ದೀಯೋ ಅದನ್ನೂ ಈಗ ನೋಡು. ॥೭॥

ನೀನು ಈ ಸ್ವಂತ ಕಣ್ಣುಗಳಿಂದ ನನ್ನನ್ನು ನೋಡಲಾರೆ. ನಿನಗೆ ದಿವ್ಯಚಕ್ಷುಗಳನ್ನು ಕೊಡುತ್ತೇನೆ. ನನ್ನ ಈಶ್ವರೀಯೋಗವನ್ನು ನೋಡು. ॥೮॥

ಸಂಜಯ :

ರಾಜ ! ಇಷ್ಟು ಹೇಳಿ ಯೋಗೀಶ್ವರ ಕೃಷ್ಣ ಪಾರ್ಥನಿಗೆ ತನ್ನ ಪರಮ ಈಶ್ವರೀರೂಪವನ್ನು ತೋರಿಸಿದ. ॥೯॥

ಅನೇಕ ಮುಖ–ನೇತ್ರ, ಅನೇಕ ಅದ್ಭುತ ನೋಟ, ಅನೇಕ ದಿವ್ಯಭೂಷಣ, ಕೈಗಳಲ್ಲಿ ಅನೇಕ ದಿವ್ಯಶಸ್ತ್ರ–ಅದಕ್ಕೆ. ॥೧೦॥

ದಿವ್ಯಮಾಲ್ಯಾಂಬರಧರಂ ದಿವ್ಯಗಂಧಾನುಲೇಪನಮ್ ।
ಸರ್ವಾಶ್ಚರ್ಯಮಯಂ ದೇವಮನಂತಂ ವಿಶ್ವತೋಮುಖಂ ॥೧೧॥

ದಿವಿ ಸೂರ್ಯಸಹಸ್ರಸ್ಯ ಭವೇದ್ಯುಗಪದುತ್ಥಿತಾ ।
ಯದಿ ಭಾಸ್ಸದೃಶೀ ಸಾ ಸ್ಯಾದ್ಭಾಸಸ್ತಸ್ಯ ಮಹಾತ್ಮನಃ ॥೧೨॥

ತತ್ರೈಕಸ್ಥಂ ಜಗತ್ಕೃತ್ಸ್ನಂ ಪ್ರವಿಭಕ್ತಮನೇಕಧಾ ।
ಅಪಶ್ಯದ್ದೇವದೇವಸ್ಯ ಶರೀರೇ ಪಾಂಡವಸ್ತದಾ ॥೧೩॥

ತತಸ್ಸ ವಿಸ್ಮಯಾವಿಷ್ಟೋ ಹೃಷ್ಟರೋಮಾ ಧನಂಜಯಃ ।
ಪ್ರಣಮ್ಯ ಶಿರಸಾ ದೇವಂ ಕೃತಾಂಜಲಿರಭಾಷತ ॥೧೪॥

ಅರ್ಜುನ ಉವಾಚ

ಪಶ್ಯಾಮಿ ದೇವಾಂಸ್ತವ ದೇವ ದೇಹೇ
ಸರ್ವಾಂಸ್ತಥಾ ಭೂತವಿಶೇಷ ಸಂಘಾನ್ ।
ಬ್ರಹ್ಮಾಣಮೀಶಂ ಕಮಲಾಸನಂ
ಋಷೀಂಶ್ಚ ಸರ್ವಾನುರಗಾಂಶ್ಚ ದಿವ್ಯಾನ್ ॥೧೫॥

ಅನೇಕ ದಿವ್ಯಮಾಲೆಗಳನ್ನೂ ವಸ್ತ್ರಗಳನ್ನೂ ಧರಿಸಿತ್ತು. ಶರೀರದ ಮೇಲೆ ದಿವ್ಯ ಸುಗಂಧಿತ ಲೇಪ, ಹೀಗೆ ಸರ್ವ ಪ್ರಕಾರದಿಂದಲೂ ಆಶ್ಚರ್ಯಮಯ, ಅನಂತ, ಸರ್ವವ್ಯಾಪಿ ಆ ದೇವಸ್ವರೂಪ. ॥೧೧॥

ಆಕಾಶದಲ್ಲಿ ಸಾವಿರಾರು ಸೂರ್ಯರ ತೇಜಸ್ಸು ಒಂದೇ ಸಲ ಬೆಳಗಿದರೆ ಅದನ್ನು ಈ ಮಹಾತ್ಮನ ತೇಜಸ್ಸಿನೊಂದಿಗೆ ಹೋಲಿಸಬಹುದು. ॥೧೨॥

ಆ ದೇವದೇವನ ಶರೀರದಲ್ಲಿ ಅನೇಕ ಪ್ರಕಾರವಾಗಿ ವಿಭಾಗಿಸಿದ್ದ ಸಮಗ್ರ ಜಗತ್ತನ್ನೂ ಅರ್ಜುನ ಏಕತ್ರ ನೋಡಿದ. ॥೧೩॥

ಆಶ್ಚರ್ಯಚಕಿತ, ಪುಲಕಿತ ಆದ ಧನಂಜಯ ತಲೆಬಾಗಿ ಕೈಜೋಡಿಸಿ ಹೀಗೆ ಹೇಳಿದ. ॥೧೪॥

ಅರ್ಜುನ :

ದೇವ, ನಿನ್ನ ದೇಹದಲ್ಲಿ ನಾನು ದೇವತೆಗಳನ್ನೂ, ಭಿನ್ನ ಭಿನ್ನ ಪ್ರಕಾರದ ಸಕಲ ಪ್ರಾಣಿಸಮುದಾಯವನ್ನೂ ಕಮಲಾಸನದ ಮೇಲೆ ವಿರಾಜಮಾನ ಬ್ರಹ್ಮನನ್ನೂ, ಸಕಲ ಋಷಿಗಳನ್ನೂ, ದಿವ್ಯ ಸರ್ಪಗಳನ್ನೂ ನೋಡುತ್ತಿದ್ದೇನೆ. ॥೧೫॥

ಅನೇಕಬಾಹೂದರ ವಕ್ತ್ರನೇತ್ರಂ
ಪಶ್ಯಾಮಿ ತ್ವಾಂ ಸರ್ವತೋऽನಂತ ರೂಪಮ್ ।
ನಾಂತಂ ನ ಮಧ್ಯಂ ನ ಪುನಸ್ತವಾದಿಂ
ಪಶ್ಯಾಮಿ ವಿಶ್ವೇಶ್ವರ ವಿಶ್ವರೂಪ ॥೧೬॥

ಕಿರೀಟನಂ ಗದಿನಂ ಚಕ್ರಿಣಂ ಚ
ತೇಜೋರಾಶಿಂ ಸರ್ವತೋ ದೀಪ್ತಿಮಂತಮ್ ।
ಪಶ್ಯಾಮಿ ತ್ವಾಂ ದುರ್ನಿರೀಕ್ಷ್ಯಂ ಸಮಂತಾ
ದ್ದೀಪ್ತಾನಲಾರ್ಕದ್ಯುತಿಮಪ್ರಮೇಯಮ್ ॥೧೭॥

ತ್ವಮಕ್ಷರಂ ಪರಮಂ ವೇದಿತವ್ಯಂ
ತ್ವಮಸ್ಯ ವಿಶ್ವಸ್ಯ ಪರಂ ನಿಧಾನಮ್ ।
ತ್ವಮವ್ಯಯಶ್ಶಾಶ್ವತಧರ್ಮಗೋಪ್ತಾ
ಸನಾತನಸ್ತ್ವಂ ಪುರುಷೋ ಮತೋ ಮೇ ॥೧೮॥

ಅನಾದಿಮಧ್ಯಾಂತಮನಂತವೀರ್ಯ
ಮನಂತಬಾಹುಂ ಶಶಿಸೂರ್ಯನೇತ್ರಮ್ ।
ಪಶ್ಯಾಮಿ ತ್ವಾಂ ದೀಪ್ತಹುತಾಶವಕ್ತ್ರಂ
ಸ್ವತೇಜಸಾ ವಿಶ್ವಮಿದಂ ತಪಂತಮ್ ॥೧೯॥

ಅನೇಕ ಕೈಗಳೂ, ಹೊಟ್ಟೆಗಳೂ, ಕಣ್ಣುಗಳೂ ಉಳ್ಳ ನಿನ್ನ ಅನಂತ ರೂಪವನ್ನು ನಾನು ನೋಡುತ್ತಿದ್ದೇನೆ. ನಿನಗೆ ಅಂತವೂ ಇಲ್ಲ, ಮಧ್ಯವೂ ಇಲ್ಲ, ಆದಿಯೂ ಇಲ್ಲ. ವಿಶ್ವೇಶ್ವರ ! ನಾನು ನಿನ್ನ ವಿಶ್ವರೂಪದರ್ಶನ ಮಾಡುತ್ತಿದ್ದೇನೆ. ॥೧೬॥

ಮುಕುಟಧಾರಿ, ಗದಾಧಾರಿ, ಚಕ್ರಧಾರಿ, ತೇಜಃಪುಂಜ, ಸುತ್ತಲೂ ಹೊಳೆಯುತ್ತಿರುವ; ಅಪರಿಮಿತ, ನೋಡಲು ಅಸಾಧ್ಯ, ಪ್ರಜ್ವಲಿತ ಅಗ್ನಿ ಅಥವಾ ಸೂರ್ಯನಂತೆ ಸಕಲ ದಿಕ್ಕುಗಳಲ್ಲಿಯೂ ಜಗಜಗಿಸುತ್ತಿರುವ. ಇಂಥ ನಿನ್ನ ರೂಪವನ್ನು ನಾನು ನೋಡುತ್ತಿದ್ದೇನೆ. ॥೧೭॥

ನೀನು ಅರಿಯಲು ಯೋಗ್ಯನಾದ ಪರಮ ಅಕ್ಷರರೂಪ, ಈ ಜಗತ್ತಿನ ಅಂತಿಮ ಆಧಾರ, ಸನಾತನ ಧರ್ಮದ ಅವಿನಾಶಿಯಾದ ರಕ್ಷಕ, ಸನಾತನ ಪುರುಷ ಎಂದು ತಿಳಿದಿದ್ದೇನೆ. ॥೧೮॥

ಯಾರಿಗೆ ಆದಿ– ಮಧ್ಯಾಂತಗಳಿಲ್ಲವೋ, ಯಾರ ಶಕ್ತಿ ಅನಂತವೋ, ಯಾರಿಗೆ ಅನಂತ ಭುಜಗಳಿವೆಯೋ, ಯಾರಿಗೆ ಸೂರ್ಯ– ಚಂದ್ರ ರೂಪದ ಕಣ್ಣೋ, ಯಾರ ಮುಖ ಪ್ರಜ್ವಲಿತ ಅಗ್ನಿಯಂತಿದೆಯೋ, ಯಾರು ತನ್ನ ತೇಜಸ್ಸಿನಿಂದ ಈ ಜಗತ್ತನ್ನು ತಪಿಸುತ್ತಿದ್ದಾನೋ ಅಂಥ ನಿನ್ನನ್ನು ನಾನು ನೋಡುತ್ತಿದ್ದೇನೆ. ॥೧೯॥

ದ್ಯಾವಾಪೃಥಿವ್ಯೋರಿದಮಂತರಂ ಹಿ
ವ್ಯಾಪ್ತಂ ತ್ವಯೈಕೇನ ದಿಶಶ್ಚ ಸರ್ವಾಃ ।
ದೃಷ್ಟ್ವಾಽದ್ಭುತಂ ರೂಪಮುಗ್ರಂ ತವೇದಂ
ಲೋಕತ್ರಯಂ ಪ್ರವ್ಯಥಿತಂ ಮಹಾತ್ಮನ್ ॥೨೦॥

ಅಮೀ ಹಿ ತ್ವಾಂ ಸುರಸಂಘಾ ವಿಶಂತಿ
ಕೇಚಿದ್ಭೀತಾಃ ಪ್ರಾಂಜಲಯೋ ಗೃಣಂತಿ ।
ಸ್ವಸ್ತೀತ್ಯುಕ್ತ್ವಾ ಮಹರ್ಷಿಸಿದ್ಧಸಂಘಾಃ
ಸ್ತುವಂತಿ ತ್ವಾಂ ಸ್ತುತಿಭಿಃ ಪುಷ್ಕಲಾಭಿಃ ॥೨೧॥

ರುದ್ರಾದಿತ್ಯಾ ವಸವೋ ಯೇ ಚ ಸಾಧ್ಯಾ
ವಿಶ್ವೇಽಶ್ವಿನೌ ಮರುತಶ್ಚೋಷ್ಮಪಾಶ್ಚ ।
ಗಂಧರ್ವಯಕ್ಷಾಸುರಸಿದ್ಧಸಂಘಾ
ವೀಕ್ಷಂತೇ ತ್ವಾಂ ವಿಸ್ಮಿತಾಶ್ಚೈವ ಸರ್ವೇ ॥೨೨॥

ರೂಪಂ ಮಹತ್ತೇ ಬಹುವಕ್ತ್ರನೇತ್ರಂ
ಮಹಾಬಾಹೋ ಬಹುಬಾಹೂರುಪಾದಮ್ ।
ಬಹೂದರಂ ಬಹುದಂಷ್ಟ್ರಾ ಕರಾಲಂ
ದೃಷ್ಟ್ವಾ ಲೋಕಾಃ ಪ್ರವ್ಯಥಿತಾಸ್ತಥಾಹಮ್ ॥೨೩॥

ಆಕಾಶ, ಪೃಥ್ವಿಗಳ ಮಧ್ಯೆ ಈ ಅಂತರದಲ್ಲಿ ಸಕಲ ದಿಕ್ಕುಗಳಲ್ಲಿ ನೀನು ವ್ಯಾಪ್ತನಾಗಿದ್ದೀಯೆ. ಮಹಾತ್ಮಾ, ನಿನ್ನ ಈ ಅದ್ಭುತ ಉಗ್ರರೂಪವನ್ನು ನೋಡಿ ಮೂರು ಲೋಕಗಳೂ ಗಡಗಡ ನಡುಗುತ್ತಿವೆ. ॥೨೦॥

ಮತ್ತೆ ಈ ದೇವಗಣ ನಿನ್ನಲ್ಲಿ ಪ್ರವೇಶ ಮಾಡುತ್ತಿದೆ. ಕೆಲವರು ಭಯಭೀತರಾಗಿ ಕೈಜೋಡಿಸಿ ನಿನ್ನ ಸ್ತುತಿ ಮಾಡುತ್ತಿದ್ದಾರೆ. ಮಹರ್ಷಿಗಳ, ಸಿದ್ಧರ ಸಮುದಾಯ 'ಜಗತ್ತಿಗೆ ಕಲ್ಯಾಣವಾಗಲಿ' ಎನ್ನುತ್ತ ಅನೇಕ ವಿಧದಿಂದ ನಿನ್ನ ಯಶೋಗಾನ ಮಾಡುತ್ತಿದೆ. ॥೨೧॥

ರುದ್ರ, ಆದಿತ್ಯ, ವಸು, ಸಾಧ್ಯ, ವಿಶ್ವದೇವ, ಅಶ್ವಿನೀಕುಮಾರ, ಮರುತ, ಬಿಸಿಯನ್ನೆ ಉಂಡವ ಪಿತೃಗಳು, ಗಂಧರ್ವ, ಯಕ್ಷ, ಅಸುರ, ಸಿದ್ಧರ ಸಮುದಾಯಗಳೆಲ್ಲವೂ ಬೆರಗಾಗಿ ನಿನ್ನನ್ನು ನೋಡುತ್ತಿವೆ. ॥೨೨॥

ಮಹಾಬಾಹು, ಅನೇಕ ಮುಖ, ಕಣ್ಣು, ಕೈ, ತೊಡೆ, ಕಾಲು, ಹೊಟ್ಟೆ ದವಡೆಗಳಿಂದ ಭಯಂಕರಾಳವಾಗಿ ಕಾಣುವ ನಿನ್ನ ವಿಶಾಲ ರೂಪವನ್ನು ನೋಡಿ ಜನರು ವ್ಯಾಕುಲರಾಗಿದ್ದಾರೆ. ನಾನೂ ವ್ಯಾಕುಲನಾಗಿದ್ದೇನೆ. ॥೨೩॥

ನಭಸ್ಸ್ಪೃಶಂ ದೀಪ್ತಮನೇಕವರ್ಣಂ
ವ್ಯಾತ್ತಾನನಂ ದೀಪ್ತವಿಶಾಲನೇತ್ರಮ್ ।
ದೃಷ್ಟ್ವಾ ಹಿ ತ್ವಾಂ ಪ್ರವ್ಯಥಿತಾಂತರಾತ್ಮಾ
ಧೃತಿಂ ನ ವಿಂದಾಮಿ ಶಮಂ ಚ ವಿಷ್ಣೋ ॥೨೪॥

ದಂಷ್ಟ್ರಾಕರಾಲಾನಿ ಚ ತೇ ಮುಖಾನಿ
ದೃಷ್ಟ್ವೈವ ಕಾಲಾನಲಸನ್ನಿಭಾನಿ ।
ದಿಶೋ ನ ಜಾನೇ ನ ಲಭೇ ಚ ಶರ್ಮ
ಪ್ರಸೀದ ದೇವೇಶ ಜಗನ್ನಿವಾಸ ॥೨೫॥

ಅಮೀ ಚ ತ್ವಾಂ ಧೃತರಾಷ್ಟ್ರಸ್ಯ ಪುತ್ರಾಃ
ಸರ್ವೇ ಸಹೈವಾವನಿಪಾಲ ಸಂಘೈಃ ।
ಭೀಷ್ಮೋ ದ್ರೋಣಸ್ಸೂತಪುತ್ರಸ್ತಥಾಸೌ
ಸಹಾಸ್ಮದೀಯೈರಪಿ ಯೋಧಮುಖ್ಯೈಃ ॥೨೬॥

ವಕ್ತ್ರಾಣಿ ತೇ ತ್ವರಮಾಣಾ ವಿಶಂತಿ
ದಂಷ್ಟ್ರಾಕರಾಲಾನಿ ಭಯಾನಕಾನಿ ।
ಕೇಚಿದ್ವಿಲಗ್ನಾ ದಶನಾಂತರೇಷು
ಸಂದೃಶ್ಯಂತೇ ಚೂರ್ಣಿತೈರುತ್ತಮಾಂಗೈಃ ॥೨೭॥

ಆಕಾಶವನ್ನು ಮುಟ್ಟುತ್ತಿರುವ, ಜಗಜಗಿಸುವ, ಅನೇಕ ಬಣ್ಣಗಳ, ತೆರೆದ ಬಾಯಿಯ, ದೊಡ್ಡ ದೊಡ್ಡ ತೇಜಸ್ವಿ ನೇತ್ರಗಳ ನೋಡಿ, ವಿಷ್ಣು ನನ್ನ ಅಂತಃಕರಣವಲ್ಲಿ ವ್ಯಾಕುಲ ವಾಗಿದೆ. ಧೈರ್ಯ, ಶಾಂತಿ ತಳೆಯಲಾರೆ. ॥೨೪॥

ಪ್ರಳಯಕಾಲದ ಅಗ್ನಿಯಂತಿರುವ ವಿಕರಾಳ ದವಡೆಗಳ ನಿನ್ನ ಮುಖ ನೋಡಿ ನನಗೆ ದಿಕ್ಕು ತಿಳಿಯದು. ಶಾಂತಿಯೂ ಸಿಗದು. ದೇವೇಶ, ಪ್ರಸನ್ನನಾಗು. ॥೨೫॥

ಸಕಲ ರಾಜಸಮುದಾಯಸಹಿತರಾಗಿ ಧೃತರಾಷ್ಟ್ರನ ಮಕ್ಕಳೂ, ಭೀಷ್ಮ, ದ್ರೋಣಾ ಚಾರ್ಯ, ಸೂತಪುತ್ರ ಕರ್ಣ, ನಮ್ಮ ಮುಖ್ಯ ಯೋಧರು, ಎಲ್ಲರೂ ವಿಕರಾಳ ದವಡೆಯ ನಿನ್ನ ಭಯಂಕರ ಮುಖದಲ್ಲಿ ವೇಗದಿಂದ ಪ್ರವೇಶಿಸುತ್ತಿದ್ದಾರೆ. ಕೆಲವರ ತಲೆಗಳು ಚೂರು ಚೂರಾಗಿ ನಿನ್ನ ಹಲ್ಲುಗಳ ಮಧ್ಯೆ ಸಿಲುಕಿಕೊಂಡಂತೆ ಕಾಣುತ್ತಿವೆ. ॥೨೬-೨೭॥

ಯಥಾ ನದೀನಾಂ ಬಹವೋऽಂಬುವೇಗಾಃ
ಸಮುದ್ರಮೇವಾಭಿಮುಖಾ ದ್ರವಂತಿ ।
ತಥಾ ತವಾಮೀ ನರಲೋಕವೀರಾ
ವಿಶಂತಿ ವಕ್ತ್ರಾಣ್ಯಭಿವಿಜ್ವಲಂತಿ ॥೨೮॥

ಯಥಾ ಪ್ರದೀಪ್ತಂ ಜ್ವಲನಂ ಪತಂಗಾ
ವಿಶಂತಿ ನಾಶಾಯ ಸಮೃದ್ಧವೇಗಾಃ ।
ತಥೈವ ನಾಶಾಯ ವಿಶಂತಿ ಲೋಕ–
ಸ್ತವಾಪಿ ವಕ್ತ್ರಾಣಿ ಸಮೃದ್ಧವೇಗಾಃ ॥೨೯॥

ಲೇಲಿಹ್ಯಸೇ ಗ್ರಸಮಾನಸ್ಸಮಂತಾ –
ಲ್ಲೋಕಾನ್ ಸಮಗ್ರಾನ್ ವದನೈರ್ಜ್ವಲದ್ಭಿಃ ।
ತೇಜೋಭಿರಾಪೂರ್ಯ ಜಗತ್ಸಮಗ್ರಂ
ಭಾಸಸ್ತವೋಗ್ರಾಃ ಪ್ರತಪಂತಿ ವಿಷ್ಣೋ ॥೩೦॥

ಆಖ್ಯಾಹಿ ಮೇ ಕೋ ಭವಾನುಗ್ರರೂಪೋ
ನಮೋऽಸ್ತು ತೇ ದೇವವರ ಪ್ರಸೀದ ।
ವಿಜ್ಞಾತುಮಿಚ್ಛಾಮಿ ಭವಂತಮಾದ್ಯಂ
ನ ಹಿ ಪ್ರಜಾನಾಮಿ ತವ ಪ್ರವೃತ್ತಿಮ್ ॥೩೧॥

ನದಿಗಳ ದೊಡ್ಡ ದೊಡ್ಡ ಪ್ರವಾಹಗಳು ಸಮುದ್ರದ ಕಡೆಗೆ ಓಡುವಂತೆ ಲೋಕ ನಾಯಕರು ಉರಿಯುತ್ತಿರುವ ನಿನ್ನ ಮುಖದಲ್ಲಿ ಪ್ರವೇಶಿಸುತ್ತಿದ್ದಾರೆ. ॥೨೮॥

ಹಾರಿ ಬಂದು ಉರಿವ ದೀಪದಲ್ಲಿ ಬೀಳುವ ಪತಂಗಗಳಂತೆ ಇವರೆಲ್ಲರೂ ವೇಗದಿಂದ ನಿನ್ನ ಬಾಯಲ್ಲಿ ನುಗ್ಗುತ್ತಿದ್ದಾರೆ. ॥೨೯॥

ಎಲ್ಲಾ ಲೋಕಗಳನ್ನೂ ಗ್ರಾಸವಾಗಿ ತೆಗೆದುಕೊಳ್ಳುತ್ತಾ, ಉರಿಯುತ್ತಿರುವ ಮುಖದಿಂದ ನೀನು ನೆಕ್ಕುತ್ತಿದ್ದೀಯೆ. ಸರ್ವವ್ಯಾಪಿ ವಿಷ್ಣು ನಿನ್ನ ಉಗ್ರ ಪ್ರಕಾಶ ಸಮಗ್ರ ಜಗತ್ತನ್ನು ಬೆಳಗಿ ತಪಿಸುತ್ತಿದೆ. ॥೩೦॥

ಉಗ್ರರೂಪ ! ನೀನು ಯಾರು? ಹೇಳು. ಪ್ರಸನ್ನನಾಗು. ಆದಿಕಾರಣನಾದ ನಿನ್ನನ್ನು ಅರಿಯಲಿಚ್ಛಿಸುತ್ತೇನೆ ನಿನ್ನ ಪ್ರವೃತ್ತಿಯನ್ನು ನಾನರಿಯೆ. ॥೩೧॥

ಶ್ರೀ ಭಗವಾನುವಾಚ

ಕಾಲೋಽಸ್ಮಿ ಲೋಕಕ್ಷಯಕೃತ್ಪ್ರವೃದ್ಧೋ
ಲೋಕಾನ್ ಸಮಾಹರ್ತುಮಿಹ ಪ್ರವೃತ್ತಃ ।
ಋತೇಽಪಿ ತ್ವಾಂ ನ ಭವಿಷ್ಯಂತಿ ಸರ್ವೇ
ಯೇಽವಸ್ಥಿತಾಃ ಪ್ರತ್ಯನೀಕೇಷು ಯೋಧಾಃ ॥೩೨॥

ತಸ್ಮಾತ್ತ್ವಮುತ್ತಿಷ್ಠ ಯಶೋ ಲಭಸ್ವ
ಜಿತ್ವಾ ಶತ್ರೂನ್ ಭುಂಕ್ಷ್ವ ರಾಜ್ಯಂ ಸಮೃದ್ಧಮ್ ।
ಮಯೈವೈತೇ ನಿಹತಾಃ ಪೂರ್ವಮೇವ
ನಿಮಿತ್ತಮಾತ್ರಂ ಭವ ಸವ್ಯಸಾಚಿನ್ ॥೩೩॥

ದ್ರೋಣಂ ಚ ಭೀಷ್ಮಂ ಚ ಜಯದ್ರಥಂ ಚ
ಕರ್ಣಂ ತಥಾನ್ಯಾನಪಿ ಯೋಧವೀರಾನ್ ।
ಮಯಾ ಹತಾಂಸ್ತ್ವಂ ಜಹಿ ಮಾ ವ್ಯಥಿಷ್ಠಾ
ಯುಧ್ಯಸ್ವ ಜೇತಾಸಿ ರಣೇ ಸಪತ್ನಾನ್ ॥೩೪॥

ಸಂಜಯ ಉವಾಚ

ಏತಚ್ಛ್ರುತ್ವಾ ವಚನಂ ಕೇಶವಸ್ಯ
ಕೃತಾಂಜಲಿರ್ವೇಪಮಾನಃ ಕಿರೀಟೀ ।
ನಮಸ್ಕೃತ್ವಾ ಭೂಯ ಏವಾಹ ಕೃಷ್ಣಂ
ಸಗದ್ಗದಂ ಭೀತಭೀತಃ ಪ್ರಣಮ್ಯ ॥೩೫॥

ಶ್ರೀ ಭಗವಂತ :

ಲೋಕಗಳನ್ನು ನಾಶಮಾಡಲು ಹೊರಟಿರುವ ಕಾಲ ನಾನು. ಲೋಕಗಳನ್ನೆಲ್ಲಾ ನಾಶಗೊಳಿಸಲೆಂದೇ ಇಲ್ಲಿಗೆ ಬಂದಿದ್ದೇನೆ. ಈ ಸೇನೆಗಳಲ್ಲಿ ಯುದ್ಧಕ್ಕಾಗಿ ಬಂದಿರುವ ಈ ಯೋಧರೆಲ್ಲರೂ, ನೀನು ಯುದ್ಧಮಾಡದಿದ್ದರೂ, ಬದುಕುವವರಲ್ಲ. ॥೩೨॥

ಆದುದರಿಂದ ಏಳು, ಕೀರ್ತಿಗಳಿಸು. ಶತ್ರುಗಳನ್ನು ಗೆದ್ದು ಧನಧಾನ್ಯ ಸಮೃದ್ಧವಾದ ರಾಜ್ಯವನ್ನು ಭೋಗಿಸು. ಇವರನ್ನೆಲ್ಲಾ ನಾನು ಮೊದಲೇ ಸಂಹರಿಸಿದ್ದೇನೆ. ಸವ್ಯಸಾಚಿ ! ನೀನು ಕೇವಲ ನಿಮಿತ್ತರೂಪನಾಗು. ॥೩೩॥

ದ್ರೋಣ, ಭೀಷ್ಮ, ಜಯದ್ರಥ, ಕರ್ಣ ಇತರ ಯೋಧರನ್ನು ನಾನು ಕೊಂದೇ ಇದ್ದೇನೆ. ಅವರನ್ನೇ ನೀನು ಕೊಲ್ಲು. ಹೆದರಬೇಡ, ಯುದ್ಧಮಾಡು, ಶತ್ರುಗಳನ್ನು ಗೆಲ್ಲುತ್ತೀ. ॥೩೪॥

ಸಂಜಯ :

ಕೇಶವನ ಈ ಮಾತನ್ನು ಕೇಳಿ ಮುಕುಟಧಾರಿ ಅರ್ಜುನ ಗಡಗಡನೆ ನಡುಗುತ್ತ ಕೈಜೋಡಿಸಿ, ಬಾರಿಬಾರಿಗೂ ನಮಸ್ಕರಿಸುತ್ತಾ ಅಂಜುತ್ತಂಜುತ್ತ ಪ್ರಣಾಮ ಮಾಡಿ ಗದ್ಗದಿತ ಕಂಠನಾಗಿ ಹೀಗೆಂದ. ॥೩೫॥

ಅರ್ಜುನ ಉವಾಚ :

ಸ್ಥಾನೇ ಹೃಷೀಕೇಶ ತವ ಪ್ರಕೀರ್ತ್ಯಾ
 ಜಗತ್ಪ್ರಹೃಷ್ಯತ್ಯನುರಜ್ಯತೇ ಚ ।
ರಕ್ಷಾಂಸಿ ಭೀತಾನಿ ದಿಶೋ ದ್ರವಂತಿ
 ಸರ್ವೇ ನಮಸ್ಯಂತಿ ಚ ಸಿದ್ಧಸಂಘಾಃ ॥೩೬॥

ಕಸ್ಮಾಚ್ಚ ತೇ ನ ನಮೇರನ್ಮಹಾತ್ಮನ್
 ಗರೀಯಸೇ ಬ್ರಹ್ಮಣೋಽಪ್ಯಾದಿಕರ್ತ್ರೇ ।
ಅನಂತ ದೇವೇಶ ಜಗನ್ನಿವಾಸ
 ತ್ವಮಕ್ಷರಂ ಸದಸತ್ತತ್ಪರಂ ಯತ್ ॥೩೭॥

ತ್ವಮಾದಿದೇವಃ ಪುರುಷಃ ಪುರಾಣ-
 ಸ್ತ್ವಮಸ್ಯ ವಿಶ್ವಸ್ಯ ಪರಂ ನಿಧಾನಮ್ ।
ವೇತ್ತಾಸಿ ವೇದ್ಯಂ ಚ ಪರಂ ಚ ಧಾಮ
 ತ್ವಯಾ ತತಂ ವಿಶ್ವಮನಂತರೂಪ ॥೩೮॥

ವಾಯುರ್ಯಮೋಽಗ್ನಿರ್ವರುಣಃಶಶಾಂಕಃ
 ಪ್ರಜಾಪತಿಸ್ತ್ವಂ ಪ್ರಪಿತಾಮಹಶ್ಚ ।
ನಮೋ ನಮೋಸ್ತೇಽಸ್ತು ಸಹಸ್ರಕೃತ್ವಃ
 ಪುನಶ್ಚ ಭೂಯೋಽಪಿ ನಮೋ ನಮಸ್ತೇ ॥೩೯॥

ಅರ್ಜುನ :

ಹೃಷಿಕೇಶ ! ನಿನ್ನ ಕೀರ್ತನೆ ಮಾಡುತ್ತ ಲೋಕಕ್ಕೆ ಆಗುತ್ತಿರುವ ಹರ್ಷ, ನಿನ್ನಲ್ಲಿ ಹುಟ್ಟುವ ಪ್ರೀತಿ ಉಚಿತವಾಗಿದೆ. ಭಯಭೀತರಾದ ರಾಕ್ಷಸರು ದಿಕ್ಕುದಿಕ್ಕಿಗೆ ಓಡುತ್ತಿದ್ದಾರೆ. ಸಿದ್ಧಗಣಗಳು ನಿನಗೆ ನಮಸ್ಕಾರ ಮಾಡುತ್ತಿವೆ. ॥೩೬॥

ಮಹಾತ್ಮ, ಅವರು ನಿಮಗೆ ನಮಸ್ಕರಿಸದಿರುವುದು ಹೇಗೆ? ನೀನು ಬ್ರಹ್ಮನಿಗಿಂತ ಶ್ರೇಷ್ಠ ಆದಿಕರ್ತ. ಅನಂತ, ದೇವೇಶ, ಜಗನ್ನಿವಾಸ ! ನೀನು ಅಕ್ಷರ: ನೀನು ಸತ್, ಅಸತ್ ಇವಕ್ಕೆ ಅತೀತವಾದುದೂ ನೀನೇ. ॥೩೭॥

ನೀನು ಆದಿದೇವ, ಪುರಾಣಪುರುಷ ನೀನು ಈ ವಿಶ್ವಕ್ಕೆ ಪರಮ ಆಶ್ರಯಸ್ಥಾನ. ನೀನು ತಿಳಿದವನು, ತಿಳಿಯಲು ಯೋಗ್ಯನಾದವನು. ನೀನು ಪರಮಧಾಮ. ಅನಂತರೂಪ ! ನೀನು ಜಗತ್ತಿನಲ್ಲಿ ವ್ಯಾಪ್ತನಾಗುತ್ತಿದ್ದೀಯೆ. ॥೩೮॥

ವಾಯು, ಯಮ, ಅಗ್ನಿ, ವರುಣ, ಚಂದ್ರ, ಪ್ರಜಾಪತಿ, ಪ್ರಪಿತಾಮಹನೂ ನೀನೇ. ಸಾವಿರ ಬಾರಿ ನಿನಗೆ ನಮಸ್ಕಾರ. ಮತ್ತೆ ಮತ್ತೆ ನಿನಗೆ ನಮಸ್ಕಾರ. ॥೩೯॥

ನಮಃ ಪುರಸ್ತಾದಥ ಪೃಷ್ಠತಸ್ತೇ
ನಮೋಽಸ್ತು ತೇ ಸರ್ವತ ಏವ ಸರ್ವ ।
ಅನಂತವೀರ್ಯಾಮಿತವಿಕ್ರಮಸ್ತ್ವಂ
ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ ॥೪೦॥

ಸಖೇತಿ ಮತ್ವಾ ಪ್ರಸಭಂ ಯದುಕ್ತಂ
ಹೇ ಕೃಷ್ಣ ಹೇ ಯಾದವ ಹೇ ಸಖೇತಿ ।
ಅಜಾನತಾ ಮಹಿಮಾನಂ ತವೇದಂ
ಮಯಾ ಪ್ರಮಾದಾತ್ಪ್ರಣಯೇನ ವಾಪಿ ॥೪೧॥

ಯಚ್ಚಾವಹಾಸಾರ್ಥಮಸತ್ಕೃತೋಽಸಿ
ವಿಹಾರಶಯ್ಯಾಸನಭೋಜನೇಷು ।
ಏಕೋಽಥವಾಪ್ಯಚ್ಯುತ ತತ್ಸಮಕ್ಷಂ
ತತ್ ಕ್ಷಾಮಯೇ ತ್ವಾಮಹಮಪ್ರಮೇಯಮ್ ॥೪೨॥

ಪಿತಾಸಿ ಲೋಕಸ್ಯ ಚರಾಚರಸ್ಯ
ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್ ।
ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ
ಲೋಕತ್ರಯೇಽಪ್ಯಪ್ರತಿಮಪ್ರಭಾವ ॥೪೩॥

ಸರ್ವನೆ, ಮುಂದೆ ಹಿಂದೆ ಎಲ್ಲ ಕಡೆಯಿಂದಲೂ ನಿನಗೆ ನಮಸ್ಕಾರ. ನಿನ್ನ ವೀರ್ಯ ಅನಂತ, ಶಕ್ತಿ ಅಪಾರ. ಎಲ್ಲವನ್ನೂ ಧಾರಣೆಮಾಡಿ ನೀನೇ ಸರ್ವನಾಗಿದ್ದೀಯೆ. ॥೪೦॥

ಈ ನಿನ್ನ ಮಹಿಮೆಯನ್ನರಿಯದೆ, ಮಿತ್ರನೆಂದು ತಿಳಿದು, ಮರವಿನಿಂದಲೋ ಪ್ರೇಮವಶನಾಗಿಯೋ ನಾನು ನಿನ್ನನ್ನು 'ಕೃಷ್ಣ ಯಾದವ, ಸಖಿ' ಎಂದು ಕರೆದು ಅವಿವೇಕ ವರ್ತನೆನಾದರೂ ಮಾಡಿದ್ದರೆ, ವಿನೋದವಾಗಿ ಆಟವಾಡುವಾಗಲೋ, ಊಟಮಾಡುವಾಗಲೋ, ಮಲಗಿದಾಗಲೋ, ಅಂತೂ ನಿನ್ನೊಟ್ಟಿಗಿದ್ದಾಗ ನನ್ನಿಂದ ಏನಾದರೂ ನಿನಗೆ ಅಪಮಾನವಾಗಿದ್ದರೆ ಅದನ್ನು ಕ್ಷಮಿಸಬೇಕೆಂದು ಪ್ರಾರ್ಥಿಸುತ್ತೇನೆ. ॥೪೧-೪೨॥

ಸ್ಥಾವರ ಜಂಗಮ ಜಗತ್ತುಗಳಿಗೆ ನೀನು ತಂದೆ. ನೀನು ಅವಕ್ಕೆ ಪೂಜ್ಯ, ಶ್ರೇಷ್ಠ, ಗುರು. ನಿನಗೆ ಸಮಾನರಾರೂ ಇಲ್ಲ. ನಿನಗಿಂತ ಹೆಚ್ಚಿನವರು ಹೇಗೆ ಸಾಧ್ಯ? ಮೂರು ಲೋಕಗಳಲ್ಲಿಯೂ ನಿನ್ನ ಸಾಮರ್ಥ್ಯಕ್ಕೆ ಸಾಟಿಯಿಲ್ಲ. ॥೪೩॥

ತಸ್ಮಾತ್ಪ್ರಣಮ್ಯ ಪ್ರಣಿಧಾಯ ಕಾಯಂ
ಪ್ರಸಾದಯೇ ತ್ವಾಮಹಮೀಶಮೀಡ್ಯಮ್ ।
ಪಿತೇವ ಪುತ್ರಸ್ಯ ಸಖೇವ ಸಖ್ಯುಃ
ಪ್ರಿಯಃ ಪ್ರಿಯಾಯಾರ್ಹಸಿ ದೇವ ಸೋಢುಮ್ ॥೪೪॥

ಅದೃಷ್ಟಪೂರ್ವಂ ಹೃಷಿತೋಽಸ್ಮಿ ದೃಷ್ಟ್ವಾ
ಭಯೇನ ಚ ಪ್ರವ್ಯಥಿತಂ ಮನೋ ಮೇ ।
ತದೇವ ಮೇ ದರ್ಶಯ ದೇವ ರೂಪಂ
ಪ್ರಸೀದ ದೇವೇಶ ಜಗನ್ನಿವಾಸ ॥೪೫॥

ಕಿರೀಟಿನಂ ಗದಿನಂ ಚಕ್ರಹಸ್ತ
ಮಿಚ್ಛಾಮಿ ತ್ವಾಂ ದ್ರಷ್ಟುಮಹಂ ತಥೈವ ।
ತೇನೈವ ರೂಪೇಣ ಚತುರ್ಭುಜೇನ
ಸಹಸ್ರಬಾಹೋ ಭವ ವಿಶ್ವಮೂರ್ತೇ ॥೪೬॥

ಶ್ರೀ ಭಗವಾನುವಾಚ

ಮಯಾ ಪ್ರಸನ್ನೇನ ತವಾರ್ಜುನೇದಂ
ರೂಪಂ ಪರಂ ದರ್ಶಿತಮಾತ್ಮಯೋಗಾತ್ ।
ತೇಜೋಮಯಂ ವಿಶ್ವಮನಂತಮಾದ್ಯಂ
ಯನ್ಮೇ ತ್ವದನ್ಯೇನ ನ ದೃಷ್ಟಪೂರ್ವಮ್ ॥೪೭॥

ಆದುದರಿಂದ ಸಾಷ್ಟಾಂಗ ನಮಸ್ಕಾರಮಾಡಿ, ಪೂಜ್ಯನಾದ ಈಶ್ವರನನ್ನು, ನಿನ್ನನ್ನು ಪ್ರಸನ್ನನಾಗೆಂದು ಬೇಡುತ್ತೇನೆ. ತಂದೆ ಮಗನನ್ನೂ, ಗೆಳೆಯ ಗೆಳೆಯನನ್ನೂ ಸೈರಿಸುವಂತೆ, ನೀನು ನನಗೆ ಪ್ರಿಯನಾದುದರಿಂದ ನನ್ನ ಕಲ್ಯಾಣಕ್ಕಾಗಿ ನನ್ನಲ್ಲಿ ಸಹನೆ ತೋರು. ನಿನಗೆ ಅದು ಯೋಗ್ಯ. ॥೪೪॥

ನಿನ್ನ ಯಾವ ರೂಪವನ್ನು ಮೊದಲು ನೋಡಿರಲಿಲ್ಲವೋ ಅದನ್ನು ನೋಡಿ ನನ್ನ ರೋಮಗಳು ಎದ್ದುನಿಂತಿವೆ. ಭಯದಿಂದ ನನ್ನ ಮನಸ್ಸು ವ್ಯಾಕುಲವಾಗಿದೆ. ಆದುದರಿಂದ, ದೇವ! ನಿನ್ನ ಮೊದಲಿನ ರೂಪವನ್ನು ತೋರಿಸು. ದೇವೇಶ ! ಜಗನ್ನಿವಾಸ ! ಪ್ರಸನ್ನನಾಗು. ॥೪೫॥

ಮೊದಲಿನಂತೆ ಮುಕುಟ ಗದಾ ಚಕ್ರಧಾರಿಯಾದ ನಿನ್ನನ್ನು ನೋಡಲು ಇಚ್ಛಿಸುತ್ತೇನೆ, ಸಹಸ್ರಬಾಹು, ವಿಶ್ವಮೂರ್ತಿ, ನಿನ್ನ ಚತುರ್ಭುಜ ರೂಪವನ್ನು ಧಾರಣೆ ಮಾಡು. ॥೪೬॥

ಶ್ರೀ ಭಗವಂತ :

ಅರ್ಜುನ, ನಿನ್ನಲ್ಲಿ ಪ್ರಸನ್ನನಾಗಿ ನನ್ನ ಶಕ್ತಿಯ ಮೂಲಕ ತೇಜೋಮಯವೂ, ವಿಶ್ವವ್ಯಾಪಿಯೂ, ಅನಂತವೂ, ಪರಮವೂ, ಆದಿಯೂ ಆದ ರೂಪವನ್ನು ತೋರಿದೆ. ನಿನ್ನನ್ನು ಬಿಟ್ಟು ಮತ್ತಾರೂ ಇದನ್ನು ಮೊದಲು ನೋಡಿಲ್ಲ. ॥೪೭॥

ನ ವೇದಯಜ್ಞಾಧ್ಯಯನೈರ್ನ ದಾನೈ
   ರ್ನ ಚ ಕ್ರಿಯಾಭಿರ್ನ ತಪೋಭಿರುಗ್ರೈಃ ।
ಏವಂ ರೂಪಃ ಶಕ್ಯ ಅಹಂ ನೃಲೋಕೇ
   ದ್ರಷ್ಟುಂ ತ್ವದನ್ಯೇನ ಕುರುಪ್ರವೀರ ॥೪೮॥

ಮಾ ತೇ ವ್ಯಥಾ ಮಾ ಚ ವಿಮೂಢಭಾವೋ
   ದೃಷ್ಟ್ವಾ ರೂಪಂ ಘೋರಮೀದೃಙ್ಮಮೇದಮ್ ।
ವ್ಯಪೇತಭೀಃ ಪ್ರೀತಮನಾಃ ಪುನಸ್ತ್ವಂ
   ತದೇವ ಮೇ ರೂಪಮಿದಂ ಪ್ರಪಶ್ಯ ॥೪೯॥

ಸಂಜಯ ಉವಾಚ

ಇತ್ಯರ್ಜುನಂ ವಾಸುದೇವಸ್ತಥೋಕ್ತ್ವಾ
   ಸ್ವಕಂ ರೂಪಂ ದರ್ಶಯಾಮಾಸ ಭೂಯಃ ।
ಆಶ್ವಾಸಯಾಮಾಸ ಚ ಭೀತಮೇನಂ
   ಭೂತ್ವಾ ಪುನಸ್ಸೌಮ್ಯವಪುರ್ಮಹಾತ್ಮಾ ॥೫೦॥

ಅರ್ಜುನ ಉವಾಚ

ದೃಷ್ಟ್ವೇದಂ ಮಾನುಷಂ ರೂಪಂ ತವ ಸೌಮ್ಯಂ ಜನಾರ್ದನ ।
ಇದಾನೀಮಸ್ಮಿ ಸಂವೃತ್ತಃ ಸಚೇತಾಃ ಪ್ರಕೃತಿಂ ಗತಃ ॥೫೧॥

ಕುರುಪ್ರವೀರ ! ವೇದಾಭ್ಯಾಸದಿಂದ, ಯಜ್ಞದಿಂದ, ಬೇರೆ ಶಾಸ್ತ್ರಗಳ ಅಭ್ಯಾಸದಿಂದ, ದಾನದಿಂದ, ಕ್ರಿಯೆಗಳಿಂದ ಅಥವಾ ಉಗ್ರ ತಪಸ್ಸಿನಿಂದ ನಿನ್ನನ್ನು ಬಿಟ್ಟು–ಯಾರೂ ಈ ನನ್ನ ರೂಪವನ್ನು ನೋಡಲು ಸಮರ್ಥರಾಗಿಲ್ಲ. ॥೪೮॥

ಈ ನನ್ನ ಭಯಂಕರ ರೂಪವನ್ನು ಕಂಡು ಹೆದರಬೇಡ. ದಿಙ್ಮೂಢನಾಗಬೇಡ. ಹೆದರಿಕೆ ಬಿಟ್ಟು ಶಾಂತಚಿತ್ತನಾಗಿ ನನ್ನ ಈ ಪರಿಚಿತ ರೂಪವನ್ನು ಮತ್ತೆ ನೋಡು. ॥೪೯॥

ಸಂಜಯ :

ಈ ರೀತಿ ಹೇಳಿ ವಾಸುದೇವ ಮತ್ತೆ ಶಾಂತರೂಪವನ್ನು ಧಾರಣೆಮಾಡಿ ಭಯಭೀತನಾದ ಅರ್ಜುನನ್ನು ಸಮಾಧಾನಗೊಳಿಸಿದ. ॥೫೦॥

ಅರ್ಜುನ :

ಜನಾರ್ದನ, ನಿನ್ನ ಈ ಸೌಮ್ಯ ಮನುಷ್ಯ ರೂಪವನ್ನು ನೋಡಿ ಈಗ ನಾನು ಶಾಂತನಾದೆ. ನಿಜಭಾವಕ್ಕೆ ಬಂದೆ. ॥೫೧॥

ೀ ಭಗವಾನುವಾಚ

ುದುರ್ದರ್ಶಮಿದಂ ರೂಪಂ ದೃಷ್ಟವಾನಸಿ ಯನ್ಮಮ ।
ೇವಾ ಅಪ್ಯಸ್ಯ ರೂಪಸ್ಯ ನಿತ್ಯಂ ದರ್ಶನಕಾಂಕ್ಷಿಣಃ ॥೫೨॥

ಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ ।
ಕ್ಯ ಏವಂ ವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ ॥೫೩॥

ಕ್ತ್ಯಾತ್ವನನ್ಯಯಾ ಶಕ್ಯ ಅಹಮೇವಂ ವಿಧೋಽರ್ಜುನ ।
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥೫೪॥

ುತ್ಕರ್ಮಕೃನ್ಮತ್ಪರಮೋ ಮದ್ಭಕ್ತಸ್ಸಂಗವರ್ಜಿತ ः ।
ಿರ್ವೈರಸ್ಸರ್ವಭೂತೇಷು ಯಸ್ಸ ಮಾಮೇತಿ ಪಾಂಡವ ॥೫೫॥

ಹರಿಃ ಓಂ ತತ್ಸತ್

ಇತಿ ಶ್ರಿಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀ ಕೃಷ್ಣಾರ್ಜುನಸಂವಾದೇ
ವಿಶ್ವರೂಪದರ್ಶನಯೋಗೋ ನಾಮ ಏಕಾದಶೋಽಧ್ಯಾಯಃ ॥

ೀ ಭಗವಂತ :

ನೀನು ನನ್ನ ಯಾವ ರೂಪವನ್ನು ನೋಡಿದೆಯೋ ಅದರ ದರ್ಶನ ಬಹಳ ುರ್ಲಭ. ದೇವತೆಗಳು ಕೂಡ ಅದನ್ನು ನೋಡಬೇಕೆಂದು ಚಡಪಡಿಸುತ್ತಿರುತ್ತಾರೆ. ॥೫೨॥

ನೀನು ಪಡೆದ ನನ್ನ ದರ್ಶನ ವೇದ, ತಪಸ್ಸು, ದಾನ, ಯಜ್ಞಗಳಿಂದ ಲಭಿಸ ಾರದು. ಅಂದರೆ, ಅರ್ಜುನ ! ನನ್ನ ಬಗ್ಗೆ ಈ ಜ್ಞಾನ, ನನ್ನ ಈ ದರ್ಶನ, ನನ್ನಲ್ಲಿ ನಿಜವಾದ ್ರವೇಶ, ಕೇವಲ ಅನನ್ಯಭಕ್ತಿಯಿಂದಲೇ ಸಾಧ್ಯ. ॥೫೩–೫೪॥

ಪಾಂಡವ ! ಯಾರು ಸರ್ವ ಕರ್ಮಗಳನ್ನು ನನಗೆ ಸಮರ್ಪಿಸುತ್ತಾರೋ, ನನ್ನಲ್ಲಿ ಪರಾಯಣರಾಗಿರುತ್ತಾರೋ, ನನ್ನ ಭಕ್ತರಾಗುತ್ತಾರೋ, ಆಸಕ್ತಿಯನ್ನು ಬಿಡುತ್ತಾರೋ, ಸಕಲ ೂತಗಳಲ್ಲಿ ದ್ವೇಷಗಳನ್ನು ತ್ಯಜಿಸುತ್ತಾರೋ ಅವರು ನನ್ನನ್ನು ಹೊಂದುತ್ತಾರೆ. ॥೫೫॥

ಓಂ ತತ್ಸತ್

ಈ ಬಗೆಯಾಗಿ ಶ್ರೀ ಮದ್ಭಗವದ್ಗೀತಾರೂಪ ಉಪನಿಷತ್ ಅಥವಾ
ಬ್ರಹ್ಮವಿದ್ಯಾಂತರ್ಗತ ಯೋಗಶಾಸ್ತ್ರದ ಶ್ರೀ ಕೃಷ್ಣಾರ್ಜುನ ಸಂವಾದದಲ್ಲಿ
ವಿಶ್ವರೂಪದರ್ಶನಯೋಗವೆಂಬ ಹನ್ನೊಂದನೆಯ ಅಧ್ಯಾಯ.

***

ಅಧ್ಯಾಯ ೧೨

ಭಕ್ತಿಯೋಗ

[ಪುರುಷೋತ್ತಮನ ದರ್ಶನ ಅನನ್ಯಭಕ್ತಿಯಿಂದಲೇ ಲಭಿಸಬಲ್ಲದೆಂದು ಭಗವಂತ ಹೇಳಿದ ತರುವಾಯ ಭಕ್ತಿಯ ಸ್ವರೂಪವೇ, ಮುಂದೆ ಬರಬೇಕು.
ಈ ಹನ್ನೆರಡನೆಯ ಅಧ್ಯಾಯವನ್ನು ಎಲ್ಲರೂ ಬಾಯಿಪಾಠ ಮಾಡಬೇಕು. ಇದು ಗೀತೆಯ ಅಧ್ಯಾಯಗಳಲ್ಲಿ ಎಲ್ಲಕ್ಕೂ ಚಿಕ್ಕದು. ಇದರಲ್ಲಿ ಹೇಳಿರುವ ಭಕ್ತನ ಲಕ್ಷಣಗಳು ನಿತ್ಯವೂ ಮನನ ಮಾಡಲು ಯೋಗ್ಯವಾಗಿದೆ.]

ಅಥ ದ್ವಾದಶೋಽಧ್ಯಾಯಃ

ಅರ್ಜುನ ಉವಾಚ

ಏವಂ ಸತತಯುಕ್ತಾ ಯೇ ಭಕ್ತಾಸ್ತ್ವಾಂ ಪರ್ಯುಪಾಸತೇ ।
ಯೇಚಾಪ್ಯಕ್ಷರಮವ್ಯಕ್ತಂ ತೇಷಾಂ ಕೇ ಯೋಗವಿತ್ತಮಾಃ ॥೧॥

ಶ್ರೀ ಭಗವಾನುವಾಚ

ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ ।
ಶ್ರದ್ಧಯಾ ಪರಯೋಪೇತಾಸ್ತೇ ಮೇ ಯುಕ್ತತಮಾ ಮತಾಃ ॥೨॥

ಯೇ ತ್ವಕ್ಷರಮನಿರ್ದೇಶ್ಯಮವ್ಯಕ್ತಂ ಪರ್ಯುಪಾಸತೇ ।
ಸರ್ವತ್ರಗಮಚಿಂತ್ಯಂ ಚ ಕೂಟಸ್ಥಮಚಲಂ ಧ್ರುವಮ್ ॥೩॥

ಸಂನಿಯಮ್ಯೇಂದ್ರಿಯಗ್ರಾಮಂ ಸರ್ವತ್ರ ಸಮಬುದ್ಧಯಃ ।
ತೇ ಪ್ರಾಪ್ನುವಂತಿ ಮಾಮೇವ ಸರ್ವಭೂತಹಿತೇ ರತಾಃ ॥೪॥

ಅರ್ಜುನ :

ಸತತವೂ ನಿನ್ನ ಧ್ಯಾನ ಮಾಡುತ್ತಾ ನಿನ್ನ ಉಪಾಸನೆ ಮಾಡುವವರು, ನಿನ್ನ ಅವಿನಾಶಿ-ಅವ್ಯಕ್ತರೂಪದ ಧ್ಯಾನಮಾಡುವ ಭಕ್ತರು–ಇವರಲ್ಲಿ ಯಾರು ಶ್ರೇಷ್ಠ ಯೋಗಿಗಳು? ॥೧॥

ಶ್ರೀ ಭಗವಂತ :

ಯಾರು ನನ್ನಲ್ಲಿ ಮನಸ್ಸನ್ನು ನೆಲೆಗೊಳಿಸಿ, ಶ್ರದ್ಧಾಪೂರ್ವಕ ನನ್ನ ಉಪಾಸನೆ ಮಾಡುತ್ತಾರೋ ಅವರೇ ಶ್ರೇಷ್ಠ ಯೋಗಿಗಳೆಂದು ನಾನು ತಿಳಿಯುತ್ತೇನೆ. ॥೨॥

ಸಕಲ ಇಂದ್ರಿಯಗಳನ್ನೂ ವಶದಲ್ಲಿಟ್ಟುಕೊಂಡು ಸರ್ವತ್ರ ಸಮಬುದ್ಧಿಯುಳ್ಳವರಾಗಿ ದೃಢ, ಅಚಲ, ಧ್ರುವ, ಅಚಿಂತ್ಯ, ಸರ್ವವ್ಯಾಪಿ, ಅವ್ಯಕ್ತ, ಅವರ್ಣನೀಯ, ಅವಿನಾಶಿ ಆದ ಸ್ವರೂಪದ ಉಪಾಸನೆ ಮಾಡುವವರು ಸಕಲ ಪ್ರಾಣಿಗಳ ಹಿತದಲ್ಲಿ ಮಗ್ನರಾಗಿ ನನ್ನನ್ನೇ ಹೊಂದುತ್ತಾರೆ. ॥೩-೪॥

ಕ್ಲೇಶೋऽಧಿಕತರಸ್ತೇಷಾಮವ್ಯಕ್ತಾಸಕ್ತ ಚೇತಸಾಮ್ ।
ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೇ ॥೫॥

ಯೇ ತು ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಾಃ ।
ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ ॥೬॥

ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ।
ಭವಾಮಿ ನ ಚಿರಾತ್ಪಾರ್ಥ ಮಯ್ಯಾವೇಶಿತಚೇತಸಾಮ್ ॥೭॥

ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ ।
ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥೮॥

ಯಾರ ಚಿತ್ತ ಅವ್ಯಕ್ತದಲ್ಲಿ ಮಗ್ನವಾಗಿದೆಯೋ ಅವರಿಗೆ ಕಷ್ಟ ಹೆಚ್ಚು. ದೇಹಧಾರಿಗಳು ಅವ್ಯಕ್ತ ಗತಿಯನ್ನು ಕಷ್ಟದಿಂದಲೇ ಹೊಂದಬಲ್ಲರು. ॥೫॥

ಟಿಪ್ಪಣಿ – ದೇಹಧಾರಿಯಾದ ಮನುಷ್ಯ ಅಮೂರ್ತಸ್ವರೂಪದ ಕಲ್ಪನೆ ಮಾತ್ರ ಮಾಡಬಲ್ಲ. ಆದರೆ ಅವನಲ್ಲಿ ಅಮೂರ್ತಸ್ವರೂಪಕ್ಕಾಗಿ ಒಂದೂ ನಿಶ್ಚಯಾತ್ಮಕ ಶಬ್ದವಿಲ್ಲ. ಆದುದರಿಂದ ನಿಷೇಧಾತ್ಮಕ 'ನೇತಿ' ಶಬ್ದದಿಂದ ತೃಪ್ತನಾಗಿರಬೇಕು. ಈ ದೃಷ್ಟಿಯಿಂದ ಮೂರ್ತಿಪೂಜಕರೇ, ಪುಸ್ತಕವನ್ನು ಪೂಜಿಸುವುದು, ಮಂದಿರಗಳಿಗೆ ಹೋಗಿ ಪೂಜೆ ಮಾಡುವುದು, ಒಂದೇ ದಿಕ್ಕಿಗೆ ಮುಖಮಾಡಿ ಪೂಜೆಮಾಡುವುದು–ಇವೆಲ್ಲವೂ ಸಾಕಾರ ಪೂಜೆಯ ಲಕ್ಷಣಗಳು. ನಿರಾಕಾರದ ಅಚಿಂತ್ಯ ಸ್ವರೂಪ ಈ ಸಾಕಾರಕ್ಕೆ ಅತೀತ. ಇದನ್ನು ಅರಿಯುವುದೇ ಮುಕ್ತಿ. ಭಕ್ತ ಭಗವಂತನಲ್ಲಿ ಬೆರೆತು, ಕೊನೆಯಲ್ಲಿ ಅದ್ವಿತೀಯ, ಅರೂಪಿ ಭಗವಂತ ಒಬ್ಬನೇ ಉಳಿದರೆ ಅದು ಭಕ್ತಿಯ ಪರಾಕಾಷ್ಠೆ. ಆದರೆ ಸ್ಥಿತಿಯನ್ನು ಸಾಕಾರದ ಮೂಲಕ ಸುಲಭವಾಗಿ ಹೊಂದಬಹುದು. ಆದುದರಿಂದ ನೇರವಾಗಿ ನಿರಾಕಾರವನ್ನು ಸೇರಲು ಯತ್ನಿಸುವ ದಾರಿ ಕಷ್ಟಸಾಧ್ಯವೆಂದು ತೋರಿಸಲಾಗಿದೆ.

ಆದರೆ ಪಾರ್ಥ, ಯಾರು ನನ್ನಲ್ಲಿ ಪರಾಯಣರಾಗಿ ಸಕಲ ಕರ್ಮಗಳನ್ನೂ ನನಗೆ ಅರ್ಪಣೆಮಾಡಿ ಒಂದೇ ನಿಷ್ಠೆಯಿಂದ ನನ್ನನ್ನೇ ಧ್ಯಾನಿಸುತ್ತಾ ನನ್ನ ಉಪಾಸನೆ ಮಾಡುತ್ತಾರೋ, ಯಾರ ಚಿತ್ತ ನನ್ನಲ್ಲಿಯೇ ನೆಲೆಗೊಂಡಿದೆಯೋ ಅವರನ್ನು ಮೃತ್ಯುರೂಪದ ಸಂಸಾರ ಸಾಗರದಿಂದ ಒಡನೆಯೆ ಪಾರುಮಾಡುತ್ತೇನೆ. ॥೬–೭॥

ನಿನ್ನ ಮನಸ್ಸನ್ನು ನನ್ನಲ್ಲಿ ನೆಲೆಗೊಳಿಸು, ನಿನ್ನ ಬುದ್ಧಿಯನ್ನು ನನ್ನಲ್ಲಿಡು; ಹಾಗೆ ಮಾಡಿದರೆ ಇದರ (ಜನ್ಮದ) ನಂತರ ನಿಃಸಂಶಯವಾಗಿ ನನ್ನನ್ನೇ ಸೇರುತ್ತೀ. ॥೮॥

ಅಥ ಚಿತ್ತಂ ಸಮಾಧಾತುಂ ನ ಶಕ್ನೋಷಿ ಮಯಿ ಸ್ಥಿರಮ್ ।
ಅಭ್ಯಾಸಯೋಗೇನ ತತೋ ಮಾಮಿಚ್ಛಾಪ್ತುಂ ಧನಂಜಯ ॥೯॥

ಅಭ್ಯಾಸೇऽಪ್ಯಸಮರ್ಥೋಽಸಿ ಮತ್ಕರ್ಮಪರಮೋಭವ ।
ಮದರ್ಥಮಪಿ ಕರ್ಮಾಣಿ ಕುರ್ವನ್ ಸಿದ್ಧಿಮವಾಪ್ಸ್ಯಸಿ ॥೧೦॥

ಅಥೈತದಪ್ಯಶಕ್ತೋऽಸಿ ಕರ್ತುಂ ಮದ್ಯೋಗಮಾಶ್ರಿತಃ ।
ಸರ್ವಕರ್ಮಫಲತ್ಯಾಗಂ ತತಃ ಕುರು ಯತಾತ್ಮವಾನ್ ॥೧೧॥

ಶ್ರೇಯೋ ಹಿ ಜ್ಞಾನಮಭ್ಯಾಸಾತ್ಜ್ಞಾನಾದ್ಧ್ಯಾನಂ ವಿಶಿಷ್ಯತೇ ।
ಧ್ಯಾನಾತ್ಕರ್ಮಫಲತ್ಯಾಗಸ್ತ್ಯಾಗಾಚ್ಛಾಂತಿರನಂತರಮ್ ॥೧೨॥

ನನ್ನಲ್ಲಿ ಮನಸ್ಸನ್ನು ಸ್ಥಿರಗೊಳಿಸಲು ಅಸಮರ್ಥನಾದರೆ, ಅಭ್ಯಾಸ ಯೋಗದ ಮೂಲಕ ನನ್ನನ್ನು ಸೇರುವ ಇಚ್ಛೆ ತಳೆ. ಅಂಥ ಅಭ್ಯಾಸಕ್ಕೂ ನೀನು ಅಸಮರ್ಥನಾದರೆ ಸಕಲ ಕರ್ಮಗಳನ್ನೂ ನನಗೆ ಅರ್ಪಣೆ ಮಾಡು. ಹೀಗೆ ನನ್ನ ನಿಮಿತ್ತವಾಗಿ ಕರ್ಮಮಾಡಿದರೆ ನೀನು ಮೋಕ್ಷ ಪಡೆಯುತ್ತೀಯೆ. ॥೯–೧೦॥

ನನ್ನ ನಿಮಿತ್ತ ಕರ್ಮಮಾಡುವಷ್ಟು ಶಕ್ತಿಯೂ ಇಲ್ಲದಿದ್ದರೆ ಯತ್ನಪೂರ್ವಕ ಸಕಲ ಕರ್ಮಗಳ ಫಲವನ್ನು ತ್ಯಜಿಸು. ॥೧೧॥

ಅಭ್ಯಾಸಮಾರ್ಗಕ್ಕಿಂತ ಜ್ಞಾನಮಾರ್ಗ ಶ್ರೇಯಸ್ಕರ. ಜ್ಞಾನಮಾರ್ಗಕ್ಕಿಂತ ಧ್ಯಾನಮಾರ್ಗ ವಿಶೇಷ. ಧ್ಯಾನಮಾರ್ಗಕ್ಕಿಂತ ಕರ್ಮಫಲತ್ಯಾಗ ಮಾರ್ಗ ಶ್ರೇಷ್ಠ ಏಕೆಂದರೆ ಈ ತ್ಯಾಗದ ಪರಿಣಾಮವಾಗಿ ಒಡನೆಯೆ ಶಾಂತಿ ಸಿಗುತ್ತದೆ. ॥೧೨॥

ಟಿಪ್ಪಣಿ – ಅಭ್ಯಾಸವೆಂದರೆ ಚಿತ್ತವೃತ್ತಿ ನಿರೋಧದ ಸಾಧನೆ: ಜ್ಞಾನ ಎಂದರೆ ಶ್ರವಣಮನನಾದಿ: ಧ್ಯಾನವೆಂದರೆ ಉಪಾಸನೆ : ಇವೆಲ್ಲದರ ಪರಿಣಾಮವಾಗಿ ಫಲತ್ಯಾಗ ಲಭಿಸದಿದ್ದರೆ ಅದು ಅಭ್ಯಾಸವೂ ಅಲ್ಲ, ಜ್ಞಾನವೂ ಅಲ್ಲ, ಧ್ಯಾನವೂ ಅಲ್ಲ.

ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ ।
ರ್ಮಮೋ ನಿರಹಂಕಾರಸ್ಸಮದುಃಖಸುಖಃ ಕ್ಷಮೀ ॥೧೩॥

ಸಂತುಷ್ಟಸ್ಸತತಂ ಯೋಗೀ ಯತಾತ್ಮಾ ದೃಢನಿಶ್ಚಯಃ ।
ಮಯ್ಯರ್ಪಿತ ಮನೋಬುದ್ಧಿರ್ಯೋ ಮದ್ಭಕ್ತಸ್ಸ ಮೇ ಪ್ರಿಯಃ ॥೧೪॥

ಯಸ್ಮಾನ್ನೋದ್ವಿಜತೇ ಲೋಕೋ ಲೋಕಾನ್ನೋದ್ವಿಜತೇ ಚ ಯಃ ।
ಹರ್ಷಾಮರ್ಷಭಯೋದ್ವೇಗೈರ್ಮುಕ್ತೋ ಯಸ್ಸ ಚ ಮೇ ಪ್ರಿಯಃ ॥೧೫॥

ಅನಪೇಕ್ಷಶ್ಶುಚಿರ್ದಕ್ಷ ಉದಾಸೀನೋ ಗತವ್ಯಥಃ ।
ಸರ್ವಾರಂಭಪರಿತ್ಯಾಗೀ ಭಕ್ತಿಮಾನ್ ಯಸ್ಸ ಮೇ ಪ್ರಿಯಃ ॥೧೬॥

ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ ।
ಶುಭಾಶುಭಪರಿತ್ಯಾಗೀ ಭಕ್ತಿಮಾನ್ ಯಸ್ಸಮೇ ಪ್ರಿಯಃ ॥೧೭॥

ಸಮಶ್ಶತ್ರೌ ಚ ಮಿತ್ರೇ ಚ ತಥಾ ಮಾನಾಪಮಾನಯೋಃ ।
ಶೀತೋಷ್ಣಸುಖದುಃಖೇಷು ಸಮಸ್ಸಂಗವಿವರ್ಜಿತಃ ॥೧೮॥

ತುಲ್ಯನಿಂದಾಸ್ತುತಿರ್ಮೌನೀ ಸಂತುಷ್ಟೋ ಯೇನಕೇನಚಿತ್ ।
ಅನಿಕೇತಃ ಸ್ಥಿರಮತಿರ್ಭಕ್ತಿಮಾನ್ಮೇ ಪ್ರಿಯೋ ನರಃ ॥೧೯॥

ಪ್ರಾಣಿಮಾತ್ರಗಳಲ್ಲಿ ದ್ವೇಷರಹಿತ, ಸಕಲರಿಗೂ ಮಿತ್ರ, ದಯಾವಂತ, ಮಮತಾರಹಿತ, ಅಹಂಕಾರರಹಿತ, ಸುಖದುಃಖಗಳಲ್ಲಿ ಸಮಾನ, ಕ್ಷಮಾವಂತ, ಸದಾ ಸಂತೋಷಿ, ಯೋಗಯುಕ್ತ ಇಂದ್ರಿಯನಿಗ್ರಹಿ, ದೃಢನಿಶ್ಚಯಿ ಆಗಿ, ನನ್ನ ಬುದ್ಧಿಮನಸ್ಸುಗಳನ್ನು ನನಗೆ ಅರ್ಪಣೆಮಾಡಿದ ಭಕ್ತ ನನಗೆ ಪ್ರಿಯ. ಯಾರಿಂದ ಜನರು ಉದ್ವೇಗ ಹೊಂದರೋ, ಯಾರು ಜನರಿಂದ ಉದ್ವಿಗ್ನನಾಗನೋ, ಯಾರು ಹರ್ಷ, ಕ್ರೋಧ, ಈರ್ಷ್ಯೆ, ಭಯ, ಉದ್ವೇಗಗಳಿಂದ ಮುಕ್ತನೋ ಅವನು ನನಗೆ ಪ್ರಿಯ. ॥೧೩–೧೫॥

ಯಾರು ಇಚ್ಛಾರಹಿತ, ಪವಿತ್ರ, ದಕ್ಷ (ಸಾವಧಾನ), ತಟಸ್ಥ ಚಿಂತಾರಹಿತನೋ, ಸಂಕಲ್ಪ ಮಾತ್ರವನ್ನು ತ್ಯಾಗಮಾಡಿದಾನೋ ಅವನೇ ನನ್ನ ಭಕ್ತ ಅವನೇ ನನಗೆ ಪ್ರಿಯ. ॥೧೬॥

ಯಾರು ಹರ್ಷಗೊಳ್ಳನೋ, ದ್ವೇಷ ಮಾಡನೋ, ಚಿಂತೆ ಮಾಡನೋ, ಆಸೆಪಡನೋ, ಶುಭಾಶುಭಗಳನ್ನು ತ್ಯಾಗಮಾಡಿದ್ದಾನೋ ಆ ಭಕ್ತಿಪರಾಯಣ ನನಗೆ ಪ್ರಿಯ. ॥೧೭॥

ಶತ್ರು–ಮಿತ್ರರಲ್ಲಿ ಮಾನಾಪಮಾನ, ಶೀತೋಷ್ಣ ಸುಖದುಃಖಗಳಲ್ಲಿ ಸಮತಾವಂತ: ಆಸಕ್ತಿ ಬಿಟ್ಟು ನಿಂದಾಸ್ತುತಿಗಳಲ್ಲಿ ಏಕರೀತಿ ವರ್ತಿಸುವ, ಮೌನಧಾರಿ: ಸಿಕ್ಕಿದ್ದರಲ್ಲಿಯೆ ಸಂತುಷ್ಟ ನಾದ, ತನ್ನದೆಂಬ ನೆಲೆ ಇಲ್ಲದ, ಸ್ಥಿರ ಚಿತ್ತನಾದ ಮುನಿ– ಆ ಭಕ್ತ ನನಗೆ ಪ್ರಿಯ.
॥೧೮–೧೯॥

ಯೇ ತು ಧರ್ಮ್ಯಾಮೃತಮಿದಂ ಯಥೋಕ್ತಂ ಪರ್ಯುಪಾಸತೇ ।
ಶ್ರದ್ಧಧಾನಾ ಮತ್ಪರಮಾ ಭಕ್ತಾಸ್ತೇಽತೀವ ಮೇ ಪ್ರಿಯಾಃ ॥೨೦॥

ಹರಿಃ ಓಂ ತತ್ಸತ್

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀ ಕೃಷ್ಣಾರ್ಜುನ ಸಂವಾದೇ
ಭಕ್ತಿಯೋಗೋ ನಾಮ ದ್ವಾದಶೋಽಧ್ಯಾಯಃ ॥

ಈ ಪವಿತ್ರ ಅಮೃತರೂಪದ ಜ್ಞಾನವನ್ನು ನನ್ನಲ್ಲಿ ಪರಾಯಣರಾಗಿ ಶ್ರದ್ಧೆಯಿಂದ ಸೇವನೆ ಮಾಡುವವರು ನನ್ನ ಅತ್ಯಂತ ಪ್ರಿಯಭಕ್ತರು. ॥೨೦॥

ಓಂ ತತ್ಸತ್

ಈ ಬಗೆಯಾಗಿ ಶ್ರೀ ಮದ್ಭಗವದ್ಗೀತಾರೂಪ ಉಪನಿಷತ್ ಅಥವಾ
ಬ್ರಹ್ಮವಿದ್ಯಾಂತರ್ಗತ ಯೋಗಶಾಸ್ತ್ರದ ಶ್ರೀ ಕೃಷ್ಣಾರ್ಜುನ ಸಂವಾದದಲ್ಲಿ
ಭಕ್ತಿಯೋಗವೆಂಬ ಹನ್ನೆರಡನೇ ಅಧ್ಯಾಯಃ ॥

***

ಅಧ್ಯಾಯ ೧೩

ಕ್ಷೇತ್ರ–ಕ್ಷೇತ್ರಜ್ಞಯೋಗ

[ಈ ಅಧ್ಯಾಯದಲ್ಲಿ ಶರೀರ, ಶರೀರಿಯ ಭೇದವನ್ನು ತೋರಿಸಲಾಗಿದೆ.]

ಅಥ ತ್ರಯೋದಶೋಽಧ್ಯಾಯಃ

ರ್ಜುನ ಉವಾಚ

ಕೃತಿಂ ಪುರುಷಂ ಚೈವ ಕ್ಷೇತ್ರ ಕ್ಷೇತ್ರಜ್ಞಮೇವ ಚ ।
ತದ್ವೇದಿತುಮಿಚ್ಛಾಮಿ ಜ್ಞಾನಂ ಜ್ಞೇಯಂ ಚ ಕೇಶವ ॥

ೀ ಭಗವಾನುವಾಚ

ದಂ ಶರೀರಂ ಕೌಂತೇಯ ಕ್ಷೇತ್ರಮಿತ್ಯಭಿಧೀಯತೇ ।
ತದ್ಯೋ ವೇತ್ತಿ ತಂ ಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ ॥೧॥

ತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ ।
ತ್ರಕ್ಷೇತ್ರಜ್ಞಯೋರ್ಜ್ಞಾನಂ ಯತ್ತಜ್ಜ್ಞಾನಂ ಮತಂ ಮಮ ॥೨॥

ತ್ ಕ್ಷೇತ್ರಂ ಯಚ್ಚ ಯಾದೃಕ್ಚ ಯದ್ವಿಕಾರಿ ಯತಶ್ಚ ಯತ್ ।
ಚ ಯೋ ಯತ್ಪ್ರಭಾವಶ್ಚ ತತ್ಸಮಾಸೇನ ಮೇ ಶೃಣು ॥೩॥

ಭಗವಂತ :

ಕೌಂತೇಯ, ಈ ಶರೀರದ ಹೆಸರು ಕ್ಷೇತ್ರ. ಇದನ್ನರಿತ ತತ್ತ್ವಜ್ಞಾನಿ ಕ್ಷೇತ್ರಜ್ಞ. ॥೧॥

ಸರ್ವಕ್ಷೇತ್ರ – ಶರೀರಗಳಲ್ಲಿರುವ ನನ್ನನ್ನು ಕ್ಷೇತ್ರಜ್ಞನೆಂದು ತಿಳಿ. ಕ್ಷೇತ್ರ–ಕ್ಷೇತ್ರಜ್ಞ
ದದ ಜ್ಞಾನವೇ ಜ್ಞಾನವೆಂದು ನನ್ನ ಮತ. ॥೨॥

ಈ ಕ್ಷೇತ್ರ ಯಾವುದು, ಹೇಗಿದೆ, ಅದರ ವಿಕಾರವೆಂಥದು, ಎಲ್ಲಿಂದ ಬಂತು, ಕ್ಷೇತ್ರಜ್ಞ
ಾರು, ಅವನ ಶಕ್ತಿ ಎಂಥದು–ಸಂಕ್ಷಿಪ್ತವಾಗಿ ಹೇಳುವೆ ಕೇಳು. ॥೩॥

ಋಷಿಭಿರ್ಬಹುಧಾ ಗೀತಂ ಛಂದೋಭಿರ್ವಿವಿಧೈಃ ಪೃಥಕ್ ।
ಬ್ರಹ್ಮಸೂತ್ರಪದೈಶ್ಚೈವ ಹೇತುಮದ್ಭಿರ್ವಿನಿಶ್ಚಿತೈಃ ॥೪॥

ಮಹಾಭೂತಾನ್ಯಹಂಕಾರೋ ಬುದ್ಧಿರವ್ಯಕ್ತಮೇವ ಚ ।
ಇಂದ್ರಿಯಾಣಿ ದಶೈಕಂ ಚ ಪಂಚ ಚೇಂದ್ರಿಯಗೋಚರಾಃ ॥೫॥

ಇಚ್ಛಾದ್ವೇಷಸ್ಸುಖಂ ದುಃಖಂ ಸಂಘಾತಶ್ಚೇತನಾ ಧೃತಿ ಃ ।
ಏತತ್ ಕ್ಷೇತ್ರಂ ಸಮಾಸೇನ ಸವಿಕಾರಮುದಾಹೃತಮ್ ॥೬॥

ವಿವಿಧ ಛಂದಸ್ಸುಗಳಲ್ಲಿ, ಭಿನ್ನಭಿನ್ನ ಪ್ರಕಾರದಿಂದ, ದೃಷ್ಟಾಂತ ವಾದಗಳ ಮೂಲಕ ನಿಶ್ಚಯಾತ್ಮಕ, ಬ್ರಹ್ಮಸೂಚಕ ವಾಕ್ಯಗಳಿಂದ ಋಷಿಗಳು ಇದನ್ನು ಬಹುವಾಗಿ ಹಾಡಿದ್ದಾರೆ. ॥೪॥

ಮಹಾಭೂತಗಳು, ಅಹಂಕಾರ, ಬುದ್ಧಿ ಪ್ರಕೃತಿ, (ಸೂಕ್ಷ್ಮ) ಇಂದ್ರಿಯಗಳು, ಮನಸ್ಸು, ಐದು ವಿಷಯಗಳು, ಇಚ್ಛೆ ದ್ವೇಷ, ಸುಖ, ದುಃಖ, ಸಂಘಾತ, ಚೇತನಶಕ್ತಿ, ಧೃತಿ– ಇದು ವಿಕಾರಸಹಿತವಾದ ಕ್ಷೇತ್ರವೆಂದು ಸಂಕ್ಷೇಪವಾಗಿ ಹೇಳಿದೆ. ॥೫–೬॥

ಟಿಪ್ಪಣಿ – ಮಹಾಭೂತಗಳು ಐದು – ಪೃಥ್ವಿ, ಜಲ, ವಾಯು, ತೇಜಸ್ಸು, ಆಕಾಶ, ಅಹಂಕಾರ ಎಂದರೆ ಶರೀರಸಂಬಂಧವ ಅಹಂಕಾರ. ಅವ್ಯಕ್ತ ಎಂದರೆ ಅದೃಶ್ಯ ಮಾಯೆ, ಪ್ರಕೃತಿ. ಹತ್ತು ಇಂದ್ರಿಯಗಳಲ್ಲಿ ಐದು ಜ್ಞಾನೇಂದ್ರಿಯ: ಮೂಗು, ಕಿವಿ, ಕಣ್ಣು ನಾಲಗೆ, ಚರ್ಮ: ಕರ್ಮೇಂದ್ರಿಯಗಳು ಐದು: ಕೈ ಕಾಲು, ಮುಖ, ಎರಡು ಗುಹ್ಯೇಂದ್ರಿಯಗಳು. ಐದು ಗೋಚರ ಅಥವಾ ಐದು ಜ್ಞಾನೇಂದ್ರಿಯಗಳಿಗೆ ಐದು ವಿಷಯ: ಮೂಸುವುದು, ಕೇಳುವುದು, ನೋಡುವುದು, ಅಗಿಯುವುದು, ಸ್ಪರ್ಶಿಸುವುದು. ಸಂಘಾತ ಎಂದರೆ ಶರೀರದ ತತ್ತ್ವಗಳು ಪರಸ್ಪರ ಸಹಕರಿಸುವ ಶಕ್ತಿ: ಧೃತಿ ಎಂದರೆ ಧೈರ್ಯರೂಪವಾದ ಸೂಕ್ಷ್ಮ ಗುಣವಲ್ಲ: ಈ ಶರೀರದ ಪರಮಾಣುಗಳು ಪರಸ್ಪರ ಸೆಟೆದು ನಿಲ್ಲುವ ಗುಣ. ಈ ಗುಣ ಅಹಂಭಾವದಿಂದ ಹುಟ್ಟುತ್ತವೆ. ಈ ಅಹಂತನವನ್ನು ಅವ್ಯಕ್ತ ಪ್ರಕೃತಿಯಲ್ಲಿ ವಿದ್ಯಮಾನವಾಗಿದೆ. ಮೋಹವಿಲ್ಲದ ಮನುಷ್ಯ ಈ ಅಹಂತನವನ್ನು ಜ್ಞಾನದಿಂದ ತ್ಯಜಿಸುತ್ತಾನೆ. ಈ ಕಾರಣದಿಂದ ಮರಣಸಮಯದಲ್ಲಾಗಲಿ ಬೇರೆ ಆಘಾತಗಳಿಂದಾಗಲಿ ಅವನಿಗೆ ದುಃಖವಾಗದು. ಜ್ಞಾನಿ–ಅಜ್ಞಾನಿ ಎಲ್ಲರೂ ಕೊನೆಗೆ ಈ ವಿಕಾರ ಕ್ಷೇತ್ರವನ್ನು ತ್ಯಜಿಸಲೇ ಬೇಕು.

ಅಮಾನಿತ್ವಮದಂಭಿತ್ವಮಹಿಂಸಾ ಕ್ಷಾಂತಿರಾರ್ಜವಮ್ ।
ಆಚಾರ್ಯೋಪಾಸನಂ ಶೌಚಂ ಸ್ಥೈರ್ಯಮಾತ್ಮವಿನಿಗ್ರಹಃ ॥೭॥

ಇಂದ್ರಿಯಾರ್ಥೇಷು ವೈರಾಗ್ಯಮನಹಂಕಾರ ಏವ ಚ ।
ಜನ್ಮಮೃತ್ಯುಜರಾವ್ಯಾಧಿದುಃಖದೋಷಾನುದರ್ಶನಮ್ ॥೮॥

ಅಸಕ್ತಿ ರನಭಿಷ್ವಂಗಃ ಪುತ್ರದಾರಗೃಹಾದಿಷು ।
ನಿತ್ಯಂ ಚ ಸಮಚಿತ್ತತ್ವಮಿಷ್ಟಾನಿಷ್ಟೋಪಪತ್ತಿಷು ॥೯॥

ಮಯಿಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ ।
ವಿವಿಕ್ತದೇಶಸೇವಿತ್ವಮರತಿರ್ಜನಸಂಸದಿ ॥೧೦॥

ಅಧ್ಯಾತ್ಮಜ್ಞಾನನಿತ್ಯತ್ವಂ ತತ್ತ್ವಜ್ಞಾನಾರ್ಥದರ್ಶನಮ್ ।
ಏತಜ್ಜ್ಞಾನಮಿತಿಪ್ರೋಕ್ತಮಜ್ಞಾನಂ ಯದತೋಽನ್ಯಥಾ ॥೧೧॥

ಜ್ಞೇಯಂ ಯತ್ತತ್ಪ್ರವಕ್ಷ್ಯಾಮಿ ಯಜ್ಜ್ಞಾತ್ವಾಮೃತಮಶ್ನುತೇ ।
ಅನಾದಿಮತ್ಪರಂ ಬ್ರಹ್ಮ ನ ಸತ್ತನ್ನಾಸದುಚ್ಯತೇ ॥೧೨॥

ಮಾನವನ್ನು ಭಾವಿಸದಿರುವುದು, ದಂಭವಿಲ್ಲದಿರುವುದು, ಅಹಿಂಸೆ, ಕ್ಷಮೆ, ಸರಳತೆ, ಆಚಾರ್ಯಸೇವೆ, ಶುಚಿತ್ವ, ಸ್ಥಿರತೆ, ಆತ್ಮಸಂಯಮ, ಇಂದ್ರಿಯವಿಷಯಗಳಲ್ಲಿ ವಿರಕ್ತಿ, ಅಹಂಕಾರವಿಲ್ಲದಿರುವಿಕೆ, ಜನ್ಮ, ಮರಣ, ಜರಾ, ವ್ಯಾಧಿ, ದುಃಖ, ದೋಷಗಳ ನಿರಂತರ ತಿಳಿವಳಿಕೆ, ಹೆಣ್ಣು, ಮನೆಗಳ ಮೋಹಮಮತೆಗಳ ಅಭಾವ, ಪ್ರಿಯ– ಅಪ್ರಿಯ ವಿಚಾರಗಳಲ್ಲಿ ನಿತ್ಯಸಮಭಾವ, ನನ್ನಲ್ಲಿ ಅನನ್ಯಧ್ಯಾನಪೂರ್ವಕ ಏಕನಿಷ್ಠ ಭಕ್ತಿ, ಏಕಾಂತಸ್ಥಳದ ಸೇವನೆ, ಜನಸಮೂಹದಲ್ಲಿ ಬೆರೆಯಲು ಅರುಚಿ, ಅಧ್ಯಾತ್ಮಿಕ ಜ್ಞಾನದ ನಿತ್ಯತೆಯ ತಿಳಿವು, ಆತ್ಮದರ್ಶನ – ಇವೆಲ್ಲವೂ ಜ್ಞಾನ. ಇದಕ್ಕೆ ವಿರೋಧವಾದುದೆಲ್ಲಾ ಅಜ್ಞಾನ. ॥೧೧॥

ಯಾವುದನ್ನು ತಿಳಿದು ಮನುಷ್ಯ ಮೋಕ್ಷಹೊಂದುತ್ತಾನೋ ಆ ಜ್ಞೇಯ ಏನೆಂಬುದನ್ನು ಹೇಳುತ್ತೇನೆ. ಅದು ಅನಾದಿಯಾದ ಪರಬ್ರಹ್ಮ. ಅದು ಸತ್ತೂ ಅಲ್ಲ, ಅಸತ್ತೂ ಅಲ್ಲ. ॥೧೨॥

ಟಿಪ್ಪಣಿ – ಪರಮೇಶ್ವರನನ್ನು 'ಸತ್' ಎಂದಾಗಲಿ 'ಅಸತ್' ಎಂದಾಗಲಿ ಹೇಳಲಾಗದು. ಅವನ ಸ್ವರೂಪ ಗುಣಾತೀತ. ಒಂದು ಶಬ್ದದಿಂದ ಅದರ ವ್ಯಾಖ್ಯೆ ಅಥವಾ ಪರಿಚಯ ಸಾಧ್ಯವಿಲ್ಲ.

ಎಲ್ಲಿ ನೋಡಿದರಲ್ಲಿ ಅದರ ಕೈಕಾಲು, ಕಣ್ಣು, ತಲೆ, ಮುಖ, ಕಿವಿ ಇವೆ. ಅದು ಸರ್ವತ್ರ ವ್ಯಾಪ್ತವಾಗಿ ಲೋಕದಲ್ಲಿದೆ.

ಸರ್ವತಃ ಪಾಣಿಪಾದಂ ತತ್ಸರ್ವತೋಽಕ್ಷಿಶಿರೋಮುಖಮ್ ।
ಸರ್ವತಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥೧೩॥

ಸರ್ವೇಂದ್ರಿಯಗುಣಾಭಾಸಂ ಸರ್ವೇಂದ್ರಿಯವಿವರ್ಜಿತಮ್ ।
ಅಸಕ್ತಂ ಸರ್ವಭೃಚ್ಚೈವ ನಿರ್ಗುಣಂ ಗುಣಭೋಕ್ತೃ ಚ ॥೧೪॥

ಬಹಿರಂತಶ್ಚ ಭೂತಾನಾಮಚರಂ ಚರಮೇವ ಚ ।
ಸೂಕ್ಷ್ಮತ್ವಾತ್ತದವಿಜ್ಞೇಯಂ ದೂರಸ್ಥಂ ಚಾಂತಿಕೇ ಚ ತತ್ ॥೧೫॥

ಅವಿಭಕ್ತಂ ಚ ಭೂತೇಷು ವಿಭಕ್ತಮಿವ ಚ ಸ್ಥಿತಮ್ ।
ಭೂತಭರ್ತೃ ಚ ತಜ್ಜ್ಞೇಯಂ ಗ್ರಸಿಷ್ಣು ಪ್ರಭವಿಷ್ಣು ಚ ॥೧೬॥

ಜ್ಯೋತಿಷಾಮಪಿ ತಜ್ಜ್ಯೋತಿಸ್ತಮಸಃ ಪರಮುಚ್ಯತೇ ।
ಜ್ಞಾನಂ ಜ್ಞೇಯಂ ಜ್ಞಾನಗಮ್ಯಂ ಹೃದಿ ಸರ್ವಸ್ಯ ವಿಷ್ಠಿತಂ ॥೧೭॥

ಇತಿ ಕ್ಷೇತ್ರಂ ತಥಾ ಜ್ಞಾನಂ ಜ್ಞೇಯಂ ಚೋಕ್ತಂ ಸಮಾಸತಃ ।
ಮದ್ಭಕ್ತ ಏತದ್ವಿಜ್ಞಾಯ ಮದ್ಭಾವಾಯೋಪಪದ್ಯತೇ ॥೧೮॥

ಅದರಲ್ಲಿ ಸಕಲ ಇಂದ್ರಿಯಗಳ ಗುಣಗಳ ಆಭಾಸ ಇದ್ದರೂ ಅದರ ಸ್ವರೂಪ ಇಂದ್ರಿಯರಹಿತ, ಎಲ್ಲರಿಂದಲೂ ಅಲಿಪ್ತ. ಆದರೂ ಎಲ್ಲವನ್ನೂ ಧಾರಣೆ ಮಾಡುವಂಥದು. ಅದು ಗುಣರಹಿತವಾದರೂ ಗುಣಭೋಕ್ತೃ ॥೧೩-೧೪॥

ಅದು ಭೂತಗಳ ಹೊರಗೂ ಇದೆ. ಒಳಗೂ ಇದೆ. ಅದು ಚಲಿಸುತ್ತಲೂ ಇದೆ. ಸ್ಥಿರವಾಗಿಯೂ ಇದೆ. ಸೂಕ್ಷ್ಮವಾದುದರಿಂದ ಅದು ಅವಿಜ್ಞೇಯ. ದೂರದಲ್ಲಿಯೂ ಇದೆ. ಸಮೀಪದಲ್ಲಿಯೂ ಇದೆ. ॥೧೫॥

ಟಿಪ್ಪಣಿ – ಅದನ್ನು ಅರಿತವನು ಅದರೊಳಗೇ ಇರುತ್ತಾನೆ. ನಾವು ಚಲನ-ಸ್ಥಿರತೆ, ಶಾಂತಿ-ಅಶಾಂತಿಯ ಅನುಭವ ಪಡೆಯುತ್ತೇವೆ. ಈ ಭಾವಗಳೆಲ್ಲ ಅದರಿಂದ ಹುಟ್ಟುತ್ತವೆ. ಆದುದರಿಂದ ಅದು ಗತಿವಂತವಾಗಿಯೂ ಸ್ಥಿರವಾಗಿಯೂ ಇದೆ.

ಅದು ಭೂತಗಳಲ್ಲಿ ಅವಿಭಕ್ತವಾಗಿಯೂ ಇದೆ. ವಿಭಕ್ತವಾಗಿಯೂ ಇದೆ. ಅದು ತಿಳಿಯಲು ಯೋಗ್ಯ (ಬ್ರಹ್ಮ). ಪ್ರಾಣಿಪಾಲಕ, ನಾಶಕ, ಕರ್ತೃ ಸಹ ಆಗಿದೆ. ಅದು ಜ್ಯೋತಿಗಳಿಗೆಲ್ಲಾ ಜ್ಯೋತಿ, ಅಂಧಕಾರಕ್ಕೆ ಮೀರಿದುದು. ಜ್ಞಾನವೂ ಅದೇ. ತಿಳಿಯಲು ಯೋಗ್ಯವೂ ಅದೇ. ಜ್ಞಾನಗಮ್ಯವೂ ಅದೇ. ಅದು ಎಲ್ಲರ ಹೃದಯದಲ್ಲಿಯೂ ಇದೆ. ॥೧೬-೧೭॥

ಹೀಗೆ ಕ್ಷೇತ್ರ, ಜ್ಞಾನ, ಜ್ಞೇಯಗಳನ್ನು ಸಂಕ್ಷೇಪವಾಗಿ ವಿವರಿಸಿ ಹೇಳಿದ್ದೇನೆ. ಇದನ್ನರಿತು ನನ್ನ ಭಕ್ತ ನನ್ನ ಭಾವವನ್ನು ಹೊಂದಲು ಯೋಗ್ಯನಾಗುತ್ತಾನೆ. ॥೧೮॥

ಕೃತಿ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ ।
ಕಾರಾಂಶ್ಚ ಗುಣಾಂಶ್ಚೈವ ವಿದ್ಧಿ ಪ್ರಕೃತಿಸಂಭವಾನ್ ॥೧೯॥

ರ್ಯಕಾರಣಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ ।
ರುಷಸ್ಸುಖದುಃಖಾನಾಂ ಭೋಕ್ತೃತ್ವೇ ಹೇತುರುಚ್ಯತೇ ॥೨೦॥

ರುಷಃ ಪ್ರಕೃತಿಸ್ಥೋ ಹಿ ಭುಂಕ್ತೇ ಪ್ರಕೃತಿಜಾನ್ ಗುಣಾನ್ ।
ರಣಂ ಗುಣಸಂಗೋಽಸ್ಯ ಸದಸದ್ಯೋನಿಜನ್ಮಸು ॥೨೧॥

ಪದ್ರಷ್ಟಾಽನುಮಂತಾ ಚ ಭರ್ತಾ ಭೋಕ್ತಾ ಮಹೇಶ್ವರಃ ।
ರಮಾತ್ಮೇತಿ ಚಾಪ್ಯುಕ್ತೋ ದೇಹೇಽಸ್ಮಿನ್ ಪುರುಷಃ ಪರಃ ॥೨೨॥

ಏವಂ ವೇತ್ತಿ ಪುರುಷಂ ಪ್ರಕೃತಿಂ ಚ ಗುಣೈಸ್ಸಹ ।
ರ್ವಥಾ ವರ್ತಮಾನೋಽಪಿ ನ ಸ ಭೂಯೋಽಭಿಜಾಯತೇ ॥೨೩॥

ಪ್ರಕೃತಿ ಪುರುಷ–ಎರಡೂ ಅನಾದಿ. ವಿಕಾರ, ಗುಣಗಳು ಪ್ರಕೃತಿಯಿಂದ ಹುಟ್ಟುತ್ತವೆ, ೩. ॥೧೯॥

ಪ್ರಕೃತಿ ಕಾರ್ಯಕಾರಣಗಳ ಹೇತು ಎನ್ನುತ್ತಾರೆ. ಪುರುಷ ಸುಖ ದುಃಖಗಳ ಭೋಗಕ್ಕೆ ಹೇತು ಎನ್ನುತ್ತಾರೆ. ॥೨೦॥

ಪ್ರಕೃತಿಯಲ್ಲಿರುವ ಪುರುಷ ಪ್ರಕೃತಿಯಿಂದ ಹುಟ್ಟಿದ ಗುಣಗಳನ್ನು ಭೋಗಿಸುತ್ತಾನೆ. ಗುಣಸಂಗವೇ ಒಳ್ಳೆಯ ಅಥವಾ ಕೆಟ್ಟ ಯೋನಿಗಳಲ್ಲಿ ಅವನ ಜನ್ಮಕ್ಕೆ ಕಾರಣ. ॥೨೧॥

ಟಿಪ್ಪಣಿ – ಲೌಕಿಕ ಭಾಷೆಯಲ್ಲಿ ಪ್ರಕೃತಿಯನ್ನು ಮಾಯೆಯೆಂದು ಕರೆಯುತ್ತೇವೆ. ಜೀವನೇ ಪುರುಷ. ಮಾಯೆಗೆ ಎಂದರೆ ಮೂಲಸ್ವಭಾವಕ್ಕೆ ವಶವಾಗಿ ಜೀವ ಸತ್ತ್ವ ರಜಸ್ ಅಥವಾ ತಮಸ್ಸಿನಿಂದ ಆಗುವ ಕೆಲಸಗಳ ಫಲವನ್ನು ಭೋಗಿಸುತ್ತಾನೆ. ಈ ಕಾರಣದಿಂದ ಕರ್ಮಾನುಸಾರವಾಗಿ ಪುನರ್ಜನ್ಮ ಪಡೆಯುತ್ತಾನೆ.

ಈ ದೇಹದಲ್ಲಿ ಇರುವವನನ್ನು ಪರಮಪುರುಷ, ಸರ್ವಸಾಕ್ಷಿ, ಅನುಮತಿ ನೀಡುವವನು, ಭರ್ತ, ಭೋಕ್ತ, ಮಹೇಶ್ವರ, ಪರಮಾತ್ಮ ಎನ್ನುತ್ತಾರೆ. ॥೨೨॥

ಪುರುಷನನ್ನು, ಗುಣಮಯಿಯಾದ ಪ್ರಕೃತಿಯನ್ನು ಈ ಪ್ರಕಾರ ತಿಳಿದ ಮನುಷ್ಯ ಎಲ್ಲ ಬಗೆಯ ಕೆಲಸಮಾಡುತ್ತಿದ್ದರೂ, ಅವನು ಮತ್ತೆ ಹುಟ್ಟುವುದಿಲ್ಲ. ॥೨೩॥

ಟಿಪ್ಪಣಿ – ೨, ೯, ೧೨ ಮೊದಲಾದ ಅಧ್ಯಾಯಗಳ ಸಹಾಯದಿಂದ ನಮಗೆ ತಿಳಿಯುತ್ತದೆ: ಈ ಶ್ಲೋಕ ಸ್ವೇಚ್ಛಾಚಾರವನ್ನು ಸಮರ್ಥಿಸದು: ಭಕ್ತಿಮಹಿಮೆಯನ್ನು ವರ್ಣಿಸುತ್ತದೆ. ಜೀವಕ್ಕೆ ಕರ್ಮ ಬಂಧನಕಾರಕ. ಆದರೆ ಎಲ್ಲಾ ಕರ್ಮವನ್ನೂ ಭಗವಂತನಿಗೆ ಅರ್ಪಿಸಿದರೆ ಅವನು ಬಂಧನಮುಕ್ತನಾಗುತ್ತಾನೆ. ಹೀಗೆ ಅಹಂಭಾವ ಅಳಿದವನು, ೨೪ ಗಂಟೆಯೂ ಅಂತರ್ಯಾಮಿಯನ್ನು ಗುರುತಿಸುವವನು ಪಾಪಕರ್ಮ ಮಾಡಲೇ ಆರ. ಅಭಿಮಾನವೇ ಪಾಪದ ಮೂಲ. 'ನಾನು' ಇಲ್ಲದಲ್ಲಿ ಪಾಪವಿಲ್ಲ. ಪಾಪಕರ್ಮ ಮಾಡದಿರುವ ಯುಕ್ತಿಯನ್ನು ಹೇಳುತ್ತದೆ ಈ ಶ್ಲೋಕ.

ಧ್ಯಾನೇನಾತ್ಮನಿ ಪಶ್ಯಂತಿ ಕೇಚಿದಾತ್ಮಾನಮಾತ್ಮನಾ ।
ಅನ್ಯೇ ಸಾಂಖ್ಯೇನ ಯೋಗೇನ ಕರ್ಮಯೋಗೇನ ಚಾಪರೇ ॥೨೪॥

ಅನ್ಯೇ ತ್ವೇವಮಜಾನಂತಃ ಶ್ರುತ್ವಾನ್ಯೇಭ್ಯ ಉಪಾಸತೇ ।
ತೇಽಪಿ ಚಾತಿತರಂತ್ಯೇವ ಮೃತ್ಯುಂ ಶ್ರುತಿಪರಾಯಣಾಃ ॥೨೫॥

ಯಾವತ್ಸಂಜಾಯತೇ ಕಿಂಚತ್ಸತ್ತ್ವಂ ಸ್ಥಾವರಜಂಗಮಮ್ ।
ಕ್ಷೇತ್ರಕ್ಷೇತ್ರಜ್ಞ ಸಂಯೋಗಾತ್ತದ್ವಿದ್ಧಿ ಭರತರ್ಷಭ ॥೨೬॥

ಸಮಂ ಸರ್ವೇಷು ಭೂತೇಷು ತಿಷ್ಠಂತಂ ಪರಮೇಶ್ವರಮ್ ।
ವಿನಶ್ಯತ್ಸ್ವವಿನಶ್ಯಂತಂ ಯಃ ಪಶ್ಯತಿ ಸ ಪಶ್ಯತಿ ॥೨೭॥

ಸಮಂ ಪಶ್ಯನ್ ಹಿ ಸರ್ವತ್ರ ಸಮವಸ್ಥಿತಮೀಶ್ವರಮ್ ।
ನ ಹಿನಸ್ತ್ಯಾತ್ಮನಾತ್ಮಾನಂ ತತೋ ಯಾತಿ ಪರಾಂ ಗತಿಂ ॥೨೮॥

ಪ್ರಕೃತ್ಯೈವ ಚ ಕರ್ಮಾಣಿ ಕ್ರಿಯಮಾಣಾನಿ ಸರ್ವಶಃ ।
ಯಃ ಪಶ್ಯತಿ ತಥಾತ್ಮಾನಮಕರ್ತಾರಂ ಸ ಪಶ್ಯತಿ ॥೨೯॥

ಕೆಲವರು ಧ್ಯಾನಮಾರ್ಗದಿಂದ ತಮ್ಮಲ್ಲಿ ಆತ್ಮವನ್ನು ಕಾಣುತ್ತಾರೆ. ಕೆಲವರು ಜ್ಞಾನಮಾರ್ಗ, ಕೆಲವರು ಕರ್ಮಮಾರ್ಗದಿಂದಲೂ ಕಾಣುತ್ತಾರೆ. ಕೆಲವರು ಈ ಮಾರ್ಗಗಳನ್ನರಿಯದುದರಿಂದ ಇತರರಿಂದ ಪರಮಾತ್ಮನ ವಿಚಾರವನ್ನು ಕೇಳಿಕೊಳ್ಳುತ್ತಾರೆ. ಹಾಗೆ ಕೇಳಿದನಂತರ ಅದರಲ್ಲೇ ಶ್ರದ್ಧೆಯಿಟ್ಟು ಉಪಾಸನೆ ಮಾಡುತ್ತಾರೆ. ಈ ರೀತಿ ಅವರೂ ಮೃತ್ಯುವಿನಿಂದ ಪಾರಾಗುತ್ತಾರೆ. ॥೨೪-೨೫॥

ಭರತಶ್ರೇಷ್ಠ, ಸ್ಥಾವರ ಅಥವಾ ಜಂಗಮದಿಂದ ಯಾವುದಾದರೊಂದು ವಸ್ತು ಹುಟ್ಟುತ್ತದೆ. ಕ್ಷೇತ್ರ– ಕ್ಷೇತ್ರಜ್ಞರ ಎಂದರೆ ಪ್ರಕೃತಿ – ಪುರುಷರ ಸಂಯೋಗದಿಂದಲೇ ಆಗುತ್ತದೆಂದು ನೀನು ತಿಳಿ. ॥೨೬-೨೭॥

ಸಕಲ ನಾಶವಂತ ಪ್ರಾಣಿಗಳಲ್ಲಿ ಅವಿನಾಶಿ ಪರಮೇಶ್ವರ ಸಮಭಾವದಿಂದಿದ್ದಾನೆಂದು ತಿಳಿದವನೇ ತಿಳಿದವನು.

ಈಶ್ವರ ಸರ್ವತ್ರ ಸಮಭಾವದಿಂದಿರುವುದನ್ನು ನೋಡುವ ಮನುಷ್ಯ ಆತ್ಮಘಾತ ಮಾಡಿಕೊಳ್ಳ. ಇದರಿಂದ ಪರಮಗತಿಯನ್ನೈದುತ್ತಾನೆ.

ಟಿಪ್ಪಣಿ – ಈಶ್ವರನನ್ನು ಸಮಭಾವಶೀಲನೆಂದರಿತವನು ಸ್ವಯಂ ಅವನಲ್ಲಿ ಕೂಡಿಕೊಳ್ಳುತ್ತಾನೆ. ಬೇರೆ ಯಾವುದನ್ನೂ ನೋಡನು. ಆದುದರಿಂದ ಅವನು ವಿಕಾರ ವಶನಾಗದೆ ಮೋಕ್ಷ ಹೊಂದುತ್ತಾನೆ. ತನಗೆ ತಾನೇ ಶತ್ರುವಾಗನು.

ಸರ್ವತ್ರ ಪ್ರಕೃತಿಯೇ ಕೆಲಸ ಮಾಡುತ್ತಿದೆ. ಆದುದರಿಂದಲೇ ಆತ್ಮ ಅಕರ್ತ ಎಂದು ತಿಳಿದವನೇ ತಿಳಿದಿದ್ದಾನೆ. ॥೧೯॥

ುದಾ ಭೂತಪೃಥಗ್ಭಾವಮೇಕಸ್ಥಮನುಪಶ್ಯತಿ ।
ತ ಏವ ಚ ವಿಸ್ತಾರಂ ಬ್ರಹ್ಮ ಸಂಪದ್ಯತೇ ತದಾ ॥೩೦॥

ನಾದಿತ್ವಾನ್ನಿರ್ಗುಣತ್ವಾತ್ ಪರಮಾತ್ಮಾಯಮವ್ಯಯಃ ।
ರೀರಸ್ಥೋಽಪಿ ಕೌಂತೇಯ ನ ಕರೋತಿ ಲಿಪ್ಯತೇ ॥೩೧॥

ುಥಾ ಸರ್ವಗತಂ ಸೌಕ್ಷ್ಮ್ಯಾದಾಕಾಶಂ ನೋಪಲಿಪ್ಯತೇ ।
ರ್ವತ್ರಾವಸ್ಥಿತೋ ದೇಹೇ ತಥಾತ್ಮಾನೋಪಲಿಪ್ಯತೇ ॥೩೨॥

ುಥಾ ಪ್ರಕಾಶಯತ್ಯೇಕಃ ಕೃತ್ಸ್ನಂ ಲೋಕಮಿಮಂ ರವಿಃ ।
ೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ ॥೩೩॥

ೇತ್ರ–ಕ್ಷೇತ್ರಜ್ಞಯೋರೇವಮಂತರಂ ಜ್ಞಾನಚಕ್ಷುಷಾ ।
ೂತಪ್ರಕೃತಿಮೋಕ್ಷಂ ಚ ಯೇ ವಿದುರ್ಯಾಂತಿ ತೇ ಪರಮ್ ॥೩೪॥

ಸರ್ವಭೂತಗಳೂ ಬೇರೆಬೇರೆಯಾಗಿದ್ದೂ ಒಂದರಲ್ಲಿಯೇ ಇರುವುದನ್ನು ನೋಡಿ, ಸಮಗ್ರ, ವಿಸ್ತಾರವೆಲ್ಲಾ ಅದರಿಂದಲೇ ಹುಟ್ಟಿದೆ ಎಂದರಿತಾಗ ಅವನು ಬ್ರಹ್ಮವನ್ನೈದುತ್ತಾನೆ. ॥೩೦॥

ಟಿಪ್ಪಣಿ – ಅನುಭವದಿಂದ ಸಕಲವನ್ನೂ ಬ್ರಹ್ಮದಲ್ಲಿಯೆ ನೋಡುವುದೇ ಬ್ರಹ್ಮ ವನ್ನು ಪಡೆಯುವುದು. ಆಗ ಜೀವ ಶಿವನಿಂದ ಬೇರೆ ಆಗಿರದು.

ಕೌಂತೇಯ ! ಈ ಅವಿನಾಶಿಯಾದ ಪರಮಾತ್ಮ ಅನಾದಿ, ನಿರ್ಗುಣ ಆಗಿರುವು ದರಿಂದ ಶರೀರದಲ್ಲಿದ್ದರೂ ಏನನ್ನೂ ಮಾಡ, ಯಾತರಿಂದಲೂ ಲಿಪ್ತನಾಗ. ॥೩೧॥

ಸೂಕ್ಷ್ಮವಾಗಿರುವ ಕಾರಣ ಸರ್ವವ್ಯಾಪಿ ಆಕಾಶಕ್ಕೆ ಹೇಗೆ ಏನೂ ಅಂಟದೋ ಹಾಗೆಯೆ ಎಲ್ಲ ದೇಹದಲ್ಲಿರುವ ಆತ್ಮಕ್ಕೂ ಏನೂ ಅಂಟದು. ॥೩೨॥

ಭರತ ! ಒಬ್ಬನೇ ಸೂರ್ಯ ಈ ಸಮಗ್ರ ಜಗತ್ತಿಗೆಲ್ಲಾ ಪ್ರಕಾಶವನ್ನೀಯುವ ಹಾಗೆ ಕ್ಷೇತ್ರಜ್ಞ ಎಲ್ಲ ಕ್ಷೇತ್ರಗಳನ್ನೂ ಪ್ರಕಾಶಗೊಳಿಸುತ್ತಾನೆ. ॥೩೩॥

ಜ್ಞಾನಚಕ್ಷುಗಳಿಂದ ಕ್ಷೇತ್ರ– ಕ್ಷೇತ್ರಜ್ಞ ಭೇದವನ್ನು ಪ್ರಕೃತಿಯ ಬಂಧನದಿಂದ ಪ್ರಾಣಿ ಗಳಿಗೆ ಮುಕ್ತಿ ಹೇಗೆ ಸಿಗುವುದೆಂಬುದನ್ನು ಅರಿಯುವವರೇ ಬ್ರಹ್ಮವನ್ನೈದುತ್ತಾರೆ. ॥೩೪॥

ಹರಿಃ ಓಂ ತತ್ಸತ್

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀ ಕೃಷ್ಣಾರ್ಜುನಸಂವಾದೇ
ಕ್ಷೇತ್ರ-ಕ್ಷೇತ್ರಜ್ಞವಿಭಾಗಯೋಗೋನಾಮ
ತ್ರಯೋದಶೋಽಧ್ಯಾಯಃ ॥

ಓಂ ತತ್ಸತ್

ಈ ಬಗೆಯಾಗಿ ಶ್ರೀಮದ್ಭಗವದ್ಗೀತಾರೂಪ ಉಪನಿಷತ್ ಅಥವಾ
ಬ್ರಹ್ಮವಿದ್ಯಾಂತರ್ಗತ ಯೋಗಶಾಸ್ತ್ರದ ಶ್ರೀ ಕೃಷ್ಣಾರ್ಜುನಸಂವಾದದಲ್ಲಿ
ಕ್ಷೇತ್ರ-ಕ್ಷೇತ್ರಜ್ಞವಿಭಾಗಯೋಗವೆಂಬ ಹದಿಮೂರನೆಯ ಅಧ್ಯಾಯ.

***

ಅಧ್ಯಾಯ ೧೪

ಗುಣತ್ರಯವಿಭಾಗಯೋಗ

ಗುಣಮಯಿಯಾದ ಪ್ರಕೃತಿಯ ಅಲ್ಪ ಪರಿಚಯ ಮಾಡಿಕೊಟ್ಟನಂತರ ಈ ಅಧ್ಯಾಯದಲ್ಲಿ ಹಜವಾಗಿ ಮೂರು ಗುಣಗಳ ವರ್ಣನೆ ಬರುತ್ತದೆ. ಇದರಲ್ಲಿ ಭಗವಂತನ ಗುಣಾತೀತ ಕ್ಷಣವನ್ನೂ ಸೇರಿಸಿದ್ದಾನೆ. ಎರಡನೆಯ ಅಧ್ಯಾಯದಲ್ಲಿ ಸ್ಥಿತಪ್ರಜ್ಞನ ಲಕ್ಷಣ, ಹನ್ನೆರಡನೆಯ ಅಧ್ಯಾಯದಲ್ಲಿ ಭಕ್ತನ ಲಕ್ಷಣ ಹೇಳಿದ ಹಾಗೆ ಇದರಲ್ಲಿ ಗುಣಾತೀತನ ಲಕ್ಷಣ.]

ಅಥ ಚತುರ್ದಶೋऽಧ್ಯಾಯಃ

ೀ ಭಗವಾನುವಾಚ

ಪರಂ ಭೂಯಃ ಪ್ರವಕ್ಷ್ಯಾಮಿ ಜ್ಞಾನಾನಾಂ ಜ್ಞಾನಮುತ್ತಮಮ್ ।
ಯಜ್ಞಾತ್ವಾ ಮುನಯಸ್ಸರ್ವೇ ಪರಾಂ ಸಿದ್ಧಿಮಿತೋ ಗತಾಃ ॥೧॥

ಇದಂ ಜ್ಞಾನಮುಪಾಶ್ರಿತ್ಯ ಮಮ ಸಾಧರ್ಮ್ಯಮಾಗತಾಃ ।
ರ್ಗೇऽಪಿ ನೋಪಜಾಯಂತೇ ಪ್ರಲಯೇ ನ ವ್ಯಥಂತಿ ಚ ॥೨॥

ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದದಾಮ್ಯಹಂ ।
ಸಂಭವಸ್ಸರ್ವಭೂತಾನಾಂ ತತೋ ಭವತಿ ಭಾರತ ॥೩॥

ೀ ಭಗವಂತ :

ಜ್ಞಾನಗಳಲ್ಲಿ ಯಾವ ಉತ್ತಮ ಜ್ಞಾನದ ಅನುಭವ ಪಡೆದು ಸಕಲ ಮುನಿಗಳೂ ೇಹ ತ್ಯಾಗ ಮಾಡಿದ ನಂತರ ಪರಮಗತಿಯನ್ನೈದಿದರೂ ಅದನ್ನು (ಮತ್ತೆ) ಹೇಳುತ್ತೇನೆ. ॥೧॥

ಈ ಜ್ಞಾನದ ಆಶ್ರಯದಿಂದ ಯಾರು ನನ್ನ ಭಾವವನ್ನು ಹೊಂದಿದಾರೋ ವರು ಉತ್ಪತ್ತಿಕಾಲದಲ್ಲಿ ಮತ್ತೆ ಹುಟ್ಟಬೇಕಾಗಿಲ್ಲ. ಪ್ರಳಯಕಾಲದಲ್ಲಿ ವ್ಯಥೆ ಪಡಬೇಕಾದುದೂ ಲ್ಲ. ॥೨॥

ಭಾರತ ! ಮಹದ್ಬ್ರಹ್ಮ ಅಥವಾ ಪ್ರಕೃತಿ ನನ್ನ ಯೋನಿ. ಅದರಲ್ಲಿ ನಾನು ಗರ್ಭ ಡುತ್ತೇನೆ ಅದರಿಂದ ಪ್ರಾಣಿಮಾತ್ರಗಳು ಹುಟ್ಟುತ್ತವೆ. ॥೩॥

ಸರ್ವಯೋನಿಷು ಕೌಂತೇಯ ಮೂರ್ತಯಸ್ಸಂಭವಂತಿ ಯಾಃ ।
ತಾಸಾಂ ಬ್ರಹ್ಮ ಮಹದ್ಯೋನಿಹರಂ ಬೀಜಪ್ರದಃ ಪಿತಾ ॥೪॥

ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ ।
ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮವ್ಯಯಮ್ ॥೫॥

ತತ್ರ ಸತ್ತ್ವಂ ನಿರ್ಮಲತ್ವಾತ್ ಪ್ರಕಾಶಕಮನಾಮಯಮ್ ।
ಸುಖಸಂಗೇನ ಬಧ್ನಾತಿ ಜ್ಞಾನಸಂಗೇನ ಚಾನಘ ॥೬॥

ರಜೋ ರಾಗಾತ್ಮಕಂ ವಿದ್ಧಿ ತೃಷ್ಣಾಸಂಗಸಮುದ್ಭವಮ್ ।
ತನ್ನಿಬಧ್ನಾತಿ ಕೌಂತೇಯ ಕರ್ಮಸಂಗೇನ ದೇಹಿನಮ್ ॥೭॥

ತಮಸ್ತ್ವಜ್ಞಾನಜಂ ವಿದ್ಧಿ ಮೋಹನಂ ಸರ್ವದೇಹಿನಾಮ್ ।
ಪ್ರಮಾದಾಲಸ್ಯನಿದ್ರಾಭಿಸ್ತನ್ನಿಬಧ್ನಾತಿ ಭಾರತ ॥೮॥

ಸತ್ತ್ವಂ ಸುಖೇ ಸಂಜಯತಿ ರಜಃ ಕರ್ಮಣಿ ಭಾರತ ।
ಜ್ಞಾನಮಾವೃತ್ಯ ತು ತಮಃ ಪ್ರಮಾದೇ ಸಂಜಯತ್ಯುತ ॥೯॥

ಕೌಂತೇಯ ! ಎಲ್ಲ ಯೋನಿಗಳು ಹುಟ್ಟುವ ಪ್ರಾಣಿಗಳ ಉತ್ಪತ್ತಿಸ್ಥಾನ ನನ್ನ ಪ್ರಕೃತಿಯೇ. ಅವರಲ್ಲಿ ಬೀಜಾರೋಪಣ ಮಾಡುವ ತಂದೆ-ಪುರುಷ ನಾನೇ. ॥೪॥

ಸತ್ತ್ವ ರಜಸ್, ತಮಸ್ ಪ್ರಕೃತಿಯಿಂದ ಹುಟ್ಟುವ ಗುಣಗಳು. ಇವು ಅವಿನಾಶಿ. (ಜೀವ) ದೇಹಧಾರಿಯನ್ನು ದೇಹದೊಡನೆ ಬಂಧಿಸುತ್ತವೆ. ॥೫॥

ಇವುಗಳಲ್ಲಿ ಸತ್ತ್ವಗುಣ ನಿರ್ಮಲ; ಅದರಿಂದ ಅದು ಪ್ರಕಾಶಕ, ಆರೋಗ್ಯಪ್ರದ. ಅದು ದೇಹಿಯನ್ನು ಸುಖಜ್ಞಾನಗಳಲ್ಲಿ ಬಂಧಿಸುತ್ತದೆ. ॥೬॥

ಕೌಂತೇಯ ! ರಜೋಗುಣ ರಾಗರೂಪವು, ಅದು ತೃಷ್ಣೆ ಆಸಕ್ತಿಗಳ ಮೂಲ. ದೇಹಧಾರಿಯನ್ನದು ಕರ್ಮಪಾಶದಲ್ಲಿ ಬಂಧಿಸುತ್ತದೆ. ॥೭॥

ಭಾರತ ! ತಮೋಗುಣ ಅಜ್ಞಾನದ ಮೂಲಕ. ಅದು ದೇಹಧಾರಿಯನ್ನು ಮೋಹಕ್ಕೀಡುಮಾಡುತ್ತದೆ. ದೇಹಿಯನ್ನು ಅಸಾವಧಾನ, ಆಲಸ್ಯ, ನಿದ್ರೆಯ ಪಾಶಗಳಿಂದ ಬಂಧಿಸುತ್ತದೆ. ॥೮॥

ಭಾರತ ! ಸತ್ತ್ವಗುಣ ಆತ್ಮಕ್ಕೆ ಶಾಂತಿ-ಸುಖಗಳ ಜೊತೆಗೂಡಿಸುತ್ತದೆ. ರಜೋಗುಣ ಕರ್ಮದ ಜೊತೆಗೆ. ತಮೋಗುಣ ಜ್ಞಾನವನ್ನು ಮುಚ್ಚಿ ಪ್ರಮಾದದ ಜೊತೆಗೆ ಸೇರಿಸುತ್ತದೆ. ॥೯॥

ರಜಸ್ತಮಶ್ಚಾಭಿಭೂಯ ಸತ್ತ್ವಂ ಭವತಿ ಭಾರತ ।
ರಜಸ್ಸತ್ತ್ವಂ ತಮಶ್ಚೈವ ತಮಸ್ಸತ್ತ್ವಂ ರಜಸ್ತಥಾ ॥೧೦॥

ಸರ್ವದ್ವಾರೇಷು ದೇಹೇಽಸ್ಮಿನ್ ಪ್ರಕಾಶ ಉಪಜಾಯತೇ ।
ಜ್ಞಾನಂ ಯದಾ ತದಾ ವಿದ್ಯಾದ್ವಿವೃದ್ಧಂ ಸತ್ತ್ವಮಿತ್ಯುತ ॥೧೧॥

ಲೋಭಃ ಪ್ರವೃತ್ತಿರಾರಂಭಃ ಕರ್ಮಣಾಮಶಮಃ ಸ್ಪೃಹಾ ।
ರಜಸ್ಯೇತಾನಿ ಜಾಯಂತೇ ವಿವೃದ್ಧೇ ಭರತರ್ಷಭ ॥೧೨॥

ಅಪ್ರಕಾಶೋಽ ಪ್ರವೃತ್ತಿಶ್ಚ ಪ್ರಮಾದೋ ಮೋಹ ಏವ ಚ ।
ತಮಸ್ಯೇತಾನಿ ಜಾಯಂತೇ ವಿವೃದ್ಧೇ ಕುರುನಂದನ ॥೧೩॥

ಯದಾ ಸತ್ತ್ವೇ ಪ್ರವೃದ್ಧೇ ತು ಪ್ರಲಯಂ ಯಾತಿ ದೇಹಭೃತ್ ।
ತದೋತ್ತಮವಿದಾಂ ಲೋಕಾನಮಲಾನ್ ಪ್ರತಿಪದ್ಯತೇ ॥೧೪॥

ರಜಸಿ ಪ್ರಲಯಂ ಗತ್ವಾ ಕರ್ಮಸಂಗಿಷು ಜಾಯತೇ ।
ತಥಾ ಪ್ರಲೀನಸ್ತಮಸಿ ಮೂಢಯೋನಿಷು ಜಾಯತೇ ॥೧೫॥

ರಜಸ್ಸು-ತಮಸ್ಸು ಅಡಗಿದರೆ ಸತ್ತ್ವಗುಣ ಮೇಲೆ ಬರುತ್ತದೆ. ಸತ್ತ್ವ-ತಮಸ್ಸುಗಳು ಅಡಗಿದರೆ ರಜೋಗುಣ, ಸತ್ತ್ವ-ರಜೋಗುಣ ಅಡಗಿದರೆ ತಮೋಗುಣ ಮೇಲೆ ಬರುತ್ತವೆ. ॥೧೦॥

ಈ ದೇಹದಲ್ಲಿ ಸಕಲೇಂದ್ರಿಯಗಳ ಮೂಲಕ ಪ್ರಕಾಶವೂ ಜ್ಞಾನವೂ ಉದ್ಭವಿಸಿದಾಗ ಸತ್ತ್ವಗುಣ ಬೆಳೆದಿದೆಯೆಂದು ತಿಳಿಯಬೇಕು. ॥೧೧॥

ರಜೋಗುಣ ವೃದ್ಧಿಗೊಂಡಾಗ ಲೋಭ, ಪ್ರವೃತ್ತಿ, ಕರ್ಮದ ಆರಂಭ, ಅಶಾಂತಿ, ಇಚ್ಛೆಗಳು ಹುಟ್ಟುತ್ತವೆ. ॥೧೨॥

ಕುರುನಂದನ ! ತಮೋಗುಣ ವೃದ್ಧಿಯಾದಾಗ ಅಜ್ಞಾನ, ಮಂದತೆ, ಅಸಾವಧಾನ, ಮೋಹಗಳು ಹುಟ್ಟುತ್ತವೆ. ॥೧೩॥

ತನ್ನಲ್ಲಿ ಸತ್ತ್ವಗುಣ ವೃದ್ಧಿಯಾದ ಮೇಲೆ ದೇಹಧಾರಿ ಮರಣಿಸಿದರೆ ಉತ್ತಮ ಜ್ಞಾನಿಗಳ ನಿರ್ಮಲಲೋಕವನ್ನು ಸೇರುತ್ತಾನೆ. ರಜೋಗುಣದಲ್ಲಿ ಮೃತ್ಯು ಉಂಟಾದರೆ ದೇಹಧಾರಿ ಕರ್ಮಸಂಗಿಗಳ ಲೋಕದಲ್ಲಿ ಹುಟ್ಟುತ್ತಾನೆ. ತಮೋಗುಣದಲ್ಲಿ ಮರಣಿಸಿದವನು ಮೂಢಯೋನಿಯಲ್ಲಿ ಹುಟ್ಟುತ್ತಾನೆ. ॥೧೪-೧೫॥

ಟಿಪ್ಪಣಿ – ಕರ್ಮಸಂಗಿ ಅಥವಾ ಮನುಷ್ಯಲೋಕ. ಮೂಢಯೋನಿ ಎಂದರೆ ಪಶು ಇತ್ಯಾದಿ ಲೋಕ.

ಕರ್ಮಣಸ್ಸುಕೃತಸ್ಯಾಹುಸ್ಸಾತ್ತ್ವಿಕಂ ನಿರ್ಮಲಂ ಫಲಂ ।
ರಜಸಸ್ತು ಫಲಂ ದುಃಖಮಜ್ಞಾನಂ ತಮಸಃ ಫಲಮ್ ॥೧೬॥

ಸತ್ತ್ವಾತ್ಸಂಜಾಯತೇ ಜ್ಞಾನಂ ರಜಸೋ ಲೋಭ ಏವ ಚ ।
ಪ್ರಮಾದಮೋಹೌ ತಮಸೋ ಭವತೋಽಜ್ಞಾನಮೇವ ಚ ॥೧೭॥

ಊರ್ಧ್ವಂ ಗಚ್ಛಂತಿ ಸತ್ತ್ವಸ್ಥಾ ಮಧ್ಯೇ ತಿಷ್ಠಂತಿ ರಾಜಸಾಃ ।
ಜಘನ್ಯಗುಣವೃತ್ತಿಸ್ಥಾಃ ಅಧೋ ಗಚ್ಛಂತಿ ತಾಮಸಾಃ ॥೧೮॥

ನಾನ್ಯಂ ಗುಣೇಭ್ಯಃ ಕರ್ತಾರಂ ಯದಾ ದ್ರಷ್ಟಾನುಪಶ್ಯತಿ ।
ಗುಣೇಭ್ಯಶ್ಚ ಪರಂ ವೇತ್ತಿ ಮದ್ಭಾವಂ ಸೋಽಧಿಗಚ್ಛತಿ ॥೧೯॥

ಗುಣಾನೇತಾನತೀತ್ಯ ತ್ರೀನ್ ದೇಹೀ ದೇಹಸಮುದ್ಭವಾನ್ ।
ಜನ್ಮಮೃತ್ಯುಜರಾದುಃಖೈರ್ವಿಮುಕ್ತೋಽಮೃತಮಶ್ನುತೇ ॥೨೦॥

ಸತ್ಕರ್ಮಗಳ ಫಲ ಸಾತ್ತ್ವಿಕ, ನಿರ್ಮಲ. ರಾಜಸ ಕರ್ಮದ ಫಲ ದುಃಖ ತಾಮಸ ಕರ್ಮದ ಫಲ ಅಜ್ಞಾನ. ॥೧೬॥

ಟಿಪ್ಪಣಿ – ನಾವು ಸುಖದುಃಖ ಎಂದು ತಿಳಿದಿರುವುದರ ವಿಷಯವನ್ನು ಇಲ್ಲಿ ಹೇಳಿಲ್ಲ; ಇಲ್ಲಿ ಸುಖವೆಂದರೆ ಆತ್ಮಾನಂದ, ಆತ್ಮಪ್ರಕಾಶ. ಇದಕ್ಕೆ ವಿಪರೀತ ದುಃಖ. ಹದಿನೇಳನೆ ಶ್ಲೋಕದಿಂದ ಇದು ಸ್ಪಷ್ಟವಾಗುತ್ತದೆ.

ಸತ್ತ್ವಗುಣದಿಂದ ಜ್ಞಾನ, ರಜೋಗುಣದಿಂದ ಲೋಭ, ತಮೋಗುಣದಿಂದ ಅಸಾವಧಾನ, ಮೋಹ, ಅಜ್ಞಾನಗಳೂ ಹುಟ್ಟುತ್ತವೆ. ॥೧೭॥

ಸಾತ್ತ್ವಿಕ ಮನುಷ್ಯರು ಮೇಲೇರುತ್ತಾರೆ. ರಾಜಸರು ಮಧ್ಯೆ ಇರುತ್ತಾರೆ. ಕೊನೆಯ ಗುಣದ ತಾಮಸರಿಗೆ ಅಧೋಗತಿ. ॥೧೮॥

ಗುಣಗಳಲ್ಲದೆ ಬೇರೆ ಯಾವ ಕರ್ತೃವೂ ಇಲ್ಲವೆಂಬುದನ್ನು ನೋಡಿ ಗುಣಗಳಿಂದ ಆಚೆಗಿರುವುದನ್ನು ಜ್ಞಾನಿ ಅರಿತಾಗ, ಅವನು ನನ್ನ ಭಾವವನ್ನು ಹೊಂದುತ್ತಾನೆ. ॥೧೯॥

ಟಿಪ್ಪಣಿ – ಗುಣಗಳು ಕರ್ತೃ ಎಂದು ತಿಳಿದವನಿಗೆ ಅಹಂಕಾರ ಹುಟ್ಟದು. ಅದರಿಂದ ಅವರ ಕೆಲಸಗಳು ಸ್ವಾಭಾವಿಕವೂ ಶರೀರಯಾತ್ರೆಗೆ ಮಾತ್ರವೂ ಆಗಿರುತ್ತವೆ. ಶರೀರಯಾತ್ರೆ ಪರಮಾರ್ಥಕ್ಕಾಗಿಯೇ; ಆದುದರಿಂದ ಅವರ ಎಲ್ಲಾ ಕಾರ್ಯದಲ್ಲಿಯೂ ತ್ಯಾಗ, ವೈರಾಗ್ಯ ಇರಲೇಬೇಕು. ಇಂಥಾ ಜ್ಞಾನಿ ಗುಣಾತೀತ ನಿರ್ಗುಣ ಈಶ್ವರನ ಕಲ್ಪನೆ ಮಾಡಿಕೊಂಡು ಆತನನ್ನು ಭಜಿಸುತ್ತಾನೆ.

ದೇಹದ ಸಂಗದಿಂದ ಉತ್ಪನ್ನವಾಗುವ ಈ ತ್ರಿಗುಣಗಳಿಂದ ಪಾರಾಗಿ ದೇಹಧಾರಿ ಜನ್ಮ, ಮೃತ್ಯು, ಜಗತ್ತಿನ ದುಃಖಗಳಿಂದ ಬಿಡುಗಡೆ ಹೊಂದಿ ಮೋಕ್ಷ ಪಡೆಯುತ್ತಾನೆ. ॥೨೦॥

ಕೈರ್ಲಿಂಗೈಸ್ತ್ರೀನ್ ಗುಣಾನೇತಾನತೀತೋ ಭವತಿ ಪ್ರಭೋ ।
ಕಿಮಾಚಾರಃ ಕಥಂ ಚೈತಾನ್ ತ್ರೀನ್ ಗುಣಾನತಿವರ್ತತೇ ॥೨೧॥

ಶ್ರೀ ಭಗವಾನುವಾಚ

ಪ್ರಕಾಶಂ ಚ ಪ್ರವೃತ್ತಿಂ ಚ ಮೋಹಮೇವ ಚ ಪಾಂಡವ ।
ನ ದ್ವೇಷ್ಟಿ ಸಂಪ್ರವೃತ್ತಾನಿ ನ ನಿವೃತ್ತಾನಿ ಕಾಂಕ್ಷತಿ ॥೨೨॥

ಉದಾಸೀನವದಾಸೀನೋ ಗುಣೈರ್ಯೋ ನ ವಿಚಾಲ್ಯತೇ ।
ಗುಣಾ ವರ್ತಂತ ಇತ್ಯೇವ ಯೋಽವತಿಷ್ಠತಿ ನೇಂಗತೇ ॥೨೩॥

ಸಮದುಃಖಸುಖಸ್ಸ್ವಸ್ಥಃ ಸಮಲೋಷ್ಟಾಶ್ಮಕಾಂಚನಃ ।
ತುಲ್ಯಪ್ರಿಯಾಪ್ರಿಯೋ ಧೀರಸ್ತುಲ್ಯನಿಂದಾತ್ಮಸಂಸ್ತುತಿಃ ॥೨೪॥

ಮಾನಾಪಮಾನಯೋಸ್ತುಲ್ಯಸ್ತುಲ್ಯೋ ಮಿತ್ರಾರಿಪಕ್ಷಯೋಃ ।
ಸರ್ವಾರಂಭಪರಿತ್ಯಾಗೀ ಗುಣಾತೀತಸ್ಸ ಉಚ್ಯತೇ ॥೨೫॥

ಅರ್ಜುನ :

ಪ್ರಭು, ಈ ಗುಣಗಳನ್ನು ದಾಟಿದವನ ಲಕ್ಷಣವೇನು ? ಅವನ ಆಚಾರ ಹೇಗಿರುತ್ತದೆ ? ಈ ತ್ರಿಗುಣವನ್ನು ಹೇಗೆ ದಾಟುತ್ತಾನೆ ? ॥೨೧॥

ಶ್ರೀ ಭಗವಂತ :

ಪಾಂಡವ ! ಪ್ರಕಾಶ, ಪ್ರವೃತ್ತಿ, ಮೋಹಗಳು ಬಂದರೆ ದುಃಖಿಯಾಗದವನು, ಬಾರದಿದ್ದರೆ ಅದನ್ನು ಬಯಸದವನು, ಉದಾಸೀನನಂತೆ ಸ್ಥಿರನಾದವನು, ಗುಣಗಳಿಂದ ಅಲ್ಲಾಡದವನು, ಗುಣಗಳು ತಮ್ಮ ತಮ್ಮ ಕೆಲಸ ಮಾಡಿಕೊಳ್ಳುತ್ತವೆಂದು ತಿಳಿದು ಸ್ಥಿರವಾಗಿರುವವನು, ಚಲಿಸದವನು, ಸುಖ ದುಃಖಗಳಲ್ಲಿ ಸುಖವಾಗಿ ಸ್ವಸ್ಥನಾಗಿರುವನು, ಕಲ್ಲು–ಮಣ್ಣು–ಬಂಗಾರಗಳು ಸಮಾನವಾದವನು, ಪ್ರಿಯ ವಸ್ತು ಸಿಕ್ಕರೂ ಅಪ್ರಿಯ ವಸ್ತು ಸಿಕ್ಕರೂ ಒಂದೇ ರೀತಿ ಇರುವವನು, ತನ್ನ ನಿಂದೆ–ಸ್ತುತಿ ಎರಡೂ ಒಂದೇ ಆದವನು, ಬುದ್ಧಿವಂತ, ಮಾನಾಪಮಾನ ಸಮಾನ ಆದವನು, ಶತ್ರು – ಮಿತ್ರ ಪಕ್ಷ ಎರಡರಲ್ಲಿಯೂ ಸಮಾನ ಭಾವವನ್ನಿಟ್ಟವನು, ಸಕಲ ಆರಂಭಗಳನ್ನು ತ್ಯಜಿಸಿದವನು ಗುಣಾತೀತನೆಂದು ಹೇಳುತ್ತಾರೆ. ॥೨೨–೨೫॥

ಮಾಂ ಚ ಯೋऽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ ।
ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ॥೨೬॥

ಬ್ರಹ್ಮಣೋ ಹಿ ಪ್ರತಿಷ್ಠಾಹಮಮೃತಸ್ಯಾವ್ಯಯಸ್ಯ ಚ ।
ಶಾಶ್ವತಸ್ಯ ಚ ಧರ್ಮಸ್ಯ ಸುಖಸ್ಯೈಕಾಂತಿಕಸ್ಯ ಚ ॥೨೭॥

ಟಿಪ್ಪಣಿ – ಇಪ್ಪತ್ತೆರಡರಿಂದ ಇಪ್ಪತ್ತೈದರವರೆಗೆ ನಾಲ್ಕು ಶ್ಲೋಕಗಳು ಒಟ್ಟಿಗೆ ವಿಚಾರಯೋಗ್ಯವಾಗಿವೆ. ಮೇಲೆ ಹೇಳಿದುವಂತೆ ಪ್ರಕಾಶ, ಪ್ರವೃತ್ತಿ, ಮೋಹಗಳು ಅನುಕ್ರಮವಾಗಿ ಸತ್ತ್ವ ರಜಸ್, ತಮಸ್ಸುಗಳ ಪರಿಣಾಮ ಅಥವಾ ಚಿಹ್ನೆಗಳು. ಇದರ ತಾತ್ಪರ್ಯವೇನೆಂದರೆ, ಗುಣಗಳನ್ನು ದಾಟಿಹೋದವನ ಮೇಲೆ ಈ ಪರಿಣಾಮಗಳ ಪ್ರಭಾವ ಬೀಳದು. ಕಲ್ಲಿಗೆ ಪ್ರಕಾಶದ ಅಪೇಕ್ಷೆಯಿಲ್ಲ, ಪ್ರವೃತ್ತಿ–ಜಡತೆಗಳ ದ್ವೇಷವಿಲ್ಲ. ಬಯಸದಿದ್ದರೂ ಅದಕ್ಕೆ ಶಾಂತಿ ಇದ್ದೇ ಇದೆ. ಅದಕ್ಕೆ ಯಾರಾದರೂ ಚಾಲನೆ ಕೊಟ್ಟರೆ ಅವರನ್ನು ಅದು ದ್ವೇಷಿಸದು. ಚಾಲನೆ ಕೊಟ್ಟು ಆಮೇಲೆ ಸ್ಥಿರಗೊಳಿಸಿದರೂ ಅದರಿಂದ ಪ್ರವೃತ್ತಿ–ಚಲನೆ ನಿಂತು, ಮೋಹ–ಜಡತೆ ಬಂತು ಎಂದು ದುಃಖಪಡದು. ಈ ಮೂರು ಸ್ಥಿತಿಗಳಲ್ಲಿ ಅದು ಏಕ–ಸಮಾನವಾಗಿರುತ್ತದೆ. ಕಲ್ಲಿಗೂ, ಗುಣಾತೀತನಿಗೂ ಭೇದವಿಷ್ಟೆ: ಗುಣಾತೀತ ಚೇತನಮಯ, ಜ್ಞಾನಪೂರ್ವಕವಾಗಿ ಗುಣಗಳ ಪರಿಣಾಮದ, ಸ್ಪರ್ಶದ ತ್ಯಾಗಮಾಡಿದ್ದಾನೆ: ಕಲ್ಲಿನಂತೆ ಆಗಿದ್ದಾನೆ. ಕಲ್ಲು ಗುಣಗಳ ಅಥವಾ ಪ್ರಕೃತಿಯ ಕರ್ಮಗಳ ಸಾಕ್ಷಿ, ಕರ್ತೃವಲ್ಲ. ಇಂತಹ ಜ್ಞಾನಿ ೨೩ ನೇ ಶ್ಲೋಕದಲ್ಲಿ ಹೇಳಿರುವಂತೆ 'ಗುಣ' ತನ್ನ ಕೆಲಸ ಮಾಡುತ್ತದೆ' ಎಂದು ತಿಳಿದು ತಾನು ಚಲಿಸದೆ, ಅಚಲನಾಗಿ ಉದಾಸೀನನಂತೆ ಇರುತ್ತಾನೆಂದು ಕಲ್ಪನೆಮಾಡಬಹುದು. ಗುಣಗಳಲ್ಲಿ ತನ್ಮಯರಾಗಿರುವ ನಾವು ಈ ಸ್ಥಿತಿಯನ್ನು ಧೈರ್ಯದಿಂದ ಕೇವಲ ಕಲ್ಪನೆಮಾಡಿ ತಿಳಿದುಕೊಳ್ಳಬಲ್ಲೆವು, ಅನುಭವಿಸಲಾರೆವು. ಆದರೆ ಆ ಕಲ್ಪನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅಹಂಭಾವವನ್ನು ದಿನ ದಿನಕ್ಕೂ ತಗ್ಗಿಸುತ್ತ ಹೋದರೆ ಕೊನೆಯಲ್ಲಿ ಗುಣಾತೀತ ಈ ಸ್ಥಿತಿಯ ಸಮೀಪವನ್ನು ಸಾರಿ, ಅದರ ದರ್ಶನ ಮಾಡಬಲ್ಲೆವು. ಗುಣಾತೀತ ಸ್ಥಿತಿಯ ಅನುಭವವಾಗುತ್ತದೆ. ಆದರೆ ಅದನ್ನು ವರ್ಣಿಸಲಾರ. ಅದರ ವರ್ಣನೆ ಮಾಡಬಲ್ಲವನು ಗುಣಾತೀತನಲ್ಲ. ಏಕೆಂದರೆ, ಅಂಥವನಲ್ಲಿ ಅಹಂಭಾವವಿದೆ. ಎಲ್ಲರೂ ಸಹಜವಾಗಿ ಅನುಭವಿಸಬಲ್ಲದುದು ಶಾಂತಿ, ಪ್ರಕಾಶ, ಧಾಂಧಲೆ – ಪ್ರವೃತ್ತಿ, ಜಡತೆ, ಮೋಹ. ಗುಣಾತೀತನ ಬಹಳ ಸಮೀಪದ ಸ್ಥಿತಿ ಸಾತ್ತ್ವಿಕತೆ. ಗೀತೆಯಲ್ಲಿ ಹೆಜ್ಜೆ ಹೆಜ್ಜೆಗೂ ಇದನ್ನು ಸ್ಪಷ್ಟಗೊಳಿಸಿದೆ. ಆದುದರಿಂದ ಸತ್ತ್ವಗುಣದ ವಿಕಾಸವೇ ಮನುಷ್ಯ ಮಾತ್ರ ಪ್ರಯತ್ನವಾಗಿರಬೇಕು. ಗುಣಾತೀತ ಸ್ಥಿತಿ ಖಂಡಿತ ಲಭಿಸುತ್ತದೆಂಬ ವಿಶ್ವಾಸ ಅವನಿಗಿರಬೇಕು.

ಏಕನಿಷ್ಠ ಭಕ್ತಿಯೋಗದಿಂದ ನನ್ನ ಸೇವೆ ಮಾಡುವವನು ಈ ಮೂರು ಗುಣಗಳನ್ನೂ ದಾಟಿ ಬ್ರಹ್ಮರೂಪ ಪಡೆಯಲು ಯೋಗ್ಯನಾಗುತ್ತಾನೆ. ॥೨೬॥

ಬ್ರಹ್ಮದ ಸ್ಥಿತಿಯೂ ನಾನೇ, ಶಾಶ್ವತ ಮೋಕ್ಷದ ಸ್ಥಿತಿಯೂ ನಾನೇ. ಇದೇ ರೀತಿ ಸನಾತನ ಧರ್ಮ, ಉತ್ತಮ ಸುಖಗಳ ಸ್ಥಿತಿಯೂ ಕೂಡ ನಾನೇ. ॥೨೭॥

ಹರಿಃ ಓಂ ತತ್ಸತ್

**ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀ ಕೃಷ್ಣಾರ್ಜುನಸಂವಾದೇ
ಗುಣತ್ರಯವಿಭಾಗಯೋಗೋ ನಾಮ ಚತುರ್ದಶೋಽಧ್ಯಾಯಃ ॥**

ಓಂ ತತ್ಸತ್

ಈ ಬಗೆಯಾಗಿ ಶ್ರೀಮದ್ಭಗವದ್ಗೀತಾರೂಪ ಉಪನಿಷತ್ ಅಥವಾ
ಬ್ರಹ್ಮವಿದ್ಯಾಂತರ್ಗತ ಯೋಗಶಾಸ್ತ್ರದ ಶ್ರೀ ಕೃಷ್ಣಾರ್ಜುನಸಂವಾದದಲ್ಲಿ
ಗುಣತ್ರಯವಿಭಾಗಯೋಗವೆಂಬ ಹದಿನಾಲ್ಕನೆಯ ಅಧ್ಯಾಯ.

***

ಅಧ್ಯಾಯ ೧೫

ಪುರುಷೋತ್ತಮಯೋಗ

[ಈ ಅಧ್ಯಾಯದಲ್ಲಿ ಕ್ಷರ-ಅಕ್ಷರಗಳಿಗೆ ಅತೀತವಾದ ತನ್ನ ಉತ್ತಮ ಸ್ವರೂಪವನ್ನು ಭಗವಂತ ತಿಳಿಸಿದಾನೆ.]

ಅಥ ಪಂಚದಶೋಽಧ್ಯಾಯಃ

ಶ್ರೀ ಭಗವಾನುವಾಚ

ಊರ್ಧ್ವಮೂಲಮಧಃಶಾಖಮಶ್ವತ್ಥಂ ಪ್ರಾಹುರವ್ಯಯಮ್ ।
ಛಂದಾಂಸಿ ಯಸ್ಯ ಪರ್ಣಾನಿ ಯಸ್ತಂ ವೇದ ಸ ವೇದವಿತ್ ॥೧॥

ಅಧಶ್ಚೋರ್ಧ್ವಂ ಪ್ರಸೃತಾಸ್ತಸ್ಯ ಶಾಖಾ ಗುಣಪ್ರವೃದ್ಧಾ ವಿಷಯಪ್ರವಾಲಾಃ ।
ಅಧಶ್ಚ ಮೂಲಾನ್ಯನುಸಂತತಾನಿ ಕರ್ಮಾನುಬಂಧೀನಿ ಮನುಷ್ಯಲೋಕೇ ॥೨॥

ಶ್ರೀ ಭಗವಂತ :

ಯಾವುದರ ಬೇರು ಮೇಲೆ, ಕೊಂಬೆಗಳು ಕೆಳಗೋ; ವೇದಗಳು ಎಲೆಗಳೋ- ಇಂಥ ಅವಿನಾಶಿ ಅಶ್ವತ್ಥವೃಕ್ಷದ ವರ್ಣನೆಯನ್ನು ಬುದ್ಧಿವಂತರು ಮಾಡಿದ್ದಾರೆ. ಇದನ್ನು ಅರಿತವನು ವೇದವನ್ನರಿತ ಜ್ಞಾನಿ. ॥೧॥

ಟಿಪ್ಪಣಿ - 'ಶ್ವಃ' ಎಂದರೆ ನಾಳೆ : ಆದುದರಿಂದ ಅಶ್ವತ್ಥವೆಂದರೆ ನಾಳೆಯವರೆಗೆ ಬಾಳಲಾರದ ಕ್ಷಣಿಯ ಪ್ರಪಂಚ. ಪ್ರತಿ ಕ್ಷಣಿಕ ಪ್ರಪಂಚ ರೂಪಾಂತರಗೊಳ್ಳುತ್ತಿದೆ. ಇದರಿಂದ ಅದು ಅಶ್ವತ್ಥ. ಆದರೆ ಅದು ಈ ಸ್ಥಿತಿಯಲ್ಲಿ ಯಾವಾಗಲೂ ಇರುತ್ತದೆ. ಅದರ ಬೇರು ಊರ್ಧ್ವ ಎಂದರೆ ಈಶ್ವರ: ಆದುದರಿಂದ ಅದು ಅವಿನಾಶಿ. ಅದಕ್ಕೆ ವೇದದ ಅಥವಾ ಧರ್ಮದ ಶುದ್ಧಜ್ಞಾನ ರೂಪ ಎಲೆ ಇಲ್ಲದಿದ್ದರೆ ಅದು ಶೋಭೆ ಕೊಡದು. ಈ ರೀತಿ ಯಾರಿಗೆ ಸಂಸಾರದ ಯಥಾರ್ಥ ಜ್ಞಾನವಿದೆಯೋ, ಧರ್ಮದ ಅರಿವಿದೆಯೋ ಅವನೇ ಜ್ಞಾನಿ.

ಗುಣಗಳ ಸ್ಪರ್ಶದಿಂದ ಬೆಳೆದ, ವಿಷಯರೂಪ ಅಂಕುರಗಳುಳ್ಳ ಆ ಅಶ್ವತ್ಥದ ಕೊಂಬೆಗಳು ಕೆಳಗೂ ಮೇಲೂ ಹರಡಿಕೊಂಡಿವೆ. ಕರ್ಮವನ್ನು ಬಂಧನವಾಗಿಸುವ ಅದರ ಬೇರುಗಳು ಮನುಷ್ಯಲೋಕದಲ್ಲಿ ಕೆಳಗೆ ಹರಡಿಕೊಂಡಿವೆ.

ಟಿಪ್ಪಣಿ - ಅಜ್ಞಾನಿಯ ದೃಷ್ಟಿಯಿಂದ ಪ್ರಪಂಚವೃಕ್ಷದ ವರ್ಣನೆ ಇದು. ಅವನು ಅದರ ಮೇಲುಗಡೆ ಈಶ್ವರನಲ್ಲಿರುವ ಬೇರನ್ನು ನೋಡ. ಅದಕ್ಕೆ ಬದಲಾಗಿ ವಿಷಯಗಳ ರಮಣೀಯತೆಯಿಂದ ಮುಗ್ಧನಾಗಿ ತ್ರಿಗುಣಗಳ ಮೂಲಕ ಈ ವೃಕ್ಷವನ್ನು ಪೋಷಿಸುತ್ತಾನೆ. ಮನುಷ್ಯ ಲೋಕದಲ್ಲಿ ಕರ್ಮಪಾಶದಿಂದ ಬಂಧಿತನಾಗಿರುತ್ತಾನೆ.

ನ ರೂಪಮಸ್ಯೇಹ ತಥೋಪಲಭ್ಯತೇ
ನಾಂತೋ ನ ಚಾದಿರ್ನ ಚ ಸಂಪ್ರತಿಷ್ಠಾ ।
ಅಶ್ವತ್ಥಮೇನಂ ಸುವಿರೂಢಮೂಲ
ಮಸಂಗಶಸ್ತ್ರೇಣ ದೃಢೇನ ಛಿತ್ವಾ ॥೩॥

ತತಃ ಪದಂ ತತ್ಪರಿಮಾರ್ಗಿತವ್ಯಂ
ಯಸ್ಮಿನ್ ಗತಾ ನ ನಿವರ್ತಂತಿ ಭೂಯಃ ।
ತಮೇವ ಚಾದ್ಯಂ ಪುರುಷಂ ಪ್ರಪದ್ಯೇ
ಯತಃ ಪ್ರವೃತ್ತಿಃ ಪ್ರಸೃತಾ ಪುರಾಣೀ ॥೪॥

ನಿರ್ಮಾನಮೋಹಾ ಜಿತಸಂಗದೋಷಾ
ಅಧ್ಯಾತ್ಮ ನಿತ್ಯಾ ವಿನಿವೃತ್ತ ಕಾಮಾಃ ।
ದ್ವಂದ್ವೈರ್ವಿಮುಕ್ತಾಸ್ಸುಖ ದುಃಖಸಂಜ್ಞೈ
ರ್ಗಚ್ಛಂತ್ಯಮೂಢಾಃ ಪದಮವ್ಯಯಂ ತತ್ ॥೫॥

ನ ತದ್ಭಾಸಯತೇ ಸೂರ್ಯೋ ನ ಶಶಾಂಕೋ ನ ಪಾವಕಃ ।
ಯದ್ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ ॥೬॥

ಇವರ ಯಥಾರ್ಥ ಸ್ವರೂಪ ನೋಡಲು ಸಿಗದು. ಇವಕ್ಕೆ ಅಂತ–ಆದಿ ಆಧಾರ ಯಾವುದೂ ಇಲ್ಲ. ಬಹಳ ಆಳವಾಗಿ ಬೇರೂರಿರುವ ಈ ಅಶ್ವತ್ಥವನ್ನು ಅಸಂಗರೂಪದ ಬಲವಾದ ಶಸ್ತ್ರದಿಂದ ಛೇದಿಸಿ, ಮನುಷ್ಯ ' ಸನಾತನ ಪ್ರವೃತ್ತಿ–ಮಾಯೆಯನ್ನು ಹರಡಿರುವ ಆದಿಪುರುಷನಿಗೆ ನಾನು ಶರಣುಹೋಗುತ್ತೇನೆ' ಎಂದು ಪ್ರಾರ್ಥಿಸಿ ಮತ್ತೆ ಜನನ– ಮರಣಗಳ ಚಕ್ರದಲ್ಲಿ ಬೀಳಿಸದಂಥ ಪದವನ್ನು ಹುಡುಕಲೆತ್ನಿಸಬೇಕು. ॥೩–೪॥

ಟಿಪ್ಪಣಿ – ಅಸಂಗವೆಂದರೆ ಅಸಹಕಾರ, ವೈರಾಗ್ಯ ಮನುಷ್ಯ ವಿಷಯಗಳೊಡನೆ ಅಸಹಕಾರ ಮಾಡದಿರುವವರೆಗೆ, ಅವುಗಳ ಪ್ರಲೋಭನದಿಂದ ದೂರವಾಗಿರದವರೆಗೆ, ಅವನು ಅವುಗಳಲ್ಲಿ ಲಿಪ್ತ. ವಿಷಯುಗಳೊಂದಿಗೆ ಆಡುತ್ತಲಿದ್ದು ಅವುಗಳಿಂದ ಅಸ್ಪೃಶ್ಯನಾಗಿರುವುದು ಅಸಂಭವವೆಂಬುದನ್ನು ಶ್ಲೋಕದಲ್ಲಿ ತೋರಿಸಲಾಗಿದೆ.

ಮಾನ–ಮೋಹಗಳನ್ನು ತ್ಯಾಗಮಾಡಿದ, ಆಸಕ್ತಿಯಿಂದುಂಟಾಗುವ ದೋಷಗಳನ್ನು ದೂರಗೊಳಿಸಿದ, ನಿತ್ಯವೂ ಆತ್ಮನಿಮಗ್ನನಾದ, ವಿಷಯಗಳು ಶಮನಗೊಂಡ, ಸುಖ–ದುಃಖ ರೂಪದ ದ್ವಂದ್ವಗಳಿಂದ ಮುಕ್ತನಾದ ಜ್ಞಾನಿ ಅವಿನಾಶಪದವನ್ನು ಹೊಂದುತ್ತಾನೆ. ॥೫॥

ಯಾವಸ್ಥಾನವನ್ನೈದಿದವರು ಮತ್ತೆ ಹುಟ್ಟಬೇಕಾಗಿಲ್ಲವೋ ಆ ಸ್ಥಾನ ನನ್ನ ಪರಮಧಾಮ. ಅಲ್ಲಿ ಸೂರ್ಯ–ಚಂದ್ರ–ಅಗ್ನಿ ಬೆಳಗಬೇಕಾಗಿಲ್ಲ. ॥೬॥

ಮಮೈವಾಂಶೋ ಜೀವಲೋಕೇ ಜೀವಭೂತಸ್ಸನಾತನಃ ।
ಮನಃ ಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ ॥೭॥

ಶರೀರಂ ಯದವಾಪ್ನೋತಿ ಯಚ್ಚಾಪ್ಯುತ್ಕ್ರಾಮತೀಶ್ವರಃ ।
ಗೃಹೀತ್ವೈತಾನಿ ಸಂಯಾತಿ ವಾಯುರ್ಗಂಧಾನಿವಾಶಯಾತ್ ॥೮॥

ಶ್ರೋತ್ರಂ ಚಕ್ಷುಸ್ಸ್ಪರ್ಶನಂ ಚ ರಸನಂ ಘ್ರಾಣಮೇವ ಚ ।
ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ ॥೯॥

ಉತ್ಕ್ರಾಮಂತಂ ಸ್ಥಿತಂ ವಾಪಿ ಭುಂಜಾನಂ ವಾ ಗುಣಾನ್ವಿತಮ್ ।
ವಿಮೂಢಾ ನಾನುಪಶ್ಯಂತಿ ಪಶ್ಯಂತಿ ಜ್ಞಾನಚಕ್ಷುಷಃ ॥೧೦॥

ಯತಂತೋ ಯೋಗಿನಶ್ಚೈನಂ ಪಶ್ಯಂತ್ಯಾತ್ಮನ್ಯವಸ್ಥಿತಮ್ ।
ಯತಂತೋಽಪ್ಯಕೃತಾತ್ಮಾನೋ ನೈನಂ ಪಶ್ಯಂತ್ಯಚೇತಸಃ ॥೧೧॥

ನನ್ನ ಸನಾತನ ಅಂಶವೇ ಜೀವಲೋಕದಲ್ಲಿ ಜೀವವಾಗಿ ಪ್ರಕೃತಿಯ ಐದು ಇಂದ್ರಿಯಗಳನ್ನು, ಮನಸ್ಸನ್ನು ಆಕರ್ಷಿಸುತ್ತದೆ. ॥೭॥

ಈಶ್ವರ (ಜೀವವಾದ ಈ ನನ್ನ ಅಂಶರೂಪ) ಶರೀರಧಾರಣೆ ಮಾಡಿದಾಗ ಅಥವಾ ಬಿಟ್ಟಾಗ, ಸುತ್ತಮುತ್ತಲಿನ ಮಂಡಲದಿಂದ ವಾಯು ಗಂಧವನ್ನೆತ್ತಿಕೊಂಡು ಹೋಗುವಂತೆ, (ಮನಸ್ಸು ಇಂದ್ರಿಯಗಳನ್ನು) ಜೊತೆಗೆ ಒಯ್ಯುತ್ತಾನೆ. ॥೮॥

ಕಿವಿ, ಕಣ್ಣು, ಚರ್ಮ, ನಾಲಗೆ, ಮೂಗು, ಮನಸ್ಸುಗಳ ಆಶ್ರಯ ಪಡೆದು ಅವನು ವಿಷಯಗಳನ್ನು ಸೇವಿಸುತ್ತಾನೆ. ॥೯॥

ಟಿಪ್ಪಣಿ – ಇಲ್ಲಿ ವಿಷಯವೆಂದರೆ ಬೀಭತ್ಸ ವಿಲಾಸವಲ್ಲ. ಆಯಾ ಇಂದ್ರಿಯಗಳ ಸ್ವಾಭಾವಿಕ ಕ್ರಿಯೆ. ಹೇಗೆಂದರೆ, ಕಣ್ಣುಗಳ ವಿಷಯ ನೋಡುವುದು, ಕಿವಿಗಳದು ಕೇಳುವುದು, ನಾಲಗೆಯದು ಸವಿಯುವುದು–ಈ ಕ್ರಿಯೆಗಳು ವಿಕಾರಯುಕ್ತ, ಅಹಂಕಾರ ಪೂರ್ಣವಾದರೆ ದೂಷಿತ, ಬೀಭತ್ಸ ಎನ್ನಿಸುತ್ತವೆ. ಆದರೆ ನಿರ್ವಿಕಾರವಾದರೆ ನಿರ್ದೋಷ. ಹುಡುಗ ಕಣ್ಣುಗಳಿಂದ ನೋಡುವಾಗ, ಕೈಯಿಂದ ಮುಟ್ಟುವಾಗ ವಿಕಾರ ವಶನಾಗುವುದಿಲ್ಲ. ಆದುದರಿಂದ ಮುಂದಿನ ಶ್ಲೋಕದಲ್ಲಿ ಹೀಗೆ ಹೇಳಿದೆ.

(ದೇಹದ) ತ್ಯಾಗಮಾಡುವವನನ್ನು ಅಥವಾ ಅದರಲ್ಲಿರುವವನನ್ನು ಅಥವಾ ಗುಣಗಳ ಆಶ್ರಯದಿಂದ ಭೋಗಗಳನ್ನು ಭೋಗಿಸುವವನನ್ನು (ಅಂಶರೂಪಿ ಈಶ್ವರನನ್ನು) ಮೂರ್ಖರು ನೋಡಲಾರರು. ದಿವ್ಯಚಕ್ಷುಗಳುಳ್ಳ ಜ್ಞಾನಿಯೇ ನೋಡಬಲ್ಲ. ॥೧೦॥

ಯತ್ನಶೀಲರಾದ ಯೋಗಿಗಳು ತಮ್ಮಲ್ಲಿರುವವ (ಈಶ್ವರ)ನನ್ನು ನೋಡುತ್ತಾರೆ. ಆತ್ಮಶುದ್ಧಿ ಇಲ್ಲದ ಮೂಢರು ಯತ್ನಿಸಿದರೂ ಇವನನ್ನು ನೋಡಲಾರರು. ॥೧೧॥

ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಮ್ ।
ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಮ್ ॥೧೨॥

ಗಾಮಾವಿಶ್ಯ ಚ ಭೂತಾನಿ ಧಾರಯಾಮ್ಯಹಮೋಜಸಾ ।
ಪುಷ್ಣಾಮಿ ಚೌಷಧೀಸ್ಸರ್ವಾಃ ಸೋಮೋ ಭೂತ್ವಾ ರಸಾತ್ಮಕಃ ॥೧೩॥

ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ ।
ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್ ॥೧೪॥

ಸರ್ವಸ್ಯ ಚಾಹಂ ಹೃದಿ ಸಂನಿವಿಷ್ಟೋ
ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ ।
ವೇದೈಶ್ಚ ಸರ್ವೈರಹಮೇವ ವೇದ್ಯೋ
ವೇದಾಂತಕೃದ್ವೇದವಿದೇವ ಚಾಹಮ್ ॥೧೫॥

ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ ।
ಕ್ಷರಸ್ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ॥೧೬॥

ಟಿಪ್ಪಣಿ – ಇದಕ್ಕೂ ೯ನೆಯ ಅಧ್ಯಾಯದಲ್ಲಿ ಭಗವಂತ ದುರಾಚಾರಿಗಳಿಗೆ ಕೊಟ್ಟಿರುವ ವಚನಕ್ಕೂ ವಿರೋಧವಿಲ್ಲ. ಅಕೃತಾತ್ಮನೆಂದರೆ ಭಕ್ತಿಹೀನ, ಸ್ವೇಚ್ಛಾಚಾರಿ, ದುರಾಚಾರಿ. ನಮ್ರತಾಪೂರ್ವಕ ಶ್ರದ್ಧೆಯಿಂದ ಈಶ್ವರನನ್ನು ಭಜಿಸುವವನು ಆತ್ಮಶುದ್ಧನಾಗಿ ಈಶ್ವರನನ್ನು ಅರಿಯುತ್ತಾನೆ. ಯಮಾನಿಯಮಾದಿಗಳನ್ನು ಲಕ್ಷಿಸದ ಕೇವಲ ಬುದ್ಧಿ ಪ್ರಯೋಗದಿಂದ ಈಶ್ವರನನ್ನು ತಿಳಿಯಲಪೇಕ್ಷಿಸುವವನು ಅಚೇತ–ಚಿತ್ತವಿಹೀನ, ರಾಮ ರಹಿತ: ರಾಮನನ್ನು ಅರಿಯಲಾರ.

ಸೂರ್ಯನ ಯಾವ ತೇಜಸ್ಸು ಸಮಸ್ತ ಜಗತ್ತನ್ನು ಪ್ರಕಾಶಗೊಳಿಸುತ್ತದೋ, ಯಾವ ತೇಜಸ್ಸು ಚಂದ್ರ, ಅಗ್ನಿಗಳಲ್ಲಿದೆಯೋ ಆ ತೇಜಸ್ಸು ನನ್ನದೇ ಎಂದು ತಿಳಿ. ॥೧೨॥

ಪೃಥ್ವಿಯಲ್ಲಿ ಪ್ರವೇಶಿಸಿ ನನ್ನ ಶಕ್ತಿಯಿಂದ ನಾನು ಪ್ರಾಣಿಗಳನ್ನು ಉತ್ಪನ್ನಮಾಡುವ ಚಂದ್ರನಾಗಿ ಸಕಲ ವನಸ್ಪತಿಗಳ ಪೋಷಣೆಮಾಡುತ್ತೇನೆ. ॥೧೩॥

ಪ್ರಾಣಿಗಳ ಶರೀರವನ್ನಾಶ್ರಯಿಸಿ ನಾನು ಜಠರಾಗ್ನಿಯಾಗಿ ಪ್ರಾಣ, ಅಪಾನ ವಾಯುಗಳ ಮೂಲಕ ನಾಲ್ಕು ಬಗೆಯ ಅನ್ನವನ್ನು ಪಚನ ಮಾಡುತ್ತೇನೆ. ॥೧೪॥

ಎಲ್ಲರ ಹೃದಯದಲ್ಲಿಯೂ ಅಧಿಷ್ಠಿತನಾದ ನನ್ನಿಂದಲೇ ಸ್ಮೃತಿ, ಜ್ಞಾನವೂ, ಅವುಗಳ ಅಭಾವವೂ ಉಂಟಾಗುತ್ತದೆ. ಸಕಲ ವೇದಗಳ ಮೂಲಕವೂ ಅರಿಯಲು ಯೋಗ್ಯ ನಾನೇ, ವೇದವನ್ನರಿತವನೂ ನಾನೇ, ವೇದಾಂತವನ್ನು ಪ್ರಕಟಿಸುವವನೂ ನಾನೇ. ॥೧೫॥

ಈ ಲೋಕದಲ್ಲಿ ಕ್ಷರ ಎಂದರೆ ನಾಶವಂತ, ಅಕ್ಷರ ಎಂದರೆ ಅವಿನಾಶಿ ಎಂಬ ಎರಡು ಬಗೆಯ ಪುರುಷರು. ಭೂತಮಾತ್ರಗಳು ಕ್ಷರ. ಅವುಗಳಲ್ಲಿ ಸ್ಥಿರವಾಗಿರುವ ಅಂತರ್ಯಾಮಿ ಅಕ್ಷರ. ॥೧೬॥

ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥೧೭॥

ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ ।
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥೧೮॥

ಯೋ ಮಾಮೇವಮಸಮ್ಮೂಢೋ ಜಾನಾತಿ ಪುರುಷೋತ್ತಮಮ್ ।
ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ ॥೧೯॥

ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾನಘ ।
ಏತದ್ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ ॥೨೦॥

ಹರಿಃ ಓಂ ತತ್ಸತ್

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ಪುರುಷೋತ್ತಮಯೋಗೋ ನಾಮ ಪಂಚದಶೋಽಧ್ಯಾಯಃ ॥

ಇವಲ್ಲದೆ ಉತ್ತಮ ಪುರುಷ ಬೇರೆ ಇದ್ದಾನೆ. ಅವನನ್ನು ಪರಮಾತ್ಮ ಎನ್ನುತ್ತಾರೆ. ಆ ಅವ್ಯಯನಾದ ಈಶ್ವರ ಮೂರು ಲೋಕಗಳಲ್ಲಿಯೂ ಪ್ರವೇಶಿಸಿ ಅವನ್ನು ಪೋಷಿಸುತ್ತಾನೆ. ॥೧೭॥

ನಾನು ಕ್ಷರಕ್ಕೆ ಅತೀತ. ಅಕ್ಷರಕ್ಕಿಂತ ಉತ್ತಮ. ಇದರಿಂದ ಲೋಕಗಳಲ್ಲಿಯೂ ವೇದಗಳಲ್ಲಿಯೂ ನಾನು ಪುರುಷೋತ್ತಮನೆಂಬ ಹೆಸರಿನಿಂದ ಪ್ರಸಿದ್ಧನಾಗಿದ್ದೇನೆ . ॥೧೮॥

ಭಾರತ ! ಮೋಹರಹಿತನಾಗಿ ಪುರುಷೋತ್ತಮನಾದ ನನ್ನನ್ನು ಅರಿಯುವವನು ಸಕಲವನ್ನೂ ಅರಿಯುತ್ತಾನೆ. ಪೂರ್ಣಭಾವದಿಂದ ನನ್ನ ಭಜನೆ ಮಾಡುತ್ತಾನೆ. ॥೧೯॥

ಅನಘ ! ರಹಸ್ಯಾತಿರಹಸ್ಯವಾದ ಈ ಶಾಸ್ತ್ರವನ್ನು ನಾನು ನಿನಗೆ ಹೇಳಿದೆ. ಇದನ್ನರಿತು ಮನುಷ್ಯ ಬುದ್ಧಿಶಾಲಿಯಾಗಿ ತನ್ನ ಜೀವನವನ್ನು ಸಫಲಗೊಳಿಸಿಕೊಳ್ಳಲಿ. ॥೨೦॥

ಓಂ ತತ್ಸತ್

ಈ ಬಗೆಯಾಗಿ ಶ್ರೀ ಮದ್ಭಗವದ್ಗೀತಾರೂಪ ಉಪನಿಷತ್ ಅಥವಾ
ಬ್ರಹ್ಮವಿದ್ಯಾಂತರ್ಗತ ಯೋಗಶಾಸ್ತ್ರದ ಶ್ರೀ ಕೃಷ್ಣಾರ್ಜುನ ಸಂವಾದದಲ್ಲಿ
ಪುರುಷೋತ್ತಮಯೋಗವೆಂಬ ಹದಿನೈದನೆಯ ಅಧ್ಯಾಯ.

***

ಅಧ್ಯಾಯ ೧೬

ದೈವಾಸುರಸಂಪದ್ವಿಭಾಗಯೋಗ

[ಇಲ್ಲಿ ದೈವೀ, ಅಸುರೀ ಸಂಪದಗಳ ವರ್ಣನೆ ಇದೆ.]

ಅಥ ಷೋಡಶೋಽಧ್ಯಾಯಃ

ರೀ ಭಗವಾನುವಾಚ

ಅಭಯಂ ಸತ್ತ್ವಸಂಶುದ್ಧಿರ್ಜ್ಞಾನಯೋಗವ್ಯವಸ್ಥಿತಿಃ ।
ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಮ್ ॥೧॥

ಅಹಿಂಸಾ ಸತ್ಯಮಕ್ರೋಧಸ್ತ್ಯಾಗಶ್ಶಾಂತಿರಪೈಶುನಮ್ ।
ದಯಾ ಭೂತೇಷ್ವಲೋಲುಪ್ತ್ವಂ ಮಾರ್ದವಂ ಹ್ರೀರಚಾಪಲಮ್ ॥೨॥

ತೇಜಃ ಕ್ಷಮಾ ಧೃತಿಃಶೌಚಮದ್ರೋಹೋ ನಾತಿಮಾನಿತಾ ।
ಭವಂತಿ ಸಂಪದಂ ದೈವೀಮಭಿಜಾತಸ್ಯ ಭಾರತ ॥೩॥

ರೀ ಭಗವಂತ :

ಭಾರತ ! ಅಭಯ, ಅಂತಃಕರಣಶುದ್ಧಿ, ಜ್ಞಾನಯೋಗಗಳಲ್ಲಿ ನಿಷ್ಠೆ ದಾನ, ದಮ, ಯಜ್ಞ, ಸ್ವಾಧ್ಯಾಯ, ತಪಸ್ಸು, ಸರಳತೆ, ಅಹಿಂಸೆ, ಸತ್ಯ, ಅಕ್ರೋಧ, ತ್ಯಾಗ ಶಾಂತಿ, ಅಪೈಶುನ, ಭೂತದಯೆ, ಅಲೋಲುಪತೆ, ಮೃದುತ್ವ, ಮರ್ಯಾದೆ, ಅಚಂಚಲತೆ, ತೇಜಸ್ವಿತೆ, ಕ್ಷಮೆ, ಧೃತಿ, ಶೌಚ, ಅದ್ರೋಹ, ನಿರಭಿಮಾನ–ಇಷ್ಟು ಗುಣ ದೈವೀಸಂಪತ್ತಿನೊಂದಿಗೆ ಹುಟ್ಟಿದವರಲ್ಲಿ ಇರುತ್ತವೆ. ॥೧–೩॥

ಟಿಪ್ಪಣಿ – ದಮ ಅಥವಾ ಇಂದ್ರಿಯನಿಗ್ರಹ; ಅಪೈಶುನ ಎಂದರೆ ಪರರನ್ನು ನಿಂದಿಸದಿರುವುದು; ಅಲೋಲುಪತೆ ಎಂದರೆ ಲಾಲಸೆಯಿಲ್ಲದಿರುವುದು, ಲಂಪಟನಾಗದಿರುವುದು; ತೇಜಸ್ವಿತೆ ಎಂದರೆ ಎಲ್ಲ ಬಗೆಯ ಹೀನವೃತ್ತಿಯನ್ನೂ ವಿರೋಧಿಸುವ ಶಕ್ತಿ; ಅದ್ರೋಹವೆಂದರೆ ಯಾರಿಗೂ ಕೆಡಕು ಬಯಸದೆ ಮಾಡದೆ ಇರುವುದು.

ದಂಭೋ ದರ್ಪೋಽಭಿಮಾನಶ್ಚ ಕ್ರೋಧಃ ಪಾರುಷ್ಯಮೇವ ಚ ।
ಅಜ್ಞಾನಂ ಚಾಭಿಜಾತಸ್ಯ ಪಾರ್ಥ ಸಂಪದಮಾಸುರೀಮ್ ॥೪॥

ದೈವೀಸಂಪದ್ವಿಮೋಕ್ಷಾಯ ನಿಬಂಧಾಯಾಸುರೀ ಮತಾ ।
ಮಾ ಶುಚಸ್ಸಂಪದಂ ದೈವೀಮಭಿಜಾತೋಽಸಿ ಪಾಂಡವ ॥೫॥

ದ್ವೌ ಭೂತಸರ್ಗೌ ಲೋಕೇಽಸ್ಮಿನ್ ದೈವ ಅಸುರ ಏವ ಚ ।
ದೈವೋ ವಿಸ್ತರಶಃ ಪ್ರೋಕ್ತಃ ಆಸುರಂ ಪಾರ್ಥ ಮೇ ಶೃಣು ॥೬॥

ಪ್ರವೃತ್ತಿಂ ಚ ನಿವೃತ್ತಿಂ ಚ ಜನಾ ನ ವಿದುರಾಸುರಾಃ ।
ನ ಶೌಚಂ ನಾಪಿ ಚಾಚಾರೋ ನ ಸತ್ಯಂ ತೇಷು ವಿದ್ಯತೇ ॥೭॥

ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರಮ್ ।
ಅಪರಸ್ಪರಸಂಭೂತಂ ಕಿಮನ್ಯತ್ಕಾಮಹೈತುಕಮ್ ॥೮॥

ಏತಾಂ ದೃಷ್ಟಿಮವಷ್ಟಭ್ಯ ನಷ್ಟಾತ್ಮಾನೋಽಲ್ಪಬುದ್ಧಯಃ ।
ಪ್ರಭವಂತ್ಯುಗ್ರಕರ್ಮಾಣಃ ಕ್ಷಯಾಯ ಜಗತೋಽಹಿತಾಃ ॥೯॥

ಪಾರ್ಥ ! ಅಸುರೀ ಸಂಪತ್ತನ್ನು ಪಡೆದು ಹುಟ್ಟಿದವರಲ್ಲಿ ದಂಭ, ದರ್ಪ, ಅಭಿಮಾನ, ಕ್ರೋಧ, ಪಾರುಷ್ಯ, ಅಜ್ಞಾನಗಳು ಕಂಡುಬರುತ್ತವೆ. ॥೪॥

ಟಿಪ್ಪಣಿ – ತನ್ನಲ್ಲಿಲ್ಲದುದನ್ನು ತೋರಿಸುವುದು ದಂಭ, ಡೌಲು, ಪಾಷಂಡತನ; ದರ್ಪವೆಂದರೆ ದೊಡ್ಡಸ್ತಿಕೆ, ಹೆಚ್ಚುಗಾರಿಕೆ; ಪಾರುಷ್ಯ ಎಂದರೆ ಕಠೋರತೆ.

ದೈವೀಸಂಪತ್ತು ಮೋಕ್ಷದಾಯಕ, ಆಸುರೀಸಂಪತ್ತು ಬಂಧನದಲ್ಲಿ ತೊಡಕಿಸುವಂಥದು. ಪಾಂಡವ, ವಿಷಾದಿಸಬೇಡ. ನೀನು ದೈವೀಸಂಪದವನ್ನು ಪಡೆದು ಹುಟ್ಟಿದೀಯೆ. ॥೫॥

ಈ ಲೋಕದಲ್ಲಿ ಎರಡು ಬಗೆಯ ಸೃಷ್ಟಿ: ದೈವೀ–ಆಸುರೀ. ಪಾರ್ಥ ! ದೈವೀಯ ವಿಸ್ತೃತ ವರ್ಣನೆ ಮಾಡಿದುದಾಯಿತು. ಈಗ ಆಸುರೀಯ ವರ್ಣನೆ ಕೇಳು. ॥೬॥

ಆಸುರ ಜನರು ಪ್ರವೃತ್ತಿ–ನಿವೃತ್ತಿಗಳನ್ನು ಅರಿಯರು. ಶೌಚ, ಆಚಾರ, ಸತ್ಯದ ಭಾಸವೂ ಅವರಿಗೆ ಇಲ್ಲ. ॥೭॥

ಜಗತ್ತೆಲ್ಲ ಅಸತ್ಯ, ಆಧಾರರಹಿತ, ಈಶ್ವರಹೀನ, ಕೇವಲ ಸ್ತ್ರೀ ಪುರುಷರ ಸಂಬಂಧದಿಂದ ಹುಟ್ಟಿದೆ ಎಂದು ಅವರು ಹೇಳುತ್ತಾರೆ. ವಿಷಯ ಭೋಗದ ಹೊರತು ಅದಕ್ಕೆ ಮತ್ತಾವ ಉದ್ದೇಶ್ಯವಿರಬಲ್ಲದು ? ॥೮॥

ಭಯಾನಕ ಕೆಲಸಗಳನ್ನು ಮಾಡುವವರೂ, ಮಂದಮತಿಗಳೂ, ದುಷ್ಟರೂ ಈ ಬಗೆಯ ವಿಚಾರಗಳನ್ನು ಅವಲಂಬಿಸುವ ಜಗತ್ತಿನ ಶತ್ರುಗಳೂ ಅದನ್ನು ನಾಶಗೊಳಿಸಲು ಹುಟ್ಟುತ್ತಾರೆ. ॥೯॥

ಮಮಾಶ್ರಿತ್ಯ ದುಷ್ಪೂರಂ ದಂಭಮಾನಮದಾನ್ವಿತಾಃ ।
ೋಹಾದ್ಗೃಹೀತ್ವಾಽಸದ್ಗ್ರಾಹಾನ್ ಪ್ರವರ್ತಂತೇಽಶುಚಿವ್ರತಾಃ ॥೧೦॥

ಂತಾಮಪರಿಮೇಯಾಂ ಚ ಪ್ರಲಯಾಂತಾಮುಪಾಶ್ರಿತಾಃ ।
ಮೋಪಭೋಗಪರಮಾ ಏತಾವದಿತಿ ನಿಶ್ಚಿತಾಃ ॥೧೧॥

ಶಾಪಾಶಶತೈರ್ಬದ್ಧಾಃ ಕಾಮಕ್ರೋಧಪರಾಯಣಾಃ ।
ಹಂತೇ ಕಾಮಭೋಗಾರ್ಥಮನ್ಯಾಯೇನಾರ್ಥಸಂಚಯಾನ್ ॥೧೨॥

ದಮದ್ಯ ಮಯಾ ಲಬ್ಧಮಿಮಂ ಪ್ರಾಪ್ಸ್ಯೇ ಮನೋರಥಮ್ ।
ದಮಸ್ತೀದಮಪಿ ಮೇ ಭವಿಷ್ಯತಿ ಪುನರ್ಧನಮ್ ॥೧೩॥

ಸೌ ಮಯಾ ಹತಶ್ಶತ್ರುರ್ಹನಿಷ್ಯೇ ಚಾಪರಾನಪಿ ।
ಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ ಸುಖೀ ॥೧೪॥

ಢ್ಯೋಽಭಿಜನವಾನಸ್ಮಿ ಕೋಽನ್ಯೋಽಸ್ತಿ ಸದೃಶೋ ಮಯಾ ।
ಯಕ್ಷ್ಯೇ ದಾಸ್ಯಾಮಿ ಮೋದಿಷ್ಯ ಇತ್ಯಜ್ಞಾನವಿಮೋಹಿತಾಃ ॥೧೫॥

ಅನೇಕಚಿತ್ತವಿಭ್ರಾಂತಾಃ ಮೋಹಜಾಲಸಮಾವೃತಾಃ ।
ಪ್ರಸಕ್ತಾಃ ಕಾಮಭೋಗೇಷು ಪತಂತಿ ನರಕೇಽಶುಚೌ ॥೧೬॥

ಎಂದಿಗೂ ತೃಪ್ತಿಯಾಗದ ಕಾಮನೆಗಳಿಂದ ತುಂಬಿದ ದಾಂಭಿಕ, ಅಭಿಮಾನಿ, ಮದಾಂಧ, ಅಶುಭಸಂಕಲ್ಪರು ಮೋಹದ ದೆಸೆಯಿಂದ ದುಷ್ಟ ಇಚ್ಛೆಗಳನ್ನು ಧರಿಸಿ ವರ್ತಿಸುತ್ತಾರೆ. ॥೧೦॥

ಪ್ರಳಯದವರೆಗೆ ಮುಗಿಯದಿರುವ ಇಂಥ ಅಪರಿಮಿತ ಚಿಂತೆಯನ್ನಾಶ್ರಯಿಸಿ, ಕಾಮಗಳ ಪರಮಭೋಗಿಗಳಾಗಿ, 'ಭೋಗವೇ ಸರ್ವಸ್ವ'ವೆಂದು ನಿಶ್ಚಯಿಸಿದ, ನೂರಾರು ಆಸೆಗಳ ಬಲೆಗಳಲ್ಲಿ ಸಿಕ್ಕಿದ ಕಾಮಿ, ಕೋಪಿಗಳು, ವಿಷಯಭೋಗಕ್ಕಾಗಿ ಅನ್ಯಾಯದಿಂದ ಧನಸಂಗ್ರಹ ಮಾಡಬಯಸುತ್ತಾರೆ. ॥೧೧–೧೨॥

ಇವೊತ್ತು ಇದು ನನಗೆ ಸಿಕ್ಕಿತು, ಈ ಮನೋರಥವನ್ನು ನೆರವೇರಿಸಿಕೊಳ್ಳುತ್ತೇನೆ, ಇಷ್ಟು ಧನ ಇದೆ, ಮತ್ತೆ ನಾಳೆ ಇಷ್ಟು ಧನ, ನನ್ನದಾಗುತ್ತದೆ: ಈ ಶತ್ರುವನ್ನು ಕೊಂದೆ, ಉಳಿದವರನ್ನು ಕೊಲ್ಲುತ್ತೇನೆ, ನಾನು ಸರ್ವಸಂಪನ್ನ, ಭೋಗಿ, ಸಿದ್ಧ, ಬಲಿಷ್ಠ, ಸುಖಿ, ಶ್ರೀಮಂತ, ಕುಲೀನ; ನನಗೆ ಯಾರು ಸಾಟಿ ? ನಾನು ಯಜ್ಞಮಾಡುತ್ತೇನೆ, ದಾನ ಕೊಡುತ್ತೇನೆ, ಆನಂದ ಪಡುತ್ತೇನೆ–ಅಜ್ಞಾನಿಗಳು ಹೀಗೆ ವಿಚಾರಮಾಡುತ್ತಾರೆ. ಅವರು ಅನೇಕ ಭ್ರಮೆಗಳಿಗೊಳಗಾಗುತ್ತಾರೆ, ಮೋಹಜಾಲದಲ್ಲಿ ಸಿಗುತ್ತಾರೆ, ವಿಷಯಭೋಗಗಳಲ್ಲಿ ಮುಳುಗಿ ಅಶುಭ ನರಕದಲ್ಲಿ ಬೀಳುತ್ತಾರೆ. ॥೧೩–೧೬॥

ಆತ್ಮಸಂಭಾವಿತಾಸ್ತಬ್ಧಾ ಧನಮಾನಮದಾನ್ವಿತಾಃ ।
ಯಜಂತೇ ನಾಮಯಜ್ಞೈಸ್ತೇ ದಂಭೇನಾವಿಧಿಪೂರ್ವಕಮ್ ॥೧೭॥

ಅಹಂಕಾರ ಬಲಂ ದರ್ಪಂ ಕಾಮಂ ಕ್ರೋಧಂ ಚ ಸಂಶ್ರಿತಾಃ ।
ಮಾಮಾತ್ಮ ಪರದೇಹೇಷು ಪ್ರದ್ವಿಷಂತೋಽಭ್ಯಸೂಯಕಾಃ ॥೧೮॥

ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।
ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು ॥೧೯॥

ಅಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ ।
ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಮ್ ॥೨೦॥

ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।
ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್ ॥೨೧॥

ಏತೈರ್ವಿಮುಕ್ತಃ ಕೌಂತೇಯ ತಮೋದ್ವಾರೈಸ್ತ್ರಿಭಿರ್ನರಃ ।
ಆಚರತ್ಯಾತ್ಮನಶ್ರೇಯಸ್ತತೋ ಯಾತಿ ಪರಾಂ ಗತಿಮ್ ॥೨೨॥

ತಾವೇ ದೊಡ್ಡವರೆನ್ನುವವರು, ಜಂಬಗಾರರು, ಧನ-ಮಾನಗಳ ಮದದಲ್ಲಿ ಮುಳುಗಿದವರು, ವಿಧಿಗಳಿಲ್ಲದೆ ದಂಭದಿಂದ ಕೇವಲ ಹೆಸರಿಗೆ ಮಾತ್ರ ಯಜ್ಞಮಾಡುತ್ತಾರೆ. ॥೧೭॥

ಈ ಜನರು ಅಹಂಕಾರ, ಬಲ, ದರ್ಪ, ಕಾಮಕ್ರೋಧಗಳ ಆಶ್ರಯ ಹೊಂದಿ, ನಿಂದೆ ಮಾಡುವವರಾಗಿ, ಅವರಲ್ಲಿಯೂ ಅನ್ಯರಲ್ಲಿಯೂ ಇರುವ ನನ್ನನ್ನು ದ್ವೇಷಿಸುತ್ತಾರೆ. ॥೧೮॥

ಈ ನೀಚ, ದ್ವೇಷಿ, ಕ್ರೂರ, ಅಶುಭ ನರಾಧಮರನ್ನು ನಾನು ಈ ಜಗತ್ತಿನ ಅತ್ಯಂತ ಅಸುರೀ ಯೋನಿಗಳಲ್ಲಿಯೇ ಬಾರಿಬಾರಿಗೂ ಕೆಡವುತ್ತೇನೆ. ॥೧೯॥

ಕೌಂತೇಯ ! ಪ್ರತಿಯೊಂದು ಜನ್ಮದಲ್ಲಿಯೂ ಅಸುರೀ ಯೋನಿಯನ್ನು ಹೊಂದಿ ನನ್ನನ್ನು ಅರಿಯಲಾರದೆ ಈ ಜನರು ಇದಕ್ಕಿಂತಲೂ ಅಧಿಕ ಅಧಮ ಗತಿಯನ್ನೈದುತ್ತಾರೆ.

॥೨೦॥

ಕಾಮ, ಕ್ರೋಧ, ಲೋಭ–ಮೂರೂ ಆತ್ಮವನ್ನು ನಾಶಪಡಿಸುವ ನರಕದ ಮೂರು ಬಾಗಿಲು. ಆದುದರಿಂದ ಮನುಷ್ಯ ಇವು ಮೂರನ್ನೂ ತ್ಯಜಿಸಬೇಕು. ॥೨೧॥

ಕೌಂತೇಯ ! ಈ ಮೂರು ನರಕದ್ವಾರಗಳಿಂದ ದೂರವಾಗಿರುವ ಮನುಷ್ಯ ಆತ್ಮಕ್ಕೆ ಕಲ್ಯಾಣಮಾಡುತ್ತಾನೆ. ಅನಂತರ ಪರಮಗತಿಯನ್ನು ಹೊಂದುತ್ತಾನೆ. ॥೨೨॥

ಯಶ್ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪಾರಂ ಗತಿಮ್ ॥೨೩॥

ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ ॥೨೪॥

ಹರಿಃ ಓಂ ತತ್ಸತ್

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀ ಕೃಷ್ಣಾರ್ಜುನಸಂವಾದೇ
ದೈವಾಸುರಸಂಪದ್ವಿಭಾಗಯೋಗೋ ನಾಮ ಷೋಡಶೋಽಧ್ಯಾಯಃ ॥

ಯಾವ ಮನುಷ್ಯ ಶಾಸ್ತ್ರವಿಧಿಯನ್ನು ಬಿಟ್ಟು ಸ್ವೇಚ್ಛಾನುಸಾರ ಭೋಗಗಳಲ್ಲಿ ಮಗ್ನನಾಗಿರುತ್ತಾನೋ ಅವನಿಗೆ ಸಿದ್ಧಿಯೂ ಆಗದು, ಸುಖವೂ ಸಿಗದು, ಉತ್ತಮ ಗತಿಯೂ ಬಾರದು. ॥೨೩॥

ಟಿಪ್ಪಣಿ – ಶಾಸ್ತ್ರವಿಧಿ ಎಂದರೆ ಧರ್ಮದ ಹೆಸರಿನಿಂದ ಪ್ರಸಿದ್ಧವಾದ ಗ್ರಂಥಗಳಲ್ಲಿ ಹೇಳಿರುವ ಅನೇಕ ಕ್ರಿಯೆಗಳಲ್ಲ; ಅನುಭವ ಜ್ಞಾನವುಳ್ಳ ಸತ್ಪುರುಷರಿಂದ ಆಚರಿತವಾದ ಸಂಯಮ ಮಾರ್ಗ.

ಇದಕ್ಕೋಸುಗ ಕಾರ್ಯ–ಅಕಾರ್ಯಗಳ ನಿರ್ಣಯ ಮಾಡುವಾಗ ನೀನು ಶಾಸ್ತ್ರವನ್ನು ಪ್ರಮಾಣವೆಂದು ಭಾವಿಸಬೇಕು. ಶಾಸ್ತ್ರವಿಧಿಯನ್ನರಿತು ಈ ಲೋಕದಲ್ಲಿ ಕರ್ಮ ಮಾಡಬೇಕು. ॥೨೪॥

ಟಿಪ್ಪಣಿ – ಇಲ್ಲಿಯೂ ಶಾಸ್ತ್ರವೆಂಬುದರ ಅರ್ಥ ಮೇಲೆ ಹೇಳಿದಂತೆಯೇ. ಎಲ್ಲರೂ ತಮ್ಮ ತಮ್ಮ ನೇಮ ಮಾಡಿಕೊಂಡು ಸ್ವೇಚ್ಛಾಚಾರಿಗಳಾಗದೆ ಧರ್ಮಾನುಭವಿಗಳ ವಚನವನ್ನು ಪ್ರಮಾಣವೆಂದು ಭಾವಿಸಬೇಕೆಂಬುದೇ ಈ ಶ್ಲೋಕದ ಆಶಯ.

ಓಂ ತತ್ಸತ್

ಈ ಬಗೆಯಾಗಿ ಶ್ರೀಮದ್ಭಗವದ್ಗೀತಾರೂಪ ಉಪನಿಷತ್ ಅಥವಾ
ಬ್ರಹ್ಮವಿದ್ಯಾಂತರ್ಗತ ಯೋಗಶಾಸ್ತ್ರದ ಶ್ರೀ ಕೃಷ್ಣಾರ್ಜುನ ಸಂವಾದದಲ್ಲಿ
ದೈವಾಸುರಸಂಪದ್ ವಿಭಾಗಯೋಗವೆಂಬ ಹದಿನಾರನೆಯ ಅಧ್ಯಾಯ.

***

ಅಧ್ಯಾಯ ೧೭

ಶ್ರದ್ಧಾತ್ರಯವಿಭಾಗಯೋಗ

[ಶಾಸ್ತ್ರ ಅಥವಾ ಶಿಷ್ಟಾಚಾರವನ್ನು ಪ್ರಮಾಣವಾಗಿ ಭಾವಿಸಬೇಕು ಎಂಬುದನ್ನು ಕೇಳಿದೊಡನೆ ಅರ್ಜುನನ ಮನಸ್ಸಿನಲ್ಲಿ ಶಿಷ್ಟಾಚಾರವನ್ನು ಮನ್ನಿಸದಿದ್ದರೂ ಶ್ರದ್ಧೆಯಿಂದ ಕೆಲಸಮಾಡಿದವರ ಗತಿಯೇನು ಎಂಬ ಸಂಶಯ ಹುಟ್ಟಿತು. ಈ ಅಧ್ಯಾಯ ಅದಕ್ಕೆ ಉತ್ತರ ಕೊಡುವ ಪ್ರಯತ್ನ ಮಾಡಿದೆ. ಆದರೆ ಶಿಷ್ಟಾಚಾರರೂಪದ ದೀಪಿಗೆಯನ್ನು ತ್ಯಜಿಸಿದ ನಂತರ ಶ್ರದ್ಧೆಯಲ್ಲಿ ಭಯವಿದೆಯೆಂದು ಹೇಳಿ ಭಗವಂತ ಸಂತೋಷ ಸೂಚಿಸುತ್ತಾನೆ. ಈ ಕಾರಣದಿಂದ ಶ್ರದ್ಧೆ ಅದರ ಸಹಾಯದಿಂದಾಗುವ ಯಜ್ಞ, ತಪಸ್ಸು, ದಾನಾದಿಗಳನ್ನು ಗುಣಾನುಸಾರ ಮೂರು ಭಾಗಮಾಡಿ ತೋರಿಸಿದೆ. 'ಓಂ ತತ್‌ಸತ್' ದ ಮಹಿಮೆಯನ್ನೂ ಹಾಡಲಾಗಿದೆ.]

ಅಥ ಸಪ್ತದಶೋಽಧ್ಯಾಯಃ

ಅರ್ಜುನ ಉವಾಚ

ಯೇ ಶಾಸ್ತ್ರವಿಧಿಮುತ್ಸೃಜ್ಯ ಯಜಂತೇ ಶ್ರದ್ಧಯಾನ್ವಿತಾಃ ।
ತೇಷಾಂ ನಿಷ್ಠಾ ತು ಕಾ ಕೃಷ್ಣ ಸತ್ತ್ವಮಾಹೋ ರಜಸ್ತಮಃ ॥೧॥

ಶ್ರೀ ಭಗವಾನುವಾಚ

ತ್ರಿವಿಧಾ ಭವತಿ ಶ್ರದ್ಧಾ ದೇಹಿನಾಂ ಸಾ ಸ್ವಭಾವಜಾ ।
ಸಾತ್ತ್ವಿಕೀ ರಾಜಸೀ ಚೈವ ತಾಮಸೀ ಚೇತಿ ತಾಂ ಶೃಣು ॥೨॥

ಅರ್ಜುನ :

ಕೃಷ್ಣಾ ! ಶಾಸ್ತ್ರವಿಧಿ ಅರ್ಥಾತ್ ಶಿಷ್ಟಾಚಾರವನ್ನು ಮನ್ನಿಸದೆ ಕೇವಲ ಶ್ರದ್ಧೆಯಿಂದಲೇ ಪೂಜಾದಿಗಳನ್ನು ಮಾಡುವವನ ಗತಿ ಏನು ? ಸಾತ್ತ್ವಿಕವೊ, ರಾಜಸವೊ, ತಾಮಸವೊ? ॥೧॥

ಶ್ರೀ ಭಗವಂತ :

ಮನುಷ್ಯರಲ್ಲಿ ಸ್ವಾಭಾವಿಕವಾಗಿ ಶ್ರದ್ಧೆ ಮೂರು ಬಗೆ–ಸಾತ್ತ್ವಿಕ, ರಾಜಸ, ತಾಮಸ: ಅದನ್ನು ಕೇಳು. ॥೨॥

ಸತ್ತ್ವಾನುರೂಪಾ ಸರ್ವಸ್ಯ ಶ್ರದ್ಧಾ ಭವತಿ ಭಾರತ ।
ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಸ್ಸ ಏವ ಸಃ ॥೩॥

ಯಜಂತೇ ಸಾತ್ತ್ವಿಕಾ ದೇವಾನ್ ಯಕ್ಷರಕ್ಷಾಂಸಿ ರಾಜಸಾಃ ।
ಪ್ರೇತಾನ್ ಭೂತಗಣಾಂಶ್ಚಾನ್ಯೇ ಯಜಂತೇ ತಾಮಸಾ ಜನಾಃ ॥೪॥

ಅಶಾಸ್ತ್ರವಿಹಿತಂ ಘೋರಂ ತಪ್ಯಂತೇ ಯೇ ತಪೋ ಜನಾಃ ।
ದಂಭಾಹಂಕಾರಸಂಯುಕ್ತಾಃ ಕಾಮರಾಗಬಲಾನ್ವಿತಾಃ ॥೫॥

ಕರ್ಷಯಂತಶ್ಶರೀರಸ್ಥಂ ಭೂತಗ್ರಾಮಮಚೇತಸಃ ।
ಮಾಂ ಚೈವಾಂತಶ್ಶರೀರಸ್ಥಂ ತಾನ್ ವಿದ್ಧ್ಯಾಸುರನಿಶ್ಚಯಾನ್ ॥೬॥

ಆಹಾರಸ್ತ್ವಪಿ ಸರ್ವಸ್ಯ ತ್ರಿವಿಧೋ ಭವತಿ ಪ್ರಿಯಃ ।
ಯಜ್ಞಸ್ತಪಸ್ತಥಾ ದಾನಂ ತೇಷಾಂ ಭೇದಮಿಮಂ ಶೃಣು ॥೭॥

ಆಯುಸ್ಸತ್ತ್ವಬಲಾರೋಗ್ಯಸುಖಪ್ರೀತಿವಿವರ್ಧನಾಃ ।
ರಸ್ಯಾಸ್ಸ್ನಿಗ್ಧಾಸ್ಸ್ಥಿರಾ ಹೃದ್ಯಾ ಆಹಾರಾಸ್ಸಾತ್ತ್ವಿಕಪ್ರಿಯಾಃ ॥೮॥

ಕಟ್ವಮ್ಲಲವಣಾತ್ಯುಷ್ಣತೀಕ್ಷ್ಣರೂಕ್ಷವಿದಾಹಿನಃ ।
ಆಹಾರಾ ರಾಜಸಸ್ಯೇಷ್ಟಾ ದುಃಖಶೋಕಾಮಯಪ್ರದಾಃ ॥೯॥

ಭಾರತ ! ಅವರವರ ಸ್ವಭಾವಾನುಸಾರ ಅವರವರ ಶ್ರದ್ಧೆ. ಮನುಷ್ಯನಲ್ಲಿ ಸ್ವಲ್ಪವಾದರೂ ಶ್ರದ್ಧೆ ಇರುತ್ತದೆ. ಅವರವರ ಶ್ರದ್ಧೆಯಿದ್ದ ಹಾಗೇ ಅವರವರು. ॥೩॥

ಸಾತ್ತ್ವಿಕಜನರು ದೇವತೆಗಳನ್ನು ಭಜಿಸುತ್ತಾರೆ. ರಾಜಸರು ಯಕ್ಷರಾಕ್ಷಸರನ್ನೂ ತಾಮಸರು ಭೂತಪ್ರೇತಾದಿಗಳನ್ನೂ ಪೂಜಿಸುತ್ತಾರೆ. ॥೪॥

ದಂಭ–ಅಹಂಕಾರಗಳೊಡನೆ ಕಾಮ–ರಾಗಗಳ ಬಲದಿಂದ ಪ್ರೇರಿತರಾಗಿ ಶಾಸ್ತ್ರವಿಧಿರಹಿತವಾದ ಘೋರ ತಪಸ್ಸನ್ನು ಮಾಡುವ ಮೂರ್ಖ ಜನರು ಶರೀರದಲ್ಲಿರುವ ಪಂಚಮಹಾಭೂತಗಳಿಗೂ ಅವರ ಅಂತಃಕರಣದಲ್ಲಿರುವ ನನಗೂ ಕಷ್ಟ ಕೊಡುತ್ತಾರೆ. ಅಂಥವರು ಆಸುರೀಬುದ್ಧಿಯವರು, ತಿಳಿ. ॥೫–೬॥

ಆಹಾರವೂ ಮೂರು ಬಗೆಯಿಂದ ಪ್ರಿಯವಾಗುತ್ತದೆ. ಅದರಂತೆಯೇ ಯಜ್ಞ ತಪಸ್ಸು, ದಾನಗಳೂ (ಮೂರು ಬಗೆಯಿಂದ ಪ್ರಿಯ). ಅವುಗಳ ಭೇದವನ್ನು ಕೇಳು. ॥೭॥

ಆಯುಷ್ಯ, ಸಾತ್ತ್ವಿಕತೆ, ಆರೋಗ್ಯ, ಸುಖ, ರುಚಿ ಹೆಚ್ಚಿಸುವಂಥ ರಸಪೂರ್ಣ, ಸ್ನಿಗ್ಧ, ಪೌಷ್ಟಿಕ ಆದ, ಮನಸ್ಸಿಗೆ ರುಚಿಸುವ ಆಹಾರ ಸಾತ್ತ್ವಿಕ ಜನರಿಗೆ ಪ್ರಿಯ. ॥೮॥

ಕಹಿ, ಹುಳಿ, ಉಪ್ಪು, ಬಹಳ ಬಿಸಿ, ತೀಕ್ಷ್ಣ, ಒಣಕಲು, ದಾಹಕಾರಕ ಆದ ಆಹಾರ ರಾಜಸ ಜನರಿಗೆ ಪ್ರಿಯ. ಈ ಬಗೆಯ ಆಹಾರ ದುಃಖ, ಶೋಕ, ರೋಗಗಳನ್ನು ಹುಟ್ಟಿಸುತ್ತದೆ. ॥೯॥

ಯಾತಯಾಮಂ ಗತರಸಂ ಪೂತಿ ಪರ್ಯುಷಿತಂ ಚ ಯತ್ ।
ಉಚ್ಛಿಷ್ಟಮಪಿ ಚಾಮೇಧ್ಯಂ ಭೋಜನಂ ತಾಮಸಪ್ರಿಯಮ್ ॥೧೦॥

ಅಫಲಾಕಾಂಕ್ಷಿಭಿರ್ಯಜ್ಞೋ ವಿಧಿದೃಷ್ಟೋ ಯ ಇಜ್ಯತೇ ।
ಯಷ್ಟವ್ಯಮೇವೇತಿ ಮನಃ ಸಮಾಧಾಯ ಸ ತಾತ್ತ್ವಿಕಃ ॥೧೧॥

ಅಭಿಸಂಧಾಯ ತು ಫಲಂ ದಂಭಾರ್ಥಮಪಿ ಚೈವ ಯತ್ ।
ಇಜ್ಯತೇ ಭರತಶ್ರೇಷ್ಠ ತಂ ಯಜ್ಞಂ ವಿದ್ಧಿ ರಾಜಸಮ್ ॥೧೨॥

ವಿಧಿಹೀನಮಸೃಷ್ಟಾನ್ನಂ ಮಂತ್ರಹೀನಮದಕ್ಷಿಣಮ್ ।
ಶ್ರದ್ಧಾವಿರಹಿತಂ ಯಜ್ಞಂ ತಾಮಸಂ ಪರಿಚಕ್ಷತೇ ॥೧೩॥

ದೇವದ್ವಿಜಗುರುಪ್ರಾಜ್ಞಪೂಜನಂ ಶೌಚಮಾರ್ಜವಮ್ ।
ಬ್ರಹ್ಮಚರ್ಯಮಹಿಂಸಾ ಚ ಶಾರೀರಂ ತಪ ಉಚ್ಯತೇ ॥೧೪॥

ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್ ।
ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೇ ॥೧೫॥

ಮನಃ ಪ್ರಸಾದಸ್ಸೌಮ್ಯತ್ವಂ ಮೌನಮಾತ್ಮವಿನಿಗ್ರಹಃ ।
ಭಾವಸಂಶುದ್ಧಿರಿತ್ಯೇತತ್ತಪೋ ಮಾನಸಮುಚ್ಯತೇ ॥೧೬॥

ಆರಿದ್ದು, ರಸರಹಿತ, ದುರ್ವಾಸನೆ, ತಂಗಳು, ಎಂಜಲು, ಅಪವಿತ್ರ ಆದ ಭೋಜನ ತಾಮಸ ಜನರಿಗೆ ಪ್ರಿಯ ॥೧೦॥

ಫಲದ ಇಚ್ಛೆ ಇಲ್ಲದೆ, ವಿಧಿಪೂರ್ವಕ ಕರ್ತವ್ಯವೆಂದರಿತು ತಲ್ಲೀನತೆಯಿಂದ ಮಾಡಿದ ಯಜ್ಞ ಸಾತ್ತ್ವಿಕ. ಫಲದ ಉದ್ದೇಶ್ಯದಿಂದ, ದಂಭಾರ್ಥವಾಗಿ ಮಾಡಿದ ಯಜ್ಞ ರಾಜಸ. ವಿಧಿ ಅಲ್ಲದುದು, ಅನ್ನದ ಉತ್ಪತ್ತಿ ಇಲ್ಲದುದು, ಮಂತ್ರವಿಲ್ಲದುದು, ತ್ಯಾಗವಿಲ್ಲದುದು, ಶ್ರದ್ಧೆ ಇಲ್ಲದುದು ಇಂಥ ಯಜ್ಞವನ್ನು ಬುದ್ಧಿಶಾಲಿಗಳು ತಾಮಸ ಯಜ್ಞ ಎನ್ನುತ್ತಾರೆ. ॥೧೧–೧೩॥

ದೇವ ಬ್ರಾಹ್ಮಣ ಗುರು ಜ್ಞಾನಿಗಳ ಪೂಜೆ, ಪವಿತ್ರತೆ, ಸರಳತೆ, ಬ್ರಹ್ಮಚರ್ಯೆ, ಅಹಿಂಸೆ ಇವು ಶಾರೀರಕ ತಪ. ॥೧೪॥

ದುಃಖ ಕೊಡದಿರುವುದು, ಸತ್ಯ ಪ್ರಿಯ ಹಿತಕರ ಆದ ವಚನವನ್ನಾಡುವುದು, ಧರ್ಮಗ್ರಂಥಗಳ ಅಭ್ಯಾಸಮಾಡುವುದು ವಾಚಿಕ ತಪಸ್ಸೆನಿಸುತ್ತದೆ. ॥೧೫॥

ಮನಸ್ಸಿನ ಪ್ರಸನ್ನತೆ, ಸೌಮ್ಯತೆ, ಮೌನ, ಆತ್ಮಸಂಯಮ, ಭಾವನಾ ಶುದ್ಧಿಗಳಿಗೆ ಮಾನಸಿಕ ತಪಸ್ಸೆಂದು ಹೆಸರು. ॥೧೬॥

ಶ್ರದ್ಧಯಾ ಪರಯಾ ತಪ್ತಂ ತಪಸ್ತತ್ತ್ರಿವಿಧಂ ನರೈಃ ।
ಅಫಲಾಕಾಂಕ್ಷಿಭಿರ್ಯುಕ್ತೈಸ್ಸಾತ್ತ್ವಿಕಂ ಪರಿಚಕ್ಷತೇ ॥೧೭॥

ಸತ್ಕಾರಮಾನಪೂಜಾರ್ಥಂ ತಪೋ ದಂಭೇನ ಚೈವ ಯತ್ ।
ಕ್ರಿಯತೇ ತದಿಹ ಪ್ರೋಕ್ತಂ ರಾಜಸಂ ಚಲಮಧ್ರುವಮ್ ॥೧೮॥

ಮೂಢಗ್ರಾಹೇಣಾತ್ಮನೋ ಯತ್ಪೀಡಯಾ ಕ್ರಿಯತೇ ತಪಃ ।
ಪರಸ್ಯೋತ್ಸಾಧನಾರ್ಥಂ ವಾ ತತ್ತಾಮಸಮುದಾಹೃತಮ್ ॥೧೯॥

ದಾತವ್ಯಮಿತಿ ಯದ್ದಾನಂ ದೀಯತೇಽನುಪಕಾರಿಣೇ ।
ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ತ್ವಿಕಂ ಸ್ಮೃತಮ್ ॥೨೦॥

ಯತ್ತು ಪ್ರತ್ಯುಪಕಾರಾರ್ಥಂ ಫಲಮುದ್ದಿಶ್ಯ ವಾ ಪುನಃ ।
ದೀಯತೇ ಚ ಪರಿಕ್ಲಿಷ್ಟಂ ತದ್ದಾನಂ ರಾಜಸಂ ಸ್ಮೃತಮ್ ॥೨೧॥

ಅದೇಶಕಾಲೇ ಯದ್ದಾನಮಪಾತ್ರೇಭ್ಯಶ್ಚ ದೀಯತೇ
ಅಸತ್ಕೃತಮವಜ್ಞಾತಂ ತತ್ತಾಮಸಮುದಾಹೃತಮ್ ॥೨೨॥

ಸಮಭಾವದ ಪುರುಷರು ಫಲೇಚ್ಛೆಯನ್ನು ತ್ಯಜಿಸಿ ಪರಮ ಶ್ರದ್ಧೆಯಿಂದ ಮೇಲೆ ಹೇಳಿದ ಮೂರು ಬಗೆಯ ತಪಸ್ಸು ಮಾಡಿದರೆ ಬುದ್ಧಿಶಾಲಿಗಳು ಅದನ್ನು ಸಾತ್ತ್ವಿಕ ತಪಸ್ಸು ಎನ್ನುತ್ತಾರೆ. ॥೧೭॥

ಸತ್ಕಾರ, ಮಾನ, ಪೂಜಾರ್ಥವಾಗಿ ದಂಭದಿಂದ ಮಾಡಿದ ಅಸ್ಥಿರ ಅನಿಶ್ಚಿತ ತಪಸ್ಸು ರಾಜಸವೆನಿಸುತ್ತದೆ. ॥೧೮॥

ಆತ್ಮಪೀಡಾಕರವಾಗಿ, ಮೂಢಾಗ್ರಹದಿಂದ, ಪರರನ್ನು ನಾಶಗೊಳಿಸುವ ಇಚ್ಛೆಯಿಂದ ಮಾಡಿದ ತಪಸ್ಸು ತಾಮಸ ತಪ. ॥೧೯॥

ಕೊಡುವುದು ಉಚಿತವೆಂದರಿತು ಪ್ರತ್ಯುಪಕಾರದ ಆಶೆಯನ್ನಿಟ್ಟುಕೊಳ್ಳದೆ ದೇಶ–ಕಾಲ–ಪಾತ್ರಗಳನ್ನು ನೋಡಿ ಕೊಟ್ಟ ದಾನ ಸಾತ್ತ್ವಿಕವೆನಿಸುತ್ತದೆ. ॥೨೦॥

ಪ್ರತ್ಯುಪಕಾರದ ಆಸೆಯಿಂದಾಗಲಿ ಫಲದ ಇಚ್ಛೆಯಿಂದಾಗಲಿ ದುಃಖದೊಡನೆ ಕೊಟ್ಟ ದಾನ ರಾಜಸವೆನಿಸುತ್ತದೆ. ॥೨೧॥

ದೇಶ–ಕಾಲ– ಪಾತ್ರಗಳ ವಿಚಾರವಿಲ್ಲದೆ ಆದರರಹಿತವಾಗಿ ತಿರಸ್ಕಾರದಿಂದ ಕೊಟ್ಟ ದಾನ ತಾಮಸದಾನ. ॥೨೨॥

ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಸ್ಮೃತಃ ।
ಬ್ರಾಹ್ಮಣಾಸ್ತೇನ ವೇದಾಶ್ಚ ಯಜ್ಞಾಶ್ಚ ವಿಹಿತಾಃ ಪರಾ ॥೨೩॥

ತಸ್ಮಾದೋಮಿತ್ಯುದಾಹೃತ್ಯ ಯಜ್ಞದಾನತಪಃ ಕ್ರಿಯಾಃ ।
ಪ್ರವರ್ತಂತೇ ವಿಧಾನೋಕ್ತಾಸ್ಸತತಂ ಬ್ರಹ್ಮವಾದಿನಾಮ್ ॥೨೪॥

ತದಿತ್ಯನಭಿಸಂಧಾಯ ಫಲಂ ಯಜ್ಞತಪಃಕ್ರಿಯಾಃ ।
ದಾನಕ್ರಿಯಾಶ್ಚ ವಿವಿಧಾಃ ಕ್ರಿಯಂತೇ ಮೋಕ್ಷಕಾಂಕ್ಷಿಭಿಃ ॥೨೫॥

ಸದ್ಭಾವೇ ಸಾಧುಭಾವೇ ಚ ಸದಿತ್ಯೇತತ್ಪ್ರಯುಜ್ಯತೇ ।
ಪ್ರಶಸ್ತೇ ಕರ್ಮಣಿ ತಥಾ ಸಚ್ಛಬ್ದಃ ಪಾರ್ಥ ಯುಜ್ಯತೇ ॥೨೬॥

ಯಜ್ಞೇ ತಪಸಿ ದಾನೇ ಚ ಸ್ಥಿತಿಸ್ಸದಿತಿ ಚೋಚ್ಯತೇ ।
ಕರ್ಮ ಚೈವ ತದರ್ಥೀಯಂ ಸದಿತ್ಯೇವಾಭಿಧೀಯತೇ ॥೨೭॥

ಬ್ರಹ್ಮನ ವರ್ಣನೆ ಓಂ–ತತ್–ಸತ್ ಎಂದು ಮೂರು ಬಗೆಯಿಂದ ಆಗಿದೆ. ಇದರಿಂದಲೇ ಬ್ರಾಹ್ಮಣ, ವೇದ, ಯಜ್ಞಗಳು ನಿರ್ಮಾಣವಾದವು. ॥೨೩॥

ಈ ಕಾರಣದಿಂದ ಬ್ರಹ್ಮವಾದಿಗಳು ಓಂಕಾರವನ್ನುಚ್ಚರಿಸಿ, ಯಜ್ಞದಾನ–ತಪಸ್ಸಿನ ರೂಪದ ಕ್ರಿಯೆಗಳನ್ನು ಯಾವಾಗಲೂ ವಿಧಿಪೂರ್ವಕ ಮಾಡುತ್ತಾರೆ. ॥೨೪॥

ಮೋಕ್ಷಾರ್ಥಿಗಳು ತತ್ ಎಂಬ ಉಚ್ಚಾರಮಾಡಿ ಫಲದ ಆಸೆಯಿಡದೆ ಯಜ್ಞ, ತಪಸ್ಸು ದಾನರೂಪವಾದ ವಿವಿಧ ಕಾರ್ಯಗಳನ್ನು ಮಾಡುತ್ತಾರೆ. ॥೨೫॥

ಸತ್ಯ, ಕಲ್ಯಾಣ ಎಂಬ ಅರ್ಥದಲ್ಲಿ ಸತ್ ಶಬ್ದದ ಪ್ರಯೋಗ ಮಾಡುತ್ತಾರೆ. ಪಾರ್ಥ ! ಒಳ್ಳೆಯ ಕರ್ಮಗಳಲ್ಲಿಯೂ ಸತ್ ಶಬ್ದವನ್ನು ಉಪಯೋಗಿಸುತ್ತಾರೆ. ॥೨೬॥

ಯಜ್ಞ, ತಪಸ್ಸು, ದಾನಗಳು ದೃಢತೆಗೂ ಸತ್ ಎನ್ನುತ್ತಾರೆ. ಸತ್‌ಗಾಗಿಯೆ ಕರ್ಮ ಎಂಬ ಸಂಕಲ್ಪವೂ ಸತ್ ಎನಿಸುತ್ತದೆ. ॥೨೭॥

ಟಿಪ್ಪಣಿ – ಪ್ರತಿಯೊಂದು ಕರ್ಮವನ್ನೂ ಈಶ್ವರಾರ್ಪಣ ಮಾಡಿಯೇ ಮಾಡಬೇಕೆಂಬುದು ಮೇಲಿನ ಮೂರು ಶ್ಲೋಕಗಳ ಭಾವಾರ್ಥ. ಏಕೆಂದರೆ 'ಓಂ' ಎಂಬುದೇ ಸತ್. ಸತ್ಯ ಅದಕ್ಕೆ ಅರ್ಪಣ ಮಾಡಿದ್ದು ಫಲಿಸುತ್ತದೆ.

ಅಶ್ರದ್ಧಯಾ ಹುತಂ ದತ್ತಂ ತಪಸ್ತಪ್ತಂ ಕೃತಂ ಚ ಯತ್ ।
ಅಸದಿತ್ಯುಚ್ಯತೇ ಪಾರ್ಥ ನ ಚ ತತ್ಪ್ರೇತ್ಯ ನೋ ಇಹ ॥೨೮॥

ಹರಿಃ ಓಂ ತತ್ಸತ್

ಇತಿ ಶ್ರೀ ಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀ ಕೃಷ್ಣಾರ್ಜುನಸಂವಾದೇ
ಶ್ರದ್ಧಾತ್ರಯವಿಭಾಗಯೋಗೋ ನಾಮ ಸಪ್ತದಶೋऽಧ್ಯಾಯಃ

ಪಾರ್ಥ ! ಶ್ರದ್ಧೆಯಿಲ್ಲದ ಯಜ್ಞ, ದಾನ, ತಪಸ್ಸಾಗಲಿ ಬೇರೆ ಕೆಲಸವಾಗಲಿ ಅಸತ್ ಎನಿಸುತ್ತವೆ. ಅದರಿಂದ ಇಲ್ಲಿಯೂ ಪ್ರಯೋಜನವಿಲ್ಲ, ಪರಲೋಕದಲ್ಲಿಯೂ ಇಲ್ಲ. ॥೨೮॥

ಓಂ ತತ್ಸತ್

ಈ ಬಗೆಯಾಗಿ ಶ್ರೀಮದ್ಭಗವದ್ಗೀತಾರೂಪ ಉಪನಿಷತ್ ಅಥವಾ
ಬ್ರಹ್ಮವಿದ್ಯಾಂತರ್ಗತ ಯೋಗಶಾಸ್ತ್ರದ ಶ್ರೀ ಕೃಷ್ಣಾರ್ಜುನಸಂವಾದದಲ್ಲಿ
ಶ್ರದ್ಧಾತ್ರಯವಿಭಾಗಯೋಗವೆಂಬ ಹದಿನೇಳನೆಯ ಅಧ್ಯಾಯ.

***

ಅಧ್ಯಾಯ ೧೮

ಮೋಕ್ಷಸಂನ್ಯಾಸಯೋಗ

[ಈ ಅಧ್ಯಾಯ ಉಪಸಂಹಾರವಂತಿದೆ. 'ಸಕಲಧರ್ಮಗಳನ್ನೂ ಬಿಟ್ಟು ನನಗೆ ಶರಣಾಗತನಾಗು' ಎಂಬುದೇ ಇದರ ಅಥವಾ ಗೀತೆಯ ಪ್ರೇರಕಮಂತ್ರ. ಇದೇ ನಿಜವಾದ ಸಂನ್ಯಾಸ. ಆದರೆ ಸಕಲಧರ್ಮತ್ಯಾಗವೆಂದರೆ ಸಕಲಕರ್ಮತ್ಯಾಗವಲ್ಲ. ಪರೋಪಕಾರ ಕಾರ್ಯವಲ್ಲಿಯೂ ಸರ್ವೋತ್ಕೃಷ್ಟ ಕಾರ್ಯವನ್ನು ಆತನಿಗೆ ಅರ್ಪಣೆ ಮಾಡಿ ಫಲೇಚ್ಛೆಯನ್ನು ಬಿಡುವುದು–ಇದುವೇ ಸರ್ವಧರ್ಮತ್ಯಾಗ ಅಥವಾ ಸಂನ್ಯಾಸ.]

ಅಷ್ಟಾದಶೋಽಧ್ಯಾಯಃ

ಅರ್ಜುನ ಉವಾಚ

ಸಂನ್ಯಾಸಸ್ಯ ಮಹಾಬಾಹೋ ತತ್ತ್ವಮಿಚ್ಛಾಮಿ ವೇದಿತುಮ್ ।
ತ್ಯಾಗಸ್ಯ ಚ ಹೃಷೀಕೇಶ ಪೃಥಕ್ಕೇಶಿನಿಷೂದನ ॥೧॥

ಶ್ರೀ ಭಗವಾನುವಾಚ

ಕಾಮ್ಯಾನಾಂ ಕರ್ಮಣಾಂ ನ್ಯಾಸಂ ಸಂನ್ಯಾಸಂ ಕವಯೋ ವಿದುಃ ।
ಸರ್ವಕರ್ಮಫಲತ್ಯಾಗಂ ಪ್ರಾಹುಸ್ತ್ಯಾಗಂ ವಿಚಕ್ಷಣಾಃ ॥೨॥

ತ್ಯಾಜ್ಯಂ ದೋಷವದಿತ್ಯೇಕೇ ಕರ್ಮ ಪ್ರಾಹುರ್ಮನೀಷಿಣಃ ।
ಯಜ್ಞದಾನತಪಃಕರ್ಮ ನ ತ್ಯಾಜ್ಯಮಿತಿ ಚಾಪರೇ ॥೩॥

ಅರ್ಜುನ :

ಹೃಷಿಕೇಶ ! ಸಂನ್ಯಾಸ, ತ್ಯಾಗಗಳ ರಹಸ್ಯಗಳನ್ನು ಬೇರೆ ಬೇರೆಯಾಗಿ ತಿಳಿಯಕೊಳ್ಳ ಬಯಸುತ್ತೇನೆ. ॥೧॥

ಶ್ರೀ ಭಗವಂತ :

ಕಾಮ್ಯ (ಕಾಮನೆಯಿಂದ ಹುಟ್ಟಿದ) ಕರ್ಮಗಳ ತ್ಯಾಗವೇ ಸಂನ್ಯಾಸವೆಂದು ಜ್ಞಾನಿಗಳು ಹೇಳುತ್ತಾರೆ. ಸಮಸ್ತ ಕರ್ಮಗಳ ಫಲವನ್ನು ತ್ಯಜಿಸುವುದೇ ತ್ಯಾಗ ಎಂದು ಬುದ್ಧಿವಂತರು ಹೇಳುತ್ತಾರೆ. ॥೨॥

ಕರ್ಮ ದೋಷಮಯ. ಆದುದರಿಂದ ಅದು ತ್ಯಾಗಯೋಗ್ಯವೆಂದು ವಿಚಾರವಂತರು ಹೇಳುತ್ತಾರೆ. ಯಜ್ಞ, ದಾನ, ತಪಸ್ಸಿನ ರೂಪದ ಕರ್ಮಗಳನ್ನು ತ್ಯಜಿಸಬಾರದೆಂದು ಕೆಲವರು ಹೇಳುತ್ತಾರೆ. ॥೩॥

ನಿಶ್ಚಯಂ ಶೃಣು ಮೇ ತತ್ರ ತ್ಯಾಗೇ ಭರತಸತ್ತಮ ।
ತ್ಯಾಗೋ ಹಿ ಪುರುಷವ್ಯಾಘ್ರ ತ್ರಿವಿಧಸ್ಸಂಪ್ರಕೀರ್ತಿತಃ ॥೪॥

ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ।
ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್ ॥೫॥

ಏತಾನ್ಯಪಿ ತು ಕರ್ಮಾಣಿ ಸಂಗಂ ತ್ಯಕ್ತ್ವಾ ಫಲಾನಿ ಚ ।
ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಮುತ್ತಮಂ ॥೬॥

ನಿಯತಸ್ಯ ತು ಸಂನ್ಯಾಸಃ ಕರ್ಮಣೋ ನೋಪಪದ್ಯತೇ ।
ಮೋಹಾತ್ತಸ್ಯ ಪರಿತ್ಯಾಗಸ್ತಾಮಸಃ ಪರಿಕೀರ್ತಿತಃ ॥೭॥

ದುಃಖಮಿತ್ಯೇವ ಯತ್ಕರ್ಮ ಕಾಯಕ್ಲೇಶಭಯಾತ್ತ್ಯಜೇತ್ ।
ಸ ಕೃತ್ವಾ ರಾಜಸಂ ತ್ಯಾಗಂ ನೈವ ತ್ಯಾಗಫಲಂ ಲಭೇತ್ ॥೮॥

ಕಾರ್ಯಮಿತ್ಯೇವ ಯತ್ಕರ್ಮ ನಿಯತಂ ಕ್ರಿಯತೇಽರ್ಜುನ ।
ಸಂಗಂ ತ್ಯಕ್ತ್ವಾ ಫಲಂ ಚೈವ ಸ ತ್ಯಾಗಸ್ಸಾತ್ತ್ವಿಕೋ ಮತಃ ॥೯॥

ನ ದ್ವೇಷ್ಟ್ಯಕುಶಲಂ ಕರ್ಮ ಕುಶಲೇ ನಾನುಷಜ್ಜತೇ ।
ತ್ಯಾಗೀ ಸತ್ತ್ವಸಮಾವಿಷ್ಟೋ ಮೇಧಾವೀ ಛಿನ್ನಸಂಶಯಃ ॥೧೦॥

ಭರತಸತ್ತಮ ! ಈ ತ್ಯಾಗದ ಬಗ್ಗೆ ನನ್ನ ನಿರ್ಣಯವನ್ನು ಕೇಳು. ತ್ಯಾಗದ ವರ್ಣನೆ ಮೂರು ಬಗೆ. ॥೪॥

ಯಜ್ಞ ದಾನ, ತಪಸ್ಸು–ಇಂಥ ಕರ್ಮ ತ್ಯಾಜ್ಯವಲ್ಲ; ಮಾಡಲು ಯೋಗ್ಯ. ಯಜ್ಞ ದಾನ, ತಪಸ್ಸುಗಳು ವಿವೇಕಿಗಳನ್ನು ಪಾವನಗೊಳಿಸುತ್ತವೆ. ॥೫॥

ಪಾರ್ಥ ! ಆಸಕ್ತಿ–ಫಲೇಚ್ಛೆಗಳನ್ನು ಬಿಟ್ಟೇ ಈ ಕರ್ಮ ಮಾಡಬೇಕು; ಇದು ನನ್ನ ನಿಶ್ಚಿತ, ಉತ್ತಮ ಅಭಿಪ್ರಾಯ. ॥೬॥

ನಿಯತಕರ್ಮದ ತ್ಯಾಗ ಉಚಿತವಲ್ಲ; ಮೋಹವಶನಾಗಿ ಅದನ್ನು ಬಿಟ್ಟರೆ ಆ ತ್ಯಾಗ ತಾಮಸವೆನಿಸುತ್ತದೆ. ॥೭॥

ಶರೀರಕ್ಕೆ ಕಷ್ಟ ಎಂಬ ಭಯದಿಂದ, ದುಃಖದಾಯಕ ಎಂಬ ತಿಳಿವಳಿಕೆಯಿಂದ ಮಾಡಿದ ಕರ್ಮತ್ಯಾಗ ರಾಜಸತ್ಯಾಗ. ಇದರಿಂದ ಅವನಿಗೆ ತ್ಯಾಗದ ಫಲ ಲಭಿಸದು. ॥೮॥

ಅರ್ಜುನ, ಇದು ಮಾಡಲೇಬೇಕಾದುದು ಎಂದರಿತು ಆ ನಿಯತ ಕರ್ಮವನ್ನು ಸಂಗ–ಫಲಗಳನ್ನು ತ್ಯಜಿಸಿ ಮಾಡಿದರೆ ಅದು ಸಾತ್ತ್ವಿಕ ತ್ಯಾಗ. ॥೯॥

ಸಂಶಯರಹಿತ, ಶುದ್ಧ ಭಾವನೆಯ ತ್ಯಾಗಿ, ಬುದ್ಧಿವಂತ–ಅಹಿತವಾದ ಕರ್ಮವನ್ನು ದ್ವೇಷಿಸ. ಹಿತವಾದ ಕರ್ಮಗಳಲ್ಲಿ ಆಸಕ್ತಿಯನ್ನಿಡ. ॥೧೦॥

ನ ಹಿ ದೇಹಭೃತಾ ಶಕ್ಯಂ ತ್ಯಕ್ತುಂ ಕರ್ಮಾಣ್ಯಶೇಷತಃ ।
ಯಸ್ತು ಕರ್ಮಫಲತ್ಯಾಗೀ ಸ ತ್ಯಾಗೀತ್ಯಭಿಧೀಯತೇ ॥೧೧॥

ಅನಿಷ್ಟಮಿಷ್ಟಂ ಮಿಶ್ರಂ ಚ ತ್ರಿವಿಧಂ ಕರ್ಮಣಃ ಫಲಮ್ ।
ಭವತ್ಯತ್ಯಾಗಿನಾಂ ಪ್ರೇತ್ಯ ನ ತು ಸಂನ್ಯಾಸಿನಾಂ ಕ್ವಚಿತ್ ॥೧೨॥

ಪಂಚೈತಾನಿ ಮಹಾಬಾಹೋ ಕಾರಣಾನಿ ನಿಬೋಧ ಮೇ ।
ಸಾಂಖ್ಯೇ ಕೃತಾಂತೇ ಪ್ರೋಕ್ತಾನಿ ಸಿದ್ಧಯೇ ಸರ್ವಕರ್ಮಣಾಮ್ ॥೧೩॥

ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಮ್ ।
ವಿವಿಧಾಶ್ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಮ್ ॥೧೪॥

ಶರೀರವಾಙ್ಮನೋಭಿರ್ಯತ್ಕರ್ಮ ಪ್ರಾರಂಭತೇ ನರಃ ।
ನ್ಯಾಯ್ಯಂ ವಾ ವಿಪರೀತಂ ವಾ ಪಂಚೈ ತೇ ತಸ್ಯ ಹೇತವಃ ॥೧೫॥

ತತ್ರೈವಂ ಸತಿ ಕರ್ತಾರಮಾತ್ಮಾನಂ ಕೇವಲಂ ತು ಯಃ ।
ಪಶ್ಯತ್ಯಕೃತಬುದ್ಧಿತ್ವಾನ್ ನ ಸ ಪಶ್ಯತಿ ದುರ್ಮತಿಃ ॥೧೬॥

ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ ।
ಹತ್ವಾಪಿ ಸ ಇಮಾಂ ಲ್ಲೋಕಾನ್ ನ ಹಂತಿ ನ ನಿಬಧ್ಯತೇ ॥೧೭॥

ದೇಹಧಾರಿಗೆ ಕರ್ಮವನ್ನು ಸಂಪೂರ್ಣವಾಗಿ ತ್ಯಜಿಸುವುದು ಶಕ್ಯವೇ ಅಲ್ಲ. ಆದರೆ ಕರ್ಮಫಲವನ್ನು ತ್ಯಾಗಮಾಡಿದವನು ತ್ಯಾಗಿ ಎನಿಸಿಕೊಳ್ಳುತ್ತಾನೆ. ॥೧೧॥

ತ್ಯಾಗಮಾಡದವನಿಗೆ, ಸಮಯಾನುಸಾರ ಅಶುಭ, ಶುಭ, ಶುಭಾಶುಭ–ಹೀಗೆ ತ್ರಿವಿಧ ಕರ್ಮಫಲ ಲಭಿಸುತ್ತವೆ. ತ್ಯಾಗಿ (ಸಂನ್ಯಾಸಿ) ಗೆ ಆ ಫಲ ಎಂದಿಗೂ ಇಲ್ಲ. ॥೧೨॥

ಕರ್ಮಮಾತ್ರದ ಸಿದ್ಧಿಗೆ ಸಾಂಖ್ಯಶಾಸ್ತ್ರದಲ್ಲಿ ಐದು ಕಾರಣ ತೋರಲಾಗಿದೆ; ಕೇಳು ಆ ಐದು: ಕ್ಷೇತ್ರ, ಕರ್ತೃ, ಭಿನ್ನ ಭಿನ್ನ ಸಾಧನ, ಭಿನ್ನ ಭಿನ್ನ ಕ್ರಿಯೆ, ಐದನೆಯದು ದೈವ.
॥೧೩–೧೪॥

ಶರೀರದಿಂದಾಗಲಿ, ವಾಣಿಯಿಂದಾಗಲಿ, ಮನಸ್ಸಿನಿಂದಾಗಲಿ ಮನುಷ್ಯ ಮಾಡುವ ನೀತಿಪೂರ್ಣ ಅಥವಾ ನೀತಿವಿರುದ್ಧ ಕರ್ಮಗಳಿಗೆ ಈ ಐದು ಕಾರಣ ॥೧೫॥

ಹೀಗಿರಲು, ಅಸಂಸ್ಕೃತ ಬುದ್ಧಿಯಿಂದ ತಾನೇ ಕರ್ತೃವೆಂದು ಭಾವಿಸಿದರೆ ಆ ದುರ್ಮತಿ ಏನೂ ತಿಳಿಯದವನು. ॥೧೬॥

ಅಹಂಭಾವವಿಲ್ಲದವನು, ಬುದ್ಧಿ ಮಲಿನವಾಗಿಲ್ಲದವನು ಈ ಜಗತ್ತನ್ನು ಕೊಂದರೂ ಕೊಲ್ಲಲಿಲ್ಲ, ಬಂಧನದಲ್ಲಿ ಬೀಳುವುದೂ ಇಲ್ಲ. ॥೧೭॥

ಜ್ಞಾನಂ ಜ್ಞೇಯಂ ಪರಿಜ್ಞಾತಾ ತ್ರಿವಿಧಾ ಕರ್ಮಚೋದನಾ ।
ಕರಣಂ ಕರ್ಮ ಕರ್ತೇತಿ ತ್ರಿವಿಧಃ ಕರ್ಮಸಂಗ್ರಹಃ ॥೧೮॥

ಜ್ಞಾನಂ ಕರ್ಮ ಚ ಕರ್ತಾ ಚ ತ್ರಿಧೈವ ಗುಣಭೇದತಃ ।
ಪ್ರೋಚ್ಯತೇ ಗುಣಸಂಖ್ಯಾನೇ ಯಥಾವಚ್ಛೃಣು ತಾನ್ಯಪಿ ॥೧೯॥

ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೇ ।
ಅವಿಭಕ್ತಂ ವಿಭಕ್ತೇಷು ತಜ್ಜ್ಞಾನಂ ವಿದ್ಧಿ ಸಾತ್ತ್ವಿಕಂ ॥೨೦॥

ಟಿಪ್ಪಣಿ – ಮೇಲೆ ಮೇಲೆ ಓದಿದರೆ ಈ ಶ್ಲೋಕ ಮನುಷ್ಯನನ್ನು ಭ್ರಮೆಯಲ್ಲಿ ಸಿಲುಕಿಸುತ್ತದೆ. ಗೀತೆಯ ಅನೇಕ ಶ್ಲೋಕಗಳು ಕಾಲ್ಪನಿಕ ಅದರ್ಶವನ್ನು ಅವಲಂಬಿಸಿವೆ. ಅದರ ಪ್ರತ್ಯಕ್ಷ ಮಾದರಿ ಜಗತ್ತಿನಲ್ಲಿ ಸಿಗಲಾರದು. ಕೇವಲ ಉಪಯುಕ್ತತೆಗಾಗಿ ಕಾಲ್ಪನಿಕ ಆದರ್ಶವನ್ನು ಅವಲಂಬಿಸಿದೆ. ಅದರ ಪ್ರತ್ಯಕ್ಷ ಮಾದರಿ ಜಗತ್ತಿನಲ್ಲಿ ಸಿಗಲಾರದು. ಕೇವಲ ಉಪಯುಕ್ತತೆಗಾಗಿ ಕಾಲ್ಪನಿಕ ಆದರ್ಶದ ಆಕೃತಿಗಳು ಭೂಮಿತಿಯಲ್ಲಿ ಹೇಗೆ ಅವಶ್ಯಕವೋ ಧರ್ಮವ್ಯವಹಾರದಲ್ಲಿಯೂ ಹಾಗೇ ಆದುದರಿಂದ ಈ ಶ್ಲೋಕವನ್ನು ಈ ರೀತಿ ಅರ್ಥಮಾಡಬಹುದು: ಯಾರ ಅಹಂಭಾವ ಸುಟ್ಟು ಬೂದಿಯಾಗಿದೆಯೋ, ಯಾರ ಬುದ್ಧಿಯಲ್ಲಿ ಅಣುಮಾತ್ರವಾದರೂ ಮಾಲಿನ್ಯವಿಲ್ಲವೋ ಅಂಥವನು ಸಮಗ್ರ ಜಗತ್ತನ್ನು ಕೊಂದರೆ ಕೊಲ್ಲಲಿ. ಆದರೆ ಯಾರಲ್ಲಿ ಅಹಂಭಾವವಿಲ್ಲವೋ ಅವನಿಗೆ ಶರೀರವೂ ಇಲ್ಲ. ಯಾರ ಬುದ್ಧಿ ವಿಶುದ್ಧ ವೋ ಅವನು ತ್ರಿಕಾಲದರ್ಶಿ. ಇಂಥ ಪುರುಷ ಕೇವಲ ಭಗವಂತನೊಬ್ಬನೇ. ಅವನು ಏನು ಮಾಡಿದರೂ ಅಕರ್ತೃ. ನಾಶಮಾಡುತ್ತಿದ್ದರೂ ಅಹಿಂಸಕ. ಆದುದರಿಂದ ಮನುಷ್ಯನಿಗೆ ಒಂದೇ ಮಾರ್ಗ : ಕೊಲ್ಲದಿರುವ, ಶಿಷ್ಟಾಚಾರ–ಶಾಸ್ತ್ರದ ಮಾರ್ಗ.

ಕರ್ಮಪ್ರೇರಣೆಯಲ್ಲಿ ಜ್ಞಾನ, ಜ್ಞೇಯ, ಪರಿಜ್ಞಾತಗಳೆಂಬ ಮೂರು ತತ್ತ್ವ ಇವೆ. ಕರ್ಮದ ಅಂಗ ಮೂರು ಬಗೆ: ಇಂದ್ರಿಯ, ಕ್ರಿಯೆ, ಕರ್ತೃ. ॥೧೮॥

ಟಿಪ್ಪಣಿ – ಇದರಲ್ಲಿ ವಿಚಾರ, ಆಚಾರದ ಸಮೀಕರಣವಿದೆ. ಮೊದಲು ಮನುಷ್ಯ ಕರ್ತವ್ಯ ಕರ್ಮದ (ಜ್ಞೇಯ) ವಿಧಿ (ಜ್ಞಾನ) ತಿಳಿಯುತ್ತಾನೆ, ಪರಿಜ್ಞಾತನಾಗುತ್ತಾನೆ. ಈ ಕರ್ಮಪ್ರೇರಣೆಯ ವಿಧಿಯ ನಂತರ ಅವನು ಇಂದ್ರಿಯ (ಕರಣ)ಗಳ ಮೂಲಕ ಕ್ರಿಯೆಯ ಕರ್ತನಾಗುತ್ತಾನೆ. ಇದು ಕರ್ಮಸಂಗ್ರಹ.

ಜ್ಞಾನ, ಕರ್ಮ, ಕರ್ತೃಗಳು ಗುಣಭೇದಾನುಸಾರವಾಗಿ ಮೂರು ಬಗೆ. ಈ ಗುಣಗಣನೆಯಲ್ಲಿ ಯಾವ ಬಗೆಯ ವರ್ಣನೆ ಇದೆಯೋ ಕೇಳು. ॥೧೯॥

ಯಾವುದರ ಮೂಲಕ ಮನುಷ್ಯ ಸಕಲ ಭೂತಗಳಲ್ಲಿಯೂ ಒಂದೇ ಅವಿನಾಶಿ ಭಾವವನ್ನೂ, ವಿವಿಧತೆಯಲ್ಲಿ ಏಕತ್ವವನ್ನು ನೋಡುತ್ತಾನೋ ಅದು ಸಾತ್ತ್ವಿಕ ಜ್ಞಾನ, ತಿಳಿ. ॥೨೦॥

ಪೃಥಕ್ತ್ವೇನ ತು ಯಜ್ಞಾನಂ ನಾನಾಭಾವಾನ್ ಪೃಥಗ್ವಿಧಾನ್ ।
ವೇತ್ತಿ ಸರ್ವೇಷು ಭೂತೇಷು ತಜ್ಜ್ಞಾನಂ ವಿದ್ಧಿ ರಾಜಸಮ್ ॥೨೧॥

ಯತ್ತುಕೃತ್ಸ್ನ ವದೇಕಸ್ಮಿನ್ ಕಾರ್ಯೇ ಸಕ್ತಮಹೈತುಕಮ್ ।
ಅತತ್ತ್ವಾರ್ಥವದಲ್ಪಂ ಚ ತತ್ತಾಮಸಮುದಾಹೃತಮ್ ॥೨೨॥

ನಿಯತಂ ಸಂಗರಹಿತಮರಾಗದ್ವೇಷತಃ ಕೃತಮ್ ।
ಅಫಲಪ್ರೇಪ್ಸುನಾ ಕರ್ಮ ಯತ್ತತ್ಸಾತ್ತ್ವಿಕಮುಚ್ಯತೇ ॥೨೩॥

ಯತ್ತು ಕಾಮೇಪ್ಸುನಾ ಕರ್ಮ ಸಾಹಂಕಾರೇಣ ವಾ ಪುನಃ ।
ಕ್ರಿಯತೇ ಬಹುಲಾಯಸಂ ತದ್ರಾಜಸಮುದಾಹೃತಮ್ ॥೨೪॥

ಅನುಬಂಧಂ ಕ್ಷಯಂ ಹಿಂಸಾಮನಪೇಕ್ಷ್ಯ ಚ ಪೌರುಷಮ್ ।
ಮೋಹಾದಾರಭ್ಯತೇ ಕರ್ಮ ಯತ್ತತ್ತಾಮಸಮುಚ್ಯತೇ ॥೨೫॥

ಮುಕ್ತಸಂಗೋಽನಹಂವಾದೀ ಧೃತ್ಯುತ್ಸಾಹಸಮನ್ವಿತಃ ।
ಸಿದ್ಧ್ಯಸಿದ್ಧ್ಯೋರ್ನಿರ್ವಿಕಾರಃ ಕರ್ತಾ ಸಾತ್ತ್ವಿಕ ಉಚ್ಯತೇ ॥೨೬॥

ಭಿನ್ನ ಭಿನ್ನವಾಗಿ ಕಾಣುವುದರಿಂದ ಸಕಲ ಭೂತಗಳಲ್ಲಿ ಭಿನ್ನ ಭಿನ್ನ ಭಾವವನ್ನು ಮನುಷ್ಯ ಯಾವುದರ ಮೂಲಕ ನೋಡುತ್ತಾನೋ ಆ ಜ್ಞಾನ ರಾಜಸ. ॥೨೧॥

ಒಂದೇ ಕಾರ್ಯದಲ್ಲಿ ಇದೇ ಸರ್ವಸ್ವವೆಂಬ ಭಾವನೆ ನಿಷ್ಕಾರಣವಾಗಿ ಯಾವುದರ ಮೂಲಕ ಭಾಸವಾಗುತ್ತದೋ, ಯಾವುದು ರಹಸ್ಯರಹಿತವೋ, ತುಚ್ಛವೋ ಆ ಜ್ಞಾನ ತಾಮಸ. ॥೨೨॥

ಫಲೇಚ್ಛೆಯಿಲ್ಲದ ಪುರುಷ ಆಸಕ್ತಿ ರಾಗ–ದ್ವೇಷಗಳಿಲ್ಲದೆ ಮಾಡುವ ಕರ್ಮ ಸಾತ್ತ್ವಿಕ. ॥೨೩॥

ಟಿಪ್ಪಣಿ – ಅ.೨ ಶ್ಲೋಕ ೪೮ರ ಟಿಪ್ಪಣಿ ನೋಡಿ.

ಭೋಗೇಚ್ಛೆಯುಳ್ಳವನು 'ನಾನು ಮಾಡುತ್ತೇನೆ' ಎಂಬ ಭಾವದಿಂದ ಪರಿಶ್ರಮ ಪೂರ್ವಕ ಕರ್ಮ ಮಾಡುವುದು ರಾಜಸ. ॥೨೪॥

ಮನುಷ್ಯ ಯಾವ ಕೆಲಸವನ್ನು ಅದರ ಪರಿಣಾಮ, ಹಾನಿ ಹಿಂಸೆ, ತನ್ನ ಸಾಮರ್ಥ್ಯಗಳಿಗೆ ವಿಚಾರ ಮಾಡದೆ–ಮೋಹವಶನಾಗಿ ಪ್ರಾರಂಭಿಸುತ್ತಾನೋ ಅದು ತಾಮಸ. ॥೨೫॥

ಆಸಕ್ತಿ–ಅಹಂಕಾರಗಳಿಲ್ಲದ, ದೃಢತೆ–ಉತ್ಸಾಹ ಉಳ್ಳ ಸಫಲತೆ–ನಿಷ್ಫಲತೆಗಳಲ್ಲಿ ಹರ್ಷ ಶೋಕಗಳನ್ನು ತಳೆಯದ ಮನುಷ್ಯ ಸಾತ್ತ್ವಿಕ ಕರ್ತೃ. ॥೨೬॥

ಾಗೀ ಕರ್ಮಫಲಪ್ರೇಪ್ಸುರ್ಲುಬ್ಧೋ ಹಿಂಸಾತ್ಮಕೋऽಶುಚಿಃ ।
ರ್ಷಶೋಕಾನ್ವಿತಃ ಕರ್ತಾ ರಾಜಸಃ ಪರಿಕೀರ್ತಿತಃ ॥೨೭॥

ಯುಕ್ತಃ ಪ್ರಾಕೃತಸ್ಸ್ತಬ್ಧಃ ಶಠೋ ನೈಷ್ಕೃತಿಕೋऽಲಸಃ ।
ಪಾದೀ ದೀರ್ಘಸೂತ್ರೀ ಚ ಕರ್ತಾ ತಾಮಸ ಉಚ್ಯತೇ ॥೨೮॥

ದ್ಧೇರ್ಭೇದಂ ಧೃತೇಶ್ಚೈವ ಗುಣತಸ್ತ್ರಿವಿಧಂ ಶೃಣು ।
ರೋಚ್ಯಮಾನಮಶೇಷೇಣ ಪೃಥಕ್ತ್ವೇನ ಧನಂಜಯ ॥೨೯॥

ಪ್ರವೃತ್ತಿಂ ನಿವೃತ್ತಿಂ ಚ ಕಾರ್ಯಾಕಾರ್ಯೇ ಭಯಾಭಯೇ ।
ಂಧಂ ಮೋಕ್ಷಂ ಚಯಾ ವೇತ್ತಿ ಬುದ್ಧಿಃ ಸಾ ಪಾರ್ಥಸಾತ್ವಿಕೀ ॥೩೦॥

ಯಯಾ ಧರ್ಮಮಧರ್ಮಂ ಕಾರ್ಯಂ ಚಾಕಾರ್ಯಮೇವ ಚ ।
ಯಥಾವತ್ಪ್ರಜಾನಾತಿ ಬುದ್ಧಿಸ್ಸಾ ಪಾರ್ಥ ರಾಜಸೀ ॥೩೧॥

ಧರ್ಮಂ ಧರ್ಮಮಿತಿ ಯಾ ಮನ್ಯತೇ ತಮಸಾವೃತಾ ।
ರ್ವಾರ್ಥಾನ್ ವಿಪರೀತಾಂಶ್ಚ ಬುದ್ಧಿಸ್ಸಾ ಪಾರ್ಥ ತಾಮಸೀ ॥೩೨॥

ಧೃತ್ಯಾ ಯಯಾ ಧಾರಯತೇ ಮನಃಪ್ರಾಣೇಂದ್ರಿಯಕ್ರಿಯಾಃ ।
ಯೋಗೇನಾವ್ಯಭಿಚಾರಿಣ್ಯಾ ಧೃತಿಸ್ಸಾ ಪಾರ್ಥ ಸಾತ್ತ್ವಿಕೀ ॥೩೩॥

ರಾಗಪೂರ್ಣ, ಕರ್ಮಫಲದ ಇಚ್ಛುಕ, ಲೋಭಿ, ಹಿಂಸಕ, ಅಶುದ್ಧ, ಹರ್ಷ-
ಶೋಕಗಳನ್ನು ತಳೆವವನು ರಾಜಸಕರ್ತ. ॥೨೭॥

ಅವ್ಯವಸ್ಥಿತ, ಅಸಂಸ್ಕಾರಿ, ಸಟೆಗಾರ, ಶಠ, ನೀಚ ಸೋಮಾರಿ, ದೀರ್ಘಸೂತ್ರಿ,
ಟಮಿಡಿಗುಟ್ಟುವವನು ತಾಮಸ ಕರ್ತ. ॥೨೮॥

ಧನಂಜಯ ! ಗುಣಾನುಸಾರವಾದ ಬುದ್ಧಿಧೃತಿಗಳ ಮೂರು ಬಗೆಗಳನ್ನು
ಪೂರ್ಣವಾಗಿಯೂ ಬೇರೆಬೇರೆಯಾಗಿ ಹೇಳುತ್ತೇನೆ, ಕೇಳು. ॥೨೯॥

ಪ್ರವೃತ್ತಿ-ನಿವೃತ್ತಿ, ಕಾರ್ಯ-ಅಕಾರ್ಯ, ಭಯ-ಅಭಯ, ಬಂಧನ-ಮೋಕ್ಷಗಳ ಭೇದವನ್ನು
(ಸರಿಯಾಗಿ) ಅರಿಯುವ ಬುದ್ಧಿ, ಸಾತ್ತ್ವಿಕ ಬುದ್ಧಿ. ॥೩೦॥

ಧರ್ಮಾಧರ್ಮ, ಕಾರ್ಯ-ಅಕಾರ್ಯಗಳ ವಿವೇಕವನ್ನು ಅಯಥಾರ್ಥವಾಗಿ ಮಾಡುವ
ಬುದ್ಧಿ ರಾಜಸ ಬುದ್ಧಿ. ॥೩೧॥

ಪಾರ್ಥ ! ಅಂಧಕಾರ ಕವಿದ, ಅಧರ್ಮವನ್ನು ಧರ್ಮವೆಂದು ಭಾವಿಸುವ, ಎಲ್ಲವನ್ನು
ತಿರುಗುಮುರುಗಾಗಿ ನೋಡುವ ಬುದ್ಧಿ ತಾಮಸ ಬುದ್ಧಿ. ॥೩೨॥

ಪಾರ್ಥ ! ಏಕನಿಷ್ಠ ಧೃತಿಯಿಂದ ಮನುಷ್ಯ ಮನಸ್ಸು, ಪ್ರಾಣ, ಇಂದ್ರಿಯಗಳ
ಕ್ರಿಯೆಗಳನ್ನು ಸಾಮ್ಯಬುದ್ಧಿಯಿಂದ ನಡೆಸಿದರೆ ಆ ಧೃತಿ ಸಾತ್ತ್ವಿಕ. ॥೩೩॥

ಯಯಾ ತು ಧರ್ಮಕಾಮಾರ್ಥಾನ್ ಧೃತ್ಯಾ ಧಾರಯತೇಽರ್ಜುನ ।
ಪ್ರಸಂಗೇನ ಫಲಾಕಾಂಕ್ಷೀ ಧೃತಿಸ್ಸಾ ಪಾರ್ಥ ರಾಜಸೀ ॥೩೪॥

ಯಯಾ ಸ್ವಪ್ನಂ ಭಯಂ ಶೋಕಂ ವಿಷಾದಂ ಮದಮೇವ ಚ ।
ನ ವಿಮುಂಚತಿ ದುರ್ಮೇಧಾ ಧೃತಿಸ್ಸಾ ಪಾರ್ಥ ತಾಮಸೀ ॥೩೫॥

ಸುಖಂ ತ್ವಿದಾನೀಂ ತ್ರಿವಿಧಂ ಶೃಣು ಮೇ ಭರತರ್ಷಭ ।
ಅಭ್ಯಾಸಾದ್ರಮತೇ ಯತ್ರ ದುಃಖಾಂತಂ ಚ ನಿಗಚ್ಛತಿ ॥೩೬॥

ಯತ್ತದಗ್ರೇ ವಿಷಮಿವ ಪರಿಣಾಮೇಽಮೃತೋಪಮಮ್ ।
ತತ್ಸುಖಂ ಸಾತ್ತ್ವಿಕಂ ಪ್ರೋಕ್ತಮಾತ್ಮಬುದ್ಧಿಪ್ರಸಾದಜಂ ॥೩೭॥

ವಿಷಯೇಂದ್ರಿಯಸಂಯೋಗಾತ್ ಯತ್ತದಗ್ರೇಽಮೃತೋಪಮಮ್ ।
ಪರಿಣಾಮೇ ವಿಷಮಿವ ತತ್ಸುಖಂ ರಾಜಸಂ ಸ್ಮೃತಮ್ ॥೩೮॥

ಯದಗ್ರೇ ಚಾನುಬಂಧೇ ಚ ಸುಖಂ ಮೋಹನಮಾತ್ಮನಃ ।
ನಿದ್ರಾಲಸ್ಯ ಪ್ರಮಾದೋತ್ಥಂ ತತ್ತಾಮಸಮುದಾಹೃತಮ್ ॥೩೯॥

ನ ತದಸ್ತಿ ಪೃಥಿವ್ಯಾಂ ವಾ ದಿವಿ ದೇವೇಷು ವಾ ಪುನಃ ।
ಸತ್ತ್ವಂ ಪ್ರಕೃತಿಜೈರ್ಮುಕ್ತಂ ಯದೇಭಿಸ್ಸ್ಯಾತ್ ತ್ರಿಭಿರ್ಗುಣೈಃ ॥೪೦॥

ಯಾವ ಧೃತಿಯ ಮೂಲಕ ಮನುಷ್ಯ ಫಲಾಕಾಂಕ್ಷಿಯಾಗಿ ಧರ್ಮ, ಕಾಮ, ಅರ್ಥಗಳನ್ನು ಆಸಕ್ತಿಯಿಂದ ಧಾರಣಮಾಡುತ್ತಾನೋ ಆ ಧೃತಿ ರಾಜಸ. ॥೩೪॥

ಯಾವ ಧೃತಿಯ ಮೂಲಕ ದುರ್ಬುದ್ಧಿಯ ಮನುಷ್ಯ ನಿದ್ರೆ, ಭಯ ಶೋಕ, ನಿರಾಶೆ, ಮದಗಳನ್ನು ಬಿಡಲಾರನೋ ಅದು ತಾಮಸ ಧೃತಿ. ॥೩೫॥

ಈಗ ಮೂರು ಬಗೆಯ ಸುಖದ ವರ್ಣನೆಯನ್ನು ಕೇಳು: ಯಾವುದರ ಅಭ್ಯಾಸದಿಂದ ಮನುಷ್ಯ ಪ್ರಸನ್ನನಾಗಿರುತ್ತಾನೋ, ದುಃಖ ಅಂತವಾಗುತ್ತದೋ, ಯಾವುದು ಆರಂಭದಲ್ಲಿ ವಿಷದಂತೆ ತೋರಿದರೂ, ಪರಿಣಾಮದಲ್ಲಿ ಅಮೃತವಾಗುತ್ತದೋ, ಆತ್ಮಜ್ಞಾನದ ಪ್ರಸನ್ನತೆಯಿಂದ ಲಭಿಸುತ್ತದೋ ಆ ಸುಖ ಸಾತ್ತ್ವಿಕವೆಂದು ಹೇಳುತ್ತಾರೆ. ॥೩೬–೩೭॥

ವಿಷಯ – ಇಂದ್ರಿಯಗಳ ಸಂಯೋಗದಿಂದ ಆರಂಭದಲ್ಲಿ ಅಮೃತದಂತೆ ತೋರಿದರೂ ಕೊನೆಯಲ್ಲಿ ವಿಷವಾಗುವ ಸುಖ ರಾಜಸ. ॥೩೮॥

ಆರಂಭದಲ್ಲಿಯೂ ಕೊನೆಯಲ್ಲಿಯೂ ಆತ್ಮವನ್ನು ಮೋಹಗೊಳಿಸುವುದು: ನಿದ್ರೆ ಆಲಸ್ಯ, ಪ್ರಮಾದದಿಂದ ಹುಟ್ಟುವುದು ತಾಮಸ ಸುಖ. ಪೃಥ್ವಿಯಲ್ಲಿ, ದೇವತೆಗಳ ನಡುವೆ, ಸ್ವರ್ಗದಲ್ಲಿ ಪ್ರಕೃತಿಯಿಂದ ಹುಟ್ಟಿದ ಈ ಮೂರು ಗುಣಗಳಿಂದ ಮುಕ್ತವಾದುದು ಯಾವುದೂ ಇಲ್ಲ. ॥೩೯–೪೦॥

ಬ್ರಾಹ್ಮಣಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ ।
ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವಪ್ರಭವೈರ್ಗುಣೈಃ ॥೪೧॥

ಶಮೋದಮಸ್ತಪಶ್ಶೌಚಂ ಕ್ಷಾಂತಿರಾರ್ಜವಮೇವ ಚ ।
ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮ ಸ್ವಭಾವಜಮ್ ॥೪೨॥

ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ ಯುದ್ಧೇ ಚಾಪ್ಯಪಲಾಯನಮ್ ।
ದಾನಮೀಶ್ವರಭಾವಶ್ಚ ಕ್ಷಾತ್ರಂ ಕರ್ಮ ಸ್ವಭಾವಜಮ್ ॥೪೩॥

ಕೃಷಿಗೋರಕ್ಷ್ಯವಾಣಿಜ್ಯಂ ವೈಶ್ಯಕರ್ಮ ಸ್ವಭಾವಜಮ್ ।
ಪರಿಚರ್ಯಾತ್ಮಕಂ ಕರ್ಮ ಶೂದ್ರಸ್ಯಾಪಿ ಸ್ವಭಾವಜಂ ॥೪೪॥

ಸ್ವೇ ಸ್ವೇ ಕರ್ಮಣ್ಯಭಿರತಸ್ಸಂಸಿದ್ಧಿಂ ಲಭತೇ ನರಃ ।
ಸ್ವಕರ್ಮನಿರತಸ್ಸಿದ್ಧಿಂ ಯಥಾ ವಿಂದತಿ ತಚ್ಛೃಣು ॥೪೫॥

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥೪೬॥

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರ ಕರ್ಮಗಳೂ ಅವರವರ ಸ್ವಭಾವಜನ್ಯ ಗುಣಗಳಿಂದ ವಿಭಾಗವಾಗಿದೆ. ॥೪೧॥

ಶಮ, ದಮ, ತಪಸ್ಸು, ಶೌಚ, ಕ್ಷಮೆ, ಸರಳತೆ ಜ್ಞಾನ, ಅನುಭವ, ಆಸ್ತಿಕತೆ–ಬ್ರಾಹ್ಮಣನ ಸ್ವಭಾವಜನ್ಯ ಕರ್ಮ. ॥೪೨॥

ಶೌರ್ಯ, ತೇಜಸ್ಸು, ಧೃತಿ, ಯುದ್ಧದಲ್ಲಿ ಹಿಮ್ಮೆಟ್ಟದಿರುವುದು, ದಾನ, ಶಾಸನ – ಇವು ಕ್ಷತ್ರಿಯರ ಸ್ವಭಾವಜನ್ಯ ಕರ್ಮ. ॥೪೩॥

ಕೃಷಿ, ಗೋರಕ್ಷಣೆ, ವ್ಯಾಪಾರ–ಇವು ವೈಶ್ಯನ ಸ್ವಭಾವಜನ್ಯ ಕರ್ಮ, ಶೂದ್ರನ ಸ್ವಭಾವಜನ್ಯ ಕರ್ಮ ಸೇವೆ. ॥೪೪॥

ತನ್ನ ತನ್ನ ಕರ್ಮದಲ್ಲಿ ರತನಾದ ಮನುಷ್ಯ ಮೋಕ್ಷಹೊಂದುತ್ತಾನೆ. ತನ್ನ ಕರ್ಮದಲ್ಲಿ ನಿರತನಾದ ಮನುಷ್ಯ ಯಾವ ರೀತಿ ಮೋಕ್ಷಹೊಂದುತ್ತಾನೋ ಕೇಳು. ॥೪೫॥

ಯಾರಿಂದ ಪ್ರಾಣಿಗಳ ಕೆಲಸ ನಡೆಯುತ್ತದೋ, ಯಾರಿಂದ ಎಲ್ಲವೂ ವ್ಯಾಪ್ತವೋ ಅವನನ್ನು ಸ್ವಕರ್ಮದಿಂದ ಪೂಜಿಸುವ ಪುರುಷ ಮೋಕ್ಷ ಪಡೆಯುತ್ತಾನೆ. ॥೪೬॥

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।
ಸ್ವಭಾವನಿಯತಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್ ॥೪೭॥

ಸಹಜಂ ಕರ್ಮ ಕೌಂತೇಯ ಸದೋಷಮಪಿ ನ ತ್ಯಜೇತ್ ।
ಸರ್ವಾರಂಭಾ ಹಿ ದೋಷೇಣ ಧೂಮೇನಾಗ್ನಿರಿವಾವೃತಾಃ ॥೪೮॥

ಅಸಕ್ತಬುದ್ಧಿಸ್ಸರ್ವತ್ರ ಜಿತಾತ್ಮಾ ವಿಗತಸ್ಪೃಹಃ ।
ನೈಷ್ಕರ್ಮ್ಯಸಿದ್ಧಿಂ ಪರಮಾಂ ಸಂನ್ಯಾಸೇನಾಧಿಗಚ್ಛತಿ ॥೪೯॥

ಸಿದ್ಧಿಂ ಪ್ರಾಪ್ತೋ ಯಥಾ ಬ್ರಹ್ಮ ತಥಾಪ್ನೋತಿ ನಿಬೋಧ ಮೇ ।
ಸಮಾಸೇನೈವ ಕೌಂತೇಯ ನಿಷ್ಠಾ ಜ್ಞಾನಸ್ಯ ಯಾ ಪರಾ ॥೫೦॥

ಪರಧರ್ಮ ಸುಕರವಾದರೂ, ಸ್ವಧರ್ಮ ವಿಗುಣವಾದರೂ ಸ್ವಧರ್ಮವೇ ಅಧಿಕ ಶ್ರೇಯಸ್ಕರ. ಸ್ವಭಾವಕ್ಕೆ ಅನುರೂಪವಾದ ಕರ್ಮ ಮಾಡುವವನಿಗೆ ಪಾಪ ಅಂಟದು. ॥೪೭॥

ಟಿಪ್ಪಣಿ – ಸ್ವಧರ್ಮ ಎಂದರೆ ತನ್ನ ಕರ್ತವ್ಯ. ಗೀತೆಯ ಶಿಕ್ಷಣದ ಮಧ್ಯಬಿಂದು ಕರ್ಮಫಲತ್ಯಾಗ, ಸ್ವಧರ್ಮಕ್ಕಿಂತಲೂ ಮತ್ತೊಂದು ಉತ್ತಮ ಕರ್ತವ್ಯವನ್ನು ಹುಡುಕುವುದರಲ್ಲಿ ಫಲತ್ಯಾಗಕ್ಕೆ ಸ್ಥಾನವಿಲ್ಲ. ಈ ಕಾರಣದಿಂದ ಸ್ವಧರ್ಮವೇ ಶ್ರೇಷ್ಠವೆಂದು ಹೇಳಲಾಗಿದೆ. ಎಲ್ಲ ಧರ್ಮಗಳ ಫಲವೂ ಅದರ ಪಾಲನೆಯಲ್ಲಿ ಅಡಕವಾಗಿದೆ.

ಸಹಜವಾಗಿ ಪ್ರಾಪ್ತವಾದ ಕರ್ಮ ಸದೋಷವಾದರೂ ಅದನ್ನು ಬಿಡಕೂಡದು. ಅಗ್ನಿಯೊಂದಿಗೆ ಹೊಗೆ ಇರುವಂತೆಯೇ ಸಕಲ ಕರ್ಮಗಳೊಂದಿಗೆ ದೋಷವೂ ಇರುತ್ತದೆ. ॥೪೮॥

ಯಾವುದರಲ್ಲೂ ಆಸಕ್ತಿಯಿಡದವನು, ಕಾಮನೆಗಳ ತ್ಯಾಗ ಮಾಡಿದವನು, ಮನಸ್ಸನ್ನು ಗೆದ್ದವನು ಸಂನ್ಯಾಸದ ಮೂಲಕ ನೈಷ್ಕರ್ಮ್ಯರೂಪ ಪರಮಸಿದ್ಧಿಯನ್ನು ಹೊಂದುತ್ತಾನೆ. ॥೪೯॥

ಕೌಂತೇಯ ! ಸಿದ್ಧಿಹೊಂದಿದನಂತರ ಮನುಷ್ಯ ಬ್ರಹ್ಮವನ್ನು ಯಾವ ರೀತಿ ಹೊಂದುತ್ತಾನೋ ಸಂಕ್ಷೇಪವಾಗಿ ಕೇಳು. ಅದುವೇ ಜ್ಞಾನದ ಪರಾಕಾಷ್ಠೆ. ॥೫೦॥

ಬುದ್ಧ್ಯಾವಿಶುದ್ಧಯಾ ಯುಕ್ತೋ ಧೃತ್ಯಾತ್ಮಾನಂ ನಿಯಮ್ಯ ಚ ।
ಶಬ್ದಾದೀನ್ ವಿಷಯಾಂಸ್ತ್ಯಕ್ತ್ವಾ ರಾಗದ್ವೇಷೌವ್ಯುದಸ್ಯ ಚ ॥೫೧॥

ವಿವಿಕ್ತಸೇವೀ ಲಘ್ವಾಶೀ ಯತವಾಕ್ಕಾಯಮಾನಸಃ ।
ಧ್ಯಾನಯೋಗಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ ॥೫೨॥

ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಮ್ ।
ವಿಮುಚ್ಯ ನಿರ್ಮಮಶ್ಶಾಂತೋ ಬ್ರಹ್ಮಭೂಯಾಯ ಕಲ್ಪತೇ ॥೫೩॥

ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಂಕ್ಷತಿ ।
ಸಮಸ್ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಂ ॥೫೪॥

ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ ।
ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಮ್ ॥೫೫॥

ಸರ್ವಕರ್ಮಾಣ್ಯಪಿ ಸದಾ ಕುರ್ವಾಣೋ ಮದ್ವ್ಯಪಾಶ್ರಯಃ ।
ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಮ್ ॥೫೬॥

ಚೇತಸಾ ಸರ್ವಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಃ ।
ಬುದ್ಧಿಯೋಗಮುಪಾಶ್ರಿತ್ಯ ಮಚ್ಚಿತ್ತಸ್ಸತತಂ ಭವ ॥೫೭॥

ಶುದ್ಧಬುದ್ಧಿಯುಳ್ಳ ಯೋಗಿ ದೃಢತೆಯಿಂದ ತನ್ನನ್ನು ವಶದಲ್ಲಿಟ್ಟುಕೊಂಡು, ಶಬ್ದಾದಿವಿಷಯಗಳ ತ್ಯಾಗಮಾಡಿ, ರಾಗದ್ವೇಷಗಳನ್ನು ಗೆದ್ದು, ಏಕಾಂತ ಸೇವನೆ ಮಾಡುತ್ತ, ಅಲ್ಪಾಹಾರಿಯಾಗಿ, ಮನಸ್ಸು, ವಚನ, ಕರ್ಮಗಳನ್ನು ಅಧೀನಪಡಿಸಿಕೊಂಡು, ಧ್ಯಾನಯೋಗದಲ್ಲಿ ನಿತ್ಯಪರಾಯಣನಾಗಿ, ವೈರಾಗ್ಯದ ಆಶ್ರಯ ಪಡೆದು, ಅಹಂಕಾರ, ಬಲ, ದರ್ಪ, ಕಾಮ ಕ್ರೋಧ, ಪರಿಗ್ರಹಗಳ ತ್ಯಾಗಮಾಡಿ, ಮಮತಾಹೀನನಾಗಿ ಶಾಂತನಾಗಿ ಬ್ರಹ್ಮಭಾವವನ್ನು ಹೊಂದಲು ಯೋಗ್ಯನಾಗಿರುತ್ತಾನೆ. ॥೫೧–೫೩॥

ಬ್ರಹ್ಮಭಾವ ಹೊಂದಿ ಪ್ರಸನ್ನಚಿತ್ತನಾದ ಮನುಷ್ಯ ಶೋಕಿಸನು, ಯಾವ ವಸ್ತುವನ್ನೂ ಅಪೇಕ್ಷಿಸನು. ಭೂತಮಾತ್ರಗಳಲ್ಲಿ ಸಮಭಾವವಿಟ್ಟು ನನ್ನ ಪರಮ ಭಕ್ತಿಯನ್ನೈದಿ ಭಕ್ತಿಯ ಮೂಲಕ ನಾನು ಯಾರು, ಹೇಗಿದ್ದೇನೆ ಎಂಬುದನ್ನು ಚೆನ್ನಾಗಿ ಅರಿಯುತ್ತಾನೆ. ಈ ರೀತಿ ನನ್ನನ್ನು ಯಥಾರ್ಥವಾಗಿ ಅರಿತು ನನ್ನಲ್ಲಿ ಪ್ರವೇಶಿಸುತ್ತಾನೆ. ॥೫೪–೫೫॥

ನನ್ನ ಆಶ್ರಯ ಪಡೆದವನು ಸದಾ ಸರ್ವಕರ್ಮಗಳನ್ನು ಮಾಡುತ್ತಿದ್ದರೂ ನನ್ನ ಕೃಪೆಯಿಂದ ಶಾಶ್ವತ, ಅವ್ಯಯ ಆದ ಪದವನ್ನು ಹೊಂದುತ್ತಾನೆ. ॥೫೬॥

ಮನಸ್ಸಿನಿಂದ ಸಕಲ ಕರ್ಮಗಳನ್ನು ನನಗೆ ಅರ್ಪಿಸಿ, ನನ್ನಲ್ಲಿ ಪರಾಯಣನಾಗಿ, ವಿವೇಕಬುದ್ಧಿಯ ಆಶ್ರಯದಿಂದ ನಿರಂತರವೂ ನನ್ನಲ್ಲಿ ಚಿತ್ತವನ್ನಿಡು. ॥೫೭॥

ಮಚ್ಚಿತ್ತಸ್ಸರ್ವದುರ್ಗಾಣಿ ಮತ್ಪ್ರಸಾದಾತ್ತರಿಷ್ಯಸಿ ।
ಅಥ ಚೇತ್ತ್ವಮಹಂಕಾರಾತ್ ನ ಶ್ರೋಷ್ಯಸಿ ವಿನಂಕ್ಷ್ಯಸಿ ॥೫೮॥

ಯದಹಂಕಾರಮಾಶ್ರಿತ್ಯ ನ ಯೋತ್ಸ್ಯ ಇತಿ ಮನ್ಯಸೇ ।
ಮಿಥ್ಯೈಷ ವ್ಯವಸಾಯಸ್ತೇ ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ ॥೫೯॥

ಸ್ವಭಾವಜೇನ ಕೌಂತೇಯ ನಿಬದ್ಧಸ್ಸ್ವೇನ ಕರ್ಮಣಾ ।
ಕರ್ತುಂ ನೇಚ್ಛಸಿ ಯನ್ಮೋಹಾತ್ ಕರಿಷ್ಯ ಸ್ಯವಶೋಽಪಿ ತತ್ ॥೬೦॥

ಈಶ್ವರಸ್ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥೬೧॥

ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।
ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥೬೨॥

ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ಗುಹ್ಯತರಂ ಮಯಾ ।
ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು ॥೬೩॥

ಸರ್ವಗುಹ್ಯತಮಂ ಭೂಯಃಶೃಣು ಮೇ ಪರಮಂ ವಚಃ ।
ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಮ್ ॥೬೪॥

ನನ್ನಲ್ಲಿ ಚಿತ್ತವಿಟ್ಟರೆ ಕಷ್ಟದ ಸಕಲ ದುರ್ಗಗಳನ್ನೂ ನನ್ನ ಕೃಪೆಯಿಂದ ದಾಟುತ್ತೀಯೆ. ಆದರೆ ಅಹಂಕಾರವಶನಾಗಿ ನೀನು ನನ್ನ ಮಾತನ್ನು ಕೇಳದಿದ್ದರೆ ನಾಶವಾಗುತ್ತೀಯೆ. ॥೫೮॥

ಅಹಂಕಾರವಶನಾಗಿ 'ನಾನು ಯುದ್ಧಮಾಡೆ' ಎಂದು ನೀನು ತಿಳಿದರೆ, ನಿನ್ನದು ಮಿಥ್ಯಾ ಸಂಕಲ್ಪ. ನಿನ್ನ ಸ್ವಭಾವವೇ ನಿನ್ನನ್ನು ಆ ಕಡೆಗೆ ಬಲವಾಗಿ ಎಳೆದೊಯ್ಯುತ್ತದೆ. ॥೫೯॥

ಕೌಂತೇಯ ! ಸ್ವಭಾವಜನ್ಯ ಕರ್ಮದಿಂದ ನೀನು ಬದ್ಧ; ಆದುದರಿಂದ ಮೋಹವಶನಾಗಿ ನೀನು ಮಾಡಲು ಅಪೇಕ್ಷಿಸದುದನ್ನೂ ವಿವಶನಾಗಿ ಮಾಡಿಯೇ ಮಾಡುತ್ತೀಯೆ. ॥೬೦॥

ಅರ್ಜುನ ! ಸಕಲ ಪ್ರಾಣಿಗಳ ಹೃದಯದಲ್ಲಿ ವಾಸಿಸುತ್ತ ಈಶ್ವರ, ತನ್ನ ಮಾಯೆಯ ಬಲದಿಂದ, ಚಕ್ರಕ್ಕೇರಿಸಿದ ಘಟದಂತೆ ಅವನ್ನು ತಿರುಗಿಸುತ್ತಾನೆ ॥೬೧॥

ಭಾರತ ! ಎಲ್ಲ ಬಗೆಯಿಂದಲೂ ನೀನು ಅವನಿಗೆ ಶರಣಾಗತನಾಗು. ಅವನ ಕೃಪೆಯಿಂದ ಪರಮ ಶಾಂತಿಮಯ, ಅಮರ ಪದವನ್ನು ಹೊಂದುತ್ತೀಯೆ. ॥೬೨॥

ಗುಹ್ಯಕ್ಕಿಂತ ಗುಹ್ಯವಾದ ಈ ಜ್ಞಾನವನ್ನು ನಾನು ನಿನಗೆ ಹೇಳಿದೆ. ಅದನ್ನೆಲ್ಲ ಚೆನ್ನಾಗಿ ವಿಚಾರಮಾಡಿ ನಿನಗೆ ಹಿತವೆನಿಸಿದುದನ್ನು ಮಾಡು. ॥೬೩॥

ಎಲ್ಲಕ್ಕಿಂತಲೂ ಗುಹ್ಯವಾದ ನನ್ನ ಪರಮವಚನವನ್ನು ಕೇಳು. ನೀನು ನನಗೆ ಬಹು ಪ್ರಿಯ. ಆದುದರಿಂದ ನಾನು ನಿನ್ನ ಹಿತಕ್ಕಾಗಿ ಈ ಮಾತನ್ನು ಹೇಳುತ್ತೇನೆ. ॥೬೪॥

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ॥೬೫॥

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥೬೬॥

ಇದಂ ತೇ ನಾತಪಸ್ಕಾಯ ನಾ ಭಕ್ತಾಯ ಕದಾಚನ ।
ನ ಚಾಶುಶ್ರೂಷವೇ ವಾಚ್ಯಂ ನ ಚ ಮಾಂ ಯೋಽಭ್ಯಸೂಯತಿ ॥೬೭॥

ಯ ಇಮಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ ।
ಭಕ್ತಿಂ ಮಯಿ ಪರಾಂ ಕೃತ್ವಾ ಮಾಮೇವೈಷ್ಯತ್ಯಸಂಶಯಃ ॥೬೮॥

ನ ಚ ತಸ್ಮಾನ್ಮನುಷ್ಯೇಷು ಕಶ್ಚಿನ್ಮೇ ಪ್ರಿಯಕೃತ್ತಮಃ ।
ಭವಿತಾ ನ ಚ ಮೇ ತಸ್ಮಾದನ್ಯಃ ಪ್ರಿಯತರೋ ಭುವಿ ॥೬೯॥

ಅಧ್ಯೇಷ್ಯತೇ ಚ ಯ ಇಮಂ ಧರ್ಮ್ಯಂ ಸಂವಾದಮಾವಯೋಃ ।
ಜ್ಞಾನಯಜ್ಞೇನ ತೇನಾಹಮಿಷ್ಟ ಸ್ಯಾಮಿತಿ ಮೇ ಮತಿಃ ॥೭೦॥

ನನ್ನಲ್ಲಿಯೇ ಮನಸ್ಸಿಡು. ನನ್ನ ಭಕ್ತನಾಗು, ನನಗಾಗಿ ಯಜ್ಞಮಾಡು, ನನಗೆ ನಮಸ್ಕರಿಸು. ನನ್ನನ್ನೇ ಹೊಂದುತ್ತೀ, ಇದು ನನ್ನ ಸತ್ಯಪ್ರತಿಜ್ಞೆ. ॥೬೫॥

ಸಕಲ ಧರ್ಮಗಳನ್ನೂ ತ್ಯಜಿಸಿ ನನಗೊಬ್ಬನಿಗೇ ಶರಣಾಗತನಾಗು, ಸಕಲ ಪಾಪಗಳಿಂದ ನಿನ್ನನ್ನು ನಾನು ಬಿಡುಗಡೆ ಮಾಡುತ್ತೇನೆ, ಶೋಕಿಸಬೇಡ. ॥೬೬॥

ತಪಸ್ವಿಯಲ್ಲದವನಿಗೆ, ಭಕ್ತನಲ್ಲದವನಿಗೆ, ಕೇಳಲಪೇಕ್ಷಿಸದವನಿಗೆ, ನನ್ನನ್ನು ದ್ವೇಷಿಸುವವನಿಗೆ ನೀನು (ಜ್ಞಾನವನ್ನು) ಎಂದಿಗೂ ಹೇಳಬೇಡ. ॥೬೭॥

ಆದರೆ ಯಾರು ಈ ಪರಮ ಗುಹ್ಯ ಜ್ಞಾನವನ್ನು ನನ್ನ ಭಕ್ತರಿಗೀಯುವನೋ, ನನ್ನಲ್ಲಿ ಪರಮ ಭಕ್ತಿಯುಳ್ಳವನಾಗಿ ನಿಸ್ಸಂದೇಹವಾಗಿ ನನ್ನನ್ನೇ ಹೊಂದುತ್ತಾನೆ. ॥೬೮॥

ಮನುಷ್ಯರಲ್ಲಿ ಅವನಿಗಿಂತಲೂ ನನಗೆ ಹೆಚ್ಚು ಪ್ರಿಯ ಸೇವಕರು ಯಾರೂ ಇಲ್ಲ. ಈ ಪೃಥ್ವಿಯಲ್ಲಿ ನನಗೆ ಅವನಿಗಿಂತಲೂ ಹೆಚ್ಚು ಪ್ರಿಯನಾಗಬಲ್ಲವನೂ ಯಾರೂ ಇಲ್ಲ. ॥೬೯॥

ನಮ್ಮಿಬ್ಬರ ಈ ಧರ್ಮಸಂವಾದವನ್ನು ಅಭ್ಯಾಸಮಾಡುವವನು ಯಜ್ಞದ ಮೂಲಕ ನನ್ನನ್ನು ಭಜಿಸುತ್ತಾನೆ. ॥೭೦॥

ಶ್ರದ್ಧಾವಾನನಸೂಯಶ್ಚ ಶೃಣುಯಾದಪಿ ಯೋ ನರಃ ।
ಸೋऽಪಿ ಮುಕ್ತಶ್ಶುಭಾನ್ ಲೋಕಾನ್ ಪ್ರಾಪ್ನುಯಾತ್ಪುಣ್ಯ ಕರ್ಮಣಾಮ್ ॥೭೧॥

ಕಚ್ಚಿದೇವಚ್ಛ್ರುತಂ ಪಾರ್ಥ ತ್ವಯ್ಯೈಕಾಗ್ರೇಣ ಚೇತಸಾ ।
ಕಚ್ಚಿದಜ್ಞಾನಸಮ್ಮೋಹಃ ಪ್ರಣಷ್ಟಸ್ತೇ ಧನಂಜಯ ॥೭೨॥

ಅರ್ಜುನ ಉವಾಚ

ನಷ್ಟೋ ಮೋಹಸ್ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ ।
ಸ್ಥಿತೋऽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ ॥೭೩॥

ಸಂಜಯ ಉವಾಚ

ಇತ್ಯಹಂ ವಾಸುದೇವಸ್ಯ ಪಾರ್ಥಸ್ಯ ಚ ಮಹಾತ್ಮನಃ ।
ಸಂವಾದಮಿಮಮಶ್ರೌಷಮದ್ಭುತಂ ರೋಮಹರ್ಷಣಂ ॥೭೪॥

ವ್ಯಾಸಪ್ರಸಾದಾಚ್ಛ್ರುತವಾನ್ ಏತದ್ಗುಹ್ಯ ಮಹಂ ಪರಮ್ ।
ಯೋಗಂ ಯೋಗೇಶ್ವರಾತ್ಕೃಷ್ಣಾತ್ ಸಾಕ್ಷಾತ್ಕಥಯತಸ್ಸ್ವಯಮ್ ॥೭೫॥

ದ್ವೇಷರಹಿತನಾಗಿ ಶ್ರದ್ಧೆಯಿಂದ ಇವನ್ನು ಕೇಳುವವನು ಕೂಡ ಮುಕ್ತನಾಗಿ ಪುಣ್ಯಶಾಲಿಗಳ ಶುಭಲೋಕಗಳನ್ನು ಹೊಂದುತ್ತಾನೆ. ॥೭೧॥

ಟಿಪ್ಪಣಿ – ಈ ಜ್ಞಾನದ ಅನುಭವ ಪಡೆದವನೇ ಅದನ್ನು ಬೇರೆಯವರಿಗೆ ಕೊಡಬಲ್ಲ ಎಂಬುದೇ ಇದರ ತಾತ್ಪರ್ಯ. ಶುದ್ಧ ಉಚ್ಚಾರಣೆ ಮಾಡಿ ಅರ್ಥಸಹಿತ ಪಠನಮಾಡಿ ಹೇಳುವವನಿಗೆಂದು ಈ ಎರಡು ಶ್ಲೋಕಗಳನ್ನು ಹೇಳಿಲ್ಲ.

ಪಾರ್ಥ ! ಇವನ್ನು ನೀನು ಏಕಾಗ್ರಚಿತ್ತದಿಂದ ಕೇಳಿದೆಯಷ್ಟೆ ? ಅಜ್ಞಾನದಿಂದ ನಿನ್ನಲ್ಲಿ ಉಂಟಾಗಿದ್ದ ಮೋಹ ನಷ್ಟವಾಯಿತೇ ? ॥೭೨॥

ಅರ್ಜುನ :

ಅಚ್ಯುತ ! ನಿನ್ನ ಕೃಪೆಯಿಂದ ನನ್ನ ಮೋಹ ಕಳೆಯಿತು. ನನಗೆ ಅರಿವು ಬಂದಿದೆ. ಶಂಕೆ ಸಮಾಧಾನವಾಯಿತು. ನಾನು ಈಗ ಸ್ವಸ್ಥಚಿತ್ತ. ನೀನು ಹೇಳಿದಂತೆ ನಡೆಯುತ್ತೇನೆ. ॥೭೩॥

ಸಂಜಯ :

ಈ ಬಗೆಯಾಗಿ ವಾಸುದೇವನ–ಮಹಾತ್ಮನಾದ ಪಾರ್ಥನ ರೋಮಾಂಚಕಾರಿ ಸಂವಾದವನ್ನು ನಾನು ಕೇಳಿದೆ. ॥೭೪॥

ವ್ಯಾಸನ ಕೃಪೆಯಿಂದ. ಯೋಗೇಶ್ವರ ಕೃಷ್ಣನ ಶ್ರೀಮುಖದಿಂದ ಗುಹ್ಯವಾದ ಈ ಪರಮಯೋಗವನ್ನು ಕೇಳಿದೆ. ॥೭೫॥

ರಾಜನ್ ಸಂಸ್ಮೃತ್ಯ ಸಂಸ್ಮೃತ್ಯ ಸಂವಾದಮಿಮಮದ್ಭುತಮ್ ।
ಕೇಶವಾರ್ಜುನಯೋಃ ಪುಣ್ಯಂ ಹೃಷ್ಯಾಮಿ ಚ ಮುಹುರ್ಮುಹುಃ ॥೭೬॥

ತಚ್ಚ ಸಂಸ್ಮೃತ್ಯ ಸಂಸ್ಮೃತ್ಯ ರೂಪಮತ್ಯದ್ಭುತಂ ಹರೇಃ ।
ವಿಸ್ಮಯೋ ಮೇ ಮಹಾನ್ ರಾಜನ್ ಹೃಷ್ಯಾಮಿ ಚ ಪುನಃಪುನಃ ॥೭೭॥

ಯತ್ರಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾನೀತಿರ್ಮತಿರ್ಮಮ ॥೭೮॥

ಹರಿಃ ಓಂ ತತ್ಸತ್

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮ ವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀ ಕೃಷ್ಣಾರ್ಜುನಸಂವಾದೇ
ಮೋಕ್ಷಸಂನ್ಯಾಸಯೋಗೋ ನಾಮ ಅಷ್ಟಾದಶೋಽಧ್ಯಾಯಃ ॥

॥ ಶ್ರೀಮದ್ಭಗವದ್ಗೀತಾ ಸಂಪೂರ್ಣಂ ॥

ರಾಜ ! ಕೇಶವಾರ್ಜುನರ ಈ ಪವಿತ್ರ ಸಂವಾದವನ್ನು ನೆನೆ ನೆನೆದು ಬಾರಿಬಾರಿಗೂ ನಾನು ಹರ್ಷಗೊಳ್ಳುತ್ತಿದ್ದೇನೆ. ॥೭೬॥

ರಾಜ ! ಹರಿಯ ಆ ಅದ್ಭುತ ರೂಪವನ್ನು ಪುನಃಪುನಃ ಸ್ಮರಿಸಿ ನನಗೆ ವಿಸ್ಮಯವಾಗುತ್ತಿದೆ. ಬಾರಿಬಾರಿಗೂ ಪುಲಕಿತನಾಗುತ್ತಿದ್ದೇನೆ. ॥೭೭॥

ಎಲ್ಲಿ ಯೋಗೇಶ್ವರ ಕೃಷ್ಣನೋ, ಎಲ್ಲಿ ಧನುರ್ಧಾರಿ ಪಾರ್ಥನೋ, ಅಲ್ಲಿ ಶ್ರೀ ವಿಜಯ ವೈಭವ ಇದ್ದೇ ಇರುತ್ತವೆ; ಅವಿಚಲ ನೀತಿಯಿರುತ್ತದೆ ಎಂದು ನನ್ನ ಅಭಿಪ್ರಾಯ. ॥೭೮॥

ಓಂ ತತ್ಸತ್

ಈ ಬಗೆಯಾಗಿ ಶ್ರೀಮದ್ಭಗವದ್ಗೀತಾರೂಪ ಉಪನಿಷತ್ ಅಥವಾ
ಬ್ರಹ್ಮವಿದ್ಯಾಂತರ್ಗತ ಯೋಗಶಾಸ್ತ್ರದ ಶ್ರೀ ಕೃಷ್ಣಾರ್ಜುನಸಂವಾದದಲ್ಲಿ
ಸಂನ್ಯಾಸಯೋಗವೆಂಬ ಹದಿನೆಂಟನೆಯ ಅಧ್ಯಾಯ.

॥ ಶ್ರೀ ಮದ್ಭವದ್ಗೀತೆ ಸಂಪೂರ್ಣವು ॥

***

ಗೀತಾಮಾತೆ

ಗೀತೆ ಶಾಸ್ತ್ರಗಳ ದೋಹನ. ಇಡೀ ಉಪನಿಷತ್ತುಗಳ ಸಾರವೇ ಈ ೭೦೦ ಶ್ಲೋಕಗಳಲ್ಲಿದೆ ಎಂದು ಎಲ್ಲಿಯೋ ಓದಿದ್ದೆ. ಅದುದರಿಂದ, ಇನ್ನೇನೂ ಆಗದಿದ್ದರೂ ಗೀತೆಯನ್ನಾದರೂ ತಿಳಿದುಕೊಳ್ಳೋಣ ಎಂದು ನಿಶ್ಚಯಿಸಿದೆ. ಈಗ ಗೀತೆ ನನಗೆ ಬರೀ ಬೈಬಲ್ ಮಾತ್ರವಲ್ಲ. ಕೇವಲ ಕುರಾನ್ ಅಲ್ಲ, ನನ್ನ ಪಾಲಿನ ತಾಯಿ ಆಗಿದೆ. ನನ್ನ ಹೆತ್ತ ತಾಯಿ ಹೋಗಿಬಿಟ್ಟರು. ಆದರೆ ಸಂಕಟ ಬಂದಾಗ ಗೀತಾಮಾತೆಯ ಬಳಿ ಹೋಗಲು ಕಲಿತಿದ್ದೇನೆ. ಈ ತಾಯಿಯನ್ನು ಶರಣುಹೊಕ್ಕವನಿಗೆ ಜ್ಞಾನಾಮೃತವನ್ನು ಉಣಿಸಿತೃಪ್ತಿಗೊಳಿಸುತ್ತಾಳೆ.

ಗೀತೆ ಬಹಳ ಗೂಢ ಗ್ರಂಥ ಎನ್ನುತ್ತಾರೆ ಕೆಲವರು. ಅನೇಕ ಗ್ರಂಥಗಳನ್ನು ಮನನ ಮಾಡಿ ಸ್ವರ್ಗೀಯ ಲೋಕಮಾನ್ಯ ತಿಲಕರು ಪಂಡಿತರ ದೃಷ್ಟಿಯಿಂದ ಅದನ್ನು ಅಭ್ಯಾಸಮಾಡಿದರು. ಅದರ ಗೂಢಾರ್ಥಗಳನ್ನು ಬೆಳಕಿಗೆ ತಂದರು. ಅದರ ಮೇಲೆ ಒಂದು ಮಹಾಭಾಷ್ಯವನ್ನೂ ಬರೆದರು. ತಿಲಕರಿಗೆ ಇದು ಗೂಢಗ್ರಂಥವೆ; ನಮ್ಮಂಥ ಸಾಧಾರಣ ಜನರಿಗೆ ಅದು ಗೂಢವಲ್ಲ. ಇಡೀ ಗೀತೆಯನ್ನು ಓದುವುದು ಕಷ್ಟವೆನಿಸಿದರೆ ಮೊದಲಿನ ಮೂರು ಅಧ್ಯಾಯಗಳನ್ನಷ್ಟೇ ಓದಿ. ಗೀತೆಯ ಸಾರವೆಲ್ಲವೂ ಈ ಮೂರು ಅಧ್ಯಾಯಗಳಲ್ಲಿ ಬರುತ್ತದೆ. ಅದೇ ಮಾತೇ ಉಳಿದ ಅಧ್ಯಾಯಗಳಲ್ಲಿ ಹೆಚ್ಚು ವಿಸ್ತಾರವಾಗಿ, ಅನೇಕ ದೃಷ್ಟಿಗಳಿಂದ ಸಿದ್ಧಮಾಡಲಾಗಿದೆ. ಇದೂ ಕಷ್ಟವೆನಿಸಿದರೆ ಈ ಮೂರು ಅಧ್ಯಾಯಗಳಿಂದ ಕೆಲವು ಶ್ಲೋಕಗಳನ್ನು ಆರಿಸಬಹುದು. ಗೀತೆಯ ಸಾರವೆಲ್ಲ ಬರುವಂತೆ, ಗೀತೆಯಲ್ಲಿ ಮೂರು ಕಡೆ ಹೀಗೂ ಬರುತ್ತದೆ: ಎಲ್ಲಾ ಧರ್ಮಗಳನ್ನೂ ಕೈಬಿಟ್ಟು ಕೇವಲ ನನ್ನ ಶರಣು ಬಾ. ಇದಕ್ಕಿಂತ ಹೆಚ್ಚು ಸರಳ, ನೇರ ಉಪದೇಶ ಇನ್ನೇನಿದ್ದೀತು ? ಗೀತೆಯಿಂದ ತನಗೊಂದು ಭರವಸೆ ಸಿಗಬೇಕು ಎಂದು ಬಯಸುವವನಿಗೆ ಅದು ಪೂರ್ಣವಾಗಿ ಸಿಗುತ್ತದೆ. ಗೀತೆಯ ಭಕ್ತನಾದವನಿಗೆ ನಿರಾಶೆಗೆ ಎಡೆಯೇ ಇಲ್ಲ, ಸದಾ ಆನಂದವಾಗಿ ಇರಬಲ್ಲ.

ಇದಕ್ಕೆ ಬುದ್ಧಿವಾದ ಪ್ರಯೋಜನವಿಲ್ಲ, ಅವ್ಯಭಿಚಾರಿಕವಾದ ಭಕ್ತಿ, ಬೇಕು, ಅವ್ಯಭಿಚಾರಿಕ ಭಕ್ತಿಯಿಂದ ಗೀತೆಯ ಸೇವನೆಮಾಡಿ ಅದರಿಂದ ಅಂಥ ಭರವಸೆ ಪಡೆಯದ ಒಬ್ಬರನ್ನೂ ನಾನು ನೋಡಿಲ್ಲ. ಇದುವರೆಗೆ ವಿದ್ಯಾರ್ಥಿಗಳು ನೀವು ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದರೆ ನಿರಾಶೆಯ ಕಡಲಿನಲ್ಲಿ ಮುಳುಗುತ್ತೀರಿ. ಆದರೆ ನಿರಾಶರಾಗುವವರಿಗೆ ಪುರುಷಾರ್ಥವನ್ನು ಕಲಿಸುತ್ತದೆ ಗೀತೆ, ಆಲಸ್ಯ ವ್ಯಭಿಚಾರಗಳನ್ನು ಬಿಡಿಸುತ್ತದೆ. ಒಂದರ ಧ್ಯಾನ, ಇನ್ನೊಂದರ ಮಾತು, ಮತ್ತೊಂದರ ಶ್ರವಣ–ಇದೇ ವ್ಯಭಿಚಾರ. ಗೀತೆ ಕಲಿಸುವುದು–ತೇರ್ಗಡೆಯಾಗಲಿ ಆಗದಿರಲಿ, ಎರಡೂ ಒಂದೇ ಸಮ, ಮನುಷ್ಯನಿಗೆ ಪ್ರಯತ್ನಪಡುವ ಅಧಿಕಾರ ಮಾತ್ರವೆ, ಫಲಕ್ಕೆ ಅಲ್ಲ, ಈ ಭರವಸೆಯನ್ನು ಯಾರೂ ಕೊಡಲಾರರು, ಅನನ್ಯ ಭಕ್ತಿಯಿಂದ ಮಾತ್ರ ದೊರೆತೀತು. ಸತ್ಯಾಗ್ರಹಿಯಂತೆ ಹೇಳುತ್ತೇನೆ–ಇದರಿಂದ ದಿನವೂ ನನಗೆ

ನೋ ಹೊಸಹೊಸದು ಸಿಗುತ್ತಲೇ ಇರುತ್ತದೆ. ಇದು ನಿನ್ನ ಮೂರ್ಖತನ ಎನ್ನಬಹುದು
ದಾದಾದರೂ. ನನಗೆ ಈ ಮೂರ್ಖತನವೇ ದೃಢವಾಗಿರಲಿ ಎಂದೇನು. ಆದುದರಿಂದ
ಳಿಗ್ಗೆ ಎದ್ದು ಗೀತೆಯನ್ನು ಅಭ್ಯಾಸ ಮಾಡಲಿ ವಿದ್ಯಾರ್ಥಿಗಳು ಎನ್ನುತ್ತೇನೆ. ನಾನು ತುಲಸೀದಾಸರ
ಕ್ತ, ಆದರೆ ನಿಮಗೆ ಈಗ ತುಲಸೀದಾಸರನ್ನು ಓದಲು ಹೇಳುವುದಿಲ್ಲ. ವಿದ್ಯಾರ್ಥಿಗಳಾಗಿ
ೀವು ಗೀತೆಯನ್ನು ಅಭ್ಯಾಸಮಾಡಿ: ದ್ವೇಷದಿಂದಲ್ಲ, ಭಕ್ತಿಯಿಂದ. ಭಕ್ತಿಪೂರ್ವಕ ಅದನ್ನು
ವೇಶ ಮಾಡಿದರೆ ನಿಮಗೇನು ಬೇಕೋ ಅದು ಸಿಕ್ಕೀತು. ಹದಿನೆಂಟು ಅಧ್ಯಾಯಗಳನ್ನು
ಾಯಿಪಾಠ ಮಾಡುವುದು ಆಟವಲ್ಲ. ಆದರೂ ಮಾಡಬೇಕಾದದ್ದೇ ಸರಿ. ಒಮ್ಮೆ ಅದನ್ನು
ಶ್ರಯಿಸಿದರೆ ಸಾಕು. ದಿನದಿನಕ್ಕೆ ನಿಮಗೆ ಅದರಲ್ಲಿ ಅನುರಾಗ ಬೆಳೆದೀತು. ನಿಮಗೇ ತಿಳಿಯುತ್ತದೆ.
ಮೇಲೆ ನೀವು ಸೆರೆಮನೆಯಲ್ಲಿರಿ ಅಡವಿಯಲ್ಲಿರಿ, ಆಕಾಶದಲ್ಲಿರಿ, ಕತ್ತಲೆ ಕೋಣೆಯಲ್ಲಿರಿ
ೀತೆಯ ಪಾರಾಯಣ ನಿರಂತರವೂ ನಿಮ್ಮ ಹೃದಯದಲ್ಲಿ ಸಾಗಿದ್ದೀತು, ಆದರಿಂದ
ಮಗೆ ಆಶ್ವಾಸನ ದೊರೆತೀತು. ಈ ಆಧಾರವನ್ನು ನಿಮ್ಮಿಂದ ಯಾರೂ ಕಸಿದುಕೊಳ್ಳಲಾರರು.
ದರ ಪಠಣದಲ್ಲಿ ಪ್ರಾಣ ನೀಗಿದವರಿಗಂತೂ ಅದು ಸರ್ವಸ್ವವೆ. ಕೇವಲ ನಿರ್ವಾಣವಲ್ಲ–
ಹ್ಮನಿರ್ವಾಣ.

ಗೀತೆಯ ಪ್ರಥಮ ಪರಿಚಯ

ವಿಲಾಯತಿಯಲ್ಲಿದ್ದು ಒಂದು ವರ್ಷವಾಗಿತ್ತೇನೋ, ಅಷ್ಟರೊಳಗೆ ಇಬ್ಬರು
ಯಾಸಫಿಸ್ಟ್ ಗಳೆಯರ ಭೇಟಿಯಾಯಿತು. ಇಬ್ಬರೂ ಅಣ್ಣ ತಮ್ಮಂದಿರು. ಇಬ್ಬರಿಗೂ
ದುವೆಯಿಲ್ಲ. ಅವರು ನನಗೆ ಗೀತೆಯ ವಿಷಯವನ್ನು ಹೇಳಿದರು. ಗೀತೆಯ ಎಡ್ವಿನ್
ರ್ನಾಲ್ಡ್ ಬರೆದ ಭಾಷಾಂತರವನ್ನು ಆಗ ಅವರು ಓದುತ್ತಿದ್ದರು. ತಮ್ಮ ಜೊತೆಯಲ್ಲಿ ಮೂಲ
ಂಸ್ಕೃತವನ್ನು ಓದಲು ಕೇಳಿದರು. ನನಗೆ ನಾಚಿಕೆಯಾಯಿತು. ಸಂಸ್ಕೃತವೂ ಇಲ್ಲ, ಉಳಿದ
ಾಷೆಯೂ ಇಲ್ಲ. ಗೀತೆಯನ್ನೇ ಓದಿರಲಿಲ್ಲ ನಾನು. ಸಂಕೋಚದಿಂದ ಇದನ್ನು ಅವರಿಗೆ
ಳಿಸಿದೆ. ಆದರೆ ಅವರ ಜೊತೆಯಲ್ಲಿ ನಿಮ್ಮ ಸಂಗಡ ಕೂತು ಓದಲು ಸಿದ್ಧ ಎಂದೂ
ೇಳಿದೆ. ನನಗೆ ಸಂಸ್ಕೃತಜ್ಞಾನ ಸೊನ್ನೆ. ಆದರೂ ಅನುವಾದ ಎಲ್ಲಾದರೂ ಗೊಂದಲವಾಗಿದ್ದರೆ
ದನ್ನು ತೋರಿಸಬಲ್ಲೆ. ಹೀಗೆ ಈ ಅಣ್ಣತಮ್ಮಂದಿರ ಜೊತೆಯಲ್ಲಿ ನನ್ನ ಗೀತಾಪಾಠ
ೊದಲಾಯಿತು. ಎರಡನೆ ಅಧ್ಯಾಯದ ಕೊನೆಯ

ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ ।
ಸಂಗಾತ್ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ ॥

ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ ।
ಸ್ಮೃತಿಭ್ರಂಶಾತ್ ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ॥

ಎಂಬ ಶ್ಲೋಕಗಳು ನನ್ನ ಮನಸ್ಸಿನ ಮೇಲೆ ಗಾಢ ಪ್ರಭಾವವನ್ನು ಬೀರಿದವು. ಕಿವಿಯಲ್ಲಿ ಹಗಲೂ ಇರುಳೂ ಅದರ ಧ್ವನಿಯೇ ಕೇಳಿಸುತ್ತಿತ್ತು. ಭಗವದ್ಗೀತೆ ಅಮೂಲ್ಯ ಗ್ರಂಥವೆಂದು ನನಗೆ ಆಗ ತಿಳಿಯಿತು. ಆ ನಂಬಿಕೆ ದಿನದಿನಕ್ಕೆ ಹೆಚ್ಚು ಬೆಳೆಯಿತು. ಈಗಂತೂ ತತ್ತ್ವಜ್ಞಾನಕ್ಕೆ ಅದೇ ಸರ್ವೋತ್ತಮ ಗ್ರಂಥ ಎಂದು ತಿಳಿದಿದ್ದೇನೆ. ನಿರಾಶೆಯ ವೇಳೆಯಲ್ಲಿ ಈ ಗ್ರಂಥ ನನಗೆ ಅಮೂಲ್ಯ ಗ್ರಂಥ ನನಗೆ ಅಮೂಲ್ಯ ಸಹಾಯ ಮಾಡಿದೆ ಇದರ ಇಂಗ್ಲೀಷ್ ಅನುವಾದಗಳನ್ನೆಲ್ಲಾ ಬಹುಶಃ ಓದಿದ್ದೇನೆ. ಅದರಲ್ಲಿ ಎಡ್ವಿನ್ ಅರ್ನಾಲ್ಡರ ಅನುವಾದ ಸರ್ವ ಶ್ರೇಷ್ಠವೆನಿಸುತ್ತದೆ. ಮೂಲಗ್ರಂಥದ ಭಾವವನ್ನು ಚೆನ್ನಾಗಿ ಕಾಯ್ದಿದ್ದಾರೆ. ಅನುವಾದದ ಹಾಗೇ ಕಾಣದು. ಈ ವೇಳೆಗೆ ನಾನು ಭಗವದ್ಗೀತೆಯನ್ನು ಚೆನ್ನಾಗಿ ಅಧ್ಯಯನ ಮಾಡಿದೆ ಎನ್ನಲಾರೆ. ಅದರ ನಿತ್ಯಪಾರಾಯಣವಂತೂ ಅನೇಕ ವರ್ಷಗಳ ತರುವಾಯ ಮೊದಲಾಯಿತು.

ಗೀತೆಯ ಅಧ್ಯಯನ

ಗೀತೆಯ ಅಧ್ಯಯನವನ್ನು ಮೊದಲಿಟ್ಟೆ. ಚಿಕ್ಕದೊಂದು 'ಜಿಜ್ಞಾಸು ಮಂಡಲ' ವನ್ನು ಮಾಡಿದೆವು ನಿಯಮಪೂರ್ವಕವಾಗಿ ಅಧ್ಯಯನ ಮೊದಲಾಯಿತು. ಗೀತೆಯ ಬಗ್ಗೆ ಪ್ರೇಮ ಶ್ರದ್ಧೆ ಮೊದಲಿಂದಲೂ ಇತ್ತು. ಈಗ ಅದರ ರಹಸ್ಯವನ್ನು ಆಳವಾಗಿ ಅರಿತುಕೊಳ್ಳುವ ಅವಶ್ಯಕತೆ ಕಂಡುಬಂತು. ನನ್ನಲ್ಲಿ ಒಂದೆರಡು ಅನುವಾದ ಇದ್ದವು. ಅದರ ಸಹಾಯದಿಂದ ಮೂಲ ಸಂಸ್ಕೃತವನ್ನು ಅರಿಯುವ ಪ್ರಯತ್ನ ಮಾಡಿದೆ. ದಿನವೂ ಒಂದೋ ಎರಡೋ ಶ್ಲೋಕಗಳನ್ನು ಬಾಯಿಪಾಠ ಮಾಡಲು ನಿಶ್ಚಯಿಸಿದೆ.

ಬೆಳಿಗ್ಗೆ ಹಲ್ಲುಜ್ಜಿಕೊಳ್ಳುವಾಗ ಸ್ನಾನಮಾಡುವಾಗ ಗೀತೆಯ ಬಾಯಿ ಪಾಠ ಮಾಡಲು ತೊಡಗಿದೆ ಮುಖ ತೊಳೆಯಲು ೧೫. ಸ್ನಾನಕ್ಕೆ ೨೦ ನಿಮಿಷ ಹಿಡಿಯುತ್ತಿತ್ತು. ಇಂಗ್ಲೀಷರ ಪದ್ಧತಿಯಂತೆ ನಿಂತುಕೊಂಡೇ ಹಲ್ಲುಜ್ಜುತ್ತಿದ್ದೆ. ಎದುರಿಗೆ ಗೋಡೆಯ ಮೇಲೆ ಗೀತೆಯ ಶ್ಲೋಕವನ್ನು ಬರೆದು ಅಂಟಿಸುತ್ತಿದ್ದೆ. ಅದನ್ನು ನೋಡಿ ಬಾಯಿಪಾಠ ಮಾಡಿದ ಶ್ಲೋಕ ಸ್ನಾನ ಮಾಡುವ ಹೊತ್ತಿಗೆ ಗಟ್ಟಿಯಾಗಿ ಬರುತ್ತಿತ್ತು . ನಡುವೆ ಹಿಂದಿನ ಶ್ಲೋಕಗಳನ್ನು ಮತ್ತೆ ಹೇಳುತ್ತಿದ್ದೆ. ಹೀಗೆ ೧೩ ಅಧ್ಯಾಯಗಳನ್ನು ಬಾಯಿ ಪಾಠ ಮಾಡಿದ್ದು ನೆನಪಿದೆ. ಆ ಮೇಲೆ ಕೆಲಸದ ಜಂಜಾಟ ಹೆಚ್ಚಿತು. ಸತ್ಯಾಗ್ರಹ ಹುಟ್ಟಿತು. ಆ ಮಗುವಿನ ಪಾಲನೆಯ ಭಾರ ನನ್ನ ಮೇಲೆ ಬಿತ್ತು. ವಿಚಾರ ಮಾಡುವ ಸಮಯವನ್ನು ಅದರ ಲಾಲನೆಪಾಲನೆಯಲ್ಲೇ ಕಳೆಯಬೇಕಾಯಿತು.

ಗೀತಾಪಾಠದ ಪರಿಣಾಮ ನನ್ನ ಜೊತೆಗಾರರ ಮೇಲೆ ಏನಾಯಿತೋ. ನನಗಂತೂ ಒಂದು ಪ್ರೌಢಮಾರ್ಗದರ್ಶಿನಿಯಾಗಿದೆ. ಅದು ನನ್ನ ಧಾರ್ಮಿಕ ಕೋಶ. ಅಪರಿಚಿತ ಇಂಗ್ಲೀಷ್ ಶಬ್ದಕ್ಕೆ ಅರ್ಥ ಹುಡುಕಲು ಇಂಗ್ಲೀಷ್ ನಿಘಂಟನ್ನು ಹುಡುಕುವಂತೆ ಆಚಾರದ ತೊಡಕನ್ನು

ಡಿಸಲು ಗೀತೆಯನ್ನು ಆಶ್ರಯಿಸುತ್ತೇನೆ. ಅಪರಿಗ್ರಹ, ಸಮಭಾವ ಮುಂತಾದ ಅದರ ಶಬ್ದಗಳು ನನ್ನನ್ನು ಸೆರೆಹಿಡಿದಿವೆ. ಸಮ ಭಾವವನ್ನು ಹೇಗೆ ಗಳಿಸಲಿ, ಪಾಲಿಸಲಿ ಎಂಬುದೇ ಗುಂಗು. ನನಗೆ ಅಪಮಾನ ಮಾಡಿದ ಅಧಿಕಾರಿ, ಲಂಚಗುಳಿ, ದಾರಿಯಲ್ಲಿ ಹೋಗುವಾಗ ನಮಗೆ ಕಷ್ಟಬರುವವನು, ನಿನ್ನೆ ನಮ್ಮ ಸಂಗಾತಿಯಾಗಿದ್ದವನು, ಇಂಥವರಿಗೂ ನಮಗೆ ದೊಡ್ಡ ಉಪಕಾರ ಮಾಡಿದ ಸಜ್ಜನರಿಗೂ ಏನೂ ಭೇದವಿಲ್ಲವೆ? ಅನುಗ್ರಹದ ಪಾಲನೆ ಹೇಗೆ ಸಾಧ್ಯ ? ನಮ್ಮ ದೇಹವೇನು ಕಡಿಮೆ ಪರಿಗ್ರಹವೆ ? ಗಂಡ–ಹೆಂಡತಿ ಎಂಬುದೆಲ್ಲ ಪರಿಗ್ರಹವಲ್ಲದೆ ಮತ್ತೇನು ? ಪುಸ್ತಕ ತುಂಬಿರುವ ಈ ಅಲಮಾರಿಗೆ ಬೆಂಕಿ ಇಡಲೆ ? ಮನೆ ಸುಟ್ಟು ತೀರ್ಥಯಾತ್ರೆಗೆ ಹೊರಟಂತೆ ಆಯಿತಲ್ಲ ? ಒಡನೆಯ ಒಳಗಿನಿಂದ ಉತ್ತರ ಬಂತು – ಮನೆಮಾರು ಸುಡದೆ ಮಹಾದೇವನ ಯಾತ್ರೆಯೆ ? ಇಂಗ್ಲೀಷ್ ಕಾನೂನಿನ ಅಧ್ಯಯನ ನನಗೆ ಇದರಲ್ಲಿ ನೆರವಾಯಿತು. ಟ್ರಸ್ಟೀ ಶಬ್ದದ ಅರ್ಥ ಗೀತೆಯನ್ನು ಅಧ್ಯಯನ ಮಾಡಿದಾಗ ಚೆನ್ನಾಗಿ ತಿಳಿಯಿತು. ಶಾಸನಶಾಸ್ತ್ರದಲ್ಲಿ ಆದರ ಹೆಚ್ಚಿತು, ಅದರಲ್ಲೂ ಧರ್ಮತತ್ತ್ವ ಕಂಡುಬಂತು. ಟ್ರಸ್ಟೀಗಳಲ್ಲಿ ಕೋಟಿಗಟ್ಟಲೆ ಐಶ್ವರ್ಯವಿದ್ದೂ ಅದರಲ್ಲಿ ಒಂದು ಕಾಸಿನ ಮೇಲೂ ಅವರಿಗೆ ಅಧಿಕಾರವಿಲ್ಲ. ಮುಮುಕ್ಷುವಿನ ಆಚರಣೆಯೂ ಹಾಗೆಯೆ ಇರಬೇಕು. ಈ ಪಾಠವನ್ನು ಗೀತೆಯಿಂದ ಕಲಿತೆ. ಅಪರಿಗ್ರಹಿಯಾಗಲು ಸಮಭಾವವಿಡಲು ಹೇತುವಿನಲ್ಲಿ ಹೃದಯದಲ್ಲಿ ಪರಿವರ್ತನೆಯಾಗಬೇಕು. ಈ ಮಾತು ದೀಪದಂತೆ ನಿಚ್ಚಳವಾಗಿ ಕಾಣತೊಡಗಿತು ನನಗೆ. ಸರಿ, ಕೂಡಲೆ ವಿಮೆಯ ಪಾಲಿಸಿಯನ್ನು ಮುಕ್ತಾಯ ಮಾಡುವಂತೆ ರೇವಾಶಂಕರ ಭಾಯಿಗೆ ಬರೆದ. ಏನಾದರೂ ನಾಲ್ಕು ಹಣ ಕೈಗೆ ಬಂದರೂ ಸರಿ, ಬಾರದಿದ್ದರೂ ಸರಿಯೆ, ಮಕ್ಕಳನ್ನೂ ಹೆಂಡತಿಯನ್ನೂ ಕಾಪಾಡುವವನು ಅವರನ್ನೂ ನಮ್ಮನ್ನೂ ಹುಟ್ಟಿಸಿದ ಭಗವಂತ. ಹೀಗಿತ್ತು ಆ ಪತ್ರದ ಆಶಯ. ತಂದೆಯ ಸಮಾನರಾದ ಹಿರಿಯಣ್ಣನಿಗೆ ಬರೆದೆ. 'ಇಂದಿನವರೆಗೆ ಮಿಗಿಸಿದುದನ್ನೆಲ್ಲ ನಿಮಗೆ ಅರ್ಪಿಸಿದ್ದೇನೆ, ಇನ್ನು ನನ್ನ ಆಸೆ ಬಿಡಿ. ಇನ್ನು ಮೇಲೆ ಉಳಿದುದನ್ನೆಲ್ಲ ಇಲ್ಲಿನ ಸಾರ್ವಜನಿಕ ಕೆಲಸಕ್ಕೆ ಉಪಯೋಗಿಸುತ್ತೇನೆ.'

ಗೀತಾಧ್ಯಾನ

ಕಲ್ಪನೆಯ ಚಿತ್ರ ಯಾವುದನ್ನಾದರೂ ಚಿತ್ರಿಸಿದ್ದರೆ, ಅದನ್ನು ಧ್ಯಾನಿಸಿದ್ದರೆ ಏನೂ ದೋಷವೆನಿಸದು ನನಗೆ, ಆದರೆ ಗೀತಾಮಾತೆಯ ಧ್ಯಾನದಲ್ಲಿ ಸಂತೋಷವಾಗುತ್ತಿದ್ದರೆ ಮತ್ತೇನು ಬೇಕು ? ಗೀತೆಯ ಧ್ಯಾನ ಎರಡು ಬಗೆಯಲ್ಲಿ ಆಗಬಹುದು: ಒಂದು ಗೀತೆಯನ್ನು ತಾಯಿಯೆಂದು ಬಗೆವುದು. ಅದಕ್ಕೆ ತಾಯಿಯ ಚಿತ್ರ ಎದುರುಗಿರಬೇಕು ಎಂದರೆ, ತನ್ನ
ತಾಯಿಯೆಂದು ಬಗೆವುದು. ಅದಕ್ಕೆ ತಾಯಿಯ ಚಿತ್ರ ಎದುರುಗಿರಬೇಕು ಎಂದರೆ, ತನ್ನ
ತಾಯಿಯಲ್ಲೋ, ಆಕೆ ತೀರಿಕೊಂಡಿದ್ದರೆ, ಕಾಮಧೇನುವನ್ನು ಆರೋಪಿಸಿ ಗೀತೆಯೆಂದು ಭಾವಿಸಿ ಧ್ಯಾನಮಾಡಬೇಕು. ಅಥವಾ ಯಾವುದಾದರೂ ಕಾಲ್ಪನಿಕ ಚಿತ್ರವನ್ನು ಮೂಡಿಸಬಹುದು.

ಗೋಮಾತೆಯ ರೂಪವನ್ನು ಕೊಟ್ಟರೂ ನಡೆದೀತು. ಎರಡನೆ ಬಗೆ ಸಾಧ್ಯವಾದರೆ ಹೆಚ್ಚು ಒಳ್ಳೆಯದು ಎಂದುಕೊಂಡಿದ್ದೇನೆ. ನಾವು ಯಾವಾಗಲೂ ಹೇಳುವ ಅಧ್ಯಾಯದ್ದೋ ಅಥವಾ ಯಾವ ಅಧ್ಯಾಯದ್ದಾದರೂ ಒಂದು ಶ್ಲೋಕದ ಅಥವಾ ಶಬ್ದದ ಧ್ಯಾನ ಅಥವಾ ಚಿಂತನ ಮಾಡುವುದು ಗೀತೆಯಲ್ಲೆಷ್ಟು ಶಬ್ದ ಇವೆಯೋ ಅಷ್ಟೂ ಅವರ ಒಡವೆಗಳೇ. ಪ್ರಿಯಜನರ ಒಡವೆಗಳ ಧ್ಯಾನವೂ ಅವರ ಧ್ಯಾನಕ್ಕೆ ಸಮಾನ. ಗೀತೆಯದೂ ಹೀಗೆ. ಇದಲ್ಲದೆ ಬೇರೆ ಬಗೆ ಯಾರಿಗಾದರೂ ಲಭಿಸಿದರೆ ಅವರು ಅದೇ ಬಗೆಯಲ್ಲಿ ಧ್ಯಾನಿಸಲಿ. ಎಷ್ಟು ಬುದ್ಧಿಯೋ ಅಷ್ಟು ಬಗೆ. ಯಾರಿಬ್ಬರೂ ಒಂದೇ ರೀತಿ ಒಂದೇ ವಸ್ತುವನ್ನು ಧ್ಯಾನಿಸರು. ಇಬ್ಬರ ಕಲ್ಪನೆ-ವರ್ಣನೆಗಳಲ್ಲಿ ಸ್ವಲ್ಪವಾದರೂ ವ್ಯತ್ಯಾಸವಿದ್ದೇ ಇರುತ್ತದೆ.

ಆರನೆಯ ಅಧ್ಯಾಯದಂತೆ ಎಷ್ಟೇ ಸ್ವಲ್ಪ ಮಾಡಿದರೂ ಸಾಧನೆ ವ್ಯರ್ಥವಾಗದು. ಈ ಜನ್ಮದಲ್ಲಿ ನಿಂತಲ್ಲಿಂದ ಮುಂದಿನ ಜನ್ಮದಲ್ಲಿ ಮುಂಬರಿಯುತ್ತಿದೆ. ಇದೇ ರೀತಿ ಕಲ್ಯಾಣ ಮಾರ್ಗದಲ್ಲಿ ಹೋಗಬೇಕೆಂಬ ಇಚ್ಛೆಯಿದ್ದೂ ಅದರಂತೆ ನಡೆಯುವ ಶಕ್ತಿಯಿಲ್ಲದವರಿಗೆ ಮುಂದಿನ ಜನ್ಮದಲ್ಲಿ ಆ ಇಚ್ಛೆ ದೃಢವಾಗುವ ಅವಕಾಶ ಅಗತ್ಯವಾಗಿ ಸಿಗುತ್ತದೆ. ಇದರಲ್ಲೂ ನನ್ನ ಮನಸ್ಸಿನಲ್ಲಿ ಸಂದೇಹವಿಲ್ಲ. ಹಾಗಾದರೆ ಈ ಜನ್ಮದಲ್ಲಿ ಸ್ವಲ್ಪ ಸಡಿಲಾಗಿದ್ದರೂ ಚಿಂತೆಯಿಲ್ಲ ಎಂದು ಇದಕ್ಕೆ ಅರ್ಥಮಾಡಲಾಗದು. ಅಂಥ ಇಚ್ಛೆ ಇಚ್ಛೆಯಲ್ಲ. ಅಥವಾ ಬೌದ್ಧಿಕ ಇಚ್ಛೆ, ಹಾರ್ದಿಕವಲ್ಲ. ಬೌದ್ಧಿಕ ಇಚ್ಛೆಗೆ ಸ್ಥಾನವೇ ಇಲ್ಲ. ಸತ್ತ ಮೇಲೆ ಅದು ಇರದು. ಆದರೆ ಹೃದಯದಲ್ಲಿ ಇಚ್ಛೆ ನೆಟ್ಟರೆ ಅದಕ್ಕೆ ಪ್ರಯತ್ನ ನಡೆದು ತೀರುತ್ತದೆ. ಆದರೆ ಶರೀರದ ಬಲಹೀನತೆಯಿಂದಾಗಿ ಅನೇಕ ಕಾರಣಗಳ ದೆಸೆಯಿಂದ ಈ ಜನ್ಮದಲ್ಲಿ ಇಚ್ಛೆ ಪೂರ್ಣವಾಗದು. ಈ ಬಗೆಯ ಅನುಭವ ನಮಗೆ ನಿತ್ಯವೂ ಆಗುತ್ತಿದೆ. ಆದರೆ ಈ ಇಚ್ಛೆಯಿರುವಂತೆಯೇ ದೇಹವನ್ನು ಬಿಟ್ಟರೆ ಮುಂದಿನ ಜನ್ಮದಲ್ಲಿ ಈ ಜನ್ಮದ ಉಪಾಧಿಗಳು ಕಡಿಮೆಯಾಗಿ ಈ ಇಚ್ಛೆ ಫಲಿಸುತ್ತದೆ ಇಲ್ಲದೆ ದೃಢವಾಗುತ್ತದೆ. ಹೀಗೆ ಕಲ್ಯಾಣಕೃತವು ಎಡೆಬಿಡದೆ ಮುಂದೆ ಸಾಗುತ್ತಿರುತ್ತದೆ.

ನಿವೃತ್ತಿನಾಥರು ಬದುಕಿದ್ದಾಗ ಜ್ಞಾನೇಶ್ವರರು ಅವರ ಧ್ಯಾನಮಾಡಿದ್ದರೆ ಮಾಡಿರಲಿ. ಅದು ನಮಗೆ ಅನುಕರಣೀಯವಲ್ಲವೆಂದು ನನ್ನ ದೃಢಾಭಿಪ್ರಾಯ. ಧ್ಯಾನಿಸಬೇಕಾದ ವ್ಯಕ್ತಿ ಪೂರ್ಣತೆಯನ್ನು ಪಡೆದಿರುವಂಥವನಾಗಬೇಕು. ಜೀವಂತ ವ್ಯಕ್ತಿಯ ಬಗ್ಗೆ ಇಂಥ ಅಭಿಪ್ರಾಯವಿಡುವುದು ಸರಿಯಿಲ್ಲ. ಅನಗತ್ಯವೂ ಹೌದು. ಜ್ಞಾನೇಶ್ವರರು ಶರೀರಧಾರಿ ನಿವೃತ್ತಿನಾಥರ ಧ್ಯಾನವನ್ನೇ ಮಾಡಿರುವುದು. ನಾವು ಈ ಜಗದಲ್ಲೇಕೆ ಬೀಳಬೇಕು ? ಜೀವಂತ ಮೂರ್ತಿಯ ಧ್ಯಾನದ್ದೇ ಪ್ರಶ್ನೆಯಿದ್ದಾಗ ಕಲ್ಪನೆಯ ಮೂರ್ತಿಯ ಮಾತಿಗೆಲ್ಲಿ ಅವಕಾಶ ? ಇದನ್ನು ಉಲ್ಲೇಖಿಸಿ ಉತ್ತರ ಕೊಟ್ಟರೆ ಅದರಿಂದ ಬುದ್ಧಿಭ್ರಂಶವಾದೀತು.

ಮೊದಲನೆಯ ಅಧ್ಯಾಯದಲ್ಲಿ ಕೊಟ್ಟಿರುವ ಹೆಸರುಗಳೆಲ್ಲವೂ ವ್ಯಕ್ತಿವಾಚಕಗಳಲ್ಲ, ಗುಣಸೂಚಕಗಳೆಂದೇ ನನ್ನ ಅಭಿಪ್ರಾಯ. ದೈವೀ- ಅಸುರೀ ವೃತ್ತಿಗಳ ನಡುವಿನ

ಹೋರಾಟವನ್ನು ವರ್ಣಿಸುತ್ತ ಕವಿ ವ್ಯಕ್ತಿಗಳನ್ನು ಮೂರ್ತಿಮಂತವಾಗಿಸಿದ್ದಾನೆ. ಕೌರವ – ಪಾಂಡವರ ನಡುವೆ ಹಸ್ತಿನಾಪುರದ ಬಳಿ ನಿಜವಾಗಿಯೂ ಯುದ್ಧ ನಡೆದಿರಬಹುದು. ಈ ಕಲ್ಪನೆಯಲ್ಲಿ ಕವಿ ಅದನ್ನು ನಿರಾಕರಿಸಿಲ್ಲ. ಆ ಕಾಲದ ಒಂದು ದೃಷ್ಟಾಂತವನ್ನು ತೆಗೆದುಕೊಂಡು ಕವಿ ಈ ಮಹಾಕಾವ್ಯವನ್ನು ಬರೆದಿದ್ದಾನೆಂದು ನನ್ನ ಊಹೆ. ಇದು ತಪ್ಪೇ ಇರಬಹುದು ಅಥವಾ ಈ ಹೆಸರೆಲ್ಲವೂ ಐತಿಹಾಸಿಕವಾದರೆ ಐತಿಹಾಸಿಕ ಆರಂಭಕ್ಕಾಗಿ ಈ ಹೆಸರನ್ನು ಕೊಡುವುದು ತಪ್ಪೆಂದೂ ಹೇಳುವಂತಿಲ್ಲ, ವಿಷಯ ವಿಚಾರಕ್ಕೆ ಮೊದಲನೆ ಅಧ್ಯಾಯ ಅಗತ್ಯ. ಆದುದರಿಂದ ಗೀತೆಯನ್ನು ಪಾಠಮಾಡುವಾಗ ಅದನ್ನೂ ಪಾಠಮಾಡುವಾಗ ಅಗತ್ಯ.

ವೆಲ್ಲಿಂಗ್‌ಟನ್ ಕನ್ವೆನ್‌ಷನ್ನಿಗೆ ಮಿ. ಬೇಕರ್ ನನ್ನನ್ನು ಕ್ರಿಸ್ತನನ್ನಾಗಿ ಮಾಡಲು ಕರೆದೊಯ್ದ ದಿನ ನೆನಪಾಗುತ್ತಿದೆ. ಅವರು ಯಾವಾಗಲೂ ನನ್ನೊಡನೆ ಚರ್ಚೆ ಮಾಡುತ್ತಿದ್ದರು. ನನ್ನೊಳಗೆ ಶ್ರದ್ಧೆ ಹುಟ್ಟಿಸಿರಿ ಎನ್ನುತ್ತಿದ್ದೆ ನಾನು. ನನ್ನ ಮೇಲೆ ನೀವು ಎಂಥ ಒಳ್ಳೆಯ ಪ್ರಭಾವ ಬೀರಲು ಬಯಸಿದರೂ ಬೀರಗೊಡಲು ನಾನು ಸಿದ್ಧ. ಹಾಗಾದರೆ ವೆಲ್ಲಿಂಗ್‌ಟನ್ ಕನ್ವೆನ್‌ಷನ್ನಿಗೆ ಹೋಗೋಣ ಎಂದರು. ಅಲ್ಲಿಗೆ ಸಮರ್ಥರಾದ ಜನ ಬರುತ್ತಾರೆ. ಅವರ ಭೇಟಿಯಾದರೆ ನಿನಗೆ ನಂಬಿಕೆ ಹುಟ್ಟದೆ ಇರದು ಎಂದರು. ಇಡೀ ಗಾಡಿಯಲ್ಲಿ ಬಿಳಿಯರು ಕೂತಿದ್ದರು. ನಾನೊಬ್ಬ ಒಂಟಿಯಾಗಿ ಮೇಲಿನ ಹಲಗೆಯ ಮೇಲೆ ಮುದುಡಿಕೊಂಡು ಕೂತಿದ್ದೆ. ಅವರು ಹೇಳಿದರು: 'ನೋಡಿ' ಹಿಕ್ಸ್ ನದಿ ಬಂತು. ಎಂಥ ಭವ್ಯಪ್ರದೇಶ. ನೋಡಿ, ಸೂರ್ಯೋದಯವನ್ನು ನೋಡಿ' ನಾನು ಕೆಳಗಿಳಿಯಲೇ ಇಲ್ಲ. ಹನ್ನೊಂದನೆ ಅಧ್ಯಾಯವನ್ನು ಪಠಿಸುತ್ತಿದ್ದೆ. ಬೇಕರ್ ' ಅದೇನು ಓದುತ್ತಿದೀಯೆ? ಎಂದು ಕೇಳಿದರು. 'ಭಗವದ್ಗೀತೆ' ಎಂದೆ. ಬೈಬಲ್ ಓದುವುದಿಲ್ಲವಲ್ಲ. ಎಂಥ ಮೂರ್ಖ ಇವನು ಎನಿಸಿರಬೇಕು ಅವರಿಗೆ ! ಅವರೆ ಏನು ಮಾಡುತ್ತಾರೆ ? ನನ್ನನ್ನು ಬಲಾತ್ಕಾರ ಮಾಡಬೇಕಾಗಿರಲಿಲ್ಲ. ಕನ್‌ವೆನ್‌ಷನ್ ನನ್ನ ಪಾಲಿಗೆ ವಿಶೇಷ ಪ್ರಾರ್ಥನೆಯಾಯಿತು. ಆದರೆ ನಾನು ಹೋದವನು ಹೋದ ಹಾಗೇ ಹಿಂದಿರುಗಿದೆ.

ಗೀತೆಯ ಬಗ್ಗೆ ಶ್ರದ್ಧೆ

ಆ ಮೇಲೆ ಒಬ್ಬ 'ವಿಶಾಲಬುದ್ಧಿ' ಪುರುಷ– ಗೀತೆಯ ಪ್ರಣೇತ ಹುಟ್ಟಿದ. ಹಿಂದೂ ಸಮಾಜದ ಆಳವಾದ ತತ್ತ್ವಜ್ಞಾನ ತುಂಬಿದ, ಮುಗ್ಧ ಜಿಜ್ಞಾಸುವಿಗೂ ಸಹಜವಾಗಿಯೆ ಅರ್ಥವಾಗುವ, ಹಿಂದೂ ಧರ್ಮದ ದೋಹನವನ್ನು ಅರ್ಪಿಸಿದ. ಹಿಂದೂ ಧರ್ಮವನ್ನು ಅಧ್ಯಯನ ಮಾಡುವ ಬಯಕೆಯುಳ್ಳ ಪ್ರತಿಯೊಬ್ಬ ಹಿಂದುವಿಗೂ ಇದು ಏಕಮಾತ್ರ ಸುಲಭ ಗ್ರಂಥ. ಉಳಿದೆಲ್ಲ ಧರ್ಮಶಾಸ್ತ್ರಗಳೂ ಸುಟ್ಟುಬೂದಿಯಾದರೂ ಈ ಅಮರ ಗ್ರಂಥದ

ಏಳುನೂರು ಶ್ಲೋಕ ಸಾಕು ಹಿಂದೂ ಧರ್ಮ ಏನೆಂಬುದನ್ನು ತೋರಿಸಲಿಕ್ಕೆ, ಅದನ್ನು ಜೀವನದಲ್ಲಿ ತರುವುದೆಂತೋ ತಿಳಿಸಲಿಕ್ಕೆ. ನಾನು ಸನಾತನಿ ಎನ್ನುತ್ತೇನೆ. ಏಕೆಂದರೆ, ನಲವತ್ತು ವರ್ಷಗಳಿಂದ ಆ ಗ್ರಂಥದ ಉಪದೇಶವನ್ನು ಜೀವನದಲ್ಲಿ ಅಕ್ಷರಶಃ ಮೂಡಿಸಲು ಪ್ರಯತ್ನಿಸುತ್ತ ಬಂದಿದ್ದೇನೆ. ಗೀತೆಯ ಮುಖ್ಯ ಸಿದ್ಧಾಂತಕ್ಕೆ ವಿಪರೀತವಾದುದೇನೇ ಇದ್ದರೂ ಅದನ್ನು ಹಿಂದೂ ಧರ್ಮಕ್ಕೆ ವಿರುದ್ಧವೆಂದು ಕೈಬಿಟ್ಟಿದ್ದೇನೆ. ಗೀತೆಯಲ್ಲಿ ಎಷ್ಟು ಪೂಜ್ಯಭಾವವೋ ನನಗೆ, ಬೈಬಲ್ ಕುರಾನ್ ಜಂದ-ಅವೆಸ್ತಾಗಳಲ್ಲಿ ಲೋಕದ ಇತರ ಧರ್ಮಗ್ರಂಥಗಳಲ್ಲಿಯೂ ಇದೆ ಎನ್ನಲು ಬಹಳ ಆನಂದವಾಗುತ್ತದೆ. ಈ ವಾಚನದಿಂದ ಗೀತೆಯಲ್ಲಿ ನನ್ನ ಶ್ರದ್ಧೆ ದೃಢವಾಯಿತು. ಅದರಿಂದ ನನ್ನ ದೃಷ್ಟಿಯೂ ನನ್ನ ಹಿಂದೂ ಧರ್ಮವೂ ವಿಶಾಲವಾಯಿತು. ಜರತುಷ್ಟ, ಯೇಸು, ಮಹಮ್ಮದರ ಜೀವನಚರಿತ್ರೆಯನ್ನು ಹೇಗೆ ತಿಳಿದುಕೊಂಡಿದ್ದೇನೋ ಹಾಗೆ ಗೀತೆಯ ಅನೇಕ ವಚನಗಳ ಮೇಲೂ ಬೆಳಕು ಚೆಲ್ಲಿದ್ದೇನೆ. ಇದರಿಂದಾಗಿ ನಮ್ಮ ಸನಾತನಿ ಗೆಳೆಯರು ನನ್ನ ಬಗ್ಗೆ ಮಾಡಿದ ಟೀಕೆ ನನಗೆ ಒಂದು ಆಶ್ವಾಸನ ವಾಯಿತು.

ನಾನೂ ಹಿಂದೂ ಎಂಬುದರಲ್ಲಿ ಒಂದು ಗೌರವವಿದೆಯೆಂದು ತಿಳಿದಿದ್ದೇನೆ. ಏಕೆಂದರೆ, ಈ ಶಬ್ದ ಬಹಳ ವಿಶಾಲವಾದುದು. ಪ್ರಪಂಚದ ನಾಲ್ಕು ಮೂಲೆಯ ಪ್ರವಾದಿಗಳ ಬಗ್ಗೆ ಸಹಿಷ್ಣುತೆ ತೋರುವುದಷ್ಟೇ ಅಲ್ಲ, ಅವರನ್ನು ಆತ್ಮಸ್ಸಾತ್ ಮಾಡಿಕೊಳ್ಳುತ್ತದೆ. ಈ ಜೀವನಸಂಹಿತೆಯಲ್ಲಿ ಎಲ್ಲೂ ಅಸ್ಪೃಶ್ಯತೆಗೆ ಸ್ಥಾನವಿದ್ದಂತೆ ನನಗೆ ಕಂಡಿಲ್ಲ. ಇದಕ್ಕೆ ವಿರುದ್ಧ, ಭೂತಮಾತ್ರವೆಲ್ಲವೂ ಏಕರೂಪ, ಎಲ್ಲವೂ ಈಶ್ವರನೊಳಗಿಂದ ಹುಟ್ಟಿವೆ, ಈಶ್ವರನಲ್ಲೇ ವಿಲೀನವಾಗುತ್ತವೆ. ಎಂಬ ಶ್ರದ್ಧೆಯನ್ನೂ ಮೂಡಿಸಿದೆ: ಲೋಹಚುಂಬಕಕ್ಕೆ ಸಮವಾದ ಮನಸೆಳೆವ ವಾಣಿಯಿಂದ ನನ್ನ ಬುದ್ಧಿಯನ್ನು ಸ್ಪರ್ಶಿಸಿ ಇನ್ನೂ ಮುಂಬರಿದು ನನ್ನ ಹೃದಯವನ್ನು ಪೂರ್ಣವಾಗಿ ಸ್ಪರ್ಶಿಸಿದೆ. ಭಗವತಿ ಗೀತಾಮಾತೆ ಉಪದೇಶಿಸಿದ ಸನಾತನ ಧರ್ಮವನ್ನು ಅನುಸರಿಸಿದ ಜೀವನದ ಸಾಫಲ್ಯ ಬಾಹ್ಯ ಆಚಾರ ಕರ್ಮಕಾಂಡಗಳಲ್ಲಿಲ್ಲ ಸಂಪೂರ್ಣ ಚಿತ್ತಶುದ್ಧಿಯಲ್ಲಿ ಶರೀರ ಮನ ಆತ್ಮ ಸಹಿತ ಸಮಗ್ರ ವ್ಯಕ್ತಿತ್ವವನ್ನು ಪರಬ್ರಹ್ಮನೊಡನೆ ಏಕಾಕಾರ ಮಾಡುವುದರಲ್ಲಿ ಗೀತೆಯ ಈ ಸಂದೇಶವನ್ನು ನನ್ನ ಬಾಳಿನಲ್ಲಿ ಓತಪ್ರೋತವಾಗಿಸಿ ನಾನು ಮಾನವ ಸಮೂಹದಲ್ಲಿ ಹೋಗಿದ್ದೇನೆ. ಅವರು ನನ್ನ ಮಾತನ್ನು ಆಲಿಸಿದುದು ನನ್ನ ರಾಜಕೀಯದಿಂದ ಅಥವಾ ನನ್ನ ವಾಣಿಯ ವಿಶೇಷ ಪ್ರಭೆಯ ದೆಸೆಯಿಂದಲೂ ಅಲ್ಲ, ನನ್ನನ್ನು ತಮ್ಮವನು ತಮ್ಮ ಧರ್ಮದವನು ಎಂದು ತಿಳಿದು. ನಾನು ಸನಾತನ ಧರ್ಮಿ ಎಂದು ಘೋಷಿಸಿದರೆ ತಪ್ಪಲ್ಲ, ಈಶ್ವರನಿಗೆ ಇಚ್ಛೆಯಿದ್ದರೆ ನನ್ನೀ ಘೋಷಣೆಗೆ ನನ್ನ ಸಾವಿನ ಮುದ್ರೆಯೊತ್ತಿಯಾನು; ಕಾಲ ಕಳೆದಂತೆಲ್ಲ ನನಗೆ ಈ ಶ್ರದ್ಧೆ ದೃಢವಾಗುತ್ತಿದೆ.

ಗೀತೆಯ ಅರ್ಥ

ಒಬ್ಬ ಗೆಳೆಯ ಹೀಗೆ ಪ್ರಶ್ನೆ ಮಾಡಿದ್ದಾರೆ :

'ಗೀತೆಯ ಸಂದೇಶವೇನು? ಹಿಂಸೆಯೆ ಅಹಿಂಸೆಯೇ? ಈ ಜಗಳ ಯಾವಾಗಲೂ ಉದ್ಭೀತನಿಸುತ್ತದೆ. ಗೀತೆಯ ಯಾವ ಸಂದೇಶವನ್ನು ಕಾಣಬೇಕು ನಾವು. ಯಾವ ಸಂದೇಶವನ್ನು ಅದರಿಂದ ಹಿಂಡಬೇಕು ಎಂಬುದು ಬೇರೆ: ಅದನ್ನು ಸುಮ್ಮನೆ ಓದಿದರೆ ಏನೆನಿಸುತ್ತದೆ ಎಂಬುದೇ ಬೇರೆ. ಅಹಿಂಸಾ ತತ್ತ್ವವೇ ಜೀವನಸಂದೇಶ ಎಂದು ಯಾರ ಮನಸ್ಸಿನಲ್ಲಿ ದೃಢವಾಗಿದೆಯೋ ಅವರಿಗೆ ಈ ಪ್ರಶ್ನೆ ಗೌಣ. ಗೀತೆಯಲ್ಲಿ ಅಹಿಂಸೆ ಹೊರಟರೆ ನನಗದು ಗ್ರಾಹ್ಯ ಎಂದಾನು ಅಂಥವನು. ಇಂಥ ಭವ್ಯ ಗ್ರಂಥದಲ್ಲಿ ಅಹಿಂಸೆಯಂಥ ಭವ್ಯ ಧಾರ್ಮಿಕಸಿದ್ಧಾಂತವೇ ಹೊರಸೂಸಬೇಕು. ಹಾಗಿಲ್ಲದಿದ್ದರೆ ಗೀತೆ ಒತ್ತಟ್ಟಿಗಿರಲಿ. ಅದನ್ನು ಗೌರವಿಸಿ ಪೂಜಿಸೋಣ. ಅದನ್ನು ಪ್ರಮಾಣ ಗ್ರಂಥ ಎನ್ನಲಾಗದು.

'ಮೊದಲನೆ ಅಧ್ಯಾಯವನ್ನು ನೋಡಿದರೆ ತಿಳಿಯುತ್ತದೆ. ಅಹಿಂಸಾ ವೃತ್ತಿಯಿಂದ ಪ್ರೇರಿತನಾಗಿ ಅರ್ಜುನ ಶಸ್ತ್ರವನ್ನು ಬಿಟ್ಟು ಕೌರವರ ಕೈಯಲ್ಲಿ ಸಾಯಲೂ ಸಿದ್ಧನಾಗಿದ್ದ. ಹಿಂಸೆಯಿಂದ ಆಗುವ ಪಾಪ ಹಾನಿ ಅವನಿಗೆ ನಿಚ್ಚಳವಾಗಿ ಕಾಣುತ್ತಿತ್ತು. ವಿಷಾದದಿಂದ ನಡುನಡುಗಿ ಅವನು ಹೇಳುತ್ತಾನೆ: 'ಅಹೋ ಬತ ಮಹತ್ಪಾಪಂ ಕರ್ತುಂ ವ್ಯವಸಿತಾ ವಯಂ. ಇದಕ್ಕೆ ಶ್ರೀ ಕೃಷ್ಣ ಹೇಳಿದುದೇನು? ಜಾಣನಾಗಿ ಹೀಗೆ ಮಾತಾಡುತ್ತೀಯಲ್ಲ. ಯಾರೂ ಯಾರನ್ನೂ ಸಾಯಿಸರು. ಯಾರೂ ಸಾಯರು. ಆತ್ಮ ಅಮರ. ನಾಶವಾಗುವುದು ಬರೀ ಶರೀರ. ಆದುದರಿಂದ ಈ ಧರ್ಮಪ್ರಾಪ್ತ ಯುದ್ಧವನ್ನು ಮಾಡು. ಗೆಲವೇನು ಸೋಲೇನು ? ನಿನ್ನ ಕರ್ತವ್ಯವನ್ನು ನೀನು ಮಾಡು.

'೧೧ನೆ ಅಧ್ಯಾಯದಲ್ಲೂ ಅವನಿಗೆ ವಿಶ್ವರೂಪವನ್ನು ತೋರಿಸಿ ಭಗವಾನ್ ಶ್ರೀ ಕೃಷ್ಣನು ಹೇಳುತ್ತಾನೆ:

ಕಾಲೋಽಸ್ಮಿ ಲೋಕಕ್ಷಯಕೃತ್ಪ್ರವೃದ್ಧೋ ಲೋಕಾನ್ ಸಮಾಹರ್ತುಮಿಹಪ್ರವೃತ್ತ:
ಮಯಾ ಹತಾಸ್ತ್ವಂಜಹಿ ಮಾ ವ್ಯಥಿಷ್ಠಾ ।

ಈಶ್ವರನ ದೃಷ್ಟಿಯಲ್ಲಿ ಹಿಂಸೆ–ಅಹಿಂಸೆ ಎರಡೂ ಸಮಾನ. ಆದರೆ ಮನುಷ್ಯನಿಗೇನು ಈಶ್ವರನ ಸಂದೇಶ ?

ಯುಧ್ಯಸ್ವಜೇತಾಸಿ ರಣೇ ಸಪತ್ನಾನ್ ।

ಗೀತೆಯ ಸಂದೇಶ ಅಹಿಂಸೆ ಎಂದರೆ ಇದೇನು ? ಒಂದನೇ ಅಧ್ಯಾಯಕ್ಕೂ ಹನ್ನೊಂದನೆ ಅಧ್ಯಾಯಕ್ಕೂ ಮೇಳಗೂಡದು. ಅದಕ್ಕೆ ಇದು ಪೋಷಕವಂತೂ ಅಲ್ಲ. ಇಂಥ ಶಂಕೆಗಳಿಗೆ ಯಾರು ಸಮಾಧಾನ ಕೊಡಬೇಕು ?

'ಕೆಲಸದ ಗಡಿಬಿಡಿಯಿದ್ದರೂ ಸ್ವಲ್ಪ ಬಿಡುವು ಮಾಡಿಕೊಂಡು ಇದಕ್ಕೆ ಉತ್ತರ ಕೊಟ್ಟರೆ ಎಷ್ಟು ಒಳ್ಳೆಯದಾದೀತು !

ಇಂಥ ಪ್ರಶ್ನೆ ಇದ್ದೇ ಇರುತ್ತದೆ. ಅಧ್ಯಯನ ಮಾಡಿದವರು ಯಥಾ ಶಕ್ತಿ ಉತ್ತರ ಕೊಡಬೇಕು. ಆದರೆ ಎಷ್ಟೇ ಸಮಾಧಾನ ಹೇಳಿದರೂ ಮನುಷ್ಯ ತನ್ನ ಹೃದಯ ಮಾಡಲು ಹೇಳಿದುದನ್ನೇ ಮಾಡಿಯಾನು ಎಂದೇ ಕಡೆಗೂ ಹೇಳಬೇಕಾದೀತು. ಮೊದಲು ಹೃದಯ, ಆ ಮೇಲೆ ಬುದ್ಧಿ. ಮೊದಲು ಸಿದ್ಧಾಂತ, ಆಮೇಲೆ ಪ್ರಮಾಣ. ಮೊದಲು ಸ್ಫುರಣ, ಆ ಮೇಲೆ ಅದಕ್ಕೆ ಅನುಕೂಲ ತರ್ಕ. ಮೊದಲು ಕರ್ಮ. ಮೇಲೆ ಬುದ್ಧಿ. ಅಂತೆಯೇ ಬುದ್ಧಿ ಕರ್ಮಾನುಸಾರಿಣಿ ಎಂದರು. ಮನುಷ್ಯ ಏನು ಮಾಡುತ್ತಾನೋ, ಮಾಡ ಬಯಸುತ್ತಾನೋ ಅದನ್ನು ಸಮರ್ಥನ ಮಾಡಲು ಪ್ರಮಾಣವನ್ನೂ ಹುಡುಕಿ ತೆಗೆಯುತ್ತಾನೆ.

ಆದುದರಿಂದ ಗೀತೆಗೆ ನಾನು ಮಾಡುವ ಅರ್ಥ ಎಲ್ಲರಿಗೂ ಅನುಕೂಲವಾಗಿರಲಾರದು. ಇಂಥ ಸ್ಥಿತಿಯಲ್ಲಿ, ನಾನು ಗೀತೆಗೆ ಈ ಅರ್ಥವನ್ನು ಹೇಗೆ ಮಾಡಿದೆನೋ, ಧರ್ಮಶಾಸ್ತ್ರಗಳು ಅರ್ಥಮಾಡುವ ರೀತಿಯಲ್ಲಿ ಯಾವ ಸಿದ್ಧಾಂತ ನನಗೆ ಒಪ್ಪಿಗೆಯೋ ತಿಳಿಸಿದರೆ ಸಾಕೆನಿಸುತ್ತದೆ. 'ಪರಿಣಾಮ ಏನಾದರೂ ಆಗಲಿ ನಾನಂತೂ ಯುದ್ಧ ಮಾಡಲೇಬೇಕು. ಸಾಯಲು ಯೋಗ್ಯರಾದ ಶತ್ರುಗಳು ತಾವೇ ಸತ್ತಿದಾರೆ. ಅವರನ್ನು ಸಾಯಿಸಲು ಮಾತ್ರ ನಾನು ನಿಮಿತ್ತವಾಗಬೇಕು.'

೧೮೮೯ರಲ್ಲಿ ನನಗೆ ಗೀತೆಯ ಪ್ರಥಮ ಪರಿಚಯವಾಯಿತು. ಆಗ ನನ್ನ ವಯಸ್ಸು ೨೦. ನನಗೆ ಅಹಿಂಸಾಧರ್ಮ ಗೊತ್ತಿದ್ದುದು ಬಹಳೇ ಸ್ವಲ್ಪ. ಶತ್ರುವನ್ನು ಪ್ರೇಮದಿಂದ ಗೆಲ್ಲಬೇಕೆಂಬುದನ್ನು ಗುಜರಾತಿ ಕವಿ ಶ್ಯಾಮಲ ಭಟ್ಟರ ಒಂದು ಷಟ್ಪದಿಯಿಂದ ಕಲಿತಿದ್ದೆ. ಇದರಲ್ಲಿನ ಸತ್ಯ ನನ್ನ ಹೃದಯದಲ್ಲಿ ಚೆನ್ನಾಗಿ ನೆಟ್ಟುಹೋಗಿತ್ತು. ಆದರೆ ಆಗ ಅದರಿಂದ ನನಗೆ ಜೀವದಯೆಯ ಸ್ಫೂರ್ತಿ ಹುಟ್ಟಿರಲಿಲ್ಲ. ಇದಕ್ಕೆ ಮೊದಲು ನಾನು ಸ್ವದೇಶದಲ್ಲೇ ಮಾಂಸ ತಿಂದಿದ್ದೆ. ಹಾವು ಮುಂತಾದವನ್ನು ಕೊಲ್ಲುವುದು ಧರ್ಮವೆಂದು ತಿಳಿದಿದ್ದೆ. ಆದೂ ನೆನಪಿದೆ. ಅಂಥ ವಿಷಜಂತುಗಳನ್ನು ಸಹ ಕೊಲ್ಲಬಾರದೆಂದು ಈಗ ಅರಿತಿದ್ದೇನೆ. ಇಂಗ್ಲೀಷರೊಡನೆ ಯುದ್ಧಮಾಡಲು ನಾವು ಸಿದ್ಧರಾಗಬೇಕೆಂದು ನನ್ನ ಆಗಿನ ತಿಳಿವಳಿಕೆ. 'ಇಂಗ್ಲೀಷರು ರಾಜ್ಯವಾಳಿದರೆ ಏನಾಶ್ಚರ್ಯ ?' ಎಂಬ ಅರ್ಥದ ಕವಿತೆಯೊಂದನ್ನು ಗುಣುಗುಣಿಸುತ್ತಿದ್ದೆ. ಆ ಸಿದ್ಧತೆಗಾಗಿಯೆ ನನ್ನ ಮಾಂಸಾಹಾರ. ವಿಲಾಯತಿಗೆ ಹೋಗುವ ಮೊದಲು ಹೀಗಿತ್ತು ನನ್ನ ವಿಚಾರ. ಮಾಂಸಾಹಾರ ಮುಂತಾದವುಗಳಿಂದ ನಾನು ಉಳಿದುಕೊಂಡುದು ತಾಯಿಗೆ ಕೊಟ್ಟ ಭಾಷೆಯನ್ನು ಸಾಯುವವರೆಗೂ ನಡೆಸಬೇಕೆಂಬ ನನ್ನ ವೃತ್ತಿಯ ದೆಸೆಯಿಂದ. ಸತ್ಯದಲ್ಲಿ ನನಗಿರುವ ಪ್ರೇಮ ಅನೇಕ ಆಪತ್ತುಗಳಿಂದ ನನ್ನನ್ನು ಕಾಪಾಡಿದೆ.

ಇಬ್ಬರು ಇಂಗ್ಲೀಷರ ಜೊತೆಯಲ್ಲಿ ಗೀತೆಯನ್ನು ಓದುವ ಪ್ರಸಂಗ ಬಂತು ನನಗೆ ಪ್ರಸಂಗ ಬಂತು ಎನ್ನಲು ಕಾರಣ, ನನಗೇನು ಗೀತೆಯನ್ನು ಓದುವ ಬಯಕೆ ಇರಲಿಲ್ಲ. ಆದರೆ ಆ ಅಣ್ಣತಮ್ಮಂದಿರಿಬ್ಬರು ತಮ್ಮ ಜೊತೆಯಲ್ಲಿ ಗೀತೆಯನ್ನು ಓದಲು ನನಗೆ ಹೇಳಿದಾಗ ಬಹಳ ನಾಚಿಕೆಯಾಯಿತು ನಮ್ಮ ಧರ್ಮಶಾಸ್ತ್ರಗಳ ಜ್ಞಾನ ನನಗೆ ಸ್ವಲ್ಪವೂ ಇಲ್ಲವಲ್ಲ ಎಂದು ಬಹಳ ದುಃಖವಾಯಿತು. ಆ ದುಃಖಕ್ಕೆ ಕಾರಣ ಅಭಿಮಾನ ಎನಿಸುತ್ತದೆ. ಯಾವ ಸಹಾಯವೂ ಇಲ್ಲದೆ ಗೀತೆಯ ಎಲ್ಲಾ ಶ್ಲೋಕಗಳ ಅರ್ಥವನ್ನೂ ಸರಿಯಾಗಿ ತಿಳಿದುಕೊಳ್ಳಬಲ್ಲಷ್ಟು ಸಂಸ್ಕೃತಜ್ಞಾನ ನನಗಿರಲಿಲ್ಲ. ಆ ಅಣ್ಣತಮ್ಮಂದಿರಿಗಂತೂ ಏನೂ ಗೊತ್ತಿರಲಿಲ್ಲ. ಸರ್ ಎಡ್ವಿನ್ ಆರ್ನಾಲ್ಡರ ಉತ್ತಮೋತ್ತಮ ಕಾವ್ಯಾನುವಾದವನ್ನು ಅವರು ನನ್ನ ಕೈಲಿಟ್ಟರು. ಕೂಡಲೆ ಆ ಪುಸ್ತಕವನ್ನು ಓದಿದೆ, ಮುಗ್ಧನಾದೆ. ಅಂದಿನಿಂದ ಇಂದಿನವರೆಗೂ ಗೀತೆಯ ಎರಡನೆ ಅಧ್ಯಾಯದ ಕಡೆಯ ೧೯ ಶ್ಲೋಕ ನನ್ನ ಹೃದಯವನ್ನು ಅಚ್ಚೊತ್ತಿ ನಿಂತಿವೆ. ನನಗಂತೂ ಸಮಸ್ತ ಧರ್ಮವೂ ಅದರಲ್ಲೇ ಇದೆ. ಸಂಪೂರ್ಣ ಜ್ಞಾನವಿದೆ ಅದರಲ್ಲಿ ಹೇಳಿರುವ ಸಿದ್ಧಾಂತ ಅಚಲ. ಅದರಲ್ಲಿ ಬುದ್ಧಿಯನ್ನು ಸಂಪೂರ್ಣವಾಗಿ ಪ್ರಯೋಗಿಸಿದೆ. ಆದರೆ ಅದು ಸಂಸ್ಕಾರಿಬುದ್ಧಿ. ಅದರಲ್ಲಿ ಅನುಭವ ಜ್ಞಾನವಿದೆ.

ಈ ಪರಿಚಯವಾದಮೇಲೆ ನಾನು ಅನೇಕ ಅನುವಾದಗಳನ್ನೂ ಓದಿದೆ, ಅನೇಕ ಟೀಕೆಗಳನ್ನೂ ಓದಿದೆ, ಬೇಕಾದಷ್ಟು ತರ್ಕಮಾಡಿದೆ-ಕೇಳಿದೆ: ಆದರೆ ಅದನ್ನು ಓದಿದಾಗ ನನ್ನ ಮೇಲೆ ಬಿದ್ದ ಪ್ರಭಾವ ಮಾಸಲಿಲ್ಲ. ಈ ಶ್ಲೋಕ ಗೀತೆಯ ತಿರುಳನ್ನು ಅರಿಯಲು ಬೀಗದ ಕೈ. ಅದಕ್ಕೆ ವಿರುದ್ಧ ಅರ್ಥ ಕೊಡುವ ವಾಕ್ಯ ಬಂದರೆ ಅದನ್ನು ಕೈಬಿಡಿ ಎಂದೂ ಸೂಚಿಸುತ್ತೇನೆ. ನಮ್ರ, ವಿನಯವಂತ ಆದವನಿಗೆ ಕೈಬಿಡಬೇಕಾದ ಅಗತ್ಯವೂ ಇಲ್ಲ. ಉಳಿದ ಶ್ಲೋಕಗಳಿಗೂ ಇದಕ್ಕೂ ಮೇಳಗೂಡುತ್ತಿಲ್ಲ, ಇದು ನನ್ನ ಬುದ್ಧಿಯ ದೋಷ ಎಂದಾನು ಅವನು. ಕೆಲವು ಕಾಲದಮೇಲೆ ಇದಕ್ಕೂ ಆ ಹತ್ತೊಂಬತ್ತು ಶ್ಲೋಕಗಳಲ್ಲಿ ಹೇಳಿರುವ ಸಿದ್ಧಾಂತಕ್ಕೂ ಮೇಳಗೂಡೀತು. ತನ್ನ ಮನಸ್ಸಿಗೂ ಇತರರಿಗೂ ಹೀಗೆ ಹೇಳಿ ಅವನು ಶಾಂತನಾದಾನು.

ಶಾಸ್ತ್ರಕ್ಕೆ ಅರ್ಥಮಾಡಲು ಸಂಸ್ಕಾರ, ಅನುಭವ ಅಗತ್ಯ. ಶೂದ್ರನಿಗೆ ವೇದಾಭ್ಯಾಸವಿಲ್ಲ ಎಂಬುದು ಸರ್ವಥಾ ತಪ್ಪೇನಲ್ಲ. ಶೂದ್ರ ಎಂದರೆ ಸಂಸ್ಕಾರಹೀನ, ಮೂರ್ಖ, ಅಜ್ಞಾನಿ. ಅವನು ವೇದಭ್ಯಾಸ ಮಾಡಿದರೆ ಅನರ್ಥ ಮಾಡಿಯಾನು. ವಯಸ್ಸಾದವರೂ ಕೂಡ ಬೀಜಗಣಿತದ ಕಠಿನ ಪ್ರಶ್ನೆಗಳನ್ನು ತಮಗೆ ತಾವೇ ತಿಳಿದುಕೊಳ್ಳಲು ಅಧಿಕಾರಿಗಳಲ್ಲ ಅವನ್ನು ತಿಳಿದುಕೊಳ್ಳಲು ಮೊದಲು ಸ್ವಲ್ಪ ಪ್ರಾಥಮಿಕ ಶಿಕ್ಷಣ ಆಗಿರಬೇಕು. ವ್ಯಭಿಚಾರಿಯ ನಾಲಗೆಯಲ್ಲಿ 'ಅಹಂ ಬ್ರಹ್ಮಾಸ್ಮಿ' ಶೋಭಿಸೀತೆ ? ಅದಕ್ಕೆ ಅವನೇನು ಅರ್ಥ (ಅಥವಾ ಅನರ್ಥ) ಮಾಡಿಯಾನು?

ಶಾಸ್ತ್ರಕ್ಕೆ ಅರ್ಥಮಾಡುವವನು ಯಮಾದಿಗಳ ಪಾಲನೆ ಮಾಡುವವನಾಗಬೇಕು. ಯಮ ನಿಯಮಗಳ ಶುಷ್ಕಪಾಲನೆ ಹೇಗೆ ಕಠಿಣವೋ ಹಾಗೇ ನಿರರ್ಥಕವೂ. ಶಾಸ್ತ್ರಗಳು ಗುರುವಿರಬೇಕೆಂದು ಹೇಳಿವೆ. ಆದರೆ ಈ ಕಾಲದಲ್ಲಿ ಗುರುಗಳಿಗೆ ಹೆಚ್ಚು ಕಡಿಮೆ ಲೋಪ ಬಂದಿದೆಯೆನ್ನಬಹುದು. ಆದುದರಿಂದಲೇ ಜ್ಞಾನಿಗಳು ಭಕ್ತಿಪ್ರಧಾನ ಪ್ರಾಕೃತಗ್ರಂಥಗಳ ಅಧ್ಯಯನ–ಅಧ್ಯಾಪನಗಳ ಶಿಕ್ಷಣ ಕೊಡುತ್ತಾರೆ. ಆದರೆ ಭಕ್ತಿಯಿಲ್ಲದವರು, ಶ್ರದ್ಧೆಯಿಲ್ಲದವರು ಶಾಸ್ತ್ರಕ್ಕೆ ಅರ್ಥಮಾಡಲು ಅಧಿಕಾರಿಗಳಲ್ಲ. ವಿದ್ವಾಂಸರು ವಿದ್ವತ್ ಪೂರ್ಣವಾದ ಅರ್ಥಗಳನ್ನು ಅದರಿಂದ ಹೊರಡಿಸಿದರೆ ಹೊರಡಿಸಲಿ. ಅದು ಶಾಸ್ತ್ರಾರ್ಥವಲ್ಲ. ಶಾಸ್ತ್ರಾರ್ಥವನ್ನು ಅನುಭವಿಯೇ ಮಾಡಬಲ್ಲ.

ಆದರೆ ಪ್ರಾಕೃತ ಮನುಷ್ಯನಿಗಾಗಿಯೂ ಕೆಲವು ಸಿದ್ಧಾಂತ ಇದ್ದೇ ಇವೆ. ಶಾಸ್ತ್ರಕ್ಕೆ ಮಾಡಿದ ಸತ್ಯವಿರುದ್ಧವಾದ ಅರ್ಥ ಸರಿಯಲ್ಲ. ಸತ್ಯವೇ ಅಲ್ಲವೇ ಎಂಬ ಸಂದೇಹ ಸತ್ಯದ ಬಗ್ಗೆಯೇ ಇರುವವನಿಗಲ್ಲ ಶಾಸ್ತ್ರ ಅಥವಾ ಹೀಗೆನ್ನಬಹುದು ಅವನಿಗೆ ಎಲ್ಲವೂ ಅಶಾಸ್ತ್ರವೇ. ಅವನನ್ನು ಯಾರೂ ಎಟುಕಲಾರರು. ಶಾಸ್ತ್ರಗಳಿಂದ ಯಾರಿಗೆ ಅಹಿಂಸೆ ಪ್ರಾಪ್ತವಾಗಿಲ್ಲವೋ ಅವನಿಗೆ ಭಯವೇ : ಆದರೆ ಅವನ ಉದ್ಧಾರವಾಗ ದೆಂದಲ್ಲ. ಸತ್ಯ ವಿಧ್ಯಾತ್ಮಕ, ಅಹಿಂಸೆ ನಿಷೇಧಾತ್ಮಕ. ಸತ್ಯ ವಸ್ತುವಿಗೆ ಸಾಕ್ಷಿ. ವಸ್ತುವಾಗಿದ್ದರೂ ಅದನ್ನು ನಿಷೇಧಿಸುತ್ತದೆ ಅಹಿಂಸೆ. ಸತ್ತು ಇದೆ, ಅಸತ್ಯ ಇಲ್ಲ. ಹಿಂಸೆ ಇದೆ, ಅಹಿಂಸೆ ಇಲ್ಲ. ಆದರೂ ಅಹಿಂಸೆಯೇ ಆಗಬೇಕು. ಅದೇ ಪರಮಧರ್ಮ. ಸತ್ಯ ಸ್ವಯಂಸಿದ್ಧ. ಅಹಿಂಸೆ ಅದರ ಸಂಪೂರ್ಣ ಫಲ. ಸತ್ಯದಲ್ಲಿ ಅದು ಅಡಗಿದೆ. ಆದರೆ ಸತ್ಯದಂತೆ ಅದು ವ್ಯಕ್ತವಲ್ಲ. ಆದುದರಿಂದ ಅದನ್ನು ಒಪ್ಪದೆ ಮನುಷ್ಯ ಎಷ್ಟೋ ಶಾಸ್ತ್ರ ಶೋಧನೆ ಮಾಡಲಿ, ಅದರ ಸತ್ಯವನ್ನು ಕಡೆಗೆ ಅವನಿಗೆ ಕಲಿಸುವುದು ಅಹಿಂಸೆಯೇ.

ಸತ್ಯ ಎಂದರೆ ತಪಶ್ಚರ್ಯೆ. ಸುತ್ತಲೂ ಹರಡಿರುವ ಹಿಂಸೆಯೊಳಗಿನಿಂದ ಅಹಿಂಸಾದೇವಿಯನ್ನು ಲೋಕದ ಮುಂದೆ ಪ್ರಕಟಗೊಳಿಸಿ, ಸತ್ಯವನ್ನು ಸಾಕ್ಷಾತ್ಕರಿಕೊಂಡ ತಪಸ್ವಿಗಳು ಹೇಳಿದರು – ಹಿಂಸೆ ಮಿಥ್ಯೆ, ಮಾಯೆ : ಅಹಿಂಸೆಯೇ ಸತ್ಯ : ಅಹಿಂಸೆಯ ಹೊರತು ಸತ್ಯದ ಸಾಕ್ಷಾತ್ಕಾರ ಅಸಂಭವ. ಬ್ರಹ್ಮಚರ್ಯ, ಅಸ್ತೇಯ ಅಪರಿಗ್ರಹಗಳೂ ಅಹಿಂಸೆಯಲ್ಲಿ ಬರುತ್ತವೆ. ಅಹಿಂಸೆಯನ್ನು ಸಿದ್ಧಮಾಡುವ ವಸ್ತುಗಳು. ಅಹಿಂಸೆ ಸತ್ಯದ ಪ್ರಾಣ. ಅದರ ಹೊರತು ಮನುಷ್ಯ ಪಶುವೇ. ತನ್ನ ಶೋಧನೆಗಾಗಿ ಪ್ರಯತ್ನಿಸುತ್ತ ಸತ್ಯಾರ್ಥಿ ಇದನ್ನು ಬಹಳ ಬೇಗ ಅರಿತಾನು. ಆಮೇಲೆ ಶಾಸ್ತ್ರಕ್ಕೆ ಅರ್ಥಮಾಡಲು ಯಾವ ಕಷ್ಟವೂ ಬಾರದು.

ಶಾಸ್ತ್ರಕ್ಕೆ ಅರ್ಥಮಾಡಲು ಇನ್ನೂ ಒಂದು ನಿಯಮವಿದೆ–ಅದರ ಪ್ರತಿಯೊಂದು ಅಕ್ಷರವನ್ನೂ ಹಿಡಿಯಬಾರದು. ಅದರ ಧ್ವನಿಯನ್ನು ಅರಸಬೇಕು, ಅದರ ರಹಸ್ಯವನ್ನು ಅರಿಯಬೇಕು. ತುಲಸೀದಾಸರ ರಾಮಾಯಣ ಉತ್ತಮ ಗ್ರಂಥ, ಏಕೆಂದರೆ ಅದರ ಧ್ವನಿ ಶುಚಿ, ದಯೆ, ಭಕ್ತಿ. 'ಶೂದ್ರ ಗಮಾರ ನಗಾರಿ ಪಶು ನಾರಿ, ಇವೆಲ್ಲವೂ ತಾಡನೆಗೇ ಸರಿ'

ಎಂದು ಬರೆದಿದಾರೆ ಅವರು. ಹಾಗೆಂದು ಯಾವನಾದರೂ ತನ್ನ ಹೆಂಡತಿಯನ್ನು ಹೊಡೆಯುತ್ತ ಕೂತರೆ ಅಧೋಗತಿಗೆ ಹೋದಾನು. ಶ್ರೀರಾಮ ಸೀತೆಯನ್ನು ಎಂದೂ ಹೊಡೆಯಲಿಲ್ಲ. ಇಷ್ಟೇ ಅಲ್ಲ, ಎಂದೂ ಆಕೆಗೆ ದುಃಖ ಕೊಡಲಿಲ್ಲ. ಪ್ರಚಲಿತ ವಾಕ್ಯವನ್ನು ಬರೆದವರು ತುಲಸೀದಾಸರು. ಅಷ್ಟೇ ಈ ವಾಕ್ಯವನ್ನೇ ಆಧಾರವಾಗಿ ಮಾಡಿಕೊಂಡು ತನ್ನ ಹೆಂಡತಿಯನ್ನು ಹೊಡೆಯುವ ಪಶುವೂ ಇದ್ದೀತು ಎಂಬ ವಿಚಾರವೇ ಅವರಿಗೆ ಹೊಳೆದಿಲ್ಲ. ಒಂದು ವೇಳೆ ರೂಢಿಗೆ ಬಲಿಯಾಗಿ ಸ್ವಯಂ ತುಲಸೀದಾಸರೇ ತಮ್ಮ ಹೆಂಡತಿಯನ್ನು ಹೊಡೆದಿದ್ದರೆ ? ಅದು ಖಂಡಿತವಾಗಿಯೂ ದೋಷ. ಆದರೂ ಹೆಂಡತಿಯನ್ನು ಹೊಡೆಯಲಿಕ್ಕಾಗಿ ಬರೆದಿಲ್ಲ ರಾಮಾಯಣ. ಪುಣ್ಯಪುರುಷನ ದರ್ಶನ ಮಾಡಿಸಲು, ಸತೀಶಿರೋಮಣಿ ಸೀತಾದೇವಿಯ ಪರಿಚಯ ಮಾಡಿಸಲು, ಭರತನ ಆದರ್ಶ ಭಕ್ತಿಯ ಚಿತ್ರವನ್ನು ಚಿತ್ರಿಸಲು ಬರೆದುದು ರಾಮಾಯಣ. ಅದರಲ್ಲಿ ದೋಷಯುಕ್ತ ರೂಢಿಗಳ ಸಮರ್ಥನೆ ಕಂಡರೆ ಅದು ತ್ಯಾಜ್ಯ. ಭೂಗೋಳ ಕಲಿಸಲು ತಮ್ಮ ಅಮೂಲ್ಯ ಗ್ರಂಥವನ್ನು ಬರೆಯಲಿಲ್ಲ ತುಲಸೀದಾಸರು. ಆದುದರಿಂದ ಅದರಲ್ಲಿ ತಪ್ಪು ಭೂಗೋಳ ಕಂಡುಬಂದರೆ ಅದನ್ನು ಬಿಡಬೇಕಾದುದು ಧರ್ಮ.

ಗೀತೆಯನ್ನು ನೋಡೋಣ. ಬ್ರಹ್ಮಜ್ಞಾನಪ್ರಾಪ್ತಿ ಅದರ ಸಾಧನೆಗಳೇ ಗೀತೆಯ ವಿಷಯ. ಎರಡು ಸೇನೆಗಳ ನಡುವೆ ಯುದ್ಧ ಎಂಬುದು ಬರೀ ನಿಮಿತ್ತ. ಕವಿ ಸ್ವಯಂ ಯುದ್ಧನಿಷೇಧವಾದಿಯಲ್ಲ, ಆದ್ದರಿಂದ ಯುದ್ಧ ಪ್ರಸಂಗವನ್ನು ಹೀಗೆ ಬಳಸಿಕೊಂಡಿದ್ದಾನೆ ಎಂದು ಬೇಕಾದರೆ ಹೇಳಿ. ಮಹಾಭಾರತವನ್ನು ಓದಿದಮೇಲೆ ನನ್ನಲ್ಲಿ ಆದ ಪರಿಣಾಮವೇ ಬೇರೆ. ವ್ಯಾಸರು ಇಂಥ ಸೊಗಸಾದ ಗ್ರಂಥ ಬರೆದು ಯುದ್ಧದ ಮಿಥ್ಯಾತ್ವವನ್ನು ವರ್ಣಿಸಿದ್ದಾರೆ. ಕೌರವ ಸೋತ. ಆದರೇನಾಯಿತು ? ಪಾಂಡವರು ಗೆದ್ದರು. ಏನಾಯಿತು? ಗೆದ್ದವರು ಎಷ್ಟು ಜನ ಉಳಿದರು? ಅವರ ಗತಿ ಏನಾಯಿತು? ಕುಂತಿಯ ಗತಿ ಏನು? ಯಾದವಕುಲ ಈಗೆಲ್ಲಿದೆ?

ವಿಷಯ ಯುದ್ಧವರ್ಣನೆಯೂ ಅಲ್ಲ, ಹಿಂಸೆಯ ಪ್ರತಿಪಾದನವೂ ಅಲ್ಲ. ಅಂಥಲ್ಲಿ ಅದರ ಬಗ್ಗೆ ಒತ್ತಿಹೇಳುವುದು ಅನುಚಿತವಾದೀತು. ಕೆಲವು ಶ್ಲೋಕಗಳಿಗೂ ಅಹಿಂಸೆಗೂ ಮೇಳ ಕೂಡುವುದು ಕಷ್ಟವೆನಿಸಿದರೆ ಇಡೀ ಗೀತೆಯನ್ನು ಹಿಂಸೆಯ ಚೌಕಟ್ಟಿನಲ್ಲಿ ಸೇರಿಸುವುದು ಅದಕ್ಕಿಂತಲೂ ಕಷ್ಟ.

ಕವಿ ಗ್ರಂಥವನ್ನು ರಚಿಸಿದಾಗ ಎಲ್ಲಾ ಅರ್ಥಗಳ ಕಲ್ಪನೆಯನ್ನು ಮಾಡಿರಲಾರ. ಕಾವ್ಯದ ಕೌಶಲವೇ. ಅದು !

ಕವಿಗಿಂತಲೂ ದೊಡ್ಡವಾಗುತ್ತದೆ ಕಾವ್ಯ. ತನ್ನ ತನ್ಮಯತೆಯಲ್ಲಿ ಕವಿ ಉಚ್ಚಾರಣೆ ಮಾಡಿದ ಸತ್ಯ ಅನೇಕ ವೇಳೆ ಅವನ ಬಾಳಿನಲ್ಲಿಯೇ ಕಾಣದಿರಬಹುದು. ಆದುದರಿಂದ ಅನೇಕ ಕವಿಗಳ ಜೀವನ ಅವರ ಕಾವ್ಯಕ್ಕೆ ಸುಸಂಗತವಾಗದು. ಗೀತೆಯ ಆರಂಭವಾಗುವುದು

ಎರಡನೆಯ ಅಧ್ಯಾಯದಲ್ಲಿ, ಅದರ ಪೂರ್ಣಾಹುತಿ ಹದಿನೆಂಟನೆಯ ಅಧ್ಯಾಯದಲ್ಲಿ. ಎರಡನ್ನೂ ನೋಡಿದರೆ ಗೀತೆಯ ಸರ್ವಾಂಶ ತಾತ್ಪರ್ಯ ಹಿಂಸೆಯಲ್ಲ, ಅಹಿಂಸೆ ಎಂದು ತಿಳಿಯುತ್ತದೆ. ಮಧ್ಯದಲ್ಲಿ ನೋಡಿದರೂ ಇದೇ ಕಾಣಬರುತ್ತದೆ. ಕ್ರೋಧ, ರಾಗದ್ವೇಷಗಳಿಲ್ಲದೆ ಹಿಂಸೆ ಸಂಭವವಲ್ಲ. ಗೀತೆಯಂತೂ ಕ್ರೋಧಾದಿಗಳನ್ನು ದಾಟಿ ಗುಣಾತೀತ ಸ್ಥಿತಿಗೆ ಏರುವ ಪ್ರಯತ್ನ ಮಾಡುತ್ತದೆ. ಗುಣಾತೀತನಲ್ಲಿ ಕ್ರೋಧಕ್ಕೆ ಸರ್ವಥಾ ಅಭಾವ. ಅರ್ಜುನ ಕಿವಿಯ ವರೆಗೆ ಸೆಳೆದು ಬಾಣ ಬಿಟ್ಟಾಗ ಅವನ ಕಣ್ಣು ಹೇಗೆ ಕೆಂಪಾಗಿದ್ದವೆಂದು ಈಗಲೂ ನನಗೆ ಕಾಣುತ್ತಿದೆ.

ಆದರೆ ಅಹಿಂಸೆಗಾಗಿ ಯುದ್ಧವನ್ನು ಕೈಬಿಡುವುದಾಗಿ ಅರ್ಜುನ ಯಾವಾಗ ಮಾಡಿದ್ದ ಹಟ? ಬೇಕಾದಷ್ಟು ಯುದ್ಧಮಾಡಿದ ಅವನು. ಏಕಾಏಕಿ ಅವನಿಗೆ ಮೋಹ ಹುಟ್ಟಿತು. ತನ್ನ ಬಂಧುಬಳಗದವರನ್ನು ಕೊಲ್ಲಲು ಬಯಸಲಿಲ್ಲ, ತಾನು ಯಾರನ್ನು ಪಾಪಿಗಳೆಂದೆಣಿಸಿದ್ದನೋ ಅಂಥ ಇತರರನ್ನು ಕೊಲ್ಲದಿರುವ ಮಾತನ್ನೇ ಎತ್ತಲಿಲ್ಲ. ಶ್ರೀ ಕೃಷ್ಣ ಅಂತರ್ಯಾಮಿ ! ಅರ್ಜುನನ ಈ ಕ್ಷಣಿಕ ಮೋಹ ಅವನಿಗೆ ಗೊತ್ತು. ಆದುದರಿಂದಲೇ ಅವನಿಗೆ ಹೇಳುತ್ತಾನೆ- 'ಹಿಂಸೆಯನ್ನಂತೂ ನೀನು ಮಾಡಿದೀಯೆ, ಹೀಗೆ ಏಕಾಏಕಿ ಜಾಣನಾಗುವ ತೋರಿಕೆಯಿಂದ ನೀನು ಅಹಿಂಸೆಯನ್ನು ಕಲಿಯಲಾರೆ. ಆದರಿಂದ ಆರಂಭಿಸಿದ ಕೆಲಸವನ್ನು ಮುಗಿಸಲೇ ಬೇಕು. 'ಗಂಟೆಗೆ ನಲವತ್ತು ಮೈಲಿ ವೇಗದಿಂದ ಓಡುವ ರೈಲಿನಲ್ಲಿ ಕುಳಿತು ಮನುಷ್ಯ ಇದ್ದಕ್ಕಿದ್ದಂತೆ ಪ್ರವಾಸಕ್ಕೆ ಬೇಸತ್ತು ಓಡುವ ಗಾಡಿಯಿಂದ ಕೆಳಕ್ಕೆ ಧುಮುಕಿದರೆ, ಆತ್ಮಹತ್ಯೆ ಮಾಡಿಕೊಂಡ ಎನ್ನುತ್ತೇವೆ. ಅದರಿಂದ ಅವನು ಪ್ರವಾಸದ ಅಥವಾ ರೈಲು ಪ್ರಯಾಣದ ಮಿಥ್ಯಾತ್ವವನ್ನು ಕಲಿಯಲಿಲ್ಲ. ಅರ್ಜುನನದೂ ಇದೇ ಸ್ಥಿತಿ. ಅಹಿಂಸಕ ಕೃಷ್ಣ ಅರ್ಜುನನಿಗೆ ಬೇರೆ ಸಲಹೆ ಕೊಡಲು ಸಾಧ್ಯವಿರಲಿಲ್ಲ. ಆದರೆ ಆದುದರಿಂದ ಗೀತೆಯಲ್ಲಿ ಹಿಂಸೆಯನ್ನು ಪ್ರತಿಪಾದಿಸಿದೆಯೆಂದು ಅರ್ಥಮಾಡಲಾಗದು. ಶರೀರವ್ಯಾಪಾರಕ್ಕೆ ಹಿಂಸೆ ಅನಿವಾರ್ಯ, ಆದುದರಿಂದ ಹಿಂಸೆಯೇ ಧರ್ಮ ಎಂಬುದು ಎಷ್ಟು ಅನುಚಿತವೋ ಈ ರೀತಿ ಅರ್ಥಮಾಡುವುದೂ ಅಷ್ಟೇ ಅನುಚಿತ. ಈ ಹಿಂಸಾಮಯ ಶರೀರದಿಂದ ಬಿಡುಗಡೆಯಾಗುವ ಎಂದರೆ ಮೋಕ್ಷದ ಧರ್ಮವನ್ನು ಕಲಿಸುತ್ತಾನೆ ಸೂಕ್ಷ್ಮದರ್ಶಿ.

ಈ ಧೃತರಾಷ್ಟ್ರ ಯಾರು ? ದುರ್ಯೋಧನ, ಯುಧಿಷ್ಠಿರ, ಅರ್ಜುನರು ಯಾರು? ಕೃಷ್ಣ ಯಾರು? ಇವರೆಲ್ಲರೂ ಐತಿಹಾಸಿಕ ಪುರುಷರೇಯೆ ? ಗೀತೆಯಲ್ಲಿ ಇವರ ಸ್ಥೂಲ ವ್ಯವಹಾರದ ವರ್ಣನೆಯನ್ನೇ ಮಾಡಿದ್ದಾರೆಯೆ? ಅಕಸ್ಮಾತ್ ಅರ್ಜುನ ಪ್ರಶ್ನಿಸುತ್ತಾನೆ. ಕೃಷ್ಣ ಇಡೀ ಗೀತೆಯನ್ನೇ ಹೇಳುತ್ತಾನೆ. ನನ್ನ ಮೋಹ ಕಳೆಯಿತು ಎಂದು ಹೇಳಿಯೂ ಅರ್ಜುನ ಗೀತೆಯನ್ನು ಮರೆಯುತ್ತಾನೆ, ಮತ್ತೆ ಅನುಗೀತೆಯನ್ನು ಕೃಷ್ಣನಿಂದ ಹೇಳಿಸುತ್ತಾನೆ.

ದುರ್ಯೋಧನಾದಿಗಳು ಅಸುರೀವೃತ್ತಿ. ಅರ್ಜುನಾದಿಗಳು ದೈವೀವೃತ್ತಿ ಎನ್ನುತ್ತೇನೆ ನಾನು. ಈ ಶರೀರವೇ ಧರ್ಮಕ್ಷೇತ್ರ. ಅವರಲ್ಲಿ ದ್ವಂದ್ವ ನಡೆದೇ ಇರುತ್ತದೆ. ಅನುಭವಿಯಾದ ಋಷಿ–ಕವಿ ಅದನ್ನು ತದ್ವತ್ತಾಗಿ ವರ್ಣಿಸುತ್ತಾನೆ. ಕೃಷ್ಣನಂತೂ ಅಂತರ್ಯಾಮಿ. ಯಾವಾಗಲೂ ಶುದ್ಧಚಿತ್ತದಲ್ಲಿ ಗಡಿಯಾರದಂತೆ ಟಿಕ್ ಟಿಕ್ ಮಾಡುತ್ತಿರುತ್ತಾನೆ. ಚಿತ್ತಕ್ಕೆ ಬುದ್ಧಿಯ ಕೀಲಿ ಕೊಡದಿದ್ದರೆ, ಅಂತರ್ಯಾಮಿ ಅಲ್ಲೇ ಇದ್ದರೂ ಟಿಕ್ ಟಿಕ್ ಮಾತ್ರ ನಿಂತುಹೋಗುತ್ತದೆ.

ಇದರಲ್ಲಿ ಸ್ಥೂಲಯುದ್ಧಕ್ಕೆ ಅವಕಾಶವೇ ಇಲ್ಲವೆಂದಲ್ಲ. ಅಹಿಂಸೆ ಯಾರಿಗೆ ಹೊಳೆದಿಲ್ಲವೋ ಅವರಿಗೆ ಹೇಡಿಯಾಗಬಾರದೆಂದು ಕಲಿಸಲಾಗಿದೆ. ಭಯ ಇರುವವನು, ಸಂಗ್ರಹ ಮಾಡುವವನು, ವಿಷಯರಹಿತನಾದವನು. ಅವಶ್ಯವಾಗಿ ಹಿಂಸಾಮಯ ಯುದ್ಧಮಾಡಿಯಾನು. ಆದರೆ ಅದು ಅವನ ಧರ್ಮವಲ್ಲ. ಧರ್ಮ ಒಂದೇ. ಅಹಿಂಸೆಯೆಂದರೆ ಮೋಕ್ಷ, ಮೋಕ್ಷವೆಂದರೆ ಸತ್ಯನಾರಾಯಣನ ಸಾಕ್ಷಾತ್ಕಾರ. ಇದರಲ್ಲಿ ಬೆನ್ನು ತೋರಿಸುವ ಮಾತಂತೂ ಇಲ್ಲವೇ ಇಲ್ಲ. ಈ ವಿಚಿತ್ರ ಪ್ರಪಂಚದಲ್ಲಿ ಹಿಂಸೆ ಆಗುತ್ತಲೇ ಇರುತ್ತದೆ. ಅದರಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನು ತೋರಿಸುತ್ತದೆ ಗೀತೆ. ಅದರ ಜೊತೆಯಲ್ಲಿಯೇ ಹೇಡಿಯಾಗಿ ಓಡಿದರೆ ಹಿಂಸೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೆಂದೂ ಹೇಳುತ್ತದೆ. ಓಡಿಹೋಗಲೆಣಿಸುವವನು ಕೊಂದೂಕೊಂದಾನು, ತಾನೂ ಸತ್ತಾನು.

ಪ್ರಶ್ನೆ ಹಾಕಿದವರು ಎತ್ತಿತೋರಿಸಿದ ಶ್ಲೋಕಗಳನ್ನು ಈಗಲೂ ಅರ್ಥಮಾಡಿಕೊಳ್ಳದಿದ್ದರೆ ಅರ್ಥ ಹೇಳಲು ನಾನು ಅಸಮರ್ಥ, ಸರ್ವಶಕ್ತಿವಂತ ಈಶ್ವರ ಕರ್ತ, ಭರ್ತ, ಸಂಹರ್ತ. ಹಾಗೆಯೇ ಇರಬೇಕು. ಈ ವಿಷಯದಲ್ಲಿ ಶಂಕೆಯಿಲ್ಲವಲ್ಲ ? ಹುಟ್ಟಿಸಿದವನಿಗೇ ಅವನ್ನು ನಾಶಮಾಡುವ ಅಧಿಕಾರವೂ ಇದೆ. ಆದರೂ ಅವನು ಯಾರನ್ನೂ ಕೊಲ್ಲ. ಏಕೆಂದರೆ ಅವನು ಹುಟ್ಟಿಸುವುದೂ ಇಲ್ಲ. ಹುಟ್ಟಿದವನು ಸಾಯಲಿಕ್ಕೆ ಹುಟ್ಟಿದ–ಇದು ನಿಯಮ. ಈಶ್ವರನೂ ಈ ನಿಯಮವನ್ನು ಮುರಿಯಲಾರ. ಇದು ಅವನ ದಯೆ. ಈಶ್ವರನೇ ಸ್ವಚ್ಛಂದಿ, ಸ್ವೇಚ್ಛಾಚಾರಿ ಆದರೆ ನಾವೆಲ್ಲರೂ ಎಲ್ಲಿಗೆ ಹೋಗಬೇಕು ?*

ಗೀತೆಯನ್ನು ಬಾಯಿಪಾಠ ಮಾಡಿ

ಗೀತೆಯ ಬಾಯಿಪಾಠದ ಬಗ್ಗೆ ಅನೇಕ ಸಲ ಬರೆದಿದೇನೆ, ಹೇಳಿದೇನೆ, ನಾನು ಮಾಡಿಲ್ಲ, ಆದುದರಿಂದ ಹೀಗೆ ಹೇಳುವುದು ನನಗೆ ಭೂಷಣವಲ್ಲ. ಆದರೂ ಸಾರಿ ಸಾರಿ ಇದನ್ನು ಹೇಳಲು ನನಗೆ ನಾಚಿಕೆಯೇನಿಲ್ಲ. ಏಕೆಂದರೆ, ನನಗದರ ಲಾಭವು ಗೊತ್ತಿದೆ. ನನ್ನದೇನೋ ಹೇಗೋ ಸಾಗಿದೆ. ಒಮ್ಮೆ ಹದಿಮೂರನೆ ಅಧ್ಯಾಯದವರೆಗೆ ಬಾಯಿಪಾಠ

* ೧೫–೧೦–೧೯೨೫

ಮಾಡಿದ್ದೆ. ಗೀತೆಯ ಮನನವಂತೂ ಹಲವು ವರ್ಷಗಳಿಂದ ನಡೆದಿದೆ. ಆದುದರಿಂದ ಅದರ ನೆರಳಿನಲ್ಲಿ ಸ್ವಲ್ಪಮಟ್ಟಿಗೆ ಸಾಗಿದ್ದೇನೆ ನಾನು ಎನ್ನಬಹುದು. ಆದರೆ ನಾನದನ್ನು ಬಾಯಿಪಾಠ ಮಾಡಿದ್ದರೆ, ಅದರಲ್ಲಿ ಇನ್ನೂ ಆಳವಾಗಿ ಇಳಿದಿದ್ದರೆ ಇನ್ನೂ ಬಹಳ ಹೆಚ್ಚು ಲಾಭ ಪಡೆಯುತ್ತಿದ್ದೆ. ನನ್ನದೇನು ಹೇಗಾದರೂ ಆಗಿರಲಿ ಅಥವಾ ಆಗಲಿ. ನನ್ನ ಕಾಲ ಮುಗಿಯಿತು ಎನ್ನಬಹುದು. ಈಗಲೂ ನನಗೆ ಅವಕಾಶ ದೊರೆತರೆ ಗೀತೆಯನ್ನು ಬಾಯಿಪಾಠ ಮಾಡಲಿ.

ಬಾಯಿಪಾಠ ಮಾಡುವುದರ ಅರ್ಥವನ್ನೂ ಗೀತೆಯ ಅರ್ಥವನ್ನು ಸ್ವಲ್ಪ ವಿಸ್ತರಿಸುತ್ತೇನೆ. ಗೀತೆ ನಮ್ಮ ಆಧಾರ ಗ್ರಂಥ. ನಮ್ಮನೇಕರಿಗೆ ಗೀತೆಯೇ ಆಧಾರ. ಆದುದರಿಂದ ನಾವು ಗೀತೆಯ ಮಾತನ್ನೆತ್ತಿದೆ. ಆದರೆ ಅಮತುಸ್ಸಲಾಮ್ ಪ್ರಾರ್ಥನೆಯ ಬದಲು, ಕುರೇಷಿ ಗೀತೆಯ ಬದಲು ಕೊರಾನನ್ನು ಬಾಯಿಪಾಠ ಮಾಡಬಹುದು. ಸಂಸ್ಕೃತ ಬಾರದವರು, ಈಗ ಕಲಿಯಲಾರದವರು, ಗುಜರಾತಿಯಲ್ಲೋ ಹಿಂದಿಯಲ್ಲೋ ಬಾಯಿಪಾಠ ಮಾಡಲಿ. ಗೀತೆಯಲ್ಲಿ ಶ್ರದ್ಧೆಯಿಲ್ಲದೆ ಬೇರೆ ಧರ್ಮಗ್ರಂಥದಲ್ಲಿ ಶ್ರದ್ಧೆಯಿದ್ದವರು ಅದನ್ನೇ ಬಾಯಿಪಾಠ ಮಾಡುವುದರ ಅರ್ಥವನ್ನೂ ಅರಿಯಲಿ. ಯಾವುದನ್ನು ಬಾಯಿಪಾಠ ಮಾಡುತ್ತೇವೋ ಅದರಂತೆ ನಡೆಯುವ ಆಗ್ರಹವಿರಬೇಕು. ಮೂಲ ಸಿದ್ಧಾಂತಗಳಿಗೆ ಘಾತಕವಾಗಬಾರದು.

ಇದಕ್ಕೆ ಫಲವುಂಟು. ನಮ್ಮಲ್ಲಿ ಗ್ರಂಥವಿರದಿದ್ದರೆ, ಕಳವಾದರೆ, ಸುಟ್ಟುಹೋದರೆ, ನಾವು ಮರೆತರೆ ನಮ್ಮ ಕಣ್ಣು ಹೋದರೆ, ಮಾತು ನಿಂತರೆ, ತಿಳುವಳಿಕೆಯೊಂದಿದ್ದರೆ ನಮ್ಮ ಪ್ರಿಯ ಆಧಾರಗ್ರಂಥ ಬಾಯಿಗೆ ಬರುತ್ತಿದ್ದರೆ ಎಷ್ಟು ಶಾಂತಿ ದೊರೆತೀತು, ಮಾರ್ಗದರ್ಶಕವಾದೀತು, ಸಂಕಟದಲ್ಲಿ ಸಂಗಾತಿ ಆಗಿದ್ದೀತು.

ಜಗತ್ತಿನ ಅನುಭವವೂ ಇದೇ. ನಮ್ಮ ಹಿರಿಯರು –ಹಿಂದೂ ಮುಸಲ್ಮಾನ ಕಿರಸ್ತಾನ ಪಾರಸೀ–ಬಾಯಿಪಾಠ ಮಾಡಿರುತ್ತಿದ್ದರು. ಈಗಲೂ ಬಹಳ ಜನ ಮಾಡುತ್ತಾರೆ. ಇದರಲ್ಲಿ ಕೆಲವು ಮಟ್ಟಿಗೆ ನಮ್ಮ ಶ್ರದ್ಧೆಯ ಪರೀಕ್ಷೆಯಿದೆ.*

ಗೀತಾಜಯಂತಿ

ಪೂನಾದಿಂದ 'ಕೇಸರಿ' ಯ ಶ್ರೀ ಜಿ.ವಿ. ಕೇತಕರ ಅವರು ಬರೆಯುತ್ತಾರೆ :

'ಈ ವರ್ಷ ಡಿಸೆಂಬರ್ ೨೨ ಕ್ಕೆ ಗೀತಾಜಯಂತಿ. ಕೆಲವು ವರ್ಷಗಳಿಂದ ನಾನು ಪ್ರಾರ್ಥಿಸುತ್ತಿದೇನೆ : ಈಗಲೂ ಮತ್ತೆ ಮಾಡುತ್ತಿದೇನೆ:' ಗೀತೆಯ ಬಗ್ಗೆ ಗೀತಾಜಯಂತಿಯ ಬಗ್ಗೆ ತಾವು ಬರೆಯಬೇಕು. ಹೋದ ವರ್ಷ ಇನ್ನೊಂದು ಮಾತನ್ನು ಹೇಳಿದ್ದೆ. ಈಗಲೂ

* ಆಶ್ರಮವಾಸಿಗಳೊಡನೆ, ೩೧–೭–೧೯೩೨

ಹೇಳುತ್ತೇನೆ. ಗೀತೆಯ ಬಗ್ಗೆ ಮಾತಾಡುತ್ತ ಒಂದು ಕಡೆ ನೀವು ಹೇಳಿದೀರಿ–ಗೀತೆಯ ೭೦೦ ಶ್ಲೋಕಗಳನ್ನು ಪಾರಾಯಣ ಮಾಡಲು ಅವಕಾಶ ಸಿಗದವರು ೨–೩ನೇ ಅಧ್ಯಾಯಗಳನ್ನು ಓದಿದರೆ ಸಾಕು. ಇವೆರಡರ ಸಾರವನ್ನು ತೆಗೆಯಬಹುದು. ಹೀಗೆ ೨ನೇ–೩ನೇ ಅಧ್ಯಾಯಗಳನ್ನು ಗೀತಾ ಬೀಜವೆಂದು ಪ್ರಕಾಶನ ಮಾಡಿ ಇದೇ ವಿಚಾರವನ್ನೇ ಜನತೆಯ ಮುಂದೆ ಇಟ್ಟಿದೇನೆ. ತಾವು ಈ ವಿಷಯವಾಗಿ ಬರೆದರೆ ಹೆಚ್ಚು ಪರಿಣಾಮವಾದೀತು.

ಇಲ್ಲಿಯವರೆಗೆ ನಾನು ಶ್ರೀ ಕೇತಕರರ ಮಾತನ್ನು ಒಪ್ಪಿರಲಿಲ್ಲ. ಜಯಂತಿಯನ್ನು ಆಚರಿಸುವ ಉದ್ದೇಶ್ಯ ಈ ರೀತಿಯಲ್ಲಿ ಸಫಲವಾಗುತ್ತದೆಯೆಂದು ನಾನು ತಿಳಿದಿಲ್ಲ. ಆಧ್ಯಾತ್ಮಿಕ ವಿಷಯಗಳಲ್ಲಿ ವಿಜ್ಞಾಪನೆಯ ಸಾಧಾರಣ ಸಾಧನಗಳಿಗೆ ಸ್ಥಾನವಿಲ್ಲ. ಆಧ್ಯಾತ್ಮಿಕ ವಸ್ತುವಿನ ಉತ್ತಮ ವಿಜ್ಞಾಪನೆ ಅದಕ್ಕೆ ಅನುರೂಪವಾದ ಕರ್ಮವೇ. ಎಲ್ಲ ಆಧ್ಯಾತ್ಮಿಕ ಗ್ರಂಥಗಳ ಪ್ರಭಾವ ಬೀಳಲಿಕ್ಕೂ ಎರಡು ಸಂಗತಿ ಆಗಬೇಕೆಂದು ನನ್ನ ವಿಶ್ವಾಸ. ಅದರಲ್ಲಿ ಲೇಖಕರ ಅನುಭವಗಳ ಸತ್ಯವಾದ ಇತಿಹಾಸವಿರಬೇಕು. ಅದರ ಭಕ್ತರು ಬಾಳು ಅದರ ಉಪದೇಶಕ್ಕೆ ಅನುಸಾರವಾಗಿರಬೇಕು. ಗ್ರಂಥಕಾರ ತನ್ನ ಗ್ರಂಥದಲ್ಲಿ ಪ್ರಾಣಸಂಚಾರ ಮಾಡುತ್ತಾನೆ. ಅನುಯಾಯಿಗಳು ಅದನ್ನು ಅನುಸರಿಸಿ ಆಚರಣೆ ಮಾಡಿ ಅದನ್ನು ಪೋಷಿಸುತ್ತಾರೆ. ಗೀತೆ, ತುಲಸೀರಾಮಾಯಣ ಮುಂತಾದ ಪುಸ್ತಕಗಳು ಕೋಟ್ಯಂತರ ಜನರ ಮೇಲೆ ಪ್ರಭಾವ ಬೀರಿರುವುದರ ಗುಟ್ಟು ಇದೇ ಎಂದು ನನ್ನ ಅಭಿಪ್ರಾಯ. ಶ್ರೀ ಕೇತಕರರ ಅಗ್ರಹವನ್ನು ಮನ್ನಿಸುವಾಗ ಬರುವ ಗೀತಾಜಯಂತಿಯಲ್ಲಿ ಭಾಗವಹಿಸುವವರು ತಕ್ಕ ಭಾವನೆಯಿಂದ ಪ್ರೇರಿತರಾದಾರೆಂದು ಆಸೆ. ಗೀತೆಯ ಪವಿತ್ರ ಸಂದೇಶಕ್ಕೆ ಅನುಸಾರವಾಗಿ ತಮ್ಮ ಬಾಳನ್ನು ಬದುಕುವ ದೃಢನಿಶ್ಚಯ ಮಾಡಿಯಾರೆಂಬ ಆಸೆ ನನಗಿದೆ. ಆಸಕ್ತಿ ಬಿಟ್ಟು ಸ್ವಧರ್ಮಪಾಲನೆ ಮಾಡಬೇಕೆಂಬುದೇ ಈ ಸಂದೇಶ ಎಂದು ಸಿದ್ಧಮಾಡಲು ಪ್ರಯತ್ನಿಸಿದ್ದೇನೆ. ಗೀತೆಯ ಮುಖ್ಯ ವಿಷಯ ಎರಡನೇ ಅಧ್ಯಾಯದಲ್ಲಿದೆ, ಅದಕ್ಕನುಸಾರವಾಗಿ ಆಚರಣೆ ಮಾಡುವ ವಿಧಿ ಮೂರನೇ ಅಧ್ಯಾಯದಲ್ಲಿ. ಹೀಗೆಂದರೆ ಉಳಿದ ಅಧ್ಯಾಯಗಳ ಮಹಿಮೆ ಕಡಿಮೆಯೆಂದಲ್ಲ. ನಿಜವಾಗಿ ನೋಡಿದರೆ ಒಂದೊಂದು ಅಧ್ಯಾಯದ್ದೂ ಬೇರೆ ಬೇರೆ ಮಹತ್ತ್ವವೇ ಇದೆ. ವಿನೋಬಾ ಗೀತೆಯನ್ನು 'ಗೀತಾಯಿ' ಅಥವಾ ಗೀತಾಮಾತೆ ಎಂದು ಕರೆದಿದಾರೆ. ಅದಕ್ಕೆ ಬಹಳ ಸರಳವೂ ತೇಜೋವಂತವೂ ಆದ ಪದ್ಯಾನುವಾದ ಮಾಡಿದಾರೆ ಮರಾಠಿಯಲ್ಲಿ. ಮೂಲ ಸಂಸ್ಕೃತದ ಛಂದಸ್ಸೇ. ಸಾವಿರಾರು ಜನರಿಗೆ ಗೀತೆಯೇ ನಿಜವಾದ ತಾಯಿ. ಏಕೆಂದರೆ, ಕಷ್ಟ ಬಂದಾಗ ಅದು ಸಾಂತ್ವನ ಪುಷ್ಟಿಕರ ಹಾಲನ್ನು ಕೊಡುತ್ತದೆ. ಅದನ್ನು ನನ್ನ ಆಧ್ಯಾತ್ಮಿಕ ಕೋಶ ಎಂದಿದೇನೆ. ದುಃಖ ಬಂದಾಗ ಅದು ನನ್ನನ್ನು ನಿರಾಶೆಗೊಳಿಸಿಲ್ಲ. ಇದಲ್ಲದೆ, ಆ ಗ್ರಂಥದಲ್ಲಿ ಸಾಂಪ್ರದಾಯಿಕತೆ, ಧಾರ್ಮಿಕ ಅಧಿಕಾರವಾದಗಳ ಹೆಸರೇ ಇಲ್ಲ. ಮನುಷ್ಯಮಾತ್ರನಿಗೆ ಅದು ಪ್ರೇರಣೆ ಕೊಡುತ್ತದೆ. ಗೀತೆ ಕ್ಲಿಷ್ಟವೆಂದು ನಾನು ಒಪ್ಪುವುದಿಲ್ಲ. ಪಂಡಿತರಂತೂ ಏನೇ ಕೈಗೆ ಬಿದ್ದರೂ ಅದರಲ್ಲಿಯೇ

ಗೂಢವನ್ನು ನೋಡುತ್ತಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಸಾಧಾರಣ ಬುದ್ಧಿಯ ಮನುಷ್ಯನಿಗೂ ಗೀತೆಯ ಸರಳ ಸಂದೇಶವನ್ನು ಅರಿತುಕೊಳ್ಳಲು ಏನೂ ಕಷ್ಟವಿಲ್ಲ. ಅದರ ಸಂಸ್ಕೃತವೂ ಬಹಳ ಸುಲಭ. ಗೀತೆಯ ಇಂಗ್ಲೀಷ್ ಅನುವಾದಗಳು ಹಲವನ್ನು ನೋಡಿದೇನೆ. ಎಡ್ವಿನ್ ಅರ್ನಾಲ್ಡರ ಛಂದಾನುವಾದಕ್ಕೆ ಹೋಲಿಸಬಲ್ಲದ್ದು ಬೇರೆ ಇಲ್ಲ. ಅದರ ಹೆಸರನ್ನು ಬಹಳ ಉಪಯುಕ್ತವಾಗಿ ಅಂದವಾಗಿಟ್ಟಿದಾರೆ : ಸ್ವರ್ಗೀಯ ಗೀತೆ.*

ಗೀತೆ ಹಾಗೂ ರಾಮಾಯಣ

ತರುಣರನೇಕರು ಪ್ರಯತ್ನ ಮಾಡಿಯೂ ಕೂಡ ಪಾಪಕ್ಕೆ ಗುರಿಯಾಗದಿರಲಾರರು. ಅದರಿಂದ ಅವರಿಗೆ ಧೈರ್ಯವೇ ಉಡುಗಿಹೋಗುತ್ತದೆ. ಆಮೇಲೆ ದಿನೇ ದಿನೇ ಆಳವಾಗಿ ಪಾಪಕೂಪದಲ್ಲಿ ಮುಳುಗುತ್ತಾರೆ. ಕಡೆಯಲ್ಲಿ ಅನೇಕರು ಪಾಪವನ್ನೇ ಪುಣ್ಯವೆಂದು ತಿಳಿಯುತ್ತಾರೆ. ಅಂಥವರಿಗೆ ನಾನು ಅನೇಕ ಸಲ ಸಲಹೆ ಕೊಡುತ್ತೇನೆ– ಗೀತೆಯನ್ನು ರಾಮಾಯಣವನ್ನು ಸಲ ಸಲಕ್ಕೂ ಅಧ್ಯಯನ ಮಾಡಿ, ಮನನಮಾಡಿ ಎಂದು. ಆದರೆ ಅವರಿಗೆ ಇದರಲ್ಲಿ ರುಚಿ ಇಲ್ಲ. ಇಂಥ ತರುಣರಿಗೆ ಧೈರ್ಯಕೊಡಲು, ಮನಸ್ಸನ್ನು ಗಟ್ಟಿಮಾಡಲು ಒಬ್ಬ ತರುಣನ ಪತ್ರದ ಒಂದು ಭಾಗವನ್ನು ಇಲ್ಲಿ ಕೊಡುತ್ತೇನೆ:

'ಮನಸ್ಸು ಸಾಧಾರಣವಾಗಿ ಸ್ವಸ್ಥವಾಗಿದೆ. ಕೆಲವು ದಿನ ಹೀಗೇ ಸ್ವಸ್ಥವಾಗಿದ್ದ ಮೇಲೆ, ಸ್ವಸ್ಥವಾಗಿದ್ದೇನೆ ಎಂದು ನನಗೆ ಅನಿಸಿದರೆ, ಮತ್ತೆ ಮನಸ್ಸು ಅಸ್ವಸ್ಥವಾಗುತ್ತದೆ. ವಿಕಾರ ಬಹಳ ಬಲವಾಗಿ, ಅದನ್ನು ಹೇಗೆ ತಡೆಗಟ್ಟಬೇಕೋ ಬುದ್ಧಿಗೆ ತಿಳಿಯದಾಗುತ್ತದೆ. ಆಗ ಪ್ರಾರ್ಥನೆ, ಗೀತಾಪಾಠ, ತುಲಸೀ ರಾಮಾಯಣಗಳಿಂದ ಬಹಳ ನೆರವು ಸಿಗುತ್ತದೆ. ರಾಮಾಯಣ ಎಂದರೆ ಹೆದರುತ್ತಿದ್ದೆ ಮೊದಲು.

ಈಗ ಅದರ ಪುಟಪುಟವೂ ಸ್ವಾರಸ್ಯವೆನಿಸುತ್ತಿದೆ. ಓದಿದ್ದನ್ನೇ ಮತ್ತೆ ಮತ್ತೆ ಓದಿದರೂ ಬೇಸರವಾಗದು. ಮೂರು ನಾಲ್ಕು ವರ್ಷಕ್ಕೆ ಹಿಂದೆ ಅರೆಮನಸ್ಸಿನಿಂದ ಪರಿಶುದ್ಧಿಗಾಗಿ ಪ್ರಯತ್ನಿಸಿ ನಿರಾಶನಾದೆ. ಈಗ ಆ ನಿರಾಶೆಯ ಹೆಸರೇ ಇಲ್ಲ. ಅಷ್ಟೇ ಅಲ್ಲ, ಅನಂತ ಕಾಲದ ತರುವಾಯ ಆಗಬೇಕಾದುದು ಈಗಲೇ ಆಗಬೇಕೆಂದು ಹಠ ಹಿಡಿಯುವುದು ಎಂಥ ಮೂರ್ಖತನ ಎಂದುಕೊಳ್ಳುತ್ತೇನೆ. ಇಡೀ ದಿನದಲ್ಲಿ ಸೂಲುವಾಗ ರಾಮಾಯಣವನ್ನು ಓದುವಾಗ ಹಾಯಿ ಎನಿಸುತ್ತದೆ.'

ಈ ಪತ್ರ ಬರೆದವನಿಗೆ ಇದ್ದಷ್ಟು ನಿರಾಶೆ, ಅವಿಶ್ವಾಸ ಬೇರೆ ಯಾವ ತರುಣನಲ್ಲೂ ಇರಲಾರದು. ಎರಡೂ ಮೈಯುಂಡಿದ್ದವು. ಅದೇ ಈಗ ಅವನಲ್ಲಿ ಮೂಡಿರುವ ಶ್ರದ್ಧೆ

---

೧೧ ಡಿಸೆಂಬರ್, ೧೯೩೬

ಯಿಂದ ತರುಣರೆಲ್ಲರಲ್ಲೂ ಆಸೆಯ ಸಂಚಾರವಾಗಬೇಕು. ತಮ್ಮ ಇಂದ್ರಿಯಗಳನ್ನು ಗೆದ್ದಂಥವರ ಅನುಭವವನ್ನು ನಂಬಿ ಮನಗೊಟ್ಟು ರಾಮಾಯಣಾದಿಗಳನ್ನು ಅಭ್ಯಾಸಮಾಡಿದರೆ, ಅವರ ಮನಸ್ಸು ಕರಗದೆ ಇರಲಾರದು. ಸಾಮಾನ್ಯ ವಿಷಯಗಳ ಅಭ್ಯಾಸಕ್ಕೂ ನಾವು ವರ್ಷ ಗಟ್ಟಲೆ ದುಡಿಯಬೇಕಾಗುತ್ತದೆ, ಎಷ್ಟೋ ಉಪಾಯ ಮಾಡಬೇಕಾಗುತ್ತದೆ. ಅಂಥವರಲ್ಲಿ ಇಡೀ ಬಾಳಿನ, ಅದರ ಮುಂದಿನ ಶಾಂತಿಯ ಪ್ರಶ್ನೆ ಯಾವುದರಲ್ಲಿ ಅಡಗಿದೆಯೋ ಆ ವಿಷಯದ ಅಭ್ಯಾಸಕ್ಕೆ ಎಷ್ಟು ಮನಗೊಡಬೇಕಾದೀತು ? ಹೀಗಿದ್ದರೂ ಆದಷ್ಟು ಅತ್ಯಲ್ಪ ಸಮಯದಲ್ಲಿ ಬಹಳ ಕಡಿಮೆ ಗಮನಕೊಟ್ಟು ರಾಮಾಯಣ ಗೀತೆಗಳ ಸ್ವಾರಸ್ಯವನ್ನು ಸವಿಯಲು ಬಯಸುವವರಿಗೆ ಏನು ಹೇಳೋಣ ?

ಮೇಲಿನ ಪತ್ರದಲ್ಲಿ ಒಂದು ಮಾತಿದೆ. ಸ್ವಸ್ಥನಾಗುವ ವಿಚಾರ ಬಂದೊಡನೆ ವಿಕಾರವೂ ಏರಿಬರುತ್ತದೆ. ಶರೀರಕ್ಕೆ ಹೇಗೋ ಮನಸ್ಸಿಗೂ ಹಾಗೇ. ಆರೋಗ್ಯವಂತನಾದವನಿಗೆ ತನ್ನ ಆರೋಗ್ಯದ ಮಾತೇ ಹೊಳೆಯದು. ಅದು ಅಗತ್ಯವೂ ಇಲ್ಲ. ಏಕೆಂದರೆ ಶರೀರದ ಸ್ವಭಾವವೇ ಆರೋಗ್ಯ. ಮನಸ್ಸಿನದೂ ಹೀಗೇ. ಮನಸ್ಸು ಶುದ್ಧವಾಗಿರಬೇಕು ಎಂಬ ವಿಚಾರ ಬಂದರೆ ವಿಕಾರ ಬಂದು ಇಣಿಕಿನೋಡುತ್ತಿದೆ ಎಂದರ್ಥ. ಮನಸ್ಸು ಸದಾ ಶುದ್ಧವಾಗಿರಬೇಕೆಂದರೆ ಯಾವಾಗಲೂ ಅದನ್ನು ಒಳ್ಳೆಯ ವಿಚಾರಗಳಲ್ಲಿ ತೊಡಗಿಸಿರಬೇಕು. ಇದೊಂದೇ ಉಪಾಯ. ಇದರ ದೆಸೆಯಿಂದಲೇ ರಾಮನಾಮ ಮುಂತಾದುದರ ಜಪದ ವಿಷಯದ ಶೋಧನೆ ನಡೆದುದು, ಅದರ ಗುಣವನ್ನು ಹಾಡಿದುದು. ಯಾರ ಹೃದಯದಲ್ಲಿ ಗಳಿಗೆ ಗಳಿಗೆಯೂ ಶ್ರೀ ರಾಮನಿರುತ್ತಾನೆಯೋ ಅವನ ಮೇಲೆ ವಿಕಾರಗಳು ದಾಳಿ ಮಾಡಲೇ ಆರವು. ಶುದ್ಧಬುದ್ಧಿಯಿಂದ ರಾಮನಾಮ ಜಪ ಮಾಡುವವನ ಹೃದಯದಲ್ಲಿ ಸಮಯ ನೋಡಿ ರಾಮನಾಮ ನೆಲೆಸುತ್ತದೆ. ಇದು ನಿಜ. ಹೀಗೆ ಹೃದಯವನ್ನು ಹೊಕ್ಕಮೇಲೆ ಆ ಮನುಷ್ಯನಿಗೆ ಒಂದು ಅಭೇದ್ಯ ಕೋಟೆಯಾಗಿಬಿಡುತ್ತದೆ ರಾಮನಾಮ. ಕೆಟ್ಟದು ಕೆಟ್ಟದು ಎಂದು ಚಿಂತಿಸಿದರೆ ಅದು ಅಳಿಯದು. ಒಳ್ಳೆಯದರ ವಿಚಾರ ಮಾಡುತ್ತಿದ್ದರೆ ಕೆಟ್ಟದು ಅಳಿದುಹೋಗುತ್ತದೆ. ಆದರೆ ಜನರು ಒಳ್ಳೆಯ ಉದ್ದೇಶ್ಯದಿಂದಲೇ ವಿರುದ್ಧ ಉಪಾಯ ಹೂಡುತ್ತಾರೆ. ಇದು ಹೇಗೆ ಬಂತು, ಎಲ್ಲಿಂದ ಬಂತು ?' ಎಂದು ಯೋಚಿಸುತ್ತಿದ್ದರೆ ಕೆಟ್ಟದರ ಧ್ಯಾನ ಹೆಚ್ಚುತ್ತದೆ. ಕೆಟ್ಟದನ್ನು ಕಳೆಯಲು ಈ ಉಪಾಯ ಹಿಂಸಕ ಎನ್ನಬಹುದು. ನಿಜವಾದ ಉಪಾಯ ಕೆಟ್ಟದರೊಡನೆ ಅಸಹಕಾರ, ಕೆಟ್ಟದು ನಮ್ಮ ಮೇಲೆ ದಾಳಿ ಮಾಡಿದಾಗ ಅದಕ್ಕೆ ಓಡಿಹೋಗು ಎಂದು ಹೇಳಬೇಕಾಗಿಲ್ಲ. ಕೆಟ್ಟದೆಂಬ ವಸ್ತು ಇಲ್ಲವೇ ಇಲ್ಲವೆಂಬುದನ್ನು ಅರಿಯಬೇಕು. ಓಡಿಹೋಗು ಎಂಬುದರಲ್ಲಿ ಅಂಜಿಕೆಯ ಭಾವವಿದೆ. ಅದರ ವಿಚಾರವನ್ನೇ ಮಾಡದಿರುವುದು ನಿರ್ಭಯ. ಕೆಟ್ಟದು ನನ್ನ ಬಳಿ ಸುಳಿಯಲೇ ಅರದೆಂದು ನಾವು ಯಾವಾಗಲೂ ನಂಬಬೇಕು. ಅನುಭವದಿಂದ ಇದನ್ನೆಲ್ಲಾ ಸಿದ್ಧ ಮಾಡಬಹುದು.

ಭಗವದ್ಗೀತೆ ಅಥವಾ ಅನಾಸಕ್ತಿಯೋಗ

ಗೀತೆಯನ್ನು ಓದುತ್ತಾ ಚಿಂತನಮಾಡುತ್ತ ಅದನ್ನು ಅನುಸರಿಸುತ್ತ ನಲವತ್ತು ಕಳೆದಿದ್ದೇನೆ. ನಾನು ಗೀತೆಯನ್ನು ಹೇಗೆ ಅರಿತುಕೊಂಡಿದೇನೋ ಅದನ್ನು ಜನತೆಗೆ ತಿಳಿಸಬೇಕೆಂದು ಗೆಳೆಯರು ಬಯಸಿದರು. ಅದರ ಫಲವಾಗಿ ನಾನು ಅನುವಾದವನ್ನು ಮೊದಲಿಟ್ಟೆ. ಪಂಡಿತರ ದೃಷ್ಟಿಯಿಂದ ನೋಡಿದರೆ ಅನುವಾದ ಮಾಡುವ ಯೋಗ್ಯತೆ ಎಳ್ಳಷ್ಟೂ ಇಲ್ಲ. ಆಚರಣೆ ಮಾಡುವವರ ದೃಷ್ಟಿಯಿಂದೇನೋ ಸರಿಯೆನಿಸಬಹುದು. ಈಗ ಈ ಅನುವಾದ ಅಚ್ಚಾಗಿದೆ. ಗೀತೆಯಲ್ಲಿ ಸಂಸ್ಕೃತ ಮೂಲವನ್ನೂ ಅನೇಕರು ಕೊಡುತ್ತಾರೆ. ಇದರಲ್ಲಿ ಬೇಕೆಂದೇ ಸಂಸ್ಕೃತ ಮೂಲವನ್ನು ಕೊಟ್ಟಿಲ್ಲ (ಈ ಆವೃತ್ತಿಯಲ್ಲಿ ಮೂಲ ಸಂಸ್ಕೃತವೂ ಇದೆ) ಎಲ್ಲರಿಗೂ ಸಂಸ್ಕೃತ ತಿಳಿದರೆ ನನಗೆ ಸಂತೋಷ. ಆದರೆ ಎಲ್ಲರಿಗೂ ಸಂಸ್ಕೃತ ಎಂದಿಗೂ ಬರಲಿಕ್ಕಿಲ್ಲ. ಅಲ್ಲದೆ ಸಂಸ್ಕೃತ ಮೂಲದ ಗೀತೆಯ ಪ್ರತಿ ಬೇಕಾದಷ್ಟು ಸಿಗುತ್ತದೆ. ಆದುದರಿಂದ ಮೂಲವನ್ನು ಬಿಟ್ಟು ಪುಸ್ತಕದ ಆಕಾರವನ್ನೂ ಬೆಲೆಯನ್ನೂ ತಗ್ಗಿಸಲು ನಿಶ್ಚಯಿಸಿದೆ. ೧೮ ಪುಟಗಳ ಪ್ರಸ್ತಾವನೆ, ೧೬೧ ಪುಟಗಳ ಅನುವಾದಗಳ ಜೇಬಿನ ಆವೃತ್ತಿಯನ್ನು ಅಚ್ಚುಮಾಡಿಸಿದೇನೆ. ಎರಡಾಣೆ ಬೆಲೆ ಇಟ್ಟಿದೆ. ಪ್ರತಿಯೊಬ್ಬರೂ ಗೀತೆಯನ್ನು ಓದಲಿ, ಮನನ ಮಾಡಲಿ, ಅದರಂತೆ ಆಚರಣೆ ಮಾಡಲಿ ಎಂದು ನನ್ನ ಆಸೆ. ಸಂಸ್ಕೃತದ ಯೋಚನೆಯನ್ನೇ ಮಾಡದೆ ಇದರ ಅರ್ಥವನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದು, ಅದರಂತೆ ಆಚರಣೆ ಮಾಡುವುದು ಇದಕ್ಕೆ ಸುಲಭೋಪಾಯ. ಉದಾಹರಣೆಗೆ –ತನ್ನವರು ಹೆರವರು ಎಂಬ ಭೇದವಿಲ್ಲದೆ ದುಷ್ಟರನ್ನು ಕೊಲ್ಲಲು ಗೀತೆ ಹೇಳುತ್ತದೆ ಎನ್ನುವವರು ಮೊದಲು ತಮ್ಮ ದುಷ್ಟ ತಾಯಿತಂದೆಗಳನ್ನು ಅಥವಾ ಇತರ ಪ್ರಿಯಜನರನ್ನು ಕೊಲ್ಲಲಿ. ಆದರೆ ಅವರು ಹಾಗೆ ಮಾಡಲಾರರು. ಹಾಗಿದ್ದರೆ, ಎಲ್ಲೆಲ್ಲಿ ಸಂಹಾರದ ಪ್ರಸ್ತಾಪ ಬರುತ್ತದೆಯೋ ಅಲ್ಲಿ ಬೇರೆ ಅರ್ಥವಿರಬೇಕು. ಈ ಮಾತು ಓದುಗರಿಗೆ ಸಹಜವಾಗಿಯೇ ಹೊಳೆಯಬೇಕಲ್ಲವೆ. ತನ್ನವರು –ಪರರು ಎಂಬ ಭೇದವಿರಬಾರದೆಂದು ಗೀತೆ ಪಂಕ್ತಿಪಂಕ್ತಿಯಲ್ಲೂ ಹೇಳುತ್ತದೆ. ಇದು ಹೇಗೆ ಸಾಧ್ಯ ? ಹೀಗೆ ಯೋಚಿಸುತ್ತ ಯೋಚಿಸುತ್ತ ಅನಾಸಕ್ತಿಪೂರ್ವಕ ಎಲ್ಲಾ ಕೆಲಸಗಳನ್ನೂ ಮಾಡಬೇಕೆಂಬುದೇ ಗೀತೆಯ ಪ್ರಧಾನ ಧ್ವನಿ ಎಂಬ ನಿಶ್ಚಯಕ್ಕೆ ಬಂದು ಮುಟ್ಟುತ್ತೇವೆ. ಮೊದಲನೆ ಅಧ್ಯಾಯದಲ್ಲೇ ಅರ್ಜುನನ ಎದುರಿಗೆ ತನ್ನವರು – ಪರರು ಎಂಬ ಜಗಳ ಬಂದು ನಿಲ್ಲುತ್ತದೆ. ಇಂಥ ಭೇದ ಮಿಥ್ಯ, ಹಾಗೂ ಹಾನಿಕರ ಎಂದು ಗೀತೆಯ ಒಂದೊಂದು ಅಧ್ಯಾಯದಲ್ಲೂ ತೋರಿಸಲಾಗಿದೆ.

ಗೀತೆಗೆ ನಾನು ಅನಾಸಕ್ತಿಯೋಗ ಎಂದು ಹೆಸರಿಟ್ಟಿದೇನೆ. ಅನಾಸಕ್ತಿ ಎಂದರೇನು, ಹೇಗೆ ಅದು ಕೈಗೂಡುತ್ತದೆ, ಅದರ ಲಕ್ಷಣವೇನು–ಇವೇ ಮೊದಲಾದ ವಿಷಯಗಳಿಗೆ ಈ ಪುಸ್ತಕದಲ್ಲಿ ಉತ್ತರವಿದೆ. ಗೀತೆಯನ್ನು ಅನುಸರಿಸುತ್ತ ಈ ಯುದ್ಧವನ್ನು ನಾನು ಪ್ರಾರಂಭ

ಮಾಡದಿರಲಾರದಾದೆ. ಒಬ್ಬ ಗೆಳೆಯನ ಮಾತಿನಂತೆ ನನ್ನ ಮನಸ್ಸಿಗೆ ಇದೊಂದು ಧರ್ಮಯುದ್ಧ. ಅದರ ಕಟ್ಟಕಡೆಯ ತೀರ್ಮಾನದ ಕಾಲಕ್ಕೆ ಸರಿಯಾಗಿ ಈ ಪುಸ್ತಕ ಪ್ರಕಾಶಿತವಾಗುತ್ತಿರುವುದು ನನಗೆ ಒಂದು ಶುಭ ಶಕುನ.*

ರಾಷ್ಟ್ರೀಯ ಶಾಲೆಗಳಲ್ಲಿ ಗೀತೆ

ಹಿಂದೂಗಳೂ ಇತರರೂ ಇರುವ ರಾಷ್ಟ್ರೀಯ ಶಾಲೆಗಳಲ್ಲಿ ಗೀತೆಯನ್ನು ಕಡ್ಡಾಯವಾಗಿ ಕಲಿಸಬಹುದೆ ಎಂದು ಒಬ್ಬ ಸುದ್ದಿಗಾರ ಕೇಳಿದಾನೆ. ಎರಡು ವರ್ಷದ ಹಿಂದೆ ಮೈಸೂರಿನಲ್ಲಿ ನಾನು ಪ್ರವಾಸ ಮಾಡುತ್ತಿದ್ದಾಗ ಒಂದು ಹೈಸ್ಕೂಲಿನಲ್ಲಿ ಹಿಂದೂ ಹುಡುಗರಿಗೇ ಗೀತೆಯ ಪರಿಚಯವಿರಲಿಲ್ಲವೆಂದು ದುಃಖದಿಂದ ಹೇಳಬೇಕಾಯಿತು. ಹೀಗೆ ಗೀತೆಯ ಬಗ್ಗೆ ನನ್ನ ಪಕ್ಷಪಾತ ಸ್ಪಷ್ಟವಾಗಿಯೆ ಇದೆ. ಕೇವಲ ರಾಷ್ಟ್ರೀಯ ಶಾಲೆಗಳಲ್ಲೇ ಅಲ್ಲ. ಪ್ರತಿಯೊಂದು ಶಿಕ್ಷಣ ಸಂಸ್ಥೆಯಲ್ಲೂ ಅದನ್ನು ಓದಿಸಬೇಕೆಂದು ನನ್ನ ಆಸೆ. ಹಿಂದೂ ಹುಡುಗ ಹುಡುಗಿಯರಿಗೆ ಗೀತೆ ಗೊತ್ತಿಲ್ಲವೆಂದರೆ ನಾಚಿಕೆಗೇಡಿನ ಮಾತು. ಆದರೆ ಕಡ್ಡಾಯ ಮಾಡುವುದರ ಬಗ್ಗೆ ನನ್ನ ಆಗ್ರಹ ಕಡಿಮೆಯಾಗುತ್ತಿದೆ. ಅದೂ ರಾಷ್ಟ್ರೀಯ ಶಾಲೆಗಳಲ್ಲಿ. ಗೀತೆ ವಿಶ್ವಧರ್ಮದ ಗ್ರಂಥ, ನಿಜ. ಆದರೂ ಈ ಮಾತನ್ನು ಯಾರ ಮೇಲೂ ಹೊರಿಸಲಾಗದು. ಯಾರಾದರೂ ಮುಸಲ್ಮಾನರು, ಕ್ರಿಸ್ತಾನರು, ಪಾರಸೀಗಳು ಇದನ್ನು ವಿರೋಧಿಸಬಹುದು, ಬೈಬಲ್ ಕೊರಾನ್ ಅವೆಸ್ತಾಗಳ ಬಗೆಗೂ ಇದೇ ಮಾತನ್ನೇ ಹೇಳಬಹುದು. ಹಿಂದೂಗಳೆನಿಸುವವರಿಗೂ ಗೀತೆಯ ಶಿಕ್ಷಣವನ್ನು ಕಡ್ಡಾಯ ಮಾಡಲಾಗದೆಂದು ನನ್ನ ಭಯ. ಎಷ್ಟೋ ಮಂದಿ ಸಿಖ್ಖರು ಜೈನರು ತಾವು ಹಿಂದೂಗಳೆನ್ನುತ್ತಾರಾದರೂ ಅವರ ಮಕ್ಕಳಿಗೆ ಕಡ್ಡಾಯವಾಗಿ ಗೀತೆಯನ್ನು ಓದಿಸುವುದನ್ನು ವಿರೋಧಿಸಬಹುದು. ಸಾಂಪ್ರದಾಯಿಕ ಅಥವಾ ಜಾತೀಯ ಶಾಲೆಗಳ ಮಾತು ಬೇರೆ. ವೈಷ್ಣವ ಶಾಲೆಯಲ್ಲಿ ಗೀತೆಯನ್ನು ಧಾರ್ಮಿಕ ಶಿಕ್ಷಣದ ಅಂಗವಾಗಿ ಕಡ್ಡಾಯ ಮಾಡಿದರೆ ಅದು ಸರಿ. ಪ್ರತಿಯೊಂದು ಶಾಲೆಗೂ ತನ್ನ ಪಾಠ್ಯಕ್ರಮವನ್ನು ನಿಶ್ಚಯಿಸುವ ಹಕ್ಕು ಇದೆ. ಆದರೆ ರಾಷ್ಟ್ರೀಯ ಶಾಲೆಗಳು ಒಂದು ಮಿತಿಯಲ್ಲಿದ್ದುಕೊಂಡು ಕೆಲಸ ಮಾಡಬೇಕು. ಅಧಿಕಾರ ಅಥವಾ ಹಕ್ಕಿನ ವಿಷಯದಲ್ಲಿ ಕೈಹಾಕದಿರುವ ಕಡೆ ಕಡ್ಡಾಯದ ಮಾತೇ ಇಲ್ಲ. ಖಾಸಗಿ ಪಾಠಶಾಲೆಯಲ್ಲಿ ಪ್ರವೇಶ ಸಿಗಬೇಕೆಂದು ಒತ್ತಾಯ ಮಾಡುವಂತಿಲ್ಲ. ರಾಷ್ಟ್ರೀಯ ಶಾಲೆಯಲ್ಲಿ ಎಲ್ಲರಿಗೂ ಪ್ರವೇಶದ ಅಧಿಕಾರವಿದೆ. ಹೀಗೆ ಒಂದು ಕಡೆ ಪ್ರವೇಶಕ್ಕೆ ನಿಯಮ ವಿಧಿಸಿದುದು ಇನ್ನೊಂದು ಕಡೆ ಆಗಲೇಬೇಕಾದ ಅಗತ್ಯವಿಲ್ಲ. ಒತ್ತಾಯದಿಂದ ಗೀತೆ ಎಂದೂ ವಿಶ್ವವ್ಯಾಪಿಯಾಗಲಾರದು. ಅದರ ಭಕ್ತರು ಅದನ್ನು ಇತರರ ಮೇಲೆ ಬಲವಂತವಾಗಿ ಹೊರಿಸದೆ

---

೨೨ ಮೇ, ೧೯೩೦

ತಮ್ಮ ಬಾಳಿನ ಮೂಲಕ ಅವರ ಉಪದೇಶಕ್ಕೆ ಮೂರ್ತಸ್ವರೂಪ ಕೊಟ್ಟರೆ ಗೀತೆ ವಿಶ್ವವ್ಯಾಪಿಯಾದೀತು.*

ಅಹಿಂಸಾ ಪರಮೋ ಧರ್ಮಃ

ಕ್ಯಾನನ್ ಷಪರ್ಡ್ ಹಾಗೂ ಇನ್ನು ಕೆಲವರು ಉತ್ಸಾಹವಂತ ಕ್ರಿಸ್ತಾನರು ಇಂಗ್ಲೆಂಡಿನಲ್ಲಿ ಯುದ್ಧಕ್ಕೆ ವಿರುದ್ಧವಾಗಿ ಚಳುವಳಿಯನ್ನು ನಡೆಸುತ್ತಿದ್ದಾರೆ. ದಿಲ್ಲಿಯ ಸ್ಟೇಟ್ಸ್‌ಮನ್ ಪತ್ರಿಕೆ ನಾಲ್ಕು ಲೇಖನ ಬರೆದು ಆ ಚಳುವಳಿಯನ್ನು ಇತಿಮಿತಿಯಿಲ್ಲದೆ ಟೀಕಿಸಿದೆ. ತನ್ನ ನಿಲುವನ್ನು ಸಮರ್ಥಿಸಲು ಈ ಪತ್ರಿಕೆ ಭಗವದ್ಗೀತೆಯನ್ನೂ ಎಳೆದಿದೆ.

'ನಿಜವಾಗಿ, ಸಮಾಜ ತನ್ನ ಶತ್ರುಗಳೊಡನೆ ಹೋರಾಡಬೇಕು. ಆದರೆ ಅವರ ಬಗ್ಗೆ ಪ್ರೇಮವೂ ಇರಬೇಕು ಎಂಬುದೇ ಕ್ರಿಸ್ತನ ಮತದ ವಾಸ್ತವವಾದ ಆದರೆ ಕಠಿಣವಾದ ಉಪದೇಶ.'

'ಗೀತೆಯ ಉಪದೇಶವೂ ಇದೇ. ಗಾಂಧಿ ಇದನ್ನು ಗಮನಿಸಲಿ. ಪೂರ್ಣವಾಗಿ ನಿರ್ಭಯನಾಗಿ ನಿರ್ವೈರನಾಗಿ ಹೋರಾಡುವವನಿಗೇ ಗೆಲುವು ಎಂದು ಅರ್ಜುನನಿಗೆ ಕೃಷ್ಣ ಹೇಳುತ್ತಾನೆ. ಈ ಮಹಾಕಾವ್ಯ ತನ್ನ ಎರಡನೆ ಅಧ್ಯಾಯದಲ್ಲಿ ಒಬ್ಬ ವಿವೇಕವಂತ ಯುದ್ಧ ವಿರೋಧಿ, ಒಬ್ಬ ನಿಜವಾದ ಯೋಧ, ಇವರು ಇಬ್ಬರ ನಡುವೆ ಸರ್ವೋಚ್ಚ ಭೂಮಿಕೆಯ ಮೇಲೆ ಯೋಚಿಸಿದರೂ ಈ ವಿವಾದವನ್ನು ಮುಕ್ತಾಯ ಮಾಡಿದೆ. ಸ್ಥಳಾಭಾವದಿಂದ ಗೀತೆಯನ್ನು ಇಲ್ಲಿ ಎತ್ತಿ ಬರೆದಿಲ್ಲ. ಆದರೆ ಗೀತೆ ಒಮ್ಮೆಯಲ್ಲಿ ಹಲವು ಸಲ ಓದಬೇಕಾದ ಗ್ರಂಥ.'

ಉಗ್ರವಾದಿಗಳೂ ಇದೇ ಶ್ಲೋಕಗಳನ್ನೇ ಉದಾಹರಿಸಿದ್ದಾರೆಂಬುದು ಈ ಲೇಖನಗಳ ಲೇಖಕನಿಗೆ ಬಹುಶಃ ಗೊತ್ತಿಲ್ಲ. ನಿರ್ವಿಕಾರ ಚಿತ್ತದಿಂದ ಓದಿದರೆ ಭಗವದ್ಗೀತೆಯಲ್ಲಿ ಈ ಲೇಖಕನಿಗೆ ಹೊಳೆದ ಅರ್ಥಕ್ಕೆ ತೀರಾ ವಿರುದ್ಧ ಅರ್ಥವೆ ನನಗೆ ತೋರಿದೆ. ಪಶ್ಚಿಮ ದೇಶಗಳಲ್ಲಿ ಯುದ್ಧವಿರೋಧಿಗಳನ್ನು ಯಾವ ಅರ್ಥದಲ್ಲಿ ವಿವೇಕವಂತರೆನ್ನುತ್ತೇವೋ ಆ ಅರ್ಥದಲ್ಲಿ ಅರ್ಜುನ ಯುದ್ಧವಿರೋಧಿ ಅಲ್ಲ. ಅರ್ಜುನ ಕದನದಲ್ಲಿ ಕದುಗಲಿ. ಯುದ್ಧ ಬಯಸುವವನು. ಕೌರವರ ಸೇನೆಯೊಡನೆ ಮೊದಲು ಎಷ್ಟೋ ಸಲ ಕಾದಿದ್ದಾನೆ. ಎರಡೂ ಸೇನೆ ಯುದ್ಧಕ್ಕೆ ಸಿದ್ಧವಾಗಿವೆ. ಅದರಲ್ಲಿ ತನ್ನ ಇಷ್ಟಮಿತ್ರರು ಪೂಜ್ಯ ಗುರು ಜನರು ಇದ್ದುದನ್ನು ನೋಡಿದ. ಆಗ ಅವನ ಕೈಕಾಲು ನಡುಗತೊಡಗಿದವು. ಅಲ್ಲಿ ಮಾನವತೆಯ ಪ್ರೇಮವೂ ಇಲ್ಲ, ಯುದ್ಧದ ಬಗ್ಗೆ ತಿರಸ್ಕಾರವೂ ಇಲ್ಲ : ಅರ್ಜುನ ಯಾವುದರಿಂದ ಪ್ರೇರಿತನಾಗಿ ಕೃಷ್ಣನನ್ನು ಪ್ರಶ್ನೆ ಕೇಳಿದನೋ ಅದರಲ್ಲಿ ಅಂಥ ಪರಿಸ್ಥಿತಿಯಲ್ಲಿ ಕೃಷ್ಣನೂ ಬೇರೆ ಉತ್ತರ ಕೊಡಲಾರದವನಾಗಿದ್ದ. ಮಹಾಭಾರತ ರತ್ನಗಳ ಗಣಿ. ಅದರೊಳಗಿನ ಒಂದು ರತ್ನ–ಗೀತೆ ಆದರೆ ಎಲ್ಲಕ್ಕಿಂತ ಹೆಚ್ಚು

ದೇದೀಪ್ಯಮಾನವಾದುದು. ಆ ಯುದ್ಧದಲ್ಲಿ ಲಕ್ಷಾಂತರ ಯೋಧರು ಎರಡೂ ಕಡೆ ಸೇರಿದ್ದರು. ಎರಡೂ ಕಡೆಯಲ್ಲಿ ಅವರ್ಣನೀಯ ಅಮಾನುಷತನ ನಡೆಯಿತು ಎಂದು ಬರೆದಿದೆ. ಈ ಲಕ್ಷಾಂತರ ಯೋಧರಲ್ಲಿ ಕೇವಲ ಏಳೇ ಜನರನ್ನು ಉಳಿಸಿ ಅವರಿಗೆ ನಿಃಸಾರವಾದ ಗೆಲವನ್ನು ನೀಡಿ ಈ ಮಹಾಕಾವ್ಯದ ಅಮರ ಕವಿ ಯುದ್ಧದ ನಿರರ್ಥಕತೆಯನ್ನೇ ತೋರಿಸಿಕೊಟ್ಟಿದ್ದಾನೆ. ಯುದ್ಧ ಒಂದು ಮೂರ್ಖತನದ ವಿಷಯ, ಮೋಸದ ಸಂಗತಿ ಎಂದು ತೋರಿಸಿದುದಷ್ಟೇ ಅಲ್ಲದೆ ಇನ್ನೂ ಉನ್ನತವಾದ ಸಂದೇಶ ಒಂದನ್ನು ಮಹಾಭಾರತ ನಮಗೆ ಕೊಡುತ್ತದೆ. ಮನುಷ್ಯನನ್ನು ಒಬ್ಬ ಅಮರ ಪ್ರಾಣಿಯೆಂದು ತಿಳಿಯುವುದಾದರೆ ಅವನ ಆಧ್ಯಾತ್ಮಿಕ ಇತಿಹಾಸ ಮಹಾಭಾರತ. ಅದರ ವರ್ಣನೆಯಲ್ಲಿ ಒಂದು ಐತಿಹಾಸಿಕ ಘಟನೆಯನ್ನು ಉಪಯೋಗಿಸಿದಾರೆ. ಆ ಕಾಲದ ಚಿಕ್ಕ ಜಗತ್ತಿನ ಅದು ಬಹಳ ದೊಡ್ಡ ಘಟನೆಯೇ ಇದ್ದೀತು. ಇಂದಿನ ಜಗತ್ತಿನ ಅಂಥ ಮಹತ್ತ್ವದ್ದೇನೂ ಅಲ್ಲ. ಎಷ್ಟೋ ಹೊಸ ಆವಿಷ್ಕಾರಗಳಾಗಿವೆ ಈಗ. ಅದರಿಂದಾಗಿ ಇಡೀ ಜಗತ್ತೆಲ್ಲವೂ ಈಗ ಅಂಗೈನೆಲ್ಲಿಕಾಯಿ ಆಗಿದೆ. ಯಾವ ಮೂಲೆಯಲ್ಲಿ ಒಂದು ಸಂಗತಿ ನಡೆದರೂ ಅದರ ಪ್ರಭಾವ ಜಗತ್ತಿನಲ್ಲಿ ಬಹಳ ದೂರದವರೆಗೂ ಹರಡುತ್ತದೆ. ಆಗ ಹೀಗಿರಲಿಲ್ಲ. ನಮ್ಮ ಹೃದಯಗಳಲ್ಲಿ ಹಗಲೂ ಇರುಳೂ ಸತ್-ಅಸತ್ತುಗಳಿಗೆ ಸನಾತನ ಸಂಘರ್ಷಣೆ ನಡೆಯುತ್ತಿದೆ. ಅದನ್ನು ಈ ಕಥಾನಕದ ಮೂಲಕ ಒಂದು ಅಮರಕಾವ್ಯದ ರೂಪದಲ್ಲಿ ಮಹಾಭಾರತಕಾರರು ನಮ್ಮ ಮುಂದೆ ಇಟ್ಟಿದ್ದಾರೆ. ಕಟ್ಟಕಡೆಯಲ್ಲಿ ಸತ್ಯಕ್ಕೇ ಗೆಲುವು ಆದರೂ ಅಸತ್ಯ ಹೇಗೆ ಶಕ್ತಿವಂತವಾಗಿ ಅತ್ಯಂತ ವಿವೇಕಶಾಲಿಯಾದವನನ್ನೂ 'ಕಿಂಕರ್ತವ್ಯವಿಮೂಢ'ನನ್ನಾಗಿ ಮಾಡುತ್ತದೆಯೆಂಬುವನ್ನು ತೋರಿಸುತ್ತದೆ ಅದು. ಸದಾಚಾರದ ಏಕಮಾತ್ರ ಮಾರ್ಗವನ್ನೂ ನಮಗೆ ತೋರಿಸುತ್ತದೆ ಮಹಾಭಾರತ.

ಭಗವದ್ಗೀತೆಯ ನಿಜವಾದ ಸಂದೇಶ ಏನೇ ಇರಲಿ, ಶಾಂತಿ-ಚಳುವಳಿಯ ನಾಯಕರಿಗೆ ಗೀತೆಯ ಉಪದೇಶವಲ್ಲ ಮಹತ್ತ್ವದ್ದು, ಬೈಬಲಿನ ಉಪದೇಶ ಮಹತ್ತ್ವದ್ದು. ಅದನ್ನೇ ಅವರು ತಮ್ಮ ಆಧ್ಯಾತ್ಮಿಕ ಮಾರ್ಗದರ್ಶಕವೆಂದು ತಿಳಿದಿದ್ದಾರೆ. ಬೈಬಲಿಗೂ ಎಷ್ಟೋ ಅರ್ಥಮಾಡುತ್ತಾರೆ. ಸಾಧಾರಣವಾಗಿ ಕ್ರಿಸ್ತನ ಪಾದರಿಗಳು ಬೈಬಲಿಗೆ ಮಾಡುವ ಅರ್ಥ ಈ ನಾಯಕರಿಗೆ ಸಮ್ಮತವಲ್ಲ. ಅದನ್ನು ಶ್ರದ್ಧಾಯುಕ್ತ ಅಂತಃಕರಣದಿಂದ ಓದಿದರೆ ಯಾವ ಅರ್ಥ ಹೊಳೆಯುತ್ತದೆಯೋ ಅದು ಅವರಿಗೆ ಒಪ್ಪಿಗೆ. ಮೂಲತಃ ಎಲ್ಲಕ್ಕಿಂತ ಮಹತ್ತ್ವಪೂರ್ಣ ವಿಷಯ ಯುದ್ಧವಿರೋಧಿಗಳ ಅಹಿಂಸೆಯ ಅಥವಾ ಪ್ರೇಮ ಧರ್ಮದ ಜ್ಞಾನ. ಅಹಿಂಸೆಯ ಅರ್ಥ ಬಹಳ ವ್ಯಾಪಕ. ಇಂಗ್ಲಿಷಿನ ನಾನ್ ವಯಲೆನ್ಸ್ ಶಬ್ದ ಅದಕ್ಕೆ ಸಮರ್ಪಕವಲ್ಲ. 'ಸ್ಟೇಟ್ಸ್‌ಮನ್' ಲೇಖನಗಳು ಯುದ್ಧವಿರೋಧಿಗಳಿಗೆ ಒಂದು ಸವಾಲಿನಂತಿವೆ. ಈ ಚಳುವಳಿಯ ವಿಶೇಷ ಮಹತ್ತ್ವದ್ದಿಲ್ಲದಿರಬಹುದು. ಆದರೆ ನನಗೆ ಒಳಗಿನ ವಿಷಯ ಗೊತ್ತಿರುವ ಮಟ್ಟಿಗೆ ಕೆಲವರು ಅದನ್ನು ಗಮನಿಸಿಯಾರು. ಅವರಲ್ಲಿ ಕೆಲವರು ನನ್ನೊಡನೆ ಪತ್ರ ವ್ಯವಹಾರ ಮಾಡುತ್ತಿದ್ದಾರೆ. ಈಗಂತೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ.

ರಿಚರ್ಡ್‌ಗ್ರೆಗ್ಗರ 'ಅಹಿಂಸೆಯ ಮಹಿಮೆ'ಯೆಂಬ ಪುಸ್ತಕ ಅವರಿಗೆ ಈಗ ಒಂದು ಪಠ್ಯಪುಸ್ತಕವಾಗಿದೆ. ಆ ಪುಸ್ತಕದ ಲೇಖಕರು ಮಾತಿನಂತೆ, ಆ ಪುಸ್ತಕ ನಾನು ತಿಳಿದುಕೊಂಡಂತೆ ಅಹಿಂಸೆಯ ಮಹಿಮೆಯನ್ನು ಪಾಶ್ಚಾತ್ಯ ಭಾಷೆಯಲ್ಲಿ ಪ್ರತಿಪಾದಿಸಿದೆ. ಆದುದರಿಂದ ಯಾವ ತರ್ಕವನ್ನೂ ಮಾಡದೆ ಅಹಿಂಸೆಯ ಸಫಲತೆಗೆ ಕೆಲವು ನಿಯಮಗಳನ್ನೂ ಹಿಂಸೆಯ ಅಪ್ರಕಟ ಅರ್ಥವನ್ನೂ ಇಲ್ಲಿ ಬರೆದರೆ ಧೃಷ್ಟತೆಯಾಗಲಾರದು.

೧. ಅಹಿಂಸೆ ಪರಮಶ್ರೇಷ್ಠ ಮಾನವಧರ್ಮ. ಪಶುಬಲಕ್ಕಿಂತ ಲೆಕ್ಕವಿಲ್ಲದಷ್ಟು ಪಾಲು ಮಹತ್ತ್ವದ್ದು, ಉಚ್ಚತರವಾದುದು.

೨. ಪ್ರೇಮಪರಮೇಶ್ವರನಲ್ಲಿ ಸಜೀವಶ್ರದ್ಧೆಯಿಲ್ಲದ ಜನರಿಗೆ ಅದು ಏನೂ ಲಾಭನೀಡಲಾರದು.

೩. ಮನುಷ್ಯನ ಸ್ವಾಭಿಮಾನಕ್ಕೆ ಸನ್ಮಾನಕ್ಕೆ ಅದು ರಕ್ಷಾಕವಚ. ಮನುಷ್ಯನ ಚರ-ಸ್ಥಿರ ಸೊತ್ತನ್ನು ಕಾಪಾಡುವ ಭರವಸೆ ಕೊಡದು. ಆದರೆ ಅದನ್ನು ಅಭ್ಯಾಸ ಮಾಡಿಕೊಂಡರೆ ಶಸ್ತ್ರಪಾಣಿಯಾದ ದಂಡಿಗಿಂತ ಹೆಚ್ಚಿನ ರೀತಿಯಲ್ಲಿ ಕಾಪಾಡಬಲ್ಲದು. ಅನ್ಯಾಯದಿಂದ ಗಳಿಸಿದ ಸಂಪತ್ತನ್ನು ದುರಾಚಾರವನ್ನು ಕಾಪಾಡಲು ಅದು ಸ್ವಲ್ಪವೂ ನೆರವಾಗಲಾರದು.

೪. ಅಹಿಂಸೆಯನ್ನು ಅವಲಂಬಿಸಬೇಕೆನ್ನುವ ವ್ಯಕ್ತಿ ಅಥವಾ ರಾಷ್ಟ್ರ ತನ್ನ ಸರ್ವಸ್ವವನ್ನೂ (ರಾಷ್ಟ್ರದ ವ್ಯಕ್ತಿವ್ಯಕ್ತಿಯೂ) ಕಳೆದುಕೊಳ್ಳಲು ಸಿದ್ಧವಾಗಿರಬೇಕು. ಆದುದರಿಂದ ಇತರ ದೇಶಗಳನ್ನು ಕಬಳಿಸುವ ತನ್ನ ರಕ್ಷಣೆಗಾಗಿ ಪಶುಬಲವನ್ನು ಆಶ್ರಯಿಸುವ ಆಧುನಿಕ ಸಾಮ್ರಾಜ್ಯವಾದಕ್ಕೂ ಅದಕ್ಕೂ ಮೇಳಗೂಡಲೇ ಕೂಡದು.

೫. ಮಕ್ಕಳು ತರುಣರು ಯುವಕರು ಗಂಡಸರು ಹೆಂಗಸರು ಎಲ್ಲರೂ ಆಶ್ರಯಿಸಬಹುದಾದ ಶಕ್ತಿ ಅಹಿಂಸೆ. ಆ ಕರುಣಾಮಯನಲ್ಲೂ ಮನುಷ್ಯ ಮಾತ್ರನಲ್ಲೂ ಸಜೀವಶ್ರದ್ಧೆಯಿದ್ದರೆ ಸಾಕು. ಅಹಿಂಸೆಯನ್ನು ನಮ್ಮ ಜೀವನ ಸಿದ್ಧಾಂತವಾಗಿ ಮಾಡಿಕೊಂಡರೆ ಅದು ನಮ್ಮ ಇಡೀ ಬಾಳನ್ನು ವ್ಯಾಪಿಸಬೇಕು. ಹಾಗಲ್ಲದೆ ಈಗ ಉಂಟು. ಆಗ ಇಲ್ಲ ಎಂದರೆ ಲಾಭವಿಲ್ಲ.

೬. ಅಹಿಂಸೆ ಕೇವಲ ವ್ಯಕ್ತಿಗಳಿಗೆ ಮಾತ್ರ ಲಾಭದಾಯಕ, ಜನ ಸಮೂಹಕ್ಕಲ್ಲ ಎಂದು ತಿಳಿಯುವುದು ದೊಡ್ಡ ತಪ್ಪು. ವ್ಯಕ್ತಿಗೆ ಎಷ್ಟು ಮಟ್ಟಿಗೆ ಧರ್ಮವೋ ರಾಷ್ಟ್ರಕ್ಕೂ ಅಷ್ಟುಮಟ್ಟಿಗೆ ಅದು ಧರ್ಮ.*

೫-೯-೧೯೩೬

ಗೀತೆ

ನನಗಂತೂ ಗೀತೆ ಜೀವಂತ ತಾಯಿ, ಕಾಮಧೇನು. ಗೀತೆಯ ನಿತ್ಯಪಾಠ ನೀರಸವೆನಿಸುತ್ತದೆ. ಏಕೆಂದರೆ ಮನಸ್ಸಿಲ್ಲ. ನಮಗೆ ದಿನವೂ ದಾರಿ ತೋರುವ ತಾಯಿ ಎಂದರಿತು ಓದಿದರೆ ನೀರಸವೆನಿಸದು. ಪ್ರತಿದಿನವೂ ಓದಿದಮೇಲೆ ಒಂದು ನಿಮಿಷ ಅದರ ಮೇಲೆ ವಿಚಾರಮಾಡಿ. ದಿನವೂ ಏನಾದರೂ ಹೊಸದು ಸಿಕ್ಕೀತು. ಪರಿಪೂರ್ಣನಾದ ಮನುಷ್ಯನಿಗೆ ಏನೂ ಸಿಗಲಿಕ್ಕಿಲ್ಲ. ದಿನವೂ ಏನಾದರೊಂದು ದೋಷಕ್ಕೆ ಗುರಿಯಾಗುವವನನ್ನು ಮುಕ್ತಗೊಳಿಸುವ ತಾಯಿ ಗೀತೆ ಎಂದರಿತರೆ ನಿತ್ಯಪಾಠದಿಂದ ಬಳಲಿಕೆ ಆಗದು.

ಗೀತೆಯ ಸತತಾಭ್ಯಾಸದಿಂದ ಎಲ್ಲ ಚಿಂತೆಗಳಿಂದಲೂ ಮುಕ್ತನಾಗಿರುವುದನ್ನು ನೀನು ಕಲಿಯಬೇಕು. ನಮ್ಮೆಲ್ಲರ ಚಿಂತೆ ಮಾಡುವವನು ಇದ್ದಾನೆ, ಈಶ್ವರ. ನಾವೇಕೆ ವ್ಯರ್ಥವಾಗಿ ಈ ಭಾರವನ್ನು ಹೊರಬೇಕು ? ಹೊತ್ತು ತಿರುಗಬೇಕು? ನಮ್ಮ ಪಾಲಿಗೆ ಬಂದ ಕೆಲಸವನ್ನು ಮಾಡುತ್ತಿರಬೇಕು ನಾವು.

ಶ್ರದ್ಧೆ ಹೆಚ್ಚಿದಂತೆ ಬುದ್ಧಿಯೂ ಹೆಚ್ಚುತ್ತದೆ. ಬುದ್ಧಿಯೋಗ ಈಶ್ವರನ ಅನುಗ್ರಹ. ಶ್ರದ್ಧೆ ಬೆಳೆಸುವುದು ನಮ್ಮ ಕೆಲಸ ಎಂದು ಗೀತೆ ಕಲಿಸುವಂತೆ ತೋರುತ್ತದೆ. ಇಲ್ಲಿ ಶ್ರದ್ಧೆ ಬುದ್ಧಿಗಳ ಅರ್ಥವನ್ನು ಅರಿಯಬೇಕು. ಈ ಅರಿವು ವ್ಯಾಖ್ಯೆ ಮಾಡಿದರೆ ಬಾರದು, ನಿಜವಾದ ನಮ್ರತೆಯನ್ನು ವಿಕಾಸಗೊಳಿಸಿದರೆ ಬರುತ್ತದೆ. ತನಗೆ ಎಲ್ಲವೂ ತಿಳಿದಿದೆ ಎಂದು ತಿಳಿದವನಿಗೆ ಏನೂ ತಿಳಿಯದು. ನನಗೆ ಏನೂ ತಿಳಿಯದು ಎನ್ನುವವನಿಗೆ ಯಥಾ ಸಮಯದಲ್ಲಿ ಜ್ಞಾನ ಸಿಗುತ್ತದೆ, ತುಂಬಿದ ಕೊಡದಲ್ಲಿ ಗಂಗಾಜಲವನ್ನು ದೇವರು ಕೂಡ ತುಂಬಲಾರ. ಆದುದರಿಂದ ದಿನವೂ ಈಶ್ವರನ ಮುಂದೆ ಬರಿಗೈಯಲ್ಲಿ ನಿಲ್ಲಬೇಕು. ನಮ್ಮ ಅಪರಿಗ್ರಹವ್ರತವೂ ಇದನ್ನೇ ತಿಳಿಸುತ್ತಿದೆ.

ಗೀತೆ ಕಲಿಸುವ ಧರ್ಮವನ್ನು ಕಲಿ, ಅದರಂತೆ ಆಚರಿಸು.

ಗೀತೆಯ ಮಧ್ಯಬಿಂದುವೇನು ಎಂಬುದನ್ನು ನಿಶ್ಚಯಿಸಿಕೊಳ್ಳಬೇಕು. ಆಮೇಲೆ ನಮ್ಮ ಜೀವನಕ್ಕೆ ಉಪಯೋಗಿಯಾದ ಪ್ರತಿಯೊಂದು ಶ್ಲೋಕವನ್ನೂ ಅರ್ಥಮಾಡಿಕೊಂಡು ಆಚರಿಸಬೇಕು. ಇದೇ ಎಲ್ಲಕ್ಕಿಂತ ದೊಡ್ಡ ಟೀಕೆ. ಇದೇ ಗೀತೆಯ ನಿಜವಾದ ಅಭ್ಯಾಸ. ಗೀತೆಯ ಮಧ್ಯಬಿಂದು ಅನಾಸಕ್ತಿ ಎಂಬುದರಲ್ಲಿ ಎಳ್ಳಷ್ಟೂ ಸಂದೇಹವಿರಲಾಗದು. ಬೇರೆ ಯಾವ ಕಾರಣದಿಂದಲೂ ಗೀತೆಯನ್ನು ಬರೆದಿಲ್ಲ. ಅದರಲ್ಲಿ ನನಗೂ ಸಂಶಯವಿಲ್ಲ. ನನ್ನ ಅನುಭವದಿಂದ ನಾನು ಅರಿತಿದ್ದೇನೆ. ಅನಾಸಕ್ತಿಯಿಲ್ಲದೆ ಮನುಷ್ಯ ಅಹಿಂಸೆಯನ್ನೂ ಪಾಲಿಸಲಾರ, ಸತ್ಯವನ್ನೂ ಪಾಲಿಸಲಾರ. ಅನಾಸಕ್ತನಾಗುವುದು ಕಠಿನ. ಇದರಲ್ಲಿ ಸಂದೇಹವಿಲ್ಲ.

ಮಹಾದೇವ ದೇಸಾಯಿಯ ಡೈರಿ, ಭಾಗ ೨–೧೬೧, ೩೦–೧೧–೧೯೩೨

ಆದರೆ ಅದರಲ್ಲಿ ಆಶ್ಚರ್ಯವೇನು ? ಸತ್ಯನಾರಾಯಣನ ದರ್ಶನ ಮಾಡಲು ಪರಿಶ್ರಮ ಆಗಲೇಬೇಕು: ಅನಾಸಕ್ತಿಯಿಲ್ಲದೆ ಆ ದರ್ಶನವೂ ಅಶಕ್ಯ.*

ಗೀತೆಯ ಮುಖ್ಯ ಸಿದ್ಧಾಂತಕ್ಕೆ ಅಸಂಗತವಾದ ಮಾತು ಎಲ್ಲೇ ಬಂದಿರಲಿ ನನ್ನ ಮನಸ್ಸು ಅದನ್ನು ಶಾಸ್ತ್ರವೆಂದು ಒಪ್ಪದು. ರೂಢಿಗ್ರಸ್ತರಾದ ನನ್ನ ಗೆಳೆಯರಿಗೆ ನೋವಾಗದಿದ್ದರೆ ನನ್ನ ಅರ್ಥವನ್ನು ಇನ್ನೂ ಸ್ಪಷ್ಟಗೊಳಿಸುತ್ತೇನೆ. ಸದಾಚಾರದ ಸರ್ವಮಾನ್ಯ ಮೂಲತತ್ತ್ವಗಳಿಗೆ ಅಸಂಗತವಾದುದು ಯಾವುದನ್ನೂ ಶಾಸ್ತ್ರಪ್ರಮಾಣವೆಂದು ನಾನು ಒಪ್ಪಲಾರೆ. ಶಾಸ್ತ್ರಗಳ ಉದ್ದೇಶ ಈ ಮೂಲತತ್ತ್ವಗಳನ್ನು ಕಿತ್ತೆಸೆಯುವುದಲ್ಲ. ಅದನ್ನು ದೃಢಪಡಿಸುವುದು. ಗೀತೆ ಈ ಮೂಲತತ್ತ್ವಗಳನ್ನು ಸಮರ್ಥಿಸುತ್ತದೆ. ಆದುದರಿಂದ ಗೀತೆ ನನಗೆ ಪರಿಪೂರ್ಣ ಗ್ರಂಥ. ಯಾವ ಮೂಲ್ಯವೇ ಇರಲಿ, ಈ ಮೂಲತತ್ತ್ವಗಳಿಗೆ ಅಂಟಿಕೊಂಡಿರಲು ಎಂದಿಗೂ ತಪ್ಪದ ಕಾರಣವನ್ನು ತೋರಿಸುತ್ತದೆ.*

ಗೀತೆಯ ಮೂರನೇ ಅಧ್ಯಾಯದ ಐದನೇ ಶ್ಲೋಕ ಬಹಳ ಚಮತ್ಕಾರಿಕವಾಗಿದೆ. ಇದರಲ್ಲಿ ಹೇಳಿದ ಸಿದ್ಧಾಂತ ಸರ್ವವ್ಯಾಪಕ ಎಂದು ಭೌತಶಾಸ್ತ್ರಜ್ಞರು ಹೇಳಿದ್ದಾರೆ. ಯಾವ ಮನುಷ್ಯನೂ ಒಂದು ಗಳಿಗೆಯೂ ಕರ್ಮ ಮಾಡದೆಯೆ ಇರಲಾರ ಎಂದು ಅದರ ಅರ್ಥ. ಕರ್ಮದ ಅರ್ಥ ಗತಿ. ಈ ನಿಯಮ ಜಡ–ಚೇತನಕ್ಕೂ ಎಲ್ಲಕ್ಕೂ ಉಂಟು. ಈ ನಿಯಮದಂತೆ ನಿಷ್ಕಾಮಭಾವದಿಂದ ನಡೆದರೆ ಮನುಷ್ಯ ಇದೇ ಅವನ ಜ್ಞಾನ, ಅವನ ವೈಶಿಷ್ಟ್ಯ. ಇದಕ್ಕೆ ಪೂರಕವಾಗಿ ಈಶೋಪನಿಷತ್ತಿನಲ್ಲಿ ಎರಡು ಮಂತ್ರ ಇವೆ. ಅವೂ ಇಷ್ಟೇ ಚಮತ್ಕಾರಿಕವಾಗಿವೆ.*

ಆಶ್ರಮದ ತಂಗಿಯೊಬ್ಬಳು ಬರೆದಿದಾಳೆ–ಗೀತೆಯ ಬದಲು ಬೇರೆ ಪುಸ್ತಕ ಓದಿದರೆ ನನಗೆ ಸೊಗಸೆನಿಸುತ್ತದೆ.

ನನಗೆ ಪಕೋಡ ತಿನುವುದು ರುಚಿ, ರೊಟ್ಟಿ ರುಚಿಯಲ್ಲ ಎಂಬ ಮಾತನ್ನು ಬರೆದಿದ್ದೀಯೆ. ನಿರೋಗಿಯ ಹೊಟ್ಟೆ ಪಕೋಡದಿಂದ ತುಂಬೀತೆ? ರೊಟ್ಟಿಯನ್ನೇ ಅದು ಬೇಡಿತು. ಹೀಗೆ ತಿಳಿ ಗೀತೆಯನ್ನು ಒಳಗಿನ ತೆರೆ ಸರಿದರೆ ಗೀತೆ ರುಚಿಸೀತು. ಗೀತೆ ರುಚಿಸದಿರುವವರಿಗೆ ಏನೋ ಕಸುಗಾಯಿ ಇದ್ದಂತೆ ಎಂದು ತಿಳಿಯಬೇಕು. ಇದರಲ್ಲಿ ಅಡಿಗೆಯವನದೂ ಸ್ವಲ್ಪ ದೋಷವಿದೆ. ನಾನು ಕಳಿಸಿದ ಗೀತೆ ಇನ್ನೂ ಕಸುಗಾಯಿ. ಆದುದರಿಂದ ನಿನಗೆ ಒದಗಲಿಲ್ಲ.

---

* ಮಹದೇವ ದೇಸಾಯಿಯ ಡೈರಿ, ೧೭–೧೧–೧೯೩೨

* ೨೩–೮–೧೯೩೨

ಗೀತೆಯ ಬಾಯಿಪಾಠ ಸರಳವಾದ ಸ್ಮರಣಶಕ್ತಿಯ ಕೆಲಸ. ಗೀತೆಯ ಅರ್ಥವನ್ನು ತಿಳಿಯುವುದು ಬುದ್ಧಿಯ ಕೆಲಸ. ಇದು ಕಷ್ಟ ಇದರಲ್ಲಿ ನಿನಗೆ ಸವಿಯಿಲ್ಲ. ಆದರೆ ಬುದ್ಧಿಯ ಕೆಲಸದಲ್ಲಿ ಸವಿ ಸಿಗಲಾರಂಭಿಸಿದರೆ ಆಗ ಅರ್ಥವನ್ನು ಅರಿಯುವ ಬಯಕೆಯಾದೀತು. ಆದುದರಿಂದ ಬುದ್ಧಿಯ ವಿಷಯಗಳನ್ನು ಸವಿಯಲಾರಂಭಿಸು.

ಮನುಷ್ಯ ಕರ್ಮ ಮಾಡುತ್ತಿದ್ದರೇಯೆ ನಿಜವಾದ ಶಾಶ್ವತ ಚಿತ್ತಶುದ್ಧಿಯನ್ನು ಸಾಧಿಸಬಲ್ಲ ಎನಿಸುತ್ತದೆ ನನಗೆ.

ಕರ್ಮ ಮಾಡದೆ ಯಾರಿಗೂ ಸಿದ್ಧಿಯಾಗಲಿಲ್ಲ.

ಅನಾಸಕ್ತಿಯಿಲ್ಲದೆ ಮಾಡಬಹುದಾದ ಕರ್ಮವೆಲ್ಲವೂ ತ್ಯಾಜ್ಯ.

ಆಲಸ್ಯ ಹೇಗೆ ತ್ಯಾಜ್ಯವೋ ಹಾಗೇ ಅತಿಪರಿಶ್ರಮವೂ ತ್ಯಾಜ್ಯ. 'ಸಮತ್ವಂ ಯೋಗ ಉಚ್ಯತೆ' ಮನಸ್ಸಿನಲ್ಲಿ ರಮಿಸುತ್ತಲೇ ಇರುತ್ತದೆ.

'ಏನು ಮಾಡಿದರೂ ನೀನು ನನಗೆ ಅರ್ಪಿಸಿ ನನಗಾಗಿ ಮಾಡು'

'ಭಕ್ತಿ ಮಾಡಿದರೆ ಜ್ಞಾನ ಬಂದೇ ಬರುತ್ತದೆ.'

'ನಿಷ್ಕಾಮನಾಗಿ ಕರ್ಮ ಮಾಡು.'

ಪಾಪ ಮಾಡಲು ನಮ್ಮನ್ನು ಯಾರು ಪ್ರೇರಿಸುತ್ತಾರೆ ಎಂಬುದಕ್ಕೆ ಗೀತಾಮಾತೆ ಉತ್ತರ ಕೊಟ್ಟಿದ್ದಾಳೆ. ಕಾಮಕ್ರೋಧಗಳು ನಮ್ಮಿಂದ ಪಾಪ ಮಾಡಿಸುತ್ತವೆ. ನಿಮ್ಮ ಹಿಂದಿನ ನೆನಪಿನಿಂದ ಎಲ್ಲರೂ ಇದನ್ನು ಪರೀಕ್ಷಿಸಬಹುದು.

ಚಿ. ಧೀರು,

ನಿನ್ನ ಪತ್ರ ಸಿಕ್ಕಿತು. ಹೊಸ ವರ್ಷ ನಿನಗೆ ಫಲ ಕೊಡಲಿ. ನೀನು ಇನ್ನೂ ಒಳ್ಳೆಯ ಸೇವಕನಾಗು. ಗೀತೆಯನ್ನು ಬಾಯಿಪಾಠ ಮಾಡಿದೆ. ಈಗ ಅದನ್ನು ಹೃದಯಗತಮಾಡು. ಹಾಗೆ ಮಾಡಲು ಅದರ ಅರ್ಥ ತಿಳಿಯಬೇಕು. 'ಅನಾಸಕ್ತಿಯೋಗ'ದ ಪ್ರಸ್ತಾವನೆಯನ್ನು ಹತ್ತಿಪ್ಪತ್ತು ಸಲ ಓದು. ಆಮೇಲೆ ಅರ್ಥವನ್ನು ತಿಳಿಯುವ ಪ್ರಯತ್ನ ಮಾಡು. ಅದನ್ನೂ ತಿಳಿಯಲು ಸಂಸ್ಕೃತವನ್ನು ಅಭ್ಯಾಸಮಾಡು. ಹೇಗೋ ಮಾಡಿ ಮುಗಿಸು. ಹೊಸ ವರ್ಷಕ್ಕೆ ಇದೇ ನಿನಗೆ ವ್ರತವಾಗಲಿ.

ನಾವು ಕಾಯಿಲೆ ಬೀಳುತ್ತೇವಲ್ಲ, ಅದಕ್ಕೆ ಆಹಾರದೋಷ ಕಾರಣವಂತೂ ಸರಿಯೆ. ನಮ್ಮ ಮೆದುಳು ಸರಿಯಾಗಿ ಕೆಲಸ ಮಾಡುದುದೂ ಕಾರಣವೇ. ಗೀತಾಕಾರ ಇದನ್ನೂ ಸ್ಪಷ್ಟವಾಗಿ ನೋಡಿದ, ಸಂಸ್ಕಾರವೇ ಇದಕ್ಕೆ ರಾಮಬಾಣ ಔಷಧವೆಂದು ಸ್ಪಷ್ಟ ಹೇಳಿದ. ಆದುದರಿಂದ ಯಾವಾಗಲಾದರೂ ಯಾವುದಾದರೂ ವಿಷಯ ನಿನ್ನ ಮೆದುಳಿಗೆ ತೊಂದರೆ ಕೊಟ್ಟರೆ ಆಗ ಗೀತೆಯ ಮುಖ್ಯ ಉಪದೇಶದ ಬಗ್ಗೆ ಧ್ಯಾನಮಾಡಿ ನಿನ್ನ ಭಾರವನ್ನು ಇಳಿಸಿ ಎಸೆಯಬೇಕು.

‘ಉಪವಾಸಮಾಡದೆ ಪ್ರಾರ್ಥನೆ ಸಾಧ್ಯವಲ್ಲ’ ಎಂಬ ಮಾತು ಪೂರ್ಣವಾಗಿಯೂ ನಿಜ. ಉಪವಾಸಕ್ಕೆ ವ್ಯಾಪಕ ಅರ್ಥವನ್ನು ಮಾಡಬೇಕು. ಶರೀರದ ಉಪವಾಸದ ಜೊತೆಗೆ ಇಂದ್ರಿಯಗಳಿಗೂ ಉಪವಾಸವಾಗಬೇಕು. ದೇಹ ಏನು ದಂಡಿಸಬೇಕು. ಕರಣ ಏನು ಖಂಡಿಸಬೇಕು. ಗೀತೆಯಲ್ಲಿ ಹೇಳಿದ ‘ಅಲ್ಪ ಆಹಾರ’ವೂ ಉಪವಾಸವೇ. ಭೋಜನನಿಗ್ರಹಮಾಡಲು ಹೇಳಿ ಗೀತೆ, ಅಲ್ಪಾಹಾರ ಮಾಡು ಎನ್ನುತ್ತದೆ. ಅಲ್ಪಾಹಾರವೆಂದರೆ ಸದಾ ನಡೆಯುವ ಉಪವಾಸ. ಅಲ್ಪ ಎಂದರೆ ಶರೀರಕ್ಕೆ ಎಷ್ಟು ಬೇಕೋ, ಯಾವ ಸೇವೆಮಾಡಲು ಅದು ಹುಟ್ಟಿದೆಯೋ ಆ ಸೇವೆಮಾಡಲು ಬೇಕಾಗುವಷ್ಟು ಮಾತ್ರ. ಔಷಧವನ್ನು ರುಚಿಗಾಗಿ ತೆಗೆದುಕೊಳ್ಳರು, ಶರೀರದ ಆರೋಗ್ಯಕ್ಕಾಗಿ ಗೊತ್ತಾದ ಸಮಯದಲ್ಲಿ ತೂಕಕ್ಕೆ ಸರಿಯಾಗಿ ಸೇವಿಸುತ್ತಾರೆ. ಆಹಾರವನ್ನು ಹಾಗೇ ತೆಗೆದುಕೊಳ್ಳಬೇಕು. ಅಳತೆಗೆ.ತೂಕಕ್ಕೆ ಸರಿಯಾಗಿ ಎಂದರೆ ಅಲ್ಪತೆ ಚೆನ್ನಾಗಿ ಅರ್ಥವಾಗುತ್ತದೆ. ಪೂರ್ಣಭೋಜನ ಮಾಡುವುದು ದೇವರಿಗೂ ಮನುಷ್ಯರಿಗೂ ಮಾಡಿದ ದ್ರೋಹ. ನಾವು ಪೂರ್ಣಭೋಜನ ಮಾಡಿ ನೆರೆಹೊರೆಯವರಿಗೆ ಅವರ ಪಾಲು ಸಿಗದಂತೆ ಮಾಡುತ್ತೇವೆ. ಅದರಿಂದ ದ್ರೋಹ. ಭಗವಂತನ ಅರ್ಥವ್ಯವಸ್ಥೆಯಲ್ಲಿ ಔಷಧದಂತೆ ಮಾತ್ರ ಪ್ರತಿದಿನದ ಊಟಕ್ಕೆ ವ್ಯವಸ್ಥೆ ಇದೆ. ಎಲ್ಲರಿಗೂ ಆದರೆ ನಾವೆಲ್ಲರೂ ಪೂರಾ ಊಟ ಮಾಡುವವರೇ. ಔಷಧದ ಪ್ರಮಾಣವೆಷ್ಟು ಎಂಬುದನ್ನು ಅಂತಃಪ್ರವೃತ್ತಿಯಿಂದ ತಿಳಿದುಕೊಳ್ಳುವುದು ಭಗೀರಥಕಾರ್ಯ ತಾಯಿತಂದೆಗಳಿಂದ ನಮಗೆ ಸಿಗುವ ಶಿಕ್ಷಣ ತಿಂಡಿ ಪೋತತನವು. ಹೀಗೆ ಮೈಯುಂಡಮೇಲೆ ನಮಗೆ ತಿಳಿಯುತ್ತದೆ – ಊಟದ ಉಪಯೋಗ ರುಚಿಯನ್ನು ಸವಿಯಲಲ್ಲ, ಮೈಯನ್ನು ನಮ್ಮ ದಾಸನಂತೆ ಇಟ್ಟುಕೊಳ್ಳಲು. ಆ ಗಳಿಗೆಯಿಂದ ಆನಂದಕ್ಕಾಗಿ ಊಟಮಾಡುವ ಪೈತೃಕ ಹಾಗೂ ಸ್ವಾರ್ಜಿತ ಸ್ವಭಾವಕ್ಕೆ ವಿರುದ್ಧ ಹೋರಾಟ ಪ್ರಾರಂಭವಾಗುತ್ತದೆ. ಆದುದರಿಂದ ಆಗೊಮ್ಮೆ ಪೂರ್ಣ ಉಪವಾಸ ಅಂಶಿಕ ಉಪವಾಸ ಮಾಡುವುದು ಅಗತ್ಯವಾಗುತ್ತದೆ. ಆಂಶಿಕ ಉಪವಾಸವೆಂದರೆ ಅಲ್ಪಾಹಾರ ಅಥವಾ ಗೀತೆಗನುಸಾರ ಅಳೆದು ತೂಗಿದ ಊಟ. ಹೀಗೆ‘ ಉಪವಾಸದ ಹೊರತು ಪ್ರಾರ್ಥನೆ ಸಲ್ಲದು’ ಎಂಬ ಮಾತು ವೈಜ್ಞಾನಿಕವೂ ಹೌದು. ಇದರ ಸತ್ಯವನ್ನು ಪ್ರಯೋಗ–ಅನುಭವಗಳ ಮೂಲಕ ಪರೀಕ್ಷಿಸಬಹುದು.

ಗೀತಾಮಾತೆಯ ಸಂದೇಶವನ್ನು ಹೃದಯದಲ್ಲಿ ಧಾರಣೆ ಮಾಡುತ್ತೇನೆ. ಆಕೆ ವಿಲಕ್ಷಣ ಮಾತೆ. ಗೀತೆ ಎಂದು ಹಾಡು. ಈ ಶಬ್ದ ಉಪನಿಷತ್ತಿನ ಜೊತೆಗೆ ವಿಶೇಷವಾಗಿ ಉಪಯೋಗವಾಗುತ್ತದೆ. ಅದೂ ಸ್ತ್ರೀಲಿಂಗ. ಕಾಮಧೇನುವಿನಂತೆ ಗೀತೆಯು ಸಂಪೂರ್ಣ ಇಚ್ಛೆಗಳನ್ನು ಪೂರ್ಣಗಳಿಸುತ್ತದೆ. ಅಂತೇ ಅದು ತಾಯಿ. ನಮ್ಮ ಆಧ್ಯಾತ್ಮಿಕ ಜೀವನದಲ್ಲಿ ದೃಢಗೊಳಿಸಲು ಬೇಕಾದ ಹಾಲಿಗಾಗಿ, ಕರುಗಳಂತೆ ನಾವೂ ಬೇಡಿದರೆ ಈ ಅಮರಮಾತೆ ಯಥೇಷ್ಟವಾಗಿ ನೀಡಿಯಾಳು. ಲಕ್ಷಾಂತರ ವತ್ಸಗಳಿಗೆ ತನ್ನ ಅಜಸ್ರಸ್ತನಗಳಿಂದ ಹಾಲು ಕೊಡಬಲ್ಲ ಕ್ಷಮತೆಯಿದೆ ಅದಕ್ಕೆ.

ಗೀತಾಧರ್ಮದ ಅನುಯಾಯಿ ಸಲಕರಣೆಗಳಿಲ್ಲದೆಯೆ ಪ್ರಸನ್ನತೆಯಿಂದ ತನ್ನ ಕೆಲಸ ನಡೆಸಲು ಕಲಿಯುತ್ತಾನೆ. ಗೀತೆಯ ಭಾಷೆಯಲ್ಲಿ ಇವನು ಸ್ಥಿತ ಪ್ರಜ್ಞ, ಯಾಕೆಂದರೆ ಗೀತೆಯಲ್ಲಿ ಹೇಳಿದಂತೆ ಇವನಿಗೆ ಸುಖ–ದುಃಖಗಳು ಸಮಾನ. ಸ್ಥಿತಪ್ರಜ್ಞನ ಅವಸ್ಥೆ ಸುಖ–ದುಃಖಕ್ಕೆ ಮೀರಿದ್ದು ಗೀತೆಯ ಭಕ್ತನಿಗೆ ಸುಖವೂ ಇಲ್ಲ, ದುಃಖವೂ ಇಲ್ಲ, ಇಂಥ ಅವಸ್ಥೆ ಬಂದಮೇಲೆ ಪೀಡೆ, ಅನಂದ, ಗೆಲವು, ಸೋಲು, ಚ್ಯುತಿ, ಪ್ರಾಪ್ತಿ–ಯಾವುದರ ಅನುಭೂತಿಯೂ ಇಲ್ಲ.

ಗೀತಾ ಚಿಂತನ

೧

ನನಗೆ ಏನೇ ಸಂಕಟ ಬರಲಿ, ಗೀತಾಮಾತೆಯನ್ನು ಶರಣುಹೋಗುತ್ತೇನೆ. ಇಂದಿನವರೆಗೂ ಆಕೆ ನನಗೆ ಸಮಾಧಾನ ಕೊಡದೆ ಬಿಟ್ಟಿಲ್ಲ. ಗೀತೆಯಿಂದ ಇನ್ನೂ ಅನೇಕರು ಸಮಾಧಾನ ಪಡೆಯುತ್ತಿರಬಹುದು. ಗೀತೆಯನ್ನು ದಿನೇ ದಿನೇ ನಾನು ಹೇಗೆ ಅರಿತುಕೊಳ್ಳುತ್ತಿದ್ದೇನೆಯೋ ಅವರಿಗೆ ತಿಳಿದರೆ, ಅದರಿಂದ ಅವರಿಗೆ ಮತ್ತಷ್ಟು ಸಹಾಯ ದೊರೆತೀತು, ಏನಾದರೂ ಹೊಸತು ಕಂಡೀತು.

ಇವತ್ತು ಹನ್ನೆರಡನೇ ಅಧ್ಯಾಯದ ಸಾರವನ್ನು ಕೊಡುವ ಮನಸ್ಸಾಗಿದೆ. ಭಕ್ತಿಯ ಮೂಲಕ ದೇವರನ್ನು ಪಡೆಯುವ 'ಭಕ್ತಿಯೋಗ' ಅದು. ಮದುವೆಯಲ್ಲಿ ಮಾಡಬೇಕಾದ ಪಂಚಯಜ್ಞಗಳಲ್ಲಿ ಒಂದಾಗಿ ಈ ಅಧ್ಯಾಯವನ್ನು ಬಾಯಿಪಾಠ ಮಾಡಿ ಅದನ್ನು ಚಿಂತನ ಮಾಡಿ ಎಂದು ವಧೂವರರಿಗೆ ಹೇಳುತ್ತೇನೆ. ಭಕ್ತಿಯಿಲ್ಲದಿದ್ದರೆ ಕರ್ಮ–ಜ್ಞಾನ ಎರಡೂ ನೀರಸ, ಸತ್ತ್ವಹೀನ; ಒಮ್ಮೊಮ್ಮೆ ಬಂಧನವೂ ಆದೀತು. ಆದುದರಿಂದ ಎದೆಯಲ್ಲಿ ಭಕ್ತಿ ತುಂಬಿಕೊಂಡು ಗೀತೆಯ ಚಿಂತನ ಮಾಡೋಣ.

ಅರ್ಜುನ ಭಗವಂತನನ್ನು ಕೇಳುತ್ತಾನೆ: ವ್ಯಕ್ತದ ಉಪಾಸನೆ ಮಾಡುವವನೋ ಅವ್ಯಕ್ತದ ಉಪಾಸನೆ ಮಾಡುವವನೋ, ಇಬ್ಬರಲ್ಲಿ ಯಾರು ಹೆಚ್ಚು ? ಭಗವಂತನ ಉತ್ತರ: ' ಯಾರು ನನ್ನಲ್ಲಿ ಮನಸ್ಸನ್ನು ನೆಲೆಗೊಳಿಸಿ ಶ್ರದ್ಧಾಪೂರ್ವಕ ನನ್ನ ಉಪಾಸನೆ ಮಾಡುತ್ತಾರೋ ಅವರು ನನ್ನ ಭಕ್ತರು. ಸಕಲ ಇಂದ್ರಿಯಗಳನ್ನೂ ವಶದಲ್ಲಿಟ್ಟುಕೊಂಡು ಸರ್ವತ್ರ ಸಮಬುದ್ಧಿಯುಳ್ಳವರಾಗಿ ದೃಢ, ಅಚಲ, ಧ್ರುವ, ಅಂಚಿತ್ಯ, ಅವ್ಯಕ್ತಸ್ವರೂಪವನ್ನು ಉಪಾಸನೆ ಮಾಡುವವರೂ ನನ್ನನ್ನು ಪಡೆಯುತ್ತಾರೆ.'

ಅಂತೂ ಒಬ್ಬರಿಗಿಂತ ಇನ್ನೊಬ್ಬರು ಹೆಚ್ಚು ಎನ್ನುವಂತಿಲ್ಲ. ಆದರೆ ದೇಹಧಾರಿಯಾದ ಜೀವಕ್ಕೆ ಅವ್ಯಕ್ತವನ್ನು ಪೂರ್ಣವಾಗಿ ಅರಿತು ಉಪಾಸನೆ ಮಾಡುವುದು ಅಸಾಧ್ಯವೇ ಎನ್ನಬಹುದು. ಅವ್ಯಕ್ತ ಅಥವಾ ನಿರಾಕಾರವಾದುದು ನಿರ್ಗುಣ, ಮನುಷ್ಯನಿಗೆ ಅಗಮ್ಯ–ಅಗ್ರಾಹ್ಯ, ಆದುದರಿಂದ ದೇಹಧಾರಿಗಳೆಲ್ಲರೂ ಅರಿತೋ ಅರಿಯದೆಯೋ ಸಾಕಾರ ಭಕ್ತರೇ.

'ಆದುದರಿಂದ ನನ್ನ ಮೂರ್ತಸ್ವರೂಪದಲ್ಲಿ ನಿನ್ನ ಮನಸ್ಸನ್ನು ನೆಲೆಗೊಳಿಸು. ನಿನ್ನ ಸರ್ವಸ್ವವನ್ನೂ ಅವನ ಅಡಿಗಳಿಗೆ ಅರ್ಪಿಸು. ಇದನ್ನೂ ಮಾಡಲಾಗದಿದ್ದರೆ ಮನಸ್ಸಿನ ವಿಕಾರಗಳನ್ನು ನಿಗ್ರಹಿಸುವ ಅಭ್ಯಾಸಯೋಗವನ್ನು ಸಾಧಿಸು. ಯಮನಿಯಮಗಳನ್ನು ಪಾಲಿಸು. ಪ್ರಾಣಾಯಾಮ ಮಾಡು. ಹೀಗೆ ಆಸನಾದಿಗಳನ್ನು ಅಭ್ಯಾಸ ಮಾಡು. ಹೀಗೆ ಮನಸ್ಸನ್ನು

ವಶಪಡಿಸಿಕೊ. ಇಂಥ ಅಭ್ಯಾಸ ನಿನಗೆ ಸಾಧ್ಯವಿಲ್ಲದಿದ್ದರೆ, ಏನೇ ಕೆಲಸ ಮಾಡಲಿ ನನಗಾಗಿ ಮಾಡುತ್ತೇನೆ ಎಂದು ಭಾವಿಸಿ ಮಾಡು. ಹೀಗೆ ಮಾಡು ಮಾಡುತ್ತ ನಿನ್ನ ಮೋಹ-ಆಸಕ್ತಿ ಬಾಡಿ ಹೋಗುತ್ತವೆ, ಕ್ರಮೇಣ ನೀನು ಪರಿಶುದ್ಧನೂ ಅಕಳಂಕನೂ ಆಗುತ್ತೀಯೆ. ನಿನ್ನೊಳಗೆ ಪ್ರೇಮದ ಚಿಲುಮೆ ಚಿಮ್ಮುತ್ತವೆ. ಇದನ್ನು ಮಾಡಲಿಕ್ಕೂ ನಿನಗೆ ಸಾಧ್ಯವಿಲ್ಲದಿದ್ದರೆ ನಿನ್ನ ಸರ್ವಕರ್ಮಗಳ ಫಲವನ್ನು ತ್ಯಜಿಸು. ನಿನ್ನ ಕರ್ಮಗಳ ಫಲಕ್ಕಾಗಿ ಇನ್ನು ಹಂಬಲಿಸಬೇಡ. ಪಾಲಿಗೆ ಬಂದ ಕೆಲಸವನ್ನು ಮಾಡುತ್ತಿರು. ಮನುಷ್ಯ ಕರ್ಮಫಲಕ್ಕೆ ಒಡೆಯನಲ್ಲ. ಕರ್ಮದಫಲ ಸಿಗಬೇಕಾದರೆ ಅದಕ್ಕೆ ಬೇಕಾದ ಕಾರಣಗಳೆಲ್ಲ ಕೂಡಿಬರಬೇಕು. ಆದುದರಿಂದ ನೀನು ಕೇವಲ ನಿಮಿತ್ತ ಮಾತ್ರನಾಗು. ಈಗ ನಾನು ಹೇಳಿದ ಈ ನಾಲ್ಕು ದಾರಿಗಳಲ್ಲಿ ಒಂದು ಹೆಚ್ಚು ಒಂದು ಕಡಿಮೆ ಎಂದು ತಿಳಿಯಬೇಡ. ಅದರಲ್ಲಿ ನಿನಗೆ ಯಾವುದು ನಿನಗೆ ಯಾವುದು ಒಗ್ಗುತ್ತದೆಯೋ ಅದನ್ನು ಹಿಡಿ ನಿನ್ನ 'ಯಮನಿಯಮ ಪ್ರಾಣಾಯಾಮ ಆಸನಗಳ ದಾರಿಗಿಂತ ಶ್ರವಣ, ಧ್ಯಾನ, ಜ್ಞಾನಗಳ ದಾರಿ ಸುಲಭ ಎಂದು ಕಾಣುತ್ತದೆ. ಧ್ಯಾನ-ಉಪಾಸನೆಗಳು ಅದಕ್ಕಿಂತ ಸುಲಭವಾದೀತು. ಧ್ಯಾನಕ್ಕಿಂತಲೂ ಕರ್ಮಫಲತ್ಯಾಗವೆ ಸುಲಭವಾದೀತು. ಒಂದೇ ದಾರಿ ಎಲ್ಲರಿಗೂ ಅಷ್ಟೇ ಸುಲಭವಾಗಲಾರದು. ಕೆಲವರು ಎಲ್ಲವನ್ನೂ ಆಶ್ರಯಿಸಬೇಕಾದೀತು. ಇವು ಹಾಗೆ ಒಂದರಲ್ಲೊಂದು ಬೆರೆತುಕೊಂಡಿವೆ. ಏನೇ ಇರಲಿ, ನೀನು ಭಕ್ತನಾಗಬೇಕೆನ್ನುತ್ತೀ. ನಿನಗೆ ಸಾಧ್ಯವಾದ ದಾರಿ ಹಿಡಿದು ಗುರಿ ಮುಟ್ಟು, ಯಾರು ನಿಜವಾದ ಭಕ್ತ ಎಂದು ನಿನಗೆ ಹೇಳುವುದಷ್ಟೇ ನನ್ನ ಕೆಲಸ. ಭಕ್ತ ಯಾರನ್ನೂ ದ್ವೇಷ ಮಾಡ. ಯಾರೂ ಅವನಿಗೆ ಹಗೆಯಲ್ಲ : ಅವನು ಎಲ್ಲಾ ಪ್ರಾಣಿಗಳಿಗೂ ಗೆಳೆಯ, ಎಲ್ಲರಲ್ಲೂ ಅವನಿಗೆ ಕರುಣೆಯೆ. ಇದನ್ನು ಸಾಧಿಸಲು ಅವನು ಎಲ್ಲಾ ಆಸಕ್ತಿಯನ್ನೂ ತೊರೆಯುತ್ತಾನೆ : ಅವನ ವ್ಯಕ್ತಿತ್ವ ಕರಗಿಹೋಗುತ್ತದೆ, ಶೂನ್ಯನಾಗುತ್ತಾನೆ, ಅವನಿಗೆ ಸುಖ-ದುಃಖ ಸಮಾನ. ತಾನು ಮಾಡಿದ ತಪ್ಪನ್ನು ಲೋಕ ಕ್ಷಮಿಸಲಿ ಎಂದು ಹಂಬಲಿಸುವಂತೆ ತನಗೆ ಇತರರು ಮಾಡಿದ ತಪ್ಪನ್ನು ತಾನು ಕ್ಷಮಿಸುತ್ತಾನೆ. ಸದಾ ತೃಪ್ತ, ದೃಢಸಂಕಲ್ಪವುಳ್ಳವನು, ತನ್ನ ಬುದ್ಧಿ ಮನಸ್ಸು, ಎಲ್ಲವನ್ನೂ ನನಗೆ ಸಮರ್ಪಿಸುತ್ತಾನೆ. ಯಾವ ಪ್ರಾಣಿಯನ್ನೂ ತಾನು ಭಯಪಡಿಸ, ತಾನು ಯಾವುದಕ್ಕೂ ಭಯಪಡ. ನನ್ನ ಭಕ್ತನಿಗೆ ಸುಖ-ದುಃಖ, ಹರ್ಷ-ಶೋಕಗಳಿಲ್ಲ, ಅವನು ಅಲಿಪ್ತ. ಶುಭಫಲ ಅಶುಭ ಫಲ ಎರಡನ್ನೂ ತ್ಯಾಗಮಾಡಿ ದೃಢವ್ರತನಾಗಿ ಉದಾಸೀನನಾಗಿರುತ್ತಾನೆ. ಅವನಿಗೆ ಶತ್ರುಗಳೂ ಇಲ್ಲ ಮಿತ್ರರೂ ಇಲ್ಲ, ಎಲ್ಲರೂ ಸಮ. ಮಾನ ಅಪಮಾನ ಅವನನ್ನು ಮುಟ್ಟಲಾರವು.

'ಸಿಕ್ಕಿದ್ದರಲ್ಲಿಯೆ ಸಂತುಷ್ಟನಾಗಿ ಮೌನ-ಶಾಂತಿಗಳಲ್ಲಿ ನೆಲೆಸಿ, ಕೇವಲ ಅಂತರಿಕ ಜೀವನದಲ್ಲೆ ಮುಳುಗಿದ ಆ ಭಕ್ತ ಹೊರಗಡೆ ಏನಾದರೂ ನಡೆಯುತ್ತಿರಲಿ ತಾನು ಸ್ಥಿರಚಿತ್ತನೂ ಶಾಂತನೂ ಆಗಿರುತ್ತಾನೆ. ಈ ರೀತಿ ಶ್ರದ್ಧೆಯಿಂದ ನನ್ನ ಸೇವೆ ಮಾಡುವವನು ನನ್ನ 'ಅತ್ಯಂತ ಪ್ರಿಯಭಕ್ತ.'

೨

ಗೀತೆ ಮಹಾಭಾರತದಲ್ಲಿ ಒಂದು ಚಿಕ್ಕಭಾಗ. ಮಹಾಭಾರತವನ್ನು ಇತಿಹಾಸ ಎನ್ನುತ್ತಾರೆ. ಆದರೆ ನಮಗೆ ರಾಮಾಯಣ, ಮಹಾಭಾರತ ಎರಡೂ ಇತಿಹಾಸಗಳಲ್ಲ, ಧರ್ಮಗ್ರಂಥಗಳು. ಇತಿಹಾಸ ಎನ್ನುವುದೇ ಆದರೆ ಅವು ಆತ್ಮದ ಇತಿಹಾಸ. ಸಾವಿರಾರು ವರ್ಷಗಳ ಕೆಳಗೆ ಏನು ನಡೆಯಿತು ಎಂಬ ಚಿತ್ರವಲ್ಲ ಅದು. ಇವತ್ತು ಪ್ರತಿಯೊಂದು ಮಾನವಹೃದಯದಲ್ಲೂ ಏನು ನಡೆಯುತ್ತಿದೆಯೋ ಅದರ ಚಿತ್ರ. ರಾಮಾಯಣ , ಮಹಾಭಾರತ ಎರಡರಲ್ಲೂ ದೇವಾಸುರರ ಕದನದ, ರಾಮ–ರಾವಣರ ಯುದ್ಧದ ಚಿತ್ರ ಇದೆ. ಗೀತೆಯಲ್ಲಿನ ಕೃಷ್ಣಾರ್ಜುನ ಸಂವಾದವೂ ಅಂಥದೊಂದು ಚಿತ್ರ. ಆ ಸಂವಾದವನ್ನು ಕುರುಡ ಧೃತರಾಷ್ಟ್ರನಿಗೆ ಸಂಜಯ ಹೇಳುತ್ತಾನೆ. ಗೀತೆ ಎಂದರೆ ಹಾಡಿದುದು. ಇಲ್ಲಿ ಉಪನಿಷತ್ತು ಎಂಬುದು ಅಧ್ಯಾಹಾರ. ಗೀತೆಯ ಪೂರ್ಣ ಅರ್ಥ 'ಹಾಡಿದ ಉಪನಿಷತ್ತು' ಎಂದು. ಉಪನಿಷತ್ತು ಎಂದರೆ ಜ್ಞಾನ. ಗೀತೆ ಶ್ರೀಕೃಷ್ಣ ಅರ್ಜುನನಿಗೆ ಮಾಡಿದ ಉಪದೇಶ. ಅಂತರ್ಯಾಮಿಯಾದ ಶ್ರೀಕೃಷ್ಣ ಸದಾ ನಮ್ಮ ಎದೆಯೊಳಗೇ ಇದ್ದಾನೆ. ಅರ್ಜುನನಂತೆ ನಾವು ಜ್ಞಾನಪಿಪಾಸುಗಳಾದರೆ ನಾವೂ ಅವನನ್ನು ಮೊರೆಹೋಗಬೇಕು. ಗೀತೆಯನ್ನು ಓದುವಾಗ ಹೀಗೆ ಅನುಭವವಾಗಬೇಕು. ಭಗವಂತ ನಮಗೆ ಆಶ್ರಯ ನೀಡಲು ಸರ್ವದಾ ಸಿದ್ಧ. ನಮ್ಮಲ್ಲಿ ಜ್ಞಾನದ ಆಸೆ ಹುಟ್ಟೀತೆ ಎಂದು ಅವನು ಕಾದಿದ್ದಾನೆ. ಹೇಗೆ ಕೇಳಬೇಕೋ ನಮಗೆ ಗೊತ್ತಿಲ್ಲ. ಕೇಳಲು ಕೂಡ ನಮಗೆ ಮನಸ್ಸಿಲ್ಲ. ಆದುದರಿಂದ ದಿನವೂ ಗೀತೆ ಯಂಥ ಪುಸ್ತಕವನ್ನು ಧ್ಯಾನಿಸುತ್ತೇವೆ. ಅದರ ಧ್ಯಾನ ಮಾಡುತ್ತ ನಮ್ಮೊಳಗೆ ಧರ್ಮಜ್ಞಾನದ ಬಯಕೆ ಮೂಡಲಿ, ಆಧ್ಯಾತ್ಮಿಕ ಜಿಜ್ಞಾಸೆ ಹುಟ್ಟಲಿ ಎಂದು ಬಯಸುತ್ತೇನೆ. ಏನಾದರೂ ಕ್ಲಿಷ್ಟತೆ ಬಂದಾಗ ಗೀತೆಯ ಬಳಿಗೆ ಓಡಿ ಸಮಾಧಾನ ಪಡೆಯುತ್ತೇವೆ. ಗೀತೆ ನಮಗೆ ಗುರು–ತಾಯಿ– ಎರಡೂ. ಆಕೆಯ ಮಡಿಲಲ್ಲಿ ಮಲಗಿದರೆ ನಮಗೆ ಸದಾ ಕ್ಷೇಮ ಎಂಬ ಶ್ರದ್ಧೆಯಿರಬೇಕು. ನಮ್ಮ ಆಧ್ಯಾತ್ಮಿಕ ತೊಡರುಗಳನ್ನೆಲ್ಲ ಗೀತೆ ಬಿಡಿಸುತ್ತದೆ. ಈ ರೀತಿ ಗೀತಾಧ್ಯಾನ ಮಾಡುವವರಿಗೆ ಹೊಸ ಹಿಗ್ಗು, ಹೊಸ ಅರ್ಥ ಸಿಗುತ್ತದೆ ದಿನವೂ. ಗೀತೆ ಬಿಡಿಸಲಾರದ ಆಧ್ಯಾತ್ಮಿಕ ಸಮಸ್ಯೆ ಒಂದೂ ಇಲ್ಲ. ನಮಗೆ ಶ್ರದ್ಧೆ ಸಾಲದೆ ಅದನ್ನು ಓದಲು ಅರ್ಥಮಾಡಿಕೊಳ್ಳಲೂ ತಿಳಿಯದಿದ್ದರೆ ಅದು ಬೇರೆ ಮಾತು. ದಿನವೂ ಗೀತಾಪಾರಾಯಣ ವನ್ನೇಕೆ ಮಾಡುತ್ತೇವೆ? ನಮ್ಮ ಶ್ರದ್ಧೆ ಬೆಳೆಯುತ್ತ ಬರಲಿ, ನಮಗೆ ಯಾವಾಗಲೂ ಎಚ್ಚರ ಇರಲಿ ಎಂದು. ನಾನು ಏನು ಅರ್ಥ ಪಡೆದಿದೇನೋ ಇನ್ನೂ ಪಡೆಯುತ್ತಿದೇನೋ, ಗೀತೆಯ ಚಿಂತನದಿಂದ, ಅದರ ಸಾರವನ್ನಿಲ್ಲಿ ಕೊಡುತ್ತಿದ್ದೇನೆ, ಆಶ್ರಮವಾಸಿಗಳ ಉಪ ಯೋಗಕ್ಕಾಗಿ.

ಪಾಂಡವರೂ ಕೌರವರೂ ಕುರುಕ್ಷೇತ್ರದ ಯುದ್ಧಭೂಮಿಯಲ್ಲಿ ಸೇನಾಸಮೇತ ರಾಗಿ ನಿಂತಾಗ ಕೌರವರ ನಾಯಕ, ದುರ್ಯೋಧನ ತನ್ನ ಗುರು ದ್ರೋಣಾಚಾರ್ಯರಿಗೆ ಎರಡೂ

ಸೇನೆಗಳ ಮಹಾರಥರನ್ನು ತೋರಿಸುತ್ತಾನೆ. ಎರಡೂ ಕಡೆ ಯುದ್ಧದ ಸಿದ್ಧತೆಗಾಗಿ ಶಂಖನಾದವಾಗುತ್ತದೆ. ಅರ್ಜುನನ ಸಾರಥಿಯಾದ ಭಗವಾನ್ ಶ್ರೀ ಕೃಷ್ಣ ಉಭಯ ಸೇನೆಗಳ ನಡುವೆ ತಮ್ಮ ರಥವನ್ನು ತಂದು ನಿಲ್ಲಿಸುತ್ತಾನೆ. ಆ ದೃಶ್ಯವನ್ನು ನೋಡಿ ಅರ್ಜುನ ಬಹಳ ಖೇದಗೊಂಡ. ಶ್ರೀ ಕೃಷ್ಣನನ್ನು ಕುರಿತು 'ಇವರೊಡನೆ ಹೇಗೆ ಯುದ್ಧ ಮಾಡಲಿ? ಬೇರೆಯವರಾಗಿದ್ದರೆ ಕೂಡಲೆ ಯುದ್ಧಕ್ಕೆ ತೊಡಗುತ್ತಿದ್ದೆ. ಇವರು ನಮ್ಮವರು, ನಮ್ಮ ಬಂಧು-ಬಳಗ ! ಕೌರವರಿಗೂ ಪಾಂಡವರಿಗೂ ಏನು ವ್ಯತ್ಯಾಸ ? ದಾಯಾದಿಗಳಲ್ಲವೆ? ಇಬ್ಬರೂ ಒಟ್ಟಿಗೆ ಬೆಳೆದೆವು. ದ್ರೋಣಾಚಾರ್ಯರನ್ನು ಕೌರವರಿಗೆ ಮಾತ್ರ ಗುರುಗಳೆನ್ನಲಾದೀತೆ? ನಮಗೆ ಸಮಸ್ತ ವಿದ್ಯೆಗಳನ್ನೂ ಕಲಿಸಿದವರು ಅವರೇ. ಭೀಷ್ಮರೋ ಉಭಯಕುಲಪಿತಾಮಹ. ಅವರೊಡನೆ ಯುದ್ಧವೇ ? ಕೌರವರೇನೋ ಪಂತಕರೇ! ಅನೇಕ ದುಷ್ಕಾರ್ಯಗಳನ್ನು ಮಾಡಿದಾರೆ, ಅನ್ಯಾಯ ಮಾಡಿದಾರೆ ; ಪಾಂಡವರ ಭೂಮಿಯನ್ನು ಅಪಹರಿಸಿದ್ದಾರೆ; ದ್ರೌಪದಿ ಯಂಥ ಶ್ರೇಷ್ಠ ಪತಿವ್ರತೆಗೆ ಅವಮಾನಮಾಡಿದಾರೆ. ಇದೆಲ್ಲವೂ ತಪ್ಪೇ. ಆದರೆ ಅವರನ್ನು ಕೊಂದರೆ ಬಂದದ್ದೇನು? ಅವರಿಗೆ ತಿಳಿವಿಲ್ಲ, ನನಗಂತೂ ಸ್ವಲ್ಪ ತಿಳಿವಳಿಕೆಯಿದೆ. ಪಾಪ-ಪುಣ್ಯಗಳನ್ನು ಅರಿತುಕೊಳ್ಳಬಲ್ಲೆ. ಬಂಧುಗಳನ್ನು ಕೊಲ್ಲುವುದು ಪಾತಕ. ಪಾಂಡವರ ಪಾಲನ್ನು ನುಂಗಿದರೆ ತಾನೆ ಏನಂತೆ ? ಅವರೇ ನಮ್ಮನ್ನು ಕೊಲ್ಲಲಿ, ನಾವು ಅವರನ್ನು ಕೊಲ್ಲ ಬಹುದೆ ? ಕೃಷ್ಣ ಈ ಬಂಧುಹತ್ಯ ಮಾಡಲಾರೆ ' ಎನ್ನುತ್ತಾನೆ. ಹೀಗೆಂದು ಅರ್ಜುನ ರಥದಲ್ಲಿ ಕುಸಿದುಬಿದ್ದ.

ಮೊದಲನೆ ಅಧ್ಯಾಯ ಹೀಗೆ ಮುಗಿಯುತ್ತದೆ. ಅದನ್ನು ಅರ್ಜುನ ವಿಷಾದಯೋಗ ಎನ್ನುತ್ತಾರೆ. ವಿಷಾದ ಎಂದರೆ ಸಂಕಟ. ಅರ್ಜುನನಿಗೆ ಆದ ಹಾಗೆ ನಮಗೆ ಸಂಕಟವಾಗಬೇಕು. ಆಧ್ಯಾತ್ಮಿಕ ಯಾತನೆ, ಜ್ಞಾನದಾಹ ಇಲ್ಲದೆ ಜ್ಞಾನ ಲಭಿಸದು. ಒಳ್ಳೆಯದು ಯಾವುದೋ ಕೆಟ್ಟದು ಯಾವುದೋ ತಿಳಿದುಕೊಳ್ಳುವಷ್ಟು ಆಸೆಯೂ ಇಲ್ಲದವನಿಗೆ ಧರ್ಮೋಪದೇಶ ದಿಂದೇನು ಲಾಭ ? ಕುರುಕ್ಷೇತ್ರದ ಯುದ್ಧ ಬರೀ ಪ್ರಾಸಂಗಿಕ. ನಿಜವಾದ ಕುರುಕ್ಷೇತ್ರ ನಮ್ಮ ದೇಹವೇ. ಕುರುಕ್ಷೇತ್ರವೂ ಹೌದು. ಧರ್ಮಕ್ಷೇತ್ರವೂ ಹೌದು, ಅದನ್ನು ದೇವರ ನಿವಾಸವೆಂದು ಭಾವಿಸಿ ಹಾಗೆ ಮಾಡಿದರೆ ಆಗ ಅದು ಧರ್ಮಕ್ಷೇತ್ರ. ಈ ರಣರಂಗದಲ್ಲಿ ಸದಾ ಯುದ್ಧ ನಡದೇ ಇದೆ, ನನ್ನದು ನಿನ್ನದು ಎಂಬ ಭೇದದಿಂದ ಹುಟ್ಟಿದ ಯುದ್ಧ. ನನ್ನವರು ನಿನ್ನವರು ಎಂಬ ಭೇದ ಬಂತೋ ಯುದ್ಧ ಹುಟ್ಟಿತು. ಅದಕ್ಕಾಗಿಯೆ ಆಮೇಲೆ ಭಗವಂತ ಅರ್ಜುನನಿಗೆ ತಿಳಿಸಿದ್ದು-ಎಲ್ಲಾ ಅಧರ್ಮಕ್ಕೂ ಮೂಲ ರಾಗ-ದ್ವೇಷ ಇದು ನನ್ನದು ಎಂದರೆ ರಾಗ ಹುಟ್ಟಿತು. ನಿನ್ನದಲ್ಲ ಎಂದರೆ ದ್ವೇಷ ಮೂಡಿತು. ಹಗೆ ಮೊಳೆಯಿತು. ಈ ನನ್ನ-ನಿನ್ನ ಬೇದವನ್ನು ಮರೆಯಬೇಕೆಂದು ಗೀತೆಯೂ ಎಲ್ಲಾ ಧರ್ಮಗ್ರಂಥಗಳೂ ಹೇಳುತ್ತವೆ. ಎಂದರೆ, ರಾಗದ್ವೇಷಗಳನ್ನು ತೊರೆಯಬೇಕು. ಹೀಗೆ ಹೇಳುವುದು ಬೇರೆ, ಹಾಗೆ ನಡೆಯುವುದೇ ಬೇರೆ. ಗೀತೆ ಹೇಳುವುದು-ಹಾಗೆ ನಡೆಯಲೂ ಬೇಕು ಎಂದು.

ನಡೆನುಡಿಯ ಕೈಪಿಡಿ

ಗೀತೆ ನಮಗೆ ನಡೆನುಡಿಯ ಕೈಪಿಡಿ. ನಿಮಗೆ ಸಂದೇಹ ಬಂದಾಗ, ಅಶಾಂತಿ ಆಪತ್ತು ಕಾಡಿದಾಗ, ಗೀತೆಯನ್ನು ಶರಣುಹೋಗಿರಿ. ಮೂರನೆಯ ಅಧ್ಯಾಯಕ್ಕಿಂತ ಹೆಚ್ಚಿನ ಶಾಂತಿ ಉಂಟೆ? ಯಜ್ಞಚಕ್ರದ ರಹಸ್ಯವೆಲ್ಲ ಅದರಲ್ಲಿ ಅಡಗಿದೆ. ದೇವರು ನರನನ್ನು ಹುಟ್ಟಿಸಿದ. ಹುಟ್ಟಿಸಿ ಅವನ ಕತ್ತಿಗೆ ಯಜ್ಞದ ತಾಳಿ ಕಟ್ಟಿದ. ಯಜ್ಞ ಅಂದರೆ ತ್ಯಾಗ. ಎರಡೂ ಅಷ್ಟೇ. ಆತ್ಮಶುದ್ಧಿಗಾಗಿ ಯಜ್ಞದಿಂದಲೇ ಕುಲವೃದ್ಧಿ ಎಂದು ಭಗವಂತ ಹೇಳಿದ್ದಾನೆ. ಯಜ್ಞ ಎಂದರೆ ಸೇವೆ. ಗೀತೆ ಹೇಳಿಲ್ಲವೆ ? ಕೇವಲ ತನಗಾಗಿಯೇ ಕರ್ಮ ಮಾಡುವವನು ಕಳ್ಳ 'ದೇವಾನ್ ಭಾವಯತಾನೇನ ತೇ ದೇವಾ ಭಾವಯಂತು ವಃ' ದೇವತೆಗಳನ್ನು ಯಜ್ಞದಿಂದ ನೀವು ಪೋಷಿಸಿರಿ. ಅವರೂ ನಿಮ್ಮನ್ನು ಪೋಷಿಸಿಯಾರು. ಇಷ್ಟಭೋಗಗಳನ್ನು ಕೊಟ್ಟಾರು. ಆಯ್ದು ನೋಡಿದರೆ ಯಜ್ಞ ಎಂಬುದು ಜಗದ ಹಿತಕ್ಕಾಗಿ ಮಾಡಿದ ತ್ಯಾಗ. ನಮಗೆ ಕಷ್ಟ ಬಂದರೆ ಬರಲಿ. ಅದರಿಂದ ಇತರರಿಗೆ ಸುಖವಾದರೆ ಸಾಕು. ಸಂಗಾತಿಗಳಿಗಾಗಿ ನರಕೋಟಿಗಾಗಿ ಆತ್ಮತ್ಯಾಗ ಮಾಡುವುದೇ ಪವಿತ್ರ ಉದಾತ್ತಸೇವೆ. ಸಾವು – ಬಾಳುಗಳ ನಡುವೆ ಸದಾ ಕದನ ಆಗುತ್ತಿದೆ. ಅದು ನಿತ್ಯಯುದ್ಧ. ಸಾವು – ಬದುಕುಗಳ ಅಂತಿಮ ಪರಿಣಾಮ ಸಾವು ಅಲ್ಲ– ಬದುಕು. ಏಕೆ ? ಸಾವಿನ ನಡುವೆ ಬಾಳು ಬದುಕುತ್ತಿದೆ : ಸಾಗುತ್ತಲೇ ಇದೆ. ಅಹಿಂಸೆಯ ಹೆಚ್ಚಳಕ್ಕೆ ಇದೇ ಪ್ರತ್ಯಕ್ಷ ಪ್ರಮಾಣ. ಯಜ್ಞದಿಂದ ಅಲ್ಲದೆ ಅಹಿಂಸೆಯ ಈ ವಿಜಯ ಅನ್ಯಥಾ ಸಾಧ್ಯವೇ ಇಲ್ಲ. ಯಜ್ಞಕ್ಕಿಂತ ಹೆಚ್ಚಿನ ನಿಯಮ ಇಲ್ಲ. ಅದು ಸೇವಾನಿಯಮ ಕೈಂಕರ್ಯ.

ಈಗ ನಾವು ಗೀತಾಪಾಠವನ್ನು ಮರೆತಿದೇವೆ. ನಮ್ಮ ಮಕ್ಕಳಿಗಂತೂ ಇದರ ಗಂಧವನ್ನೇ ತೋರಿಸುವುದಿಲ್ಲ. ಹೀಗಿರುವಾಗ ಗೀತಾನಾಯಕ ಕೃಷ್ಣನ ಬೆಲೆ ನಮಗೆ ಹೇಗೆ ತಿಳಿದೀತು ? ಪ್ರತಿ ಗೋಕುಲಾಷ್ಟಮಿಯ ದಿನವೂ ಕೃಷ್ಣನನ್ನು ನೆನೆದು ಗೀತೆ ಓದಿ, ಅದರ ತತ್ತ್ವಗಳನ್ನು ಆಚರಿಸುವ ಪ್ರಯತ್ನ ಮಾಡಿದ್ದರೆ ನಮಗೆ ಈಗ ಬಂದಿರುವ ಗತಿ ಬರುತ್ತಿತ್ತೆ ? ಶ್ರೀ ಕೃಷ್ಣ ನಿಜವಾದ ಸಮಾಜಸೇವಕ. ತನ್ನ ಬದುಕನ್ನೆಲ್ಲ ಜನಸೇವೆಯಲ್ಲಿಯೇ ಕಳೆದ. ನಾಯಕನಾಗಿ ಪಡೆಗಳನ್ನು ನಡೆಸಬಹುದಾಗಿತ್ತು. ಕುರುಕ್ಷೇತ್ರದಲ್ಲಿ. ಹಾಗೆ ಮಾಡದೆ ಅರ್ಜುನನ ಸಾರಥಿಯಾಗಲು ಒಪ್ಪಿಕೊಂಡ. ಅವನ ಜೀವನವೆಲ್ಲ ಇಡಿಗೆ ಇಡಿಯೆ ಅವಿಚ್ಛಿನ್ನ ಕರ್ಮದ ಒಂದು ಗೀತೆ ಆಗಿದೆ. ಚಕ್ರವರ್ತಿ ದುರ್ಯೋಧನನ ಮೃಷ್ಟಾನ್ನ ಬಿಟ್ಟು ದರಿದ್ರ ವಿದುರನ ಗಂಜಿಗೆ ಬಾಯೊಡ್ಡಿದ. ಬಾಲ್ಯದಲ್ಲಿ ದನ ಕಾಯ್ದು ಇಂದಿಗೂ ಗೋಪಾಲ ಎನಿಸಿಕೊಂಡಿದ್ದಾನೆ. ಕೃಷ್ಣನಿಗೆ ನಿದ್ದೆ ಇಲ್ಲ, ನಿರುದ್ಯೋಗ ಇಲ್ಲ : ಪ್ರಪಂಚದ ಯೋಗಕ್ಷೇಮವನ್ನೇ ನಿದ್ದೆಯಿಲ್ಲದೆ ಹೊತ್ತು ಕಾಪಾಡಿದ. ಭಕ್ತಿ ಎಂದರೆ ಕರ್ಮ. ಲೋಕಮಾನ್ಯ ತಿಲಕರು ಹೇಳಿಲ್ಲವೆ ? ಜ್ಞಾನಕ್ಕಾಗಲಿ ಭಕ್ತಿಗೇ ಆಗಲಿ, ಕರ್ಮವೇ ದಾರಿ. ಇಷ್ಟೇ: ಆ ಕರ್ಮವನ್ನು ಸ್ವಾರ್ಥಕ್ಕಾಗಿ ಮಾಡಬಾರದು. ಪರಹಿತಕ್ಕಾಗಿ ಮಾಡಬೇಕು. ಸ್ವಾರ್ಥಕರ್ಮ ಬಂಧನ. ಪರಾರ್ಥಕರ್ಮ ಅದನ್ನು ಬಿಡಿಸುತ್ತದೆ.

ಗೀತಾಮೃತಾಂಜನ

ಒಂಬತ್ತನೆಯ ಅಧ್ಯಾಯದಲ್ಲಿ ಸರ್ವದುಃಖನಿವಾರಿಣಿಯಾದ ಅಮೃತಾಂಜನ ಇದೆ. ಆದಿಭೌತಿಕವಷ್ಟೇ ಅಲ್ಲದೇ ಆಧ್ಯಾತ್ಮಿಕವಾದ ರೋಗಗಳಿಂದಲೂ ಪೀಡಿತರಾದ ನಮಗೆ ಸರ್ವರೋಗಹರವಾದ ದಿವ್ಯೌಷಧ ಅದು. ದೇವರನ್ನು ನಂಬಿದವರಿಗೆ ನೋವಿಲ್ಲ, ನಾಶವಿಲ್ಲ. ಗೀತೆಯ ಕಾಲಕ್ಕೆ ವರ್ಣಾಶ್ರಮವು ನಿಜಾರ್ಥವನ್ನೂ ಪವಿತ್ರತೆಯನ್ನೂ ಕಳೆದುಕೊಂಡು ಈಗಿನ ಮೇಲು-ಕೀಳುಗಳ ಗೊಂದಲದಲ್ಲಿ ಕಾಲಿಟ್ಟದ್ದಿತು ಎಂದು ಈ ಅಧ್ಯಾಯದಿಂದ ತಿಳಿಯಬಹುದಾಗಿದೆ. ಆದರೆ ಗೀತೆಯ ಅಭಯಹಸ್ತ ಆ ಭೇದಗಳೆಲ್ಲವನ್ನೂ ಮೀರಿದೆ. ಅವರಿವರೆನ್ನದೆ ಎಲ್ಲರಿಗೂ ದೇವರು ತನ್ನ ಅಭಯಹಸ್ತವನ್ನು ನೀಡಿದ್ದಾನೆ. ಮಾನವರು ಸುಲಭಾಪರಾಧಿಗಳು. ಸಾಧಾರಣ ಮನುಷ್ಯರಿಗಷ್ಟೇ ಅಲ್ಲ, ಪಾಪಯೋನಿಗಳಿಗೂ ಪಾಪಸಂಭವರಿಗೂ ಆ ವರ ಕರುಣಿಸಲ್ಪಟ್ಟಿದೆ : ಆ ಆಶ್ವಾಸನ ಕೊಡಲ್ಪಟ್ಟಿದೆ. ಅಲ್ಲಿಗೇ ಮುಗಿಯಲಿಲ್ಲ. ಅಪಿ ಚೇತ್ಸುದುರಾಚಾರೋ - ಪಾಪದಲ್ಲೇ ಮುಳುಗಿದ್ದರೂ ಬಾಧಕವಿಲ್ಲ: ನಮ್ಮ ಯೋಗಕ್ಷೇಮ ಆತನಿಗೆ ಸೇರಿದುದು. ಆದರೆ ನಮ್ಮಲ್ಲಿ ಯಾರು ಪಾಪಾತ್ಮರಲ್ಲದವರು? ಯಾರು ದುರಾಚಾರಿಗಳಲ್ಲದವರು? ಯಾರ ಕಡೆ ಯಾರು ಬೆರಳು ತೋರಿಸಬಲ್ಲರು ? ಆ ಧೈರ್ಯ ಯಾರಿಗೆ ಉಂಟು ?

ನ ಮೇ ಭಕ್ತಃ ಪ್ರಣಶ್ಯತಿ-ನನ್ನನ್ನು ನಂಬಿದವರು ಯಾರೂ ನಾಶವಾಗರು. ಪ್ರತಿಜಾನೀಹಿ-ಇದನ್ನು ಗಟ್ಟಿಯಾಗಿ ತಿಳಿ. ಹೀಗೆ ಭಗವಂತನು ಮುಕ್ತಕಂಠನಾಗಿ ಹೇಳಿದಾನೆ. ಆದರೆ ಯಾವ ಪ್ರಯತ್ನವನ್ನೂ ಮಾಡದೆ ಬರಿಯೆ ನಂಬಿದರೆ ಸಾಕೆ ? ಸಾಲದು. ಅಷ್ಟು ಮಾತ್ರದಿಂದಲೇ ನಮ್ಮ ಪಾಪವೆಲ್ಲ ಹರಿಯುತ್ತದೆ ಎಂದು ಯಾರೂ ತಿಳಿಯಬಾರದು. ಇಂದ್ರಿಯಗಳ ಮೋಹವನ್ನು ಗೆಲ್ಲಲು ಪೂರಾ ಪ್ರಯತ್ನಪಟ್ಟು ಕಷ್ಟದಲ್ಲಿಯೂ ಕಂಬನಿಯಲ್ಲಿಯೂ ದೇವರನ್ನು ಮೊರೆಹೋದವನಿಗೆ ಆ ಸಮಾಧಾನ, ಆ ಯೋಗ ಕ್ಷೇಮ, ಔಷಧಿ ಸಿಕ್ಕೀತು.

ಹನ್ನೊಂದು-ಹನ್ನೆರಡನೇ ಅಧ್ಯಾಯಗಳು :

ಅದ್ಭುತವಾದ ಈ ವಿಶ್ವರೂಪಸಂದರ್ಶನಕ್ಕಿಂತ ನಮ್ಮ ಮನಸ್ಸನ್ನು ದೇವರ ಕಡೆ ಸೆಳೆಯಲು ಮತ್ತೇನು ಬಲವತ್ತರ ಸಾಧನ ಇದ್ದೀತು ! ಹೀಗೆ ನಮ್ಮ ಮನಸ್ಸನ್ನು ಭಕ್ತಿಗೆ ಹದಗೊಳಿಸಿ ಹಸನುಮಾಡಿ ಹನ್ನೆರಡನೆಯ ಅಧ್ಯಾಯದಲ್ಲಿ ಶ್ರೀ ಕೃಷ್ಣ ನಮಗೆ ಭಕ್ತಿಯ ಸಾರಸಂಗ್ರಹವನ್ನೇ ಕೊಟ್ಟಿದಾನೆ. ಆ ಅಧ್ಯಾಯ ಬಹಳ ಚಿಕ್ಕದು, ಅತಿಸಂಗ್ರಹ. ಸಂಕಟದ ಸಮಯದಲ್ಲಿ ತಟ್ಟನೆ ನೆನಪು ಮಾಡಿಕೊಳ್ಳಲು ಅನುಕೂಲವಾಗುವಂತೆ ಸುಲಭವಾಗಿ ಬಾಯಿ ಪಾಠ ಮಾಡ ಬಹುದು.

ಗೀತೆಯ ಭಕ್ತಿ ಮಿಥ್ಯಾವಸ್ತುವೂ ಅಲ್ಲ, ಅಂಧಶ್ರದ್ಧೆಯೂ ಅಲ್ಲ. ಅಲ್ಲಿ ಬಂದಿರುವ ಕೆಲವು ಮಾತು ಬಾಹ್ಯೋಪಚಾರಕ್ಕೆ ಸಂಬಂಧಿಸಿವೆ ನಿಜ. ಭಕ್ತರು ಜಪಮಾಲೆ, ತಿಲಕ, ಅರ್ಘ್ಯ ಮೊದಲಾದ ಉಪಾಯ ಹೂಡಿದರೆ ಹೂಡಲಿ. ಅವು ಭಕ್ತಿಯ ಲಕ್ಷಣಗಳೇನೂ ಅಲ್ಲ. ಯಾರೊಡನೆಯೂ ಹಗೆ ಇಲ್ಲದೆ, ಕಾರುಣ್ಯನಿಧಿಯಾಗಿ, ಅಹಂಕಾರ ಮಮಕಾರ ಬಿಟ್ಟು ಶೀತೋಷ್ಣ ಸುಖದುಃಖಗಳನ್ನು ಸಮವಾಗಿ ತಿಳಿದು, ನಿತ್ಯಸಂತುಷ್ಟನಾದ ಸಹನಶೀಲನು ಭಕ್ತ. ಅವನಿಗೆ ದೃಢನಿಶ್ಚಯ, ಭಗವದರ್ಪಿತ ಚಿತ್ತಗಳು ಬೇಕು. ಲೋಕಕ್ಕೆ ಅವನಿಂದ ಹೆದರಿಕೆ ಇಲ್ಲ. ಅವನು ಲೋಕಕ್ಕೆ ಅಂಜುವ ಹಾಗಿಲ್ಲ. ಇದು ಶುಭ, ಅದು ಅಶುಭ ಎಂಬುದಿಲ್ಲ. ಶತ್ರು – ಮಿತ್ರ ಎಂಬುದಿಲ್ಲ. ಎಲ್ಲರೂ ಒಂದೇ. ಮೌನ–ಸ್ಥಿರಬುದ್ಧಿಗಳು ಅವನ ಸ್ವಭಾವ. ಇಂಥ ಪವಿತ್ರ ಭಕ್ತಿ ಆಸಕ್ತರಿಗೆ ಸಾಧ್ಯವೇ ?

ಹದಿನಾಲ್ಕು – ಹದಿನೈದನೇ ಅಧ್ಯಾಯಗಳು :

೧೪ನೆಯ ಅಧ್ಯಾಯದ ಗುಣತ್ರಯವಿಭಾಗ ೩೦ ವರ್ಷದ ಕೆಳಗೆ ನಾನು ಓದಿದ್ದ ಹೆನ್ರಿ ಡ್ರಮ್ಮಂಡರ 'ಆಧ್ಯಾತ್ಮಪ್ರಪಂಚದಲ್ಲಿ ಪ್ರಾಕೃತಿಕ ನಿಯಮ' ಎಂಬ ಪುಸ್ತಕ ವನ್ನು ನೆನಪು ಮಾಡುತ್ತಿದೆ. ನಿಯಮಗಳು ಬೇಕಾದಷ್ಟು ಇವೆಯಾಗಲಿ, ಮುಖ್ಯ ವಿಭಾಗ ಗಳು ಮೂರು. ಈ ಅಧ್ಯಾಯ ಮನುಷ್ಯ ಜೀವನವನ್ನು ನಡೆಯಿಸುವ ನಿಯಮಗಳನ್ನು ತಿಳಿಸುತ್ತದೆ.

ಅಧ್ಯಾಯ ೧೫ರಲ್ಲಿ ಪರಿಪೂರ್ಣ ಮಾನವನ – ಪುರುಷೋತ್ತಮನ – ಚಿತ್ರ ಇದೆ. ಈ ಅಧ್ಯಾಯದಿಂದ ನಾವು ತಿಳಿಯಬೇಕಾದುದು ಮಾನವನ 'ಸ್ವರ್ಗಾರೋಹಣ' ರಹಸ್ಯ. ಮನುಷ್ಯರಲ್ಲಿ ಯಾರೂ ಒಂದೇ ಗುಣದವರಿಲ್ಲ. ಸತ್ತ್ವ ರಜಸ್ ತಮಸ್ ಮೂರೂ ಎಲ್ಲರಲ್ಲಿಯೂ ಇವೆ. ನಾವೆಲ್ಲ, ಪ್ರತಿಯೊಬ್ಬರೂ, ಸತ್ತ್ವಗುಣಪ್ರಧಾನವಾದ ಸ್ಥಿತಿಗೆ ಏರಬೇಕು. ಕಡೆಗೆ ಮೂರೂ ಗುಣಗಳನ್ನು ಮೀರಿ ಪುರುಷೋತ್ತಮ'ರಾಗಬೇಕು. ಭೌತ ಪ್ರಪಂಚದ ಉದಾಹರಣೆ ಒಂದನ್ನು ಹೇಳಬಹುದು: ನೀರು ನೋಡಿ ಘನಸ್ವರೂಪದಲ್ಲಿ ನೆಲದ ಮೇಲೆಯೇ ಇರುತ್ತದೆ. ಮೇಲೇರಲಾರದು. ಅದನ್ನೇ ಹಬೆಯಾಗಿ ಮಾಡಿದರೆ ಮೇಲೆ ಏರುತ್ತದೆ. ಮೇಲೇರಿ ಆಕಾಶದಲ್ಲಿ ಸೇರಿ ಅಲ್ಲಿ ಮೋಡವಾಗುತ್ತದೆ : ಮತ್ತೆ ಮಳೆಯಾಗಿ ಭೂಮಿಗೆ ಇಳಿದು ಫಲದಾಯಿನಿಯೂ ವರಪ್ರಸಾದಿನಿಯೂ ಆಗುತ್ತದೆ. ನಾವು ಎಲ್ಲರೂ ನೀರಿನಂತೆ. ನಮ್ಮ ಒಳಗಿನ ಅಹಂಕಾರ ಸಾಯುವಂತೆ ನಮ್ಮನ್ನು ಹಬೆ ಆಗಿಸಿಕೊಳ್ಳಬೇಕು. ಆಗ ನಾವೂ ಅನಂತನಾದ ಪರಮೇಶ್ವರನಲ್ಲಿ ಬೆರೆತು ಜಗತ್ತಿನ ಹಿತ ಆದೀತು.*

---

* ಪರ್ಣಕುಟಿ – ೧೭೭–೧೮೦

ಮನುಷ್ಯ ತನ್ನ ವಿಧಿಗೆ ತಾನೇ ಕರ್ತ. ತನಗೆ ಬೇಕಾದ ಕರ್ಮವನ್ನು ಮಾಡಬಹುದು, ಬೇಕಾದ ರೀತಿಯಲ್ಲಿ ಮಾಡಬಹುದು. ಆದರೆ ಫಲದ ಗೋಜಿಗೆ ಹೋಗಬಾರದು. ಅಲ್ಲೇ ಇರುವುದು ನಂಜು, ನೋವು... ಪಂಜಾಬ್ ಮೇಲಿನಂತೆ ಚಕಚಕ ಕೆಲಸಮಾಡಬೇಕು. ಆದರೆ ಡಬ್ಬಾಗಳಂತೆ ನಮ್ಮ ಕೆಲಸಕ್ಕೇ ಜೋತು ಬೀಳಬಾರದು. ಗಾಡಿ ನಡಸುವ (ಡ್ರೈವರಿನಂತೆ) ಚಾಲಕನಂತೆ ಇರಬೇಕು. ನಮ್ಮ ನಿಗ್ರಹವನ್ನು ಕಾಯ್ದುಕೊಂಡು ಶಾಂತವಾಗಿ ಕೆಲಸ ಮಾಡ ಬೇಕು, ತೂಕ ತಪ್ಪಬಾರದು. ಬೇಕಾದಾಗ ಕೆಲಸದಿಂದ ಬಿಡುಗಡೆಯಾಗುವ ತೂಕ ಹಿಡಿಯಬೇಕು.

ಅನೇಕ ವೇಳೆ ತುತ್ತು ಬಾಯಿಗೆ ಬರುವುದೇ ಇಲ್ಲ, ಬರಿಯ ಕೈ ಕೆಸರು ಆದುದಷ್ಟೇ. ಆಗ ಸಾವಧಾನ ಬೇಕು. ತಾಳ್ಮೆ ಬೇಕು. ಕಾಲಕ್ರಮದಲ್ಲಿ ನಿರ್ದಿಷ್ಟ ಫಲವಾಗಿ ಪರಿಣಮಿಸೀತು ಎಂಬ ನಂಬಿಕೆ ಬೇಕು.*

ಅನೇಕರ ಬಾಳಿನ ಒಗಟನ್ನು ಬಿಡಿಸಿದೆ ಗೀತೆ. ಸಾವಿರಾರು ಜನಕ್ಕೆ ಅದೇ ತಾಯಿ. ಅವರಿಗೆ ಕಷ್ಟ ಬಂದಾಗ ಅದೇ ಶಾಂತಿ-ಸಮಾಧಾನದ ಅಮೃತವನ್ನು ಕರೆಯುತ್ತದೆ. ಆಪತ್ತಿನಲ್ಲಿ ಎಂದೂ ಗೀತೆ ಕೈ ಬಿಟ್ಟಿಲ್ಲ. ಗೀತೆ ಆಧ್ಯಾತ್ಮ ನಿಘಂಟು. ಆತ್ಮಸಂಬಂಧವಾದ ಸಮಸ್ತ ಸಮಸ್ಯೆಗಳನ್ನೂ ಪರಿಷ್ಕರಿಸುವ ಸಾಧನರಾಜ. ಅದರಲ್ಲಿ ತರ್ಕದ ಫಲವಾಗಲಿ ಮೊಂಡು ಸಿದ್ಧಾಂತವಾಗಲಿ ಇಲ್ಲ. ಅದು ಯಾವ ಜಾತಿಮತಪಂಥಕ್ಕೂ ಒಳಗಾಗಿಲ್ಲ. ಅದರ ಸಂದೇಶ ಸಂಕುಚಿತವಲ್ಲ. ಇಡೀ ವಿಶ್ವಕ್ಕೆ ಸಾರಿದ ಸಂದೇಶ.

ಹಿಂದು ಮುಸಲ್ಮಾನ ಕ್ರಿಸ್ತಾನರು ಹೆಂಗಸರು ಮಕ್ಕಳು ಎಲ್ಲರೂ ಮಾಡಬಹುದಾದ ಪರಾರ್ಥಕರ್ಮ ಯಾವುದು ? ನೂಲುವುದೇ ಆ ಯಜ್ಞಕರ್ಮ ಎಂದು ತೋರಿಸಲು ನಾನು ಯತ್ನಿಸಿದೇನೆ. ದೇವರ ಹೆಸರಿನಲ್ಲಿ ದೀನದರಿದ್ರರಿಗಾಗಿ ಅವರ ಸೋಮಾರಿ ಕೈಗಳಲ್ಲಿ ಶಕ್ತಿ ಸಂಚಾರವಾಗುವಂತೆ ಏನಾದರೂ ಮಾಡಬಹುದಾಗಿದ್ದರೆ ಅದೊಂದೇ. ಬ್ರಾಹ್ಮಣ -ಭಂಗಿ ಇಬ್ಬರಲ್ಲೂ ಭೇದವನ್ನು ಕಾಣದವನೇ ನಿಜವಾದ ಭಕ್ತ ಎಂಬುದನ್ನೂ ಗೀತೆ ಕಲಿಸುತ್ತದೆ. ಇದು ನಿಜವಾದರೆ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಗೆ ಎಡೆಯಿಲ್ಲ. ನಿಮಗೆ ಆ ಮೂಢನಂಬಿಕೆ ಇನ್ನೂ ಇದ್ದರೆ ಈ ಗೋಕುಲಾಷ್ಟಮಿಯ ದಿನ ಅದನ್ನು ತೊಳೆದುಹಾಕಿಬಿಡಿ. ಗೀತೆಯನ್ನು ನಂಬಿದವನಿಗೆ ಹಿಂದು-ಮುಸಲ್ಮಾನ ಭೇದವೂ ಇಲ್ಲ. ಯಾವ ಹೆಸರಿನಿಂದ ಉಪಾಸನೆಮಾಡಿದರೇನು, ಶ್ರದ್ಧೆಯಿಂದ ಮಾಡಿದುದೆಲ್ಲಾ ಉಪಾಸನೆಯೇ ಎಂದಿದಾನೆ ಭಗವಂತ. ಗೀತೆಯಲ್ಲಿ ಹೇಳಿದ ಭಕ್ತಿ-ಕರ್ಮಗಳ ದಾರಿ ಪ್ರೇಮದ ದಾರಿ. ಅದರಲ್ಲಿ ಮನುಷ್ಯ ಮನುಷ್ಯನನ್ನು ಹಳಿಯಲು ಎಡೆಯೇ ಇಲ್ಲ.

***

......ಗೀತಾಕಾರ ಅನಾಸಕ್ತಿಯ, ಕರ್ಮ ಫಲ ತ್ಯಾಗದ ಸಿದ್ಧಾಂತವನ್ನು ರೂಪುಗೊಳಿಸಿ, ಅದನ್ನು ಅತ್ಯಾಕರ್ಷಕ ಭಾಷೆಯಲ್ಲಿ ಜಗತ್ತಿನೆದುರಿಗೆ ಇಟ್ಟಿದ್ದಾನೆ..

ಗೀತೆ ಸೂತ್ರ ಗ್ರಂಥವಲ್ಲ. ಗೀತೆ ಒಂದು ಮಹಾ ಧರ್ಮಕಾವ್ಯ. ಅದರ ಬಗ್ಗೆ ನೀವು ಎಷ್ಟು ಆಳವಾಗಿ ಪ್ರವೇಶಿಸುತ್ತೀರೋ ಅಷ್ಟೇ ನವೀನ ಸುಂದರ ಅರ್ಥ ನಿಮಗೆ ದೊರೆಯುತ್ತದೆ. ಗೀತೆ ಜನಸಮಾಜಕ್ಕಾಗಿ ಇದೆ. ಅದರಲ್ಲಿ ಒಂದೇ ಮಾತನ್ನು ಹಲವು ರೂಪದಲ್ಲಿ ವರ್ಣಿಸಲಾಗಿದೆ. ಆ ಕಾರಣದಿಂದ ಗೀತೆಯಲ್ಲಿ ಬಳಸಿದ ಮಹಾಶಬ್ದಗಳ ಅರ್ಥ ಪ್ರತಿಯೊಂದು ಯುಗದಲ್ಲಿಯೂ ವ್ಯತ್ಯಾಸ ಹೊಂದುತ್ತ ವಿಸ್ತೃತವಾಗುತ್ತ ಹೋದೀತು. ಗೀತೆಯ ಮೂಲಮಂತ್ರ ಎಂದಿಗೂ ವ್ಯತ್ಯಾಸವಾಗಲಾದರು. ಯಾವ ರೀತಿಯಲ್ಲಿ ಈ ಮಂತ್ರ ಸಿದ್ಧಿಸುತ್ತದೋ ಆ ರೀತಿಯಲ್ಲಿ ಜಿಜ್ಞಾಸು ಅದಕ್ಕೆ ಬೇಕಾದ ಅರ್ಥವನ್ನು ಮಾಡಬಹುದು.

– ಗಾಂಧೀಜಿ